ಸೋಮವಾರ, ಜೂನ್ 22, 2026 | ₹ 7.00
prajavani.net prajavani
www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಯೋಗ...



ಬಾಲಿವುಡ್ ನಟಿ ಶಿಲ್ಪಾ ಶೆಟ್ಟಿ ಅವರು ಯೋಗ ದಿನದ ಅಂಗವಾಗಿ ಹರಿಯಾಣದ ಗುರುಗ್ರಾಮದಲ್ಲಿರುವ ಡಿಎಲ್ಎಫ್ ಸೈಬರ್ ಹಬ್‌ನಲ್ಲಿ ಯೋಗ ಮಾಡಿದರು

ಚಿನ್ನಕ್ಕೆ ಪಂಚ್



ಭಾರತದ ಜ್ಯೋತಿ ಅವರು ಚೀನಾದಲ್ಲಿ ನಡೆದ ವಿಶ್ವ ಬಾಕ್ಸಿಂಗ್ ಕಪ್ (ಸ್ಟೇಜ್–2) ಮಹಿಳೆಯರ 48 ಕೆ.ಜಿ. ವಿಭಾಗದಲ್ಲಿ ಚಿನ್ನದ ಪದಕ ಗೆದ್ದರು

ಪದಗ್ರಹಣ: ಕಾಂಗ್ರೆಸ್ ಶಕ್ತಿ ಪ್ರದರ್ಶನ

ಅರಮನೆ ಮೈದಾನದಲ್ಲಿ ಕಿಕ್ಕಿರಿದು ತುಂಬಿದ ಕಾರ್ಯಕರ್ತರು: ಬೆಂಬಲಿಗರ ಪರೇಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಪಿಸಿಸಿ ನೂತನ ಅಧ್ಯಕ್ಷರಾಗಿ ಬಿ.ಕೆ.ಹರಿಪ್ರಸಾದ್ ಅವರ ಪದಗ್ರಹಣ ಕಾರ್ಯಕ್ರಮವು ಕಾಂಗ್ರೆಸ್ ಮತ್ತು ಕಾಂಗ್ರೆಸ್ ನಾಯಕರ ಶಕ್ತಿ ಪ್ರದರ್ಶನಕ್ಕೆ ವೇದಿಕೆಯಾಯಿತು.

ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡುವಾಗ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, 'ನಾನು 2020ರಲ್ಲಿ ವಿಡಿಯೊ ಕಾನ್ಫರೆನ್ಸ್ ಮೂಲಕ ಕೆಪಿಸಿಸಿ ಅಧ್ಯಕ್ಷನಾಗಿ ಅಧಿಕಾರ ಸ್ವೀಕರಿಸಿದ್ದೆ. ಆಗ ದೊಡ್ಡ ಕಾರ್ಯಕ್ರಮ ಮಾಡಲು ಸಾಧ್ಯವಾಗಿರಲಿಲ್ಲ. ಆದರೆ, ಈಗ ಅದ್ದೂರಿ ಕಾರ್ಯಕ್ರಮವನ್ನು ಆಯೋಜಿಸಿದ್ದೇವೆ' ಎಂದರು. ಅವರ ಮಾತುಗಳನ್ನು ಪುಷ್ಟೀಕರಿಸುವಂತೆ ಭಾರಿ ಸಂಖ್ಯೆಯಲ್ಲಿ ಜನರನ್ನು ಸೇರಿಸಲಾಗಿತ್ತು.

ನಿಗದಿಯಾಗಿದ್ದಂತೆ ಬೆಳಿಗ್ಗೆ 10ರ ವೇಳೆಗೆ ಕಾರ್ಯಕ್ರಮ ಆರಂಭವಾಯಿತು. ಆ ಹೊತ್ತಿಗಾಗಲೇ ನಗರದ ಎಲ್ಲ ಭಾಗಗಳಿಂದ, ರಾಜ್ಯದ ವಿವಿಧ ಭಾಗಗಳಿಂದ ಕಾಂಗ್ರೆಸ್ ಕಾರ್ಯಕರ್ತರು ಮತ್ತು ಅಭಿಮಾನಿಗಳು ತಂಡೋಪತಂಡವಾಗಿ ಅರಮನೆ ಮೈದಾನಕ್ಕೆ ಬಂದು ಸೇರಿದ್ದರು. ಅರಮನೆ ಮೈದಾನಕ್ಕೆ ಸಂಪರ್ಕ ಕಲ್ಪಿಸುವ ಅರಮನೆ ರಸ್ತೆ, ಬಳ್ಳಾರಿ ರಸ್ತೆ, ಜಯಮಹಲ್ ರಸ್ತೆ, ಸ್ಯಾಂಕಿ ರಸ್ತೆಗಳ ತುಂಬೆಲ್ಲಾ ಕಾರ್ಯಕ್ರಮಕ್ಕೆ ಬರುತ್ತಿದ್ದವರ ವಾಹನಗಳೇ ತುಂಬಿದ್ದವು. ರಸ್ತೆಗಳ ಎರಡೂ ಬದಿಗಳಲ್ಲಿ ಕಾಂಗ್ರೆಸ್ ಬಾವುಟ, ಬ್ಯಾನರ್ ಮತ್ತು ಕಟೌಟ್‌ಗಳು ಇದ್ದವು. ಕೆಲವೆಡೆ ಪಾದಚಾರಿ ಮಾರ್ಗವೇ ಕಾಣದಂತೆ ಬ್ಯಾನರ್‌ಗಳನ್ನು ಹಾಕಲಾಗಿತ್ತು.

ಅರಮನೆ ಮೈದಾನದ ತ್ರಿಪುರ ವಾಸಿನಿಯಲ್ಲಿ ಕಾರ್ಯಕ್ರಮ ನಡೆಯುತ್ತಿದ್ದರೂ, ಇಡೀ ಅರಮನೆ ಮೈದಾನವನ್ನು ವಾಹನಗಳ ನಿಲುಗಡೆಗೆ ಮೀಸಲಿಡಲಾಗಿತ್ತು. ದೂರದ ಊರುಗಳಿಂದ ಬರುವವರಿಗೆ ಅಲ್ಲಿನ ಕಾಂಗ್ರೆಸ್ ನಾಯಕರು ಖಾಸಗಿ ಬಸ್‌ಗಳ ವ್ಯವಸ್ಥೆ ಮಾಡಿದ್ದರು. ನಗರದ ವಿವಿಧ ಭಾಗದ ಕಾಂಗ್ರೆಸ್ ಶಾಸಕರು ಬಿಎಂಟಿಸಿ ಬಸ್‌ಗಳು ಮತ್ತು ಖಾಸಗಿ ಟೆಂಪೊ ಟ್ರಾವೆಲರ್‌ಗಳ ವ್ಯವಸ್ಥೆ ಮಾಡಿದ್ದರು. ವಾಹನ ನಿಲುಗಡೆಯ ಜಾಗ ಮತ್ತು ಮುಖ್ಯ ವೇದಿಕೆಯ ಮಧ್ಯೆ ಬಹಳ ಅಂತರವಿತ್ತು. ಬಸ್‌ಗಳಿಂದ ಇಳಿದ ಕಾರ್ಯಕರ್ತರು ಮತ್ತು ಜನರು ಮೆರವಣಿಗೆ ಮೂಲಕ ಮುಖ್ಯ ವೇದಿಕೆಯತ್ತ ತೆರಳುವಾಗ, 'ಜೈ ಕಾಂಗ್ರೆಸ್, ಜೈ ರಾಹುಲ್ ಗಾಂಧಿ'ಎಂದು ಘೋಷಣೆ ಕೂಗುತ್ತಿದ್ದರು.

ಮೈದಾನದ ಬೇರೆ-ಬೇರೆ ಭಾಗಗಳಿಂದ ಮೆರವಣಿಗೆ ಬರುತ್ತಿದ್ದ ಗುಂಪುಗಳು ಮುಖ್ಯ ವೇದಿಕೆಗೆ ಹತ್ತಿರವಾಗುತ್ತಿದ್ದಂತೆ ಘೋಷಣೆಗಳ ಅಬ್ಬರ ಹೆಚ್ಚಾಗುತ್ತಿತ್ತು. ಬೇರೆ ಬೇರೆ ವಿಧಾನಸಭಾ ಕ್ಷೇತ್ರಗಳಿಂದ ಬಂದಿದ್ದ ಜನರು ತಮ್ಮ-ತಮ್ಮ ಶಾಸಕರ ಪರವಾಗಿ ಘೋಷಣೆ ಕೂಗಲಾರಂಭಿಸಿದರು. ಶಾಸಕರಾದ ಜಮೀರ್ ಅಹಮದ್ ಖಾನ್, ರಿಜ್ವಾನ್ ಅರ್ಷದ್, ದಿನೇಶ್ ಗುಂಡೂರಾವ್ ಅವರ ಕ್ಷೇತ್ರಗಳಿಂದ ಬಂದಿದ್ದ ಕಾರ್ಯಕರ್ತರು ತಮ್ಮ ಶಾಸಕರ ಪರವಾಗಿ ಗಟ್ಟಿಯಾಗಿ ಘೋಷಣೆ ಕೂಗಿ ಸಾಗಿದರು.

ಈ ಹಾದಿಯ ಮಧ್ಯೆ ಹಲವರು ಗಾಂಧಿ ಟೊಪ್ಪಿ ಮತ್ತು ಕಾಂಗ್ರೆಸ್ ಚಿಹ್ನೆ ಇರುವ ಶಾಲುಗಳನ್ನು ಮಾರುತ್ತಿದ್ದರು. ಕಾರ್ಯಕರ್ತರು ಅಭಿಮಾನದಿಂದ ಅವುಗಳನ್ನು ಖರೀದಿಸಿ, ತೊಟ್ಟು ಬೀಗಿದರು. ಮುಖ್ಯ ವೇದಿಕೆಗೆ ಹೋಗುವ ದ್ವಾರದ ಬಳಿ 30ಕ್ಕೂ ಹೆಚ್ಚು ಲೋಹಶೋಧಕ ದ್ವಾರಗಳನ್ನು ಅಳವಡಿಸಲಾಗಿತ್ತು. ಪೊಲೀಸರು ಪ್ರತಿಯೊಬ್ಬರನ್ನೂ ಕೂಲಂಕಷವಾಗಿ ತಪಾಸಣೆ ನಡೆಸಿ, ಒಳಗೆ ಬಿಡುತ್ತಿದ್ದರು. ಯಾವೊಬ್ಬ ವ್ಯಕ್ತಿಯೂ ಬೀಡಿ-ಸಿಗರೇಟು, ಗುಟ್ಕಾ, ಬ್ಯಾಗುಗಳನ್ನು ಒಳಗೆ ಒಯ್ಯಲು ಪೊಲೀಸರು ಬಿಡಲಿಲ್ಲ. ಹಲವರು ಪೊಲೀಸರನ್ನು ಶಪಿಸಿಕೊಂಡೇ ವೇದಿಕೆಯತ್ತ ಹೋದರು.

ಮುಖ್ಯ ವೇದಿಕೆಯ ಸುತ್ತ ಇದ್ದ ಸಭಾಂಗಣಗಳು ಕಿಕ್ಕಿರಿದು ತುಂಬಿದ್ದರೆ, ಮೈದಾನದ ಹೊರಗೂ ಜನಜಂಗುಳಿ ಇತ್ತು. ಬೆಳಿಗ್ಗೆ 10.15ರ ಹೊತ್ತಿಗೆ ಆರಂಭವಾದ ಕಾರ್ಯಕ್ರಮ, ಮುಕ್ತಾಯವಾಗಿದ್ದು ಸಂಜೆ 5ರ ವೇಳೆಗೆ. ಈ ಮಧ್ಯೆ ನೂರಾರು ಕಾರ್ಯಕರ್ತರು ಕಾರ್ಯಕ್ರಮಕ್ಕೆ ಬಂದು ಹೋಗುತ್ತಲೇ ಇದ್ದರು.



ಬಿ.ಕೆ.ಹರಿಪ್ರಸಾದ್ ಪದಗ್ರಹಣ ಕಾರ್ಯಕ್ರಮಕ್ಕೆ ತಂಡೋಪತಂಡವಾಗಿ ಜನ ಬಂದರು —ಪ್ರಜಾವಾಣಿ ಚಿತ್ರ

ಸೆಲ್ಫಿ ಪಾಯಿಂಟ್

ಮಹಾತ್ಮ ಗಾಂಧಿ ಮತ್ತು ಜವಾಹರ ಲಾಲ್ ನೆಹರೂ ಅವರು ಕೂತು ಚರ್ಚಿಸುತ್ತಿರುವ 30 ಅಡಿಗೂ ಹೆಚ್ಚು ಎತ್ತರದ ಚಿತ್ರವನ್ನು ಮುಖ್ಯ ವೇದಿಕೆಯ ಪ್ರವೇಶದ್ವಾರದ ಎಡಭಾಗದಲ್ಲಿ ಹಾಕಲಾಗಿತ್ತು. ಕಾಂಗ್ರೆಸ್ ಅಭಿಮಾನಿಗಳ ಆ ಬೃಹತ್ ಚಿತ್ರದ ಎದುರು ನಿಂತು ಸೆಲ್ಫಿ ತೆಗೆದುಕೊಳ್ಳುತ್ತಿದ್ದರು. ಇತರರಿಂದ ಚಿತ್ರ ತೆಗೆಸಿಕೊಳ್ಳುತ್ತಿದ್ದರು.

ಪ್ರವೇಶದ್ವಾರದ ಬಲ ಭಾಗದಲ್ಲಿ ಮಾಜಿ ಪ್ರಧಾನಿಗಳಾದ ಇಂದಿರಾ ಗಾಂಧಿ ಮತ್ತು ರಾಜೀವ್ ಗಾಂಧಿ ಅವರು ಚರ್ಚಿಸುತ್ತಿರುವ ಚಿತ್ರವನ್ನು ಅಷ್ಟೇ ದೊಡ್ಡ ಗಾತ್ರದಲ್ಲಿ ಹಾಕಲಾಗಿತ್ತು. ಗಾಂಧಿ ಮತ್ತು ನೆಹರೂ ಚಿತ್ರದೆದುರು ಸೆಲ್ಫಿ ತೆಗೆದುಕೊಂಡವರು, ಈ ಚಿತ್ರದ ಎದುರೂ ಬಂದು ಸೆಲ್ಫಿ ಕ್ಲಿಕ್ಕಿಸಿಕೊಂಡರು. ಈ ಎರಡೂ ಚಿತ್ರಗಳು ಸೆಲ್ಫಿ ಪಾಯಿಂಟ್‌ಗಳಾಗಿ ಬದಲಾಗಿದ್ದವು.

ಜನರ ಕೈಗಳಿಂದ ಹರಿಪ್ರಸಾದ್‌ಗೆ ಬಾವುಟ ಹಸ್ತಾಂತರ

ಜನ ಸಾಮಾನ್ಯರಿಂದ ರಾಜಕೀಯ ನಾಯಕರ ಕೈಗೆ ಪಕ್ಷದ ಬಾವುಟವನ್ನು ಹಸ್ತಾಂತರಿಸಿದ್ದು ಕಾರ್ಯಕ್ರಮದ ಆಕರ್ಷಣೆಗಳಲ್ಲಿ ಒಂದಾಗಿತ್ತು.

ಮುಖ್ಯ ವೇದಿಕೆಯಿಂದ ಕೆಳಗೆ ಮೊದಲ ಸಾಲಿನಲ್ಲಿ ರಾಜ್ಯದ ವಿವಿಧ ಬುಡಕಟ್ಟು, ಅಂಚಿನ ಜಾತಿ–ಸಮುದಾಯಗಳ, ಪೌರಕಾರ್ಮಿಕರ, ವಿದ್ಯಾರ್ಥಿಗಳ ಸಣ್ಣ–ಸಣ್ಣ ಗುಂಪುಗಳನ್ನು ಕೂರಿಸಲಾಗಿತ್ತು. ಅಧಿಕಾರ ಹಸ್ತಾಂತರದ ಭಾಗವಾಗಿ ಕಾಂಗ್ರೆಸ್ ಬಾವುಟವನ್ನು ಈ ಜನರು ಒಬ್ಬರಿಂದ ಮತ್ತೊಬ್ಬರ ಕೈಗೆ ಹಸ್ತಾಂತರಿಸಿದರು.

ಮೊದಲ ಸಾಲಿನ ಕಡೆಯ ವ್ಯಕ್ತಿಯು, ವಿಧಾನ ಪರಿಷತ್ತಿನಲ್ಲಿ ಸರ್ಕಾರದ ಮುಖ್ಯ ಸಚೇತಕ ಸಲೀಂ ಅಹಮದ್ ಅವರಿಗೆ ಪಕ್ಷದ ಬಾವುಟನ್ನು ನೀಡಿದರು. ಸಲೀಂ ಅವರು ಬಾವುಟನ್ನು ವೇದಿಕೆಗೆ ಹೊತ್ತುತಂದು ನಿಕಟಪೂರ್ವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಹಸ್ತಾಂತರಿಸಿದರು. ಸಿದ್ದರಾಮಯ್ಯ ಅವರು ಅದನ್ನು ಮುಖ್ಯಮಂತ್ರಿ ಶಿವಕುಮಾರ್ ಅವರಿಗೆ ನೀಡಿದರು. ಶಿವಕುಮಾರ್ ಅವರು ಆ ಬಾವುಟವನ್ನು ಕೆಪಿಸಿಸಿ ನೂತನ ಅಧ್ಯಕ್ಷ ಹರಿಪ್ರಸಾದ್ ಅವರಿಗೆ ಹಸ್ತಾಂತರಿಸಿದರು.

ಚಿಟಿಕೆ ಸುದ್ದಿ

ಸಿ.ಎಂ.ವಿರುದ್ಧ ಸುಳ್ಳು ಮಾಹಿತಿ: ಎಫ್‌ಐಆರ್

ಬೆಂಗಳೂರು: 'ಜನತಾ ದಳ (ಸೆಕ್ಯುಲರ್)' ಎಂಬ ಫೇಸ್‌ಬುಕ್ ಖಾತೆಯಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ಸುಳ್ಳು ಆರೋಪಗಳನ್ನು ಒಳಗೊಂಡ ವಿಡಿಯೊ ಪ್ರಕಟಿಸಿದ ಆರೋಪದಡಿ 'ಕುಮಾರಸ್ವಾಮಿ ಫಾರ್ ಸಿಎಂ ಹಾಗೂ ಜನತಾದಳ ಸೆಕ್ಯುಲರ್' ಸಾಮಾಜಿಕ ಮಾಧ್ಯಮ ನಿರ್ವಾಹಕರ ವಿರುದ್ಧ ಪ್ರಕರಣ ದಾಖಲಾಗಿದೆ.

ವಕೀಲ ಸಿ.ಆರ್. ದೀಪು ಅವರು ದೂರು ಆಧರಿಸಿ, ಸದಾಶಿವನಗರ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಂಡಿದ್ದಾರೆ.

'ಫೇಸ್‌ಬುಕ್ ಖಾತೆಯಲ್ಲಿ 'ಹಳೆ ಚಾಳಿ ಮತ್ತೆ ಶುರು, ಸುಟ್ಟರೂ ಹೋಗದ ಹುಟ್ಟುಗುಣ' ಎಂಬ ಶೀರ್ಷಿಕೆಯಡಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ಸುಳ್ಳು ಆರೋಪಗಳನ್ನು ಒಳಗೊಂಡ ವಿಡಿಯೊ ಪ್ರಕಟಿಸಲಾಗಿದೆ. ಮಾನಹಾನಿಕರ, ಸುಳ್ಳು ಹಾಗೂ ಅವಹೇಳನಕಾರಿ ವಿಷಯ ವಿಡಿಯೊದಲ್ಲಿದೆ' ಎಂದು ದೂರಿನಲ್ಲಿ ತಿಳಿಸಲಾಗಿದೆ.

ಎಚ್1ಎನ್1 ಜ್ವರ: ವ್ಯಕ್ತಿ ಸಾವು

ಕಾರವಾರ/ಯಲ್ಲಾಪುರ (ಉತ್ತರ ಕನ್ನಡ ಜಿಲ್ಲೆ): ತಾಲ್ಲೂಕಿನ 41 ವರ್ಷದ ವ್ಯಕ್ತಿಯೊಬ್ಬರು ಭಾನುವಾರ ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ಅವರಿಗೆ ಎಚ್1ಎನ್1 ಜ್ವರ ದೃಢಪಟ್ಟಿರುವುದಾಗಿ ವೈದ್ಯಾಧಿಕಾರಿಗಳು ತಿಳಿಸಿದ್ದಾರೆ.

'ಕೃಷಿ ಕೂಲಿಕಾರ್ಮಿಕರಾಗಿರುವ ವ್ಯಕ್ತಿಗೆ ಜೂನ್ 10ರಂದು ಜ್ವರ ಬಂದಿದ್ದು, ಸಮೀಪದ ಖಾಸಗಿ ಕ್ಲಿನಿಕ್‌ನಲ್ಲಿ ಚಿಕಿತ್ಸೆ ಪಡೆದಿದ್ದರು. ಗುಣಮುಖರಾಗದ ಕಾರಣದಿಂದ 17ರಂದು ಶಿರಸಿಯ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದರು. ಉಸಿರಾಟ ಸಮಸ್ಯೆ ತೀವ್ರಗೊಂಡಿದ್ದರಿಂದ ಮಂಗಳೂರಿಗೆ ಕರೆದೊಯ್ಯಲಾಗಿತ್ತು. ಅಲ್ಲಿ ತಪಾಸಣೆ ನಡೆಸಿದ ವೇಳೆ ಎಚ್1ಎನ್1 ಜ್ವರ ದೃಢಪಟ್ಟಿದೆ' ಎಂದು ಯಲ್ಲಾಪುರ ತಾಲ್ಲೂಕು ವೈದ್ಯಾಧಿಕಾರಿ ಡಾ.ನರೇಂದ್ರ ಪವಾರ ತಿಳಿಸಿದ್ದಾರೆ.

ರಾಜ್ಯದ ಕೆಲವೆಡೆ ಭಾರಿ ಮಳೆ ಸಾಧ್ಯತೆ

ಬೆಂಗಳೂರು: ರಾಜ್ಯದ ಕೆಲವೆಡೆ ಸೋಮವಾರದಿಂದ ಮೂರು ದಿನ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಸೋಮವಾರ 13 ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ. ಕರಾವಳಿಯ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಒಂದೆರಡು ಕಡೆ ಮುಂದಿನ ಒಂದು ವಾರ ಭಾರಿ ಮಳೆಯಾಗುವ ಸಾಧ್ಯತೆಯಿದೆ. ಇದೇ 24ರಿಂದ ಉತ್ತರ ಕನ್ನಡ ಜಿಲ್ಲೆಗೂ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ.

ಉತ್ತರ ಒಳನಾಡಿನ ಧಾರವಾಡ, ಹಾವೇರಿ, ಬೆಳಗಾವಿ ಮತ್ತು ಕೊಪ್ಪಳ ಜಿಲ್ಲೆಯ ಒಂದೆರಡು ಕಡೆ ಸೋಮವಾರ ಭಾರಿ ಮಳೆಯಾಗುವ ಸಾಧ್ಯತೆಯಿದ್ದು, ಉಳಿದೆಡೆ ಸಾಧಾರಣ ಮಳೆಯಾಗಲಿದೆ. ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಕೊಡಗು, ಬಳ್ಳಾರಿ, ವಿಜಯನಗರ, ಚಿತ್ರದುರ್ಗ ಜಿಲ್ಲೆಯಲ್ಲಿ ಮಳೆಯಾಗುವ ಸಂಭವವಿದೆ.

'ತಮಿಳುನಾಡು ಕ್ಯಾತೆ ಸರಿಯಲ್ಲ'

ಮಂಡ್ಯ: 'ಕಾವೇರಿ ನದಿ ನೀರಿಗಾಗಿ ತಮಿಳುನಾಡು ಕ್ಯಾತೆ ತೆಗೆದಿರುವುದು ಸರಿಯಲ್ಲ' ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅಸಮಾಧಾನ ವ್ಯಕ್ತಪಡಿಸಿದರು.

ಇಲ್ಲಿ ಭಾನುವಾರ ಪತ್ರಕರ್ತರೊಂದಿಗೆ ಮಾತನಾಡಿ, 'ತಮಿಳುನಾಡಿಗೆ ನಿಗದಿಗಿಂತ ಎರಡು ಪಟ್ಟು ನೀರು ಕೊಟ್ಟಿರುವ ಉದಾಹರಣೆಗಳಿವೆ. ಅವರು ಅದನ್ನು ನೆನೆಯುವುದಿಲ್ಲ. ಒಕ್ಕೂಟ ವ್ಯವಸ್ಥೆಯಲ್ಲಿ ಸಂಘರ್ಷ ಸರಿಯಲ್ಲ' ಎಂದರು. 'ಮೇಕೆದಾಟು ಯೋಜನೆಗೆ ತಮಿಳುನಾಡು ಅಡ್ಡಗಾಲು ಹಾಕುವುದನ್ನು ಒಪ್ಪಲು ಸಾಧ್ಯವಿಲ್ಲ. ಆ ಯೋಜನೆ ಅನುಷ್ಠಾನಗೊಂಡರೆ ಎರಡೂ ರಾಜ್ಯಗಳಿಗೆ ಲಾಭವಾಗಲಿದೆ ಎಂದರು.

ನ್ಯಾಯಮಂಡಳಿ ರಚನೆಗೆ ವಿರೋಧ

ಚೆನ್ನೈ (ಪಿಟಿಐ): ಮೇಕೆದಾಟು ಅಣೆಕಟ್ಟು ಸಮಸ್ಯೆಯನ್ನು ಪರಿಹರಿಸಲು ನ್ಯಾಯಮಂಡಳಿ ರಚಿಸುವ ತಮಿಳುನಾಡು ವಿಧಾನಸಭೆಯ ನಿರ್ಣಯವನ್ನು ಪಿಎಂಕೆ ನಾಯಕ ಅನ್ಬುಮಣಿ ರಾಮದಾಸ್ ಭಾನುವಾರ ತೀವ್ರವಾಗಿ ವಿರೋಧಿಸಿದ್ದಾರೆ.

'ಇಂತಹ ಕ್ರಮವು ತಮಿಳುನಾಡಿನ ಸ್ಥಾಪಿತ ಕಾನೂನು ಹಕ್ಕುಗಳೊಂದಿಗೆ ರಾಜಿ ಮಾಡಿ, ಕರ್ನಾಟಕಕ್ಕೆ ಅನುಕೂಲ ಮಾಡಿಕೊಟ್ಟಂತೆ ಆಗುತ್ತದೆ' ಎಂದು ಅವರು ಆರೋಪಿಸಿದ್ದಾರೆ.

'ನ್ಯಾಯಮಂಡಳಿ ರಚನೆ ಪ್ರಸ್ತಾವವನ್ನು 'ಅನಗತ್ಯ ಮತ್ತು ಪ್ರತಿಕೂಲ' ಎಂದು ವಿಶ್ಲೇಷಿಸಿರುವ ಪಿಎಂಕೆ ಮುಖಂಡರು, 'ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್ ಅವರು, ಸದನದ ನಿರ್ಣಯದಿಂದ ಹೊಸ ನ್ಯಾಯಮಂಡಳಿ ರಚನೆಯ ಬೇಡಿಕೆಯನ್ನು ತೆಗೆದುಹಾಕಬೇಕು' ಎಂದು ಒತ್ತಾಯಿಸಿದ್ದಾರೆ.

ಸುದ್ದಿ 2 ನಿಮಿಷ

'ತಕ್ಷಣವೇ ಕೃಷಿ ಮಂತ್ರಿ ನೇಮಿಸಿ'

ಬೆಳಗಾವಿ: 'ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೇ ನೀವು ಯಾವಾಗ ಸಚಿವ ಸಂಪುಟ ವಿಸ್ತರಿಸುತ್ತೀರೋ ವಿಸ್ತರಿಸಿ. ಆದರೆ, ತಕ್ಷಣವೇ ಕೃಷಿ ಸಚಿವರನ್ನು ನೇಮಿಸಿ. ಅಲ್ಲಿಯ ತನಕ ಕಂದಾಯ ಸಚಿವರಿಗೆ ಆ ಇಲಾಖೆಯ ಜವಾಬ್ದಾರಿ ಕೊಡಿ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಆಡಳಿತದ ಕಡೆ ಆಸಕ್ತಿ ಕಳೆದುಕೊಂಡಿರುವ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು, ಭ್ರಷ್ಟಾಚಾರದ ಹಣ ಹೇಗೆ ಖರ್ಚು ಮಾಡಬೇಕು ಎಂಬುದರ ಕಡೆ ಗಮನಹರಿಸಿದ್ದಾರೆ' ಎಂದು ಟೀಕಿಸಿದರು. 'ನೀವು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸ್ಥಾನದ ಆಕಾಂಕ್ಷಿಯೇ' ಎಂಬ ಸುದ್ದಿಗಾರರ ಪ್ರಶ್ನೆಗೆ, 'ಹೀಗೆಂದು ನಮ್ಮ ಪಕ್ಷದ ವರಿಷ್ಠರು ಹೇಳಿಲ್ಲ. ನಾನೂ ತಿಳಿಸಿಲ್ಲ. ಹಾಗಾಗಿ ಇದಕ್ಕೆ ಪ್ರತಿಕ್ರಿಯೆ ಕೊಡುವುದಿಲ್ಲ' ಎಂದರು.

ಆರು ಮಂದಿ ವಿರುದ್ಧ ಪ್ರಕರಣ



ಮೈಸೂರು: 'ಬಾಂಗ್ಲಾ ವಲಸಿಗರು ಅಕ್ರಮವಾಗಿ ನಗರಕ್ಕೆ ಬಂದಿದ್ದಾರೆ' ಎಂದು ಆರೋಪಿಸಿ, ಪ್ರಯಾಣಿಕರ ಬ್ಯಾಗ್ ಹಾಗೂ ದಾಖಲೆ ಪರಿಶೀಲಿಸಿದ ಹಿಂದೂ ಜಾಗರಣ ವೇದಿಕೆಯ ಆರು ಕಾರ್ಯಕರ್ತರ ವಿರುದ್ಧ ಇಲ್ಲಿನ ರೈಲ್ವೆ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಭಾನುವಾರ ಬೆಳಿಗ್ಗೆ ಪಶ್ಚಿಮಬಂಗಾಳದಿಂದ ಔರಾ ಎಕ್ಸ್‌ಪ್ರೆಸ್‌ನಲ್ಲಿ ಇಲ್ಲಿನ ಕೇಂದ್ರ ರೈಲು ನಿಲ್ದಾಣಕ್ಕೆ ಬಂದು ಹೊರಬರುತ್ತಿದ್ದ 36 ಪ್ರಯಾಣಿಕರನ್ನು ಹಿಂದೂ ಜಾಗರಣ ವೇದಿಕೆಯ ಕಾರ್ಯಕರ್ತರು ಅಡ್ಡಗಟ್ಟಿದರು. 'ಆ ರೈಲಿನ 3 ಬೋಗಿಯಲ್ಲಿ 150ಕ್ಕೂ ಹೆಚ್ಚು ಮಂದಿ ಬಾಂಗ್ಲಾ ವಲಸಿಗರು ಅಕ್ರಮವಾಗಿ ಬಂದಿದ್ದಾರೆ ಎಂಬ ಮಾಹಿತಿ ಇದೆ' ಎಂದು ತಿಳಿಸಿ ದಾಖಲೆ ಕೇಳಿ, ಬ್ಯಾಗ್‌ಗಳನ್ನು ಹುಡುಕಾಡಿದ್ದಾರೆ. ಇದರಿಂದ ಪ್ರಯಾಣಿಕರು ವಿಚಲಿತರಾದರು.

ರೈಲ್ವೆ ಪೊಲೀಸರು ಬಂದು, ಪ್ರಯಾಣಿಕರ ಆಧಾರ್ ಕಾರ್ಡ್ ಸೇರಿದಂತೆ ದಾಖಲಾತಿ ಪರಿಶೀಲಿಸಿದ್ದು, ಅವರೆಲ್ಲಾ ಬಾಂಗ್ಲಾದವರಲ್ಲ ಎಂಬುದನ್ನು ಖಚಿತಪಡಿಸಿಕೊಂಡು ಕಳುಹಿಸಿದ್ದಾರೆ.

ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಠಾಣೆಗೆ ಭೇಟಿ ನೀಡಿ ಮಾಹಿತಿ ಪಡೆದರು. ಬಳಿಕ, ಆರೋಪಿಗಳನ್ನು ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ.

ಗ್ಯಾರಂಟಿ: ಕಾರ್ಯಕರ್ತರಿಗೆ ಅಧಿಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೆಪಿಸಿಸಿ ಅಧ್ಯಕ್ಷನಾಗಿದ್ದ ಆರು ವರ್ಷಗಳಲ್ಲಿ ಪಕ್ಷದ ಅನೇಕ ಪದಾಧಿಕಾರಿಗಳು ನನ್ನ ಜೊತೆ ಶ್ರಮಿಸಿದ್ದಾರೆ. ಆ ಪೈಕಿ, ಎಷ್ಟೋ ಜನಕ್ಕೆ ಅಧಿಕಾರ ನೀಡಲು ಸಾಧ್ಯವಾಗಿಲ್ಲ. ಪಂಚಾಯಿತಿ ಹಾಗೂ ವಾರ್ಡ್ ಮಟ್ಟದಲ್ಲಿ ಐವರು ಸದಸ್ಯರ 'ಗ್ಯಾರಂಟಿ' ಸಮಿತಿ ರಚಿಸಿ ಎಲ್ಲ ವರ್ಗದವರನ್ನು ಸಮಿತಿಯಲ್ಲಿ ನೇಮಿಸುವ ಮೂಲಕ ಅವಕಾಶ ನೀಡಲಾಗುವುದು' ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಘೋಷಿಸಿದರು.

ಕೆಪಿಸಿಸಿ ಅಧ್ಯಕ್ಷ ಸ್ಥಾನವನ್ನು ಬಿ.ಕೆ. ಹರಿಪ್ರಸಾದ್ ಅವರಿಗೆ ಭಾನುವಾರ ಹಸ್ತಾಂತರಿಸಿ ಮಾತನಾಡಿದ ಅವರು, 'ಈ ಸಮಿತಿಯ ಸದಸ್ಯರು ಗ್ಯಾರಂಟಿ ಫಲಾನುಭವಿಗಳ ದಾಖಲೆ ಮರುಪರಿಶೀಲನೆ ಮಾಡಬೇಕು' ಎಂದು ಸೂಚನೆ ನೀಡಿದರು.

'ರಾಹುಲ್ ಗಾಂಧಿಯವರ ಮಾರ್ಗದರ್ಶನದಂತೆ ಮುಂದಿನ ದಿನಗಳಲ್ಲಿ ಕಾಲೇಜುಗಳಲ್ಲಿ ವಿದ್ಯಾರ್ಥಿ ಚುನಾವಣೆಯನ್ನು ನಡೆಸಲು ಸಚಿವ ಸಂಪುಟದಲ್ಲಿ ತೀರ್ಮಾನಿಸಲಾಗುವುದು ಎಂದರು.

ಕೆಪಿಸಿಸಿ ಅಧ್ಯಕ್ಷನಾಗಿದ್ದ ದಿನಗಳನ್ನು ಮೆಲುಕು ಹಾಕಿದ ಶಿವಕುಮಾರ್, 'ಎಲ್ಲರನ್ನೂ ಒಟ್ಟಾಗಿ ತೆಗೆದುಕೊಂಡು ಹೋಗಿ ಪಕ್ಷ ಸಂಘಟನೆ ಮಾಡಿದ್ದೇನೆ. ನನ್ನಿಂದ ಅನೇಕ ತಪ್ಪುಗಳಾಗಿರಬಹುದು. ರೈತರು, ಕಾರ್ಮಿಕರು, ಯುವ ಪೀಳಿಗೆಯವರ ಮಧ್ಯೆ ಕಾರ್ಯಕರ್ತನಾಗಿ ಕೆಲಸ ಮಾಡಿದ್ದೇನೆ. ಮೀನುಗಾರರು, ನೇಕಾರರು, ಲಂಬಾಣಿ, ತಿಗಳರು, ಮಡಿವಾಳರು, ಗಾಣಿಗರು, ಉಪ್ಪಾರ ಸಮುದಾಯಗಳ ಜೊತೆ ಸಂವಾದ ಮಾಡಿ ಅವರ ಸಮಸ್ಯೆ ಕೇಳಿದೆ. ರೈತರು, ಕಾರ್ಮಿಕರು, ಚಾಲಕರು, ಬೀದಿ ವ್ಯಾಪಾರಿಗಳು ಸೇರಿದಂತೆ ಎಲ್ಲಾ ವರ್ಗದ ಜನರ ಸಮಸ್ಯೆ ಆಲಿಸಿದ್ದೆ. ಮುಖ್ಯಮಂತ್ರಿಯಾಗಿದ್ದರೂ ಕಾರ್ಯಕರ್ತನಂತೆ ಕೆಲಸ ಮಾಡುವೆ' ಎಂದರು.

'ಸೋನಿಯಾ ಗಾಂಧಿ ಹಾಗೂ ಮಲ್ಲಿಕಾರ್ಜುನ ಖರ್ಗೆ ಅವರ ಸಮ್ಮುಖದಲ್ಲಿ ಆದ ಚರ್ಚೆಯಂತೆ ಅಧಿಕಾರ ಹಸ್ತಾಂತರ ಮಾಡಲಾಗಿದೆ. ನಮ್ಮದು ಕಾಂಗ್ರೆಸ್ ಜಾತಿ, ಕಾಂಗ್ರೆಸ್ ಧ್ವಜವೇ ನನ್ನ ಧರ್ಮ' ಎಂದು ಹೇಳಿದರು.

'ರಾಜ್ಯದಲ್ಲಿ ನಡೆಯಲಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ನಮಗೆ ಅಪಾಯವೂ ಹೌದು, ಅವಕಾಶವೂ ಹೌದು. ಎಸ್‌ಐಆರ್ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರು ಜನರಲ್ಲಿ ಜಾಗೃತಿ ಮೂಡಿಸಬೇಕು. ಹೀಗಾಗಿ, ನಿಮ್ಮ ಮತದಾನದ ಹಕ್ಕನ್ನು ರಕ್ಷಣೆ ಮಾಡಿಕೊಳ್ಳಬೇಕು' ಎಂದರು.

'ನಿಗಮ, ಮಂಡಳಿ: ಹೊಸಬರಿಗೆ ಅವಕಾಶ ಕೊಡಿ'

'ಐದು ದಶಕಗಳ ಪಕ್ಷ ಸೇವೆಯನ್ನು ಗುರುತಿಸಿ ಕೆಪಿಸಿಸಿ ಅಧ್ಯಕ್ಷ ಸ್ಥಾನವನ್ನು ಹೈಕಮಾಂಡ್ ನೀಡಿದೆ. ನಾನು ಮತ್ತು ಡಿ.ಕೆ. ಶಿವಕುಮಾರ್ ಇಬ್ಬರೂ ಒಪ್ಪಂದ ಮಾಡಿಕೊಂಡಿದ್ದೇವೆ. ನಮ್ಮ ಪೂರ್ವಜನರು ಪಕ್ಷ ಕಟ್ಟಿ ಬೆಳೆಸಿದ ಮಟ್ಟಕ್ಕೆ ಪಕ್ಷವನ್ನು ತೆಗೆದುಕೊಂಡು ಹೋಗುತ್ತೇವೆ. ಪಕ್ಷದ ಹೊಸ ಪದಾಧಿಕಾರಿಗಳ ನೇಮಕಾತಿಯಲ್ಲಿ ಶೇ 33ರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡುತ್ತೇವೆ. ವಿದ್ಯಾರ್ಥಿಗಳು, ಯುವಕರು, ಮಹಿಳೆಯರು, ಕೃಷಿಕರು, ಕಾರ್ಮಿಕರು ಎಲ್ಲ ವರ್ಗದವರನ್ನೂ ಒಟ್ಟಾಗಿ ತೆಗೆದುಕೊಂಡು ಪಕ್ಷ ಸಂಘಟನೆ ಮಾಡುತ್ತೇನೆ' ಎಂದು ಬಿ.ಕೆ. ಹರಿಪ್ರಸಾದ್ ಹೇಳಿದರು.

'ಮುಖ್ಯಮಂತ್ರಿ ಅವರು ಯಾವುದೇ ನಿರ್ಧಾರ ಮಾಡುವಾಗ ಗಾಂಧೀಜಿ ಅವರ ಸಂದೇಶದಂತೆ ಬಡವರು, ದುರ್ಬಲರ ಮುಖ ನೋಡಿಕೊಂಡು ಮಾಡಬೇಕು. ಅಂಬೇಡ್ಕರ್ ಅವರು ಜನರ ಜೀವನ ಬದಲಾಯಿಸುವ ಬದ್ಧತೆ ಇದ್ದವರು ರಾಜಕೀಯಕ್ಕೆ ಬರಬೇಕು ಎಂದಿದ್ದಾರೆ. ನಾವು ಅದಕ್ಕೆ ಬದ್ಧವಾಗಿ ಕೆಲಸ ಮಾಡೋಣ. ಸಿದ್ದರಾಮಯ್ಯ ಅವರ ಸರ್ಕಾರದಲ್ಲಿ ನೇಮಕ ಆದ ನಿಗಮ, ಮಂಡಳಿಗಳ ನೇಮಕಾತಿಯನ್ನು ವಾಪಸ್ ಪಡೆದು ಹೊಸಬರಿಗೆ ಅವಕಾಶ ಕೊಡಿ' ಎಂದು ಮನವಿ ಮಾಡಿದರು. ಕಾರ್ಯಕರ್ತರು ₹ 1, 10, 100 ಕೊಡಿ ಸಾಕು. ಪಕ್ಷ ನಿಮಗೆ ಉತ್ತರದಾಯಿ ಆಗಿರುತ್ತದೆ' ಎಂದರು.

'ಟ್ರಂಪ್‌ನಿಂದ ಪ್ರಪಂಚ, ಮೋದಿಯಿಂದ ದೇಶ ಹಾಳು'

'ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪ್ರಪಂಚ ಹಾಳು ಮಾಡುತ್ತಿದ್ದರೆ, ಮೋದಿ ದೇಶ ಹಾಳು ಮಾಡುತ್ತಿದ್ದಾರೆ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವ್ಯಂಗ್ಯವಾಡಿದರು.

'ನೆಹರೂ ಕಾಲದಿಂದ ಭಾರತ ಅನುಸರಿಸಿಕೊಂಡು ಬಂದಿದ್ದ ತಟಸ್ಥ ನೀತಿಯಿಂದ ಭಾರತಕ್ಕೆ ವಿದೇಶಾಂಗ ವ್ಯವಹಾರಗಳ ವಿಚಾರದಲ್ಲಿ ಸಹಾಯ ಆಗುತ್ತಿತ್ತು. ಈಗ 'ಟ್ರಂಪ್ ಗುಡ್ ಫ್ರೆಂಡ್' ಎಂದು ಮೋದಿ ಹೇಳಿ ಎಲ್ಲ ಹಾಳಾಗಿದೆ. ಇಬ್ಬರೂ ಒಳ್ಳೆಯ ಫ್ರೆಂಡ್ಸ್ ಎನ್ನುತ್ತಿದ್ದಾರೆ. ಹಾಗಿದ್ದರೆ ಟ್ರಂಪ್ ಭಾರತದ ಉತ್ಪನ್ನಗಳಿಗೆ ತೆರಿಗೆ ಹೆಚ್ಚಳ ಮಾಡಿದ್ದನ್ನು ಯಾಕೆ ಪ್ರಶ್ನಿಸಲಿಲ್ಲ' ಎಂದರು.

'ಸರ್ಜಿಕಲ್ ಸ್ಟ್ರೈಕ್ ನಿಲ್ಲಿಸಿ ಎಂದಾಗ ಮೋದಿ ಏಕೆ ಮಾತನಾಡಲಿಲ್ಲ. ರಷ್ಯಾದಿಂದ ಕಡಿಮೆ ಬೆಲೆಗೆ ಕಚ್ಚಾತೈಲ ತರಿಸಿಕೊಳ್ಳುವುದಕ್ಕೆ ನಿರ್ಬಂಧದ ಬಗ್ಗೆ ಪ್ರಶ್ನಿಸಲಿಲ್ಲ. ಯುಪಿಎ ಅವಧಿಯಲ್ಲಿ ಪೆಟ್ರೋಲ್, ಡೀಸೆಲ್, ಎಲ್‌ಪಿಜಿ ಬೆಲೆ ಪೈಸೆ ಲೆಕ್ಕದಲ್ಲಿ ಏರಿಕೆಯಾದರೂ ಪ್ರತಿಭಟಿಸುತ್ತಿದ್ದ ಎಬಿವಿಪಿ, ಬಿಜೆಪಿಯವರು ಈಗ ಮೋದಿ ಸರ್ಕಾರ ನಿರಂತರವಾಗಿ ಅಗತ್ಯ ವಸ್ತುಗಳ ಬೆಲೆ ಹೆಚ್ಚಿಸಿದರೂ ಏಕೆ ತುಟಿಬಿಚ್ಚುತ್ತಿಲ್ಲ. ಒಂದಲ್ಲ ಒಂದು ಸಮಯದಲ್ಲಿ ಬಿಜೆಪಿ ಸರ್ಕಾರ ಬಿದ್ದು ಹೋಗುತ್ತದೆ. ಮೋದಿ ಮೇಲೆ ದೊಡ್ಡ ಸಂಕಷ್ಟ ಬರುತ್ತದೆ. ಕಾದು ನೋಡಿ' ಎಂದು ಹೇಳಿದರು.

'ಯೋಗ ಮುಂದಿನ ಪೀಳಿಗೆಗೆ ದಾಟಲಿ'

ಯೋಗ ದಿನಾಚರಣೆಯಲ್ಲಿ ಸಚಿವ ಯು.ಟಿ ಖಾದರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈಯಕ್ತಿಕ ಮತ್ತು ಸಾಮಾಜಿಕ ಆರೋಗ್ಯಕ್ಕೆ ಪೂರಕವಾಗಿರುವ ಯೋಗವನ್ನು ಮುಂದಿನ ಪೀಳಿಗೆಗೆ ವರ್ಗಾಯಿಸಬೇಕು. ಗ್ರಾಮಗಳಿಗೆ ಯೋಗಾಭ್ಯಾಸ ವಿಸ್ತರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಆರೋಗ್ಯ ಸಚಿವ ಯು.ಟಿ. ಖಾದರ್ ತಿಳಿಸಿದರು.

'ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ' ಎಂಬ ಘೋಷವಾಕ್ಯದಡಿ ವಿಧಾನಸೌಧದ ಮೆಟ್ಟಿಲುಗಳ ಮೇಲೆ ಆಯುಷ್ ಇಲಾಖೆ ಹಮ್ಮಿಕೊಂಡಿದ್ದ 12ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

'ಹಲವು ಗ್ರಾಮಗಳಲ್ಲಿ ಈಗಾಗಲೇ ಯೋಗ ಗುರುಗಳಿದ್ದಾರೆ. ಎಲ್ಲರೂ ಯೋಗ ಮಾಡಬೇಕು. ಒಂದು ದಿನಕ್ಕೆ ಯೋಗ ಸೀಮಿತವಾಗಬಾರದು. ನಮ್ಮ ದಿನಚರಿಯಲ್ಲಿ ಯೋಗ ಅಳವಡಿಸಿಕೊಳ್ಳಬೇಕು' ಎಂದು ಸಲಹೆ ನೀಡಿದರು.

ರಾಜ್ಯಪಾಲ ಥಾವರಚಂದ್ ಗೆಹಲೋತ್ ಮಾತನಾಡಿ, 'ಯೋಗ ಸಾವಿರಾರು ವರ್ಷಗಳಷ್ಟು ಪುರಾತನವಾದದ್ದು. ಮಾನವನ ಆರೋಗ್ಯಕ್ಕೆ ಮಾರ್ಗ ತೋರಿಸಿದ್ದು ಯೋಗ. ಮನಸ್ಸು, ಶರೀರದ ಏಕತೆಗೆ ಯೋಗ ಮುಖ್ಯ' ಎಂದು ಹೇಳಿದರು.

'ಇಂದು ಜಗತ್ತು ಸ್ಪರ್ಧೆಗೆ ಬಿದ್ದಿದೆ. ಇದರಿಂದ ಮಾನಸಿಕ ಮತ್ತು ಶಾರೀರಿಕ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ. ಆರೋಗ್ಯ ಕಾಪಾಡಿಕೊಳ್ಳಬೇಕು ಎಂಬ ಕಾರಣಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಅಂತರರಾಷ್ಟ್ರೀಯ ಯೋಗ ದಿನವನ್ನು 12 ವರ್ಷಗಳ ಹಿಂದೆ ಘೋಷಿಸಿದರು. ಯುವ ಸಮೂಹ ಪ್ರತಿದಿನ ಯೋಗಕ್ಕೆ ಸಮಯ ಮೀಸಲಿಡಬೇಕು. ಉತ್ತಮ ಆರೋಗ್ಯಕ್ಕಾಗಿ ಯೋಗ ಎಂಬ ಘೋಷ ವಾಕ್ಯದೊಂದಿಗೆ ಯೋಗ ದಿನ ಆಚರಿಸಲಾಗುತ್ತಿದೆ. ಯೋಗವನ್ನು ಜೀವನದ ಅಂಗವಾಗಿ ಮಾಡಿಕೊಳ್ಳಬೇಕು. ಈ ಕುರಿತು ರಾಜ್ಯ ಸರ್ಕಾರ ಪ್ರಚಾರ ಹಾಗೂ ಜಾಗೃತಿ ಮೂಡಿಸುತ್ತಿದೆ' ಎಂದು ಶ್ಲಾಘಿಸಿದರು. ವಿಧಾನಸಭೆಯ ಉಪ ಸಭಾಧ್ಯಕ್ಷ ರುದ್ರಪ್ಪ ಲಮಾಣಿ, ನಟಿಯರಾದ ಸುಧಾರಾಣಿ, ಹರಿಪ್ರಿಯಾ, ನಟ ವಶಿಷ್ಠ ಸಿಂಹ ಭಾಗಿಯಾಗಿದ್ದರು.

ಮಲ್ಲಗಂಬ ಪ್ರದರ್ಶನ: ಬೆಳಗಾವಿ ಮಲ್ಲಗಂಬ ಅಕಾಡೆಮಿಯ ಯೋಗಪಟುಗಳು ರೋಚಕ ಮಲ್ಲಗಂಬ ಪ್ರದರ್ಶನ ನೀಡಿದರು.



ವಿಧಾನಸೌಧದ ಎದುರು ಭಾನುವಾರ ಆಯೋಜಿಸಿದ್ದ ಯೋಗ ಕಾರ್ಯಕ್ರಮದಲ್ಲಿ ಭಾಗವಹಿಸಿದ ಯೋಗಾಸಕ್ತರು ಪ್ರಜಾವಾಣಿ ಚಿತ್ರ: ಕೃಷ್ಣ ಕುಮಾರ್ ಪಿ.ಎಸ್.

ಸಿಎಂ, ಡಿಸಿಎಂ ಗೈರು

ವಿಶ್ವ ಯೋಗ ದಿನಾಚರಣೆಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಉಪ ಮುಖ್ಯಮಂತ್ರಿ ಜಿ.ಪರಮೇಶ್ವರ ಸೇರಿದಂತೆ ಅನೇಕ ಜನಪ್ರತಿನಿಧಿಗಳು ಗೈರಾಗಿದ್ದರು. 'ಮುಖ್ಯಮಂತ್ರಿ ಮುಂಬೈಯಲ್ಲಿದ್ದಾರೆ. ಉಪ ಮುಖ್ಯಮಂತ್ರಿಯವರಿಗೆ ಅನಾರೋಗ್ಯ. ಹೀಗಾಗಿ ಕಾರ್ಯಕ್ರಮಕ್ಕೆ ಬಂದಿಲ್ಲ' ಎಂದು ಆರೋಗ್ಯ ಸಚಿವ ಯು.ಟಿ. ಖಾದರ್ ಸ್ಪಷ್ಟನೆ ನೀಡಿದರು.

ಗುರುದ್ವಾರದಲ್ಲಿ ಗುಂಪು ದಾಂದಲೆ

ರುದ್ರಪ್ರಯಾಗ (ಪಿಟಿಐ): ನಿಹಾಂಗ್ (ಅಕಾಲಿ) ಸಮುದಾಯದ ಗುಂಪೊಂದು ಭರ್ಜಿ ಮತ್ತು ಕತ್ತಿಗಳನ್ನು ಹಿಡಿದು ಉತ್ತರಾಖಂಡದ ಗುರುದ್ವಾರವೊಂದಕ್ಕೆ ನುಗ್ಗಿ ಅಲ್ಲಿನ ವ್ಯವಸ್ಥಾಪಕರನ್ನು ಚಾವಣಿ ಮೇಲೆ ಒತ್ತೆ ಇರಿಸಿಕೊಂಡಿತ್ತು ಎಂದು ಭಾನುವಾರ ಪೊಲೀಸರು ತಿಳಿಸಿದ್ದಾರೆ.

ಸಮುದಾಯದ ಕೆಲವರ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿ, ಬಂಧಿಸಿರುವುದಕ್ಕೆ ಆಕ್ರೋಶ ವ್ಯಕ್ತಪಡಿಸಿ ಶನಿವಾರ ಸಂಜೆ ಈ ದಾಳಿ ನಡೆದಿದೆ.

'ವಾಹನ ನಿಲುಗಡೆ ಗಲಾಟೆಯ ಬಂಧಿತರ ಬಿಡುಗಡೆಗೆ ನಗ್ರಾಸು ಗುರುದ್ವಾರದವರು ಸಹಕಾರ ನೀಡಿಲ್ಲ ಎಂದು ಸಿಟ್ಟಾದ ಗುಂಪು ಗುರುದ್ವಾರಕ್ಕೆ ನುಗ್ಗಿ ದಾಂದಲೆ ನಡೆಸಿದೆ.

ಪ್ರಾಥಮಿಕ ವರದಿ ಶೀಘ್ರ ಸಲ್ಲಿಕೆ: ಸಿ.ಟಿ.ರವಿ

ಬೆಳಗಾವಿ: 'ವಿಧಾನ ಪರಿಷತ್ ಚುನಾವಣೆಯಲ್ಲಿ ಆಗಿರುವ ಅಡ್ಡ ಮತದಾನದ ಕುರಿತು ಮಾಹಿತಿ ಕಲೆಹಾಕುತ್ತಿದ್ದೇವೆ. ಒಂದೆರಡು ದಿನಗಳಲ್ಲಿ ಪ್ರಾಥಮಿಕ ವರದಿ ಕೊಡುತ್ತೇವೆ' ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಹೇಳಿದರು.

ಇಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಅಡ್ಡ ಮತದಾನ ವಿಷಯವನ್ನು ಪಕ್ಷ ಗಂಭೀರವಾಗಿ ಪರಿಗಣಿಸಿದೆ. ವಾಸ್ತವಾಂಶ ತಿಳಿಯಲು ಸತ್ಯಶೋಧನಾ ಸಮಿತಿ ರಚಿಸಿದೆ. ಈ ತಂಡದಲ್ಲಿ ನಾನು, ಮಹೇಶ ಟೆಂಗಿನಕಾಯಿ ಹಾಗೂ ಎನ್.ಮಹೇಶ ಇದ್ದೇವೆ.



ಸಿ.ಟಿ.ರವಿ

ಇಡೀ ಬೆಳವಣಿಗೆ ಬಗ್ಗೆ ಪರಿಶೀಲಿಸಿ ವರದಿ ಸಲ್ಲಿಸುವಂತೆ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರು ತಿಳಿಸಿದ್ದಾರೆ' ಎಂದರು. ಯಾರ ಮೇಲೂ ಅನುಮಾನ ವ್ಯಕ್ತಪಡಿಸುವುದು ಸೂಕ್ತವಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ಹಿಂದೂ ರಾಷ್ಟ್ರದಿಂದಲೇ ಪ್ರಜಾಪ್ರಭುತ್ವ'

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಭಾರತ ಹಿಂದೂ ರಾಷ್ಟ್ರ ಆಗಿರುವುದರಿಂದಲೇ ಇಲ್ಲಿ ಪ್ರಜಾಪ್ರಭುತ್ವ ಉಳಿದಿದೆ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಆರ್‌ಎಸ್‌ಎಸ್ ಮತ್ತು ಬಿಜೆಪಿ ನಮ್ಮ ದೇಶವನ್ನು ಹಿಂದೂ ರಾಷ್ಟ್ರ ಮಾಡುವುದಕ್ಕೆ ಹೊರಟಿವೆ' ಎಂಬ ಸಿದ್ದರಾಮಯ್ಯ ಅವರ ಹೇಳಿಕೆಗೆ ಮೇಲಿನಂತೆ ಪ್ರತಿಕ್ರಿಯಿಸಿದರು.

'ಈ ದೇಶ ಹಿಂದೂ ರಾಷ್ಟ್ರ ಆಗದೇ ಹೋಗಿದ್ದರೆ ಇಲ್ಲಿ ಪ್ರಜಾಪ್ರಭುತ್ವ ಇರುತ್ತಿರಲಿಲ್ಲ. ಹಿಂದುತ್ವದ ಹೆಸರಿನಲ್ಲಿ ರಾಜಕಾರಣ ಮಾಡುವುದನ್ನು ಸಿದ್ದರಾಮಯ್ಯ ಅವರು ಬಂದ್ ಮಾಡಬೇಕು' ಎಂದರು.

ಬಿಡದಿ ಯೋಜನಾ ಪ್ರದೇಶದಲ್ಲಿ ಜೆಡಿಎಸ್ ಪಾದಯಾತ್ರೆಯಲ್ಲಿ ನಿಖಿಲ್ ಕುಮಾರಸ್ವಾಮಿ ಸವಾಲು

ಜಮೀನು ಬಿಡುತ್ತೇವೆ, ಟೌನ್‌ಶಿಪ್ ಕೈ ಬಿಡುತ್ತೀರಾ?

ಪ್ರಜಾವಾಣಿ ವಾರ್ತೆ

ರಾಮನಗರ: 'ರಾಜ್ಯ ಸರ್ಕಾರ ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಯೋಜನೆ (ಜಿಬಿಐಟಿ) ಕೈಬಿಟ್ಟರೆ ಯೋಜನಾ ಪ್ರದೇಶದಲ್ಲಿರುವ ನನ್ನ ಕುಟುಂಬದ 32 ಎಕರೆ ಜಮೀನನ್ನು ಸಾರ್ವಜನಿಕ ಬಳಕೆಗೆ ಬಿಟ್ಟು ಕೊಡುತ್ತೇನೆ. ಸರ್ಕಾರ ಯೋಜನೆ ರದ್ದುಪಡಿಸಲು ತಯಾರಿದೆಯೇ?' ಎಂದು ಜೆಡಿಎಸ್ ಯುವ ರಾಜ್ಯ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಸವಾಲು ಹಾಕಿದರು.

ಟೌನ್‌ಶಿಪ್ ವಿರೋಧಿಸಿ ಪಕ್ಷದಿಂದ ತಾಲ್ಲೂಕಿನ ಬಿಡದಿ ಹೋಬಳಿಯ ಯೋಜನಾ ಪ್ರದೇಶದ 7 ಗ್ರಾಮಗಳಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಪಾದಯಾತ್ರೆಯಲ್ಲಿ ಅವರು ಮಾತನಾಡಿದರು. 'ಬನ್ನಿಗಿರಿ ಗ್ರಾಮದಲ್ಲಿ ನನ್ನ ತಾಯಿ ಹೆಸರಿನಲ್ಲಿ 27 ಎಕರೆ ಮತ್ತು ನನ್ನ ಹೆಸರಿನಲ್ಲಿ 5 ಎಕರೆ ಜಮೀನನ್ನು ಕೋವಿಡ್ ಸಂದರ್ಭದಲ್ಲಿ ಕೃಷಿ ಮತ್ತು ಹೈನುಗಾರಿಕೆ ಉದ್ದೇಶಕ್ಕೆ ಖರೀದಿಸಿದ್ದೇವೆ' ಎಂದರು.

'ಸರ್ಕಾರ ಟೌನ್‌ಶಿಪ್ ಕೈಬಿಟ್ಟರೆ ಆ ಜಮೀನನ್ನು ಶಾಲೆ, ಆಸ್ಪತ್ರೆ ಸೇರಿದಂತೆ ಸಾರ್ವಜನಿಕ ಉದ್ದೇಶಕ್ಕೆ ಬಿಟ್ಟು ಕೊಡುತ್ತೇನೆ. ಸಿನಿಮಾ ಹಂಚಿಕೆ ಮಾಡಿದ ದುಡ್ಡಲ್ಲಿ ಜಮೀನು ಖರೀದಿಸಿದ್ದೇವೆಯೇ ಹೊರತು ಯಾರದ್ದೋ ತಲೆ ಹೊಡೆದು ಖರೀದಿಸಿಲ್ಲ. ನಮ್ಮ ಕುಟುಂಬಕ್ಕೆ ಯಾವುದೇ ಬೇನಾಮಿ ಆಸ್ತಿಯೂ ಇಲ್ಲ' ಎಂದರು.

ಪರ–ವಿರೋಧ, ವಾಗ್ವಾದ: ಅಂಚಿಪುರ ಗ್ರಾಮದ ವೃತ್ತದಲ್ಲಿ ನಿಖಿಲ್ ಸ್ವಾಗತಿಸುವ ಫ್ಲೆಕ್ಸ್ ಪಕ್ಕದಲ್ಲೇ ಯೋಜನೆ ಪರವಾದ ಎರಡು ಫ್ಲೆಕ್ಸ್‌ಗಳು ಮತ್ತು ಫಲಕಗಳು ಕಂಡು ಬಂದವು. 'ನಮ್ಮ ಭೂಮಿ ನಮ್ಮ ಹಕ್ಕು', 'ಬೇಕೇ ಬೇಕೇ ಟೌನ್‌ಶಿಪ್ ಬೇಕು' ಎಂಬ ಫ್ಲೆಕ್ಸ್‌ಗಳಲ್ಲಿ ಎರಡು ದಶಕದಿಂದ ಯೋಜನೆ ಸಾಗಿ ಬಂದ ಮಾಹಿತಿ ಗಮನ ಸೆಳೆಯಿತು.

ಇದು ನಿಖಿಲ್ ಸೇರಿದಂತೆ ಪಾದಯಾತ್ರೆಯಲ್ಲಿ ಭಾಗವಹಿಸಿದ್ದ ಪಕ್ಷದ ಮುಖಂಡರಿಗೆ ಮುಜುಗರ ಉಂಟು ಮಾಡಿತು. ಯೋಜನೆ ಪರವಾಗಿದ್ದ ಫ್ಲೆಕ್ಸ್‌ಗಳನ್ನು ಕಾರ್ಯಕರ್ತರು ಹರಿದು ಸರ್ಕಾರ ಮತ್ತು ಟೌನ್‌ಶಿಪ್ ವಿರುದ್ಧ ಧಿಕ್ಕಾರ ಕೂಗಿದರು. ಸ್ಥಳೀಯ ಗುಂಪೊಂದು ಯೋಜನೆ ಪರ ಘೋಷಣೆ ಕೂಗಿದರು. ಆಗ ಮಾಜಿ ಶಾಸಕ ಎ.ಮಂಜುನಾಥ್, 'ಭೂಮಿ ಉಳಿಸಲು ಮಾಡುತ್ತಿರುವ ಪಾದ ಯಾತ್ರೆಗೆ ಸಹಕರಿಸಿ' ಎಂದು ಮನವಿ ಮಾಡಿದರು.

> ಡಿನೋಟಿಫಿಕೇಷನ್ ಮಾಡಿ ನಾನು ಜೈಲಿಗೆ ಹೋಗಲ್ಲ ಎಂದು ಸಿ.ಎಂ ಹೇಳುತ್ತಾರೆ. ಆದರೆ, ಹಿಂದಿನ ಸಿಎಂ ದೇವನಹಳ್ಳಿಯಲ್ಲಿ ಡಿನೋಟಿಫಿಕೇಷನ್ ಮಾಡಿ ಜೈಲಿಗೆ ಹೋದ್ರಾ?
> **ನಿಖಿಲ್ ಕುಮಾರಸ್ವಾಮಿ,** ಜೆಡಿಎಸ್ ಯುವ ರಾಜ್ಯ ಘಟಕದ ಅಧ್ಯಕ್ಷ



ಪಾದಯಾತ್ರೆ ವೇಳೆ ಸ್ಥಳೀಯ ಮಹಿಳೆಯರು, 'ನಮ್ಮ ಭೂಮಿ ಉಳಿಸಿ ಕೊಡಿ' ಎಂದು ನಿಖಿಲ್ ಕುಮಾರಸ್ವಾಮಿ ಅವರಿಗೆ ಮನವಿ ಮಾಡಿದರು

'ಜೈಲಿಗೆ ಹೋಗುವ ಅಗತ್ಯವಿಲ್ಲ, ಯೋಜನೆ ಕೈಬಿಡಿ'

ಪ್ರಜಾವಾಣಿ ವಾರ್ತೆ

ಮಂಡ್ಯ: 'ಮುಖ್ಯಮಂತ್ರಿಯವರು ಡಿನೋಟಿಫಿಕೇಶನ್ ಮಾಡಿದರೆ ಜೈಲಿಗೆ ಹೋಗಬೇಕಾಗುತ್ತದೆ ಎಂದು ನಾಟಕ ಮಾಡುತ್ತಿದ್ದಾರೆ. ಜೈಲಿಗೆ ಹೋಗಬೇಕಾದ ಅಗತ್ಯವಿಲ್ಲ. ಬಿಡದಿ ಭಾಗದ ರೈತರ ಹಿತಕ್ಕಾಗಿ ಇಡೀ ಯೋಜನೆಯನ್ನೇ ಕೈಬಿಡಿ. ಆಗ, ಜನರು ನಿಮ್ಮ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಾರೆ' ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದರು.



ಕುಮಾರಸ್ವಾಮಿ

ಇಲ್ಲಿ ನಗರದಲ್ಲಿ ಭಾನುವಾರ ಮಾಧ್ಯಮದವರೊಂದಿಗೆ ಮಾತನಾಡಿ, 'ಮಾಗಡಿ ಶಾಸಕ ಚೆಕ್‌ಗಳನ್ನು ಪ್ರದರ್ಶಿಸಿ, ಅನ್ನದಾತರನ್ನು ಅಪಮಾನಿಸಿದ್ದಾರೆ. ರೈತರ ಕಷ್ಟಗಳೊಂದಿಗೆ ಚೆಲ್ಲಾಟ ಆಡಬೇಡಿ. ಚೆಕ್‌ಗಳ ಪ್ರದರ್ಶನ ದರ್ಪವಲ್ಲದೆ ಬೇರೇನೂ ಅಲ್ಲ. ತಪ್ಪು ತಿದ್ದಿಕೊಳ್ಳದಿದ್ದರೆ ಆ ಜನರೇ ತಕ್ಕ ಶಾಸ್ತಿ ಮಾಡುತ್ತಾರೆ' ಎಂದರು.

'ಬಿಡದಿ ಟೌನ್‌ಶಿಪ್ ವಿಚಾರದಲ್ಲಿ ನಾನು ಡಿಕೆಶಿ ವಿರುದ್ಧ ವೈಯಕ್ತಿಕವಾಗಿ ಹೋರಾಡುತ್ತಿಲ್ಲ. ಕೃಷಿ ಭೂಮಿಯನ್ನು ರಿಯಲ್ ಎಸ್ಟೇಟ್ ದಂಧೆಕೋರರು ಕೊಳ್ಳೆ ಹೊಡೆಯಲು ಹೊರಟಿದ್ದಾರೆ. ಇದನ್ನು ತಡೆಯಲು ರೈತರೊಂದಿಗೆ ಹೋರಾಟಕ್ಕೆ ಇಳಿದಿದ್ದೇನೆ' ಎಂದು ತಿಳಿಸಿದರು.

'ಈ ಹೋರಾಟದಲ್ಲಿ ಜಾತಿ ವಿಚಾರ ತರುವ ಪ್ರಯತ್ನವನ್ನು ಕೆಲವರು ಮಾಡುತ್ತಿದ್ದಾರೆ. ಅನ್ಯಾಯ ಮುಚ್ಚಿಟ್ಟುಕೊಳ್ಳಲು ಇಂತಹ ವಿಚಾರ ಮುನ್ನೆಲೆಗೆ ಸರಿಯಲ್ಲ' ಎಂದರು.

'ಕೈಗಾರಿಕೆ ಅಥವಾ ಟೌನ್‌ಶಿಪ್ ಬೇಡ ಎಂದು ನಾನು ಹೇಳುತ್ತಿಲ್ಲ. ಬೇಕಾದಷ್ಟು ಬಂಜರು ಭೂಮಿ ಇದ್ದು, ಅದನ್ನು ಬಳಸಿಕೊಳ್ಳಲಿ' ಎಂದರು.



prajavani.net | prajavani
ಸೋಮವಾರ, ಜೂನ್ 22, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 172 | ಪುಟ 14
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

‘ಕಡಲು ಕಣ್ಗಾವಲು ಸಾಮರ್ಥ್ಯ ಹೆಚ್ಚಳಕ್ಕೆ ಸಿದ್ಧತೆ’ 9
ಮಾರುಕಟ್ಟೆ ಕುಸಿದಾಗಲೂ ಲಾಭ 8

ನೂತನ ಅಬಕಾರಿ ನೀತಿ: ಮದ್ಯ ಮಾರಾಟ, ವರಮಾನ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದ್ಯದಲ್ಲಿರುವ ಆಲ್ಕೋಹಾಲ್ ಪ್ರಮಾಣದ ಆಧಾರದ ಮೇಲೆ ಸುಂಕ ವಿಧಿಸುವ ನೂತನ ಅಬಕಾರಿ ನೀತಿ ಜಾರಿಯ ನಂತರ ರಾಜ್ಯದಲ್ಲಿ ಮದ್ಯ ಮಾರಾಟ ಮತ್ತು ಅದರಿಂದ ರಾಜ್ಯ ಸರ್ಕಾರಕ್ಕೆ ಬಂದ ವರಮಾನದಲ್ಲಿ ಏರಿಕೆಯಾಗಿದೆ. ಮೇ 11ರಿಂದ ಜೂನ್ 11ರ ಮಧ್ಯೆ ಅಬಕಾರಿ ಇಲಾಖೆಯು ₹3,509 ಕೋಟಿ ವರಮಾನ ಸಂಗ್ರಹಿಸಿದೆ.

ರಾಜ್ಯ ಸರ್ಕಾರವು ನೂತನ ಅಬಕಾರಿ ನೀತಿಯನ್ನು 2026ರ ಮೇ 11ರಿಂದ ಜಾರಿಗೆ ತಂದಿತ್ತು. ನಂತರ ಜೂನ್ 11ರವರೆಗಿನ 30 ದಿನಗಳಲ್ಲಿ ರಾಜ್ಯದಾದ್ಯಂತ 443.49 ಲಕ್ಷ ಲೀಟರ್‌ಗಳಷ್ಟು ಐಎಂಎಲ್ ಮತ್ತು 403.10 ಲಕ್ಷ ಲೀಟರ್‌ಗಳಷ್ಟು ಬಿಯರ್ ಮಾರಾಟವಾಗಿದೆ. 2025ರ ಮೇ 11ರಿಂದ ಜೂನ್ 11ರವರೆಗೆ 433.12 ಲಕ್ಷ ಲೀಟರ್‌ಗಳಷ್ಟು ಐಎಂಎಲ್ ಮತ್ತು 252.87 ಲಕ್ಷ ಲೀಟರ್‌ಗಳಷ್ಟು ಬಿಯರ್ ಮಾರಾಟವಾಗಿತ್ತು. ಆ ಅವಧಿಯಲ್ಲಿ ₹3,022 ಕೋಟಿ ವರಮಾನ ಸಂಗ್ರಹವಾಗಿತ್ತು.

2025ರ ಮೇ 11–ಜೂನ್ 11ರ ಅವಧಿಗೆ ಹೋಲಿಸಿದರೆ, 2026ರ ಇದೇ ಅವಧಿಯಲ್ಲಿ 150.23 ಲಕ್ಷ ಲೀಟರ್‌ಗಳಷ್ಟು ಬಿಯರ್ ಹೆಚ್ಚುವರಿಯಾಗಿ ಮಾರಾಟವಾಗಿದೆ.

ವಿಸ್ಕಿ, ರಮ್‌ನಂತಹ ಐಎಂಎಲ್ ದರವನ್ನು ನೂತನ ನೀತಿ ಗಣನೀಯ ಪ್ರಮಾಣದಲ್ಲಿ ಹೆಚ್ಚಿಸಿತ್ತು. ₹50ಕ್ಕೆ ಬಿಕರಿಯಾಗುತ್ತಿದ್ದ 90 ಎಂ.ಎಲ್‌ನ ಟೆಟ್ರಾಪ್ಯಾಕ್‌ಗಳ ಬೆಲೆ ₹78ರಿಂದ ₹80ಕ್ಕೆ ಏರಿಕೆಯಾಗಿತ್ತು. ಇದರ ಪರಿಣಾಮವು ಮದ್ಯ ಮಾರಾಟ ದತ್ತಾಂಶದಲ್ಲಿ ಕಾಣುತ್ತದೆ. 2025ರ ಮೇ 11–ಜೂನ್ 11ರ ಅವಧಿಗೆ ಹೋಲಿಸಿದರೆ, 2026ರ ಇದೇ ಅವಧಿಯಲ್ಲಿ ಐಎಂಎಲ್ ಮಾರಾಟವು 10 ಲಕ್ಷ ಲೀಟರ್‌ಗಳಷ್ಟು ಮಾತ್ರ ಏರಿಕೆಯಾಗಿದೆ.



2023ರಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಆರು ಬಾರಿ ಮದ್ಯದ ಮೇಲಿನ ಅಬಕಾರಿ ಸುಂಕವನ್ನು ಹೆಚ್ಚಿಸಿತ್ತು. ಪರಿಣಾಮವಾಗಿ 2023ರಲ್ಲಿ ₹150ಕ್ಕೆ ಸಿಗುತ್ತಿದ್ದ ಬಿಯರ್ ಬಾಟಲಿಗೆ 2025ರ ಅಂತ್ಯದ ಹೊತ್ತಿಗೆ ₹270ರಿಂದ ₹300 ತೆರಬೇಕಾಗಿತ್ತು. ಇದರಿಂದಾಗಿ ಬಿಯರ್ ಮಾರಾಟ ಗಣನೀಯ ಪ್ರಮಾಣದಲ್ಲಿ ಕುಸಿದಿತ್ತು. ಬಿಯರ್ ಬದಲಿಗೆ ಮದ್ಯಪ್ರಿಯರು ಐಎಂಎಲ್‌ನತ್ತ ವಾಲಿದ್ದರು.

₹3,688 ಕೋಟಿ 2026ರ ಏಪ್ರಿಲ್‌ನ ವರಮಾನ

₹3,398 ಕೋಟಿ 2026ರ ಮೇ 30ಗಳ ವರಮಾನ

₹7,197 ಕೋಟಿ 2026ರ ಏಪ್ರಿಲ್ 1ರಿಂದ ಜೂನ್ 11ರವರೆಗಿನ ವರಮಾನ

₹45,000 ಕೋಟಿ 2026–27ರಲ್ಲಿ ಅಬಕಾರಿ ಇಲಾಖೆಗೆ ನೀಡಲಾಗಿರುವ ವರಮಾನ ಸಂಗ್ರಹ ಗುರಿ

ಪರಿಣಾಮವಾಗಿ ಬೆಲೆ ಏರಿಕೆಯ ಮಧ್ಯೆಯೂ ಅಬಕಾರಿ ಇಲಾಖೆಯ ವರಮಾನ ಏರಿಕೆಯಾಗಿತ್ತು.

‘ಮದ್ಯದಲ್ಲಿರುವ ಆಲ್ಕೋಹಾಲ್ ಪ್ರಮಾಣದ ಆಧಾರದ ಮೇಲೆ ಸುಂಕ ವಿಧಿಸುವ ನೀತಿ ಜಾರಿಗೆ ಬಂದ ನಂತರ ಬಿಯರ್ ಬೆಲೆ ಗಣನೀಯ ಪ್ರಮಾಣದಲ್ಲಿ ಇಳಿಕೆಯಾಯಿತು. ₹270ರಿಂದ ₹300 ತೆತ್ತು ಖರೀದಿಸಬೇಕಿದ್ದ ಬಿಯರ್ ಬಾಟಲಿಯದ ಬೆಲೆ ₹190ರಿಂದ ₹210ರ ಆಸುಪಾಸಿಗೆ ಇಳಿಯಿತು. ಜತೆಗೆ ಬೇಸಿಗೆಯಲ್ಲಿ ಬಿಸಿಲ ಝಳ ವಿಪರೀತ ಇದ್ದುದ್ದರಿಂದ ಮದ್ಯಪ್ರಿಯರು ಬಿಯರ್ ಮೊರೆ ಹೋದರು. ಈ ಎರಡೂ ಕಾರಣಗಳಿಂದಾಗಿ ಬಿಯರ್ ಮಾರಾಟ ಗಣನೀಯ ಪ್ರಮಾಣದಲ್ಲಿ ಏರಿಕೆಯಾಯಿತು’ ಎಂದು ಅಬಕಾರಿ ಇಲಾಖೆ ಅಧಿಕಾರಿಯೊಬ್ಬರು ವಿಶ್ಲೇಷಿಸಿದರು.

ಅಬಕಾರಿ ಇಲಾಖೆಯು 2026-27ನೇ ಆರ್ಥಿಕ ವರ್ಷದ ಏಪ್ರಿಲ್‌ನಲ್ಲಿ ₹3,688 ಕೋಟಿ, ಮೇನಲ್ಲಿ ₹3,398 ಕೋಟಿ ಮತ್ತು ಜೂನ್11ರವರೆಗಿನ ಒಟ್ಟು 71 ದಿನಗಳಲ್ಲಿ ₹7,197 ಕೋಟಿ ವರಮಾನ ಸಂಗ್ರಹಿಸಿದೆ. ಈ ಆರ್ಥಿಕ ವರ್ಷದಲ್ಲಿ ₹45,000 ಕೋಟಿ ಸಂಗ್ರಹಿಸಬೇಕಾದ ಗುರಿ ಇಲಾಖೆ ಮುಂದೆ ಇದೆ.

ಬಿಗಿ ಭದ್ರತೆಯಲ್ಲಿ ಮರಳಿ ನೀಟ್

ದೇಶದಾದ್ಯಂತ 20 ಲಕ್ಷಕ್ಕೂ ಅಧಿಕ ಅಭ್ಯರ್ಥಿಗಳು ಹಾಜರು

ನವದೆಹಲಿ (ಪಿಟಿಐ): ವೈದ್ಯಕೀಯ ಕೋರ್ಸ್‌ಗಳಿಗೆ ಪ್ರವೇಶ ಬಯಸಿರುವ 20 ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳು ಭಾನುವಾರ ನಡೆದ ‘ನೀಟ್‌-ಯುಜಿ’ ಮರುಪರೀಕ್ಷೆಗೆ ಹಾಜರಾದರು.

ದೇಶದಾದ್ಯಂತ 551 ನಗರಗಳು ಮತ್ತು ಪಟ್ಟಣಗಳ 5,440 ಕೇಂದ್ರಗಳು ಹಾಗೂ ವಿದೇಶಗಳ 14 ಕೇಂದ್ರಗಳಲ್ಲಿ ಮರುಪರೀಕ್ಷೆಯು ಬಿಗಿ ಭದ್ರತೆಯಲ್ಲಿ ನಡೆಯಿತು. ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ಮೇ 3ರಂದು ನಡೆಸಿದ್ದ ‘ನೀಟ್‌-ಯುಜಿ’ ಪರೀಕ್ಷೆಯನ್ನು ಪ್ರಶ್ನೆಪತ್ರಿಕೆ ಸೋರಿಕೆ ಕಾರಣದಿಂದ ರದ್ದುಪಡಿಸಲಾಗಿತ್ತು. ಮರುಪರೀಕ್ಷೆಯನ್ನು ಸುಸೂತ್ರವಾಗಿ ನಡೆಸಲು ಎನ್‌ಟಿಎ ಸಕಲ ಸಿದ್ಧತೆ ನಡೆಸಿತ್ತು.

ಪರೀಕ್ಷೆಯ ಸಮಯವನ್ನು ಮಧ್ಯಾಹ್ನ 2ರಿಂದ ಸಂಜೆ 5.15ವರೆಗೆ ನಿಗದಿಪಡಿಸಲಾಗಿತ್ತು. ಅಂಗವಿಕಲ ಅಭ್ಯರ್ಥಿಗಳಿಗೆ (ಪಿಡಬ್ಲ್ಯುಡಿ/ಪಿಡಬ್ಲ್ಯುಬಿಡಿ) ಸಂಜೆ 6.20ರವರೆಗೆ ಪರೀಕ್ಷೆ ಬರೆಯಲು ಅವಕಾಶವಿತ್ತು. ಇಂಗ್ಲಿಷ್ ಮತ್ತು ಹಿಂದಿ ಸೇರಿದಂತೆ ಒಟ್ಟು 13 ಭಾಷೆಗಳಲ್ಲಿ ಪರೀಕ್ಷೆ ನಡೆಯಿತು. 22.79 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದರು.

ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ದೆಹಲಿಯ ಓಖ್ಲಾದಲ್ಲಿರುವ ಎನ್‌ಟಿಎ ಪ್ರಧಾನ ಕಚೇರಿಗೆ ಭೇಟಿ ನೀಡಿ, ಮರುಪರೀಕ್ಷೆ ಸುಗಮವಾಗಿ ನಡೆಸಲು ಕೈಗೊಂಡಿದ್ದ ವ್ಯವಸ್ಥೆಗಳನ್ನು ಪರಿಶೀಲಿಸಿದರು. ‘ಪರೀಕ್ಷೆಯನ್ನು ಸುಗಮವಾಗಿ ಮತ್ತು ಪಾರದರ್ಶಕವಾಗಿ ನಡೆಸಲು ತೆಗೆದುಕೊಂಡ ಕ್ರಮಗಳನ್ನು ಎನ್‌ಟಿಎಯು ಸಚಿವರಿಗೆ ವಿವರಿಸಿತು’ ಎಂದು ಶಿಕ್ಷಣ ಸಚಿವಾಲಯ ತಿಳಿಸಿದೆ.

ಪರೀಕ್ಷಾ ಕಾರ್ಯಕ್ಕೆ ಎರಡು ಲಕ್ಷಕ್ಕೂ ಹೆಚ್ಚು ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು. 1.38 ಲಕ್ಷ ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಕಣ್ಗಾವಲಿಗೆ ಬಳಸಲಾಗಿತ್ತು. ಅಲ್ಲದೇ ಎಲೆಕ್ಟ್ರಾನಿಕ್ ಉಪಕರಣಗಳನ್ನು ಬಳಸಿ ಅಕ್ರಮ ಎಸಗುವುದನ್ನು ತಡೆಯಲು ಪರೀಕ್ಷಾ ಕೇಂದ್ರಗಳ ಬಳಿ 51,311 ಜಾಮರ್‌ಗಳನ್ನು ಅಳವಡಿಸಲಾಗಿತ್ತು.

‘ಅಧಿಕಾರಿಗಳು, ಪೊಲೀಸರು, ವೀಕ್ಷಕರು ಮತ್ತು ಪರೀಕ್ಷಾ ಸಿಬ್ಬಂದಿ ಸೇರಿ ಸುಮಾರು 7 ಲಕ್ಷ ಅಧಿಕಾರಿಗಳ ಸಹಕಾರದಿಂದ ಅಲ್ಪ ಅವಧಿಯಲ್ಲೇ ಮರುಪರೀಕ್ಷೆ ನಡೆಸಲು ಸಾಧ್ಯವಾಗಿದೆ. ಪ್ರಶ್ನೆ ಪತ್ರಿಕೆ ಸಿದ್ಧಪಡಿಸಲು ನೆರವಾದ ದೇಶದ ವಿವಿಧ ರಾಜ್ಯಗಳ ಶಿಕ್ಷಣ ತಜ್ಞರಿಗೆ ಎನ್‌ಟಿಎ ವಿಶೇಷ ಕೃತಜ್ಞತೆ ಸಲ್ಲಿಸುತ್ತದೆ’ ಎಂದು ಎನ್‌ಟಿಎ ಮಹಾನಿರ್ದೇಶಕ ಅಭಿಷೇಕ್ ಸಿಂಗ್ ತಿಳಿಸಿದ್ದಾರೆ.

ವಿವಿಧ ನಗರಗಳಲ್ಲಿ ಅಭ್ಯರ್ಥಿಗಳು ಯಾವುದೇ ಅಡೆತಡೆಯಿಲ್ಲದಂತೆ ಪರೀಕ್ಷಾ ಕೇಂದ್ರಗಳಿಗೆ ತಲುಪಲು ಅಧಿಕಾರಿಗಳು ಎಲ್ಲ ಪ್ರಯತ್ನ ಮಾಡಿದ್ದರು. ಆದರೂ, ಪರೀಕ್ಷಾ ಕೇಂದ್ರಕ್ಕೆ ಪ್ರಯಾಣಿಸುವಾಗ ಸಂಚಾರ ದಟ್ಟಣೆ ಸೇರಿದಂತೆ ಅಡೆತಡೆ ಎದುರಿಸಿದ್ದಾಗಿ ಕೆಲವು ಅಭ್ಯರ್ಥಿಗಳು ಹಾಗೂ ಅವರ ಕುಟುಂಬದವರು ದೂರಿದರು.

▸9



ಬೆಂಗಳೂರಿನ ಪರೀಕ್ಷಾ ಕೇಂದ್ರವೊಂದರಲ್ಲಿ ಒಳಗೆ ಬಿಡುವ ಮುನ್ನ ವಿದ್ಯಾರ್ಥಿನಿಯ ಕಿವಿಯೋಲೆಯನ್ನು ತೆಗೆಸಲಾಯಿತು ಪ್ರಜಾವಾಣಿ ಚಿತ್ರ

ರಾಜ್ಯದಲ್ಲಿ ಪರೀಕ್ಷೆ ಸುಗಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕಾಗಿ ‘ನೀಟ್’ ಮರುಪರೀಕ್ಷೆ ಭಾನುವಾರ ರಾಜ್ಯದಲ್ಲಿ ಸುಗಮವಾಗಿ ನಡೆಯಿತು. ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧ ಪರೀಕ್ಷಾ ಕೇಂದ್ರಗಳಲ್ಲಿ ಸುಮಾರು 1.45 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾದರು. ಮರುಪರೀಕ್ಷೆಗೆ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಲಾಗಿತ್ತು. ಮಧ್ಯಾಹ್ನ 2ರಿಂದ ಸಂಜೆ 5.15ರವರೆಗೆ ನಿಗದಿಯಂತೆ ಪರೀಕ್ಷೆ ನಡೆಯಿತು. ಪರೀಕ್ಷಾ ಕೇಂದ್ರಗಳ 200 ಮೀಟರ್ ಸುತ್ತಮುತ್ತ ನಿಷೇಧಾಜ್ಞೆ ಜಾರಿಗೊಳಿಸಲಾಗಿತ್ತು.

ಬೆಳಿಗ್ಗೆ 11ರಿಂದ ಮಧ್ಯಾಹ್ನ 1.30ರ ಒಳಗೆ ಪರೀಕ್ಷಾ ಕೇಂದ್ರಗಳಿಗೆ ಹಾಜರಾಗಬೇಕು ಎಂದು ಸೂಚಿಸಲಾಗಿತ್ತು. ಬಹುತೇಕ ವಿದ್ಯಾರ್ಥಿಗಳು ನಿಗದಿಗಿಂತ ಮೊದಲೇ ಹಾಜರಿದ್ದರು. ಆದರೆ, ನಾಲ್ವರು ವಿದ್ಯಾರ್ಥಿಗಳು ತಡವಾಗಿ ಬಂದ ಕಾರಣ ಸಿಬ್ಬಂದಿಯು ಪರೀಕ್ಷಾ ಕೇಂದ್ರದ ಒಳಗೆ ಬಿಡಲಿಲ್ಲ.

ಬೆಂಗಳೂರು ನಗರದ ಆರ್.ಸಿ ಕಾಲೇಜಿನ ಪರೀಕ್ಷಾ ಕೇಂದ್ರಕ್ಕೆ ಮೂವರು ವಿದ್ಯಾರ್ಥಿಗಳು ಎರಡು ನಿಮಿಷ ತಡವಾಗಿ ಬಂದರು. ಆ ವೇಳೆಗಾಗಲೇ ಗೇಟ್ ಬಂದ್ ಮಾಡಲಾಗಿತ್ತು. ಸಂಚಾರ ದಟ್ಟಣೆಯಿಂದಾಗಿ ಒಬ್ಬ ವಿದ್ಯಾರ್ಥಿ ತಡವಾಗಿ ಬಂದರೆ, ಮತ್ತೊಬ್ಬ ವಿದ್ಯಾರ್ಥಿ ಬಸ್ ವಿಳಂಬದಿಂದಾಗಿ ತಡವಾಗಿ ಬಂದರು. ಹಳೆಯ ಪ್ರವೇಶ ಪತ್ರವನ್ನು ತಂದಿದ್ದ ಕಾರಣ ಒಬ್ಬ ವಿದ್ಯಾರ್ಥಿಯನ್ನು ಪರೀಕ್ಷಾ ಕೇಂದ್ರದ ಒಳಗೆ ಬಿಡಲಿಲ್ಲ.

▸9

ಪ್ರಮುಖ ಅಂಶಗಳು

- ಬೃಹನ್ ಮುಂಬೈ ವಿದ್ಯುತ್ ಸರಬರಾಜು ಮತ್ತು ಸಾರಿಗೆ ಸಂಸ್ಥೆಯ (ಬೆಸ್ಟ್) ನೌಕರರು ಅನಿರ್ದಿಷ್ಟಾವಧಿ ಮುಷ್ಕರ ನಡೆಸುತ್ತಿರುವುದರಿಂದ ನೀಟ್ ಅಭ್ಯರ್ಥಿಗಳಿಗಾಗಿ ವಿಶೇಷ ಬಸ್ ಸೌಲಭ್ಯ ಕಲ್ಪಿಸಲಾಯಿತು
- ವಾರಾಣಸಿಯಲ್ಲಿ ಅಭ್ಯರ್ಥಿಯೊಬ್ಬರ ಒಳಉಡುಪಿನಲ್ಲಿ ಸಿಮ್ ಕಾರ್ಡ್ ಹಾಗೂ ಹಳೆಯ ಪ್ರಶ್ನೆ ಪತ್ರಿಕೆ ಪತ್ತೆಯಾದ್ದರಿಂದ, ಪೊಲೀಸರು ಅವರನ್ನು ಬಂಧಿಸಿದ್ದಾರೆ
- ಕೋಲ್ಕತ್ತದಲ್ಲಿ ಭಾನುವಾರ ಭಾರಿ ಮಳೆ ಸುರಿದ ಕಾರಣ ಹಲವು ಕಡೆಗಳಲ್ಲಿ ಅಭ್ಯರ್ಥಿಗಳು ಪರೀಕ್ಷಾ ಕೇಂದ್ರ ತಲುಪಲು ಹರಸಾಹಸಪಟ್ಟರು
- ಜೂನ್ 14ರಂದು ನಡೆದಿದ್ದ ಅಪಘಾತದಲ್ಲಿ ಗಾಯಗೊಂಡಿದ್ದ ಸೃಷ್ಟಿ ದುಬೆ ಎಂಬ ಅಭ್ಯರ್ಥಿಗೆ ಕೋಲ್ಕತ್ತದ ಪರೀಕ್ಷಾ ಕೇಂದ್ರದಲ್ಲಿ ಪ್ರತ್ಯೇಕ ಕೊಠಡಿಯ ವ್ಯವಸ್ಥೆ ಹಾಗೂ ವೈದ್ಯಕೀಯ ನೆರವಿನೊಂದಿಗೆ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಲಾಯಿತು
- ನವದೆಹಲಿ ಸೇರಿದಂತೆ ಕೆಲವು ನಗರಗಳಲ್ಲಿ ಅಭ್ಯರ್ಥಿಗಳ ಜತೆ ಬಂದವರಿಗಾಗಿ ಪರೀಕ್ಷಾ ಕೇಂದ್ರಗಳ ಹೊರಗೆ ಉಚಿತವಾಗಿ ಕುಡಿಯುವ ನೀರು ಹಾಗೂ ಉಪಾಹಾರದ ವ್ಯವಸ್ಥೆ ಮಾಡಲಾಯಿತು



ನಿಕಟಪೂರ್ವ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ನೂತನ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಅವರಿಗೆ ಪಕ್ಷದ ಬಾವುಟ ಹಸ್ತಾಂತರಿಸಿದರು. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಇದ್ದರು
ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್‌.ಜಿ.

ಕೆಪಿಸಿಸಿ ಚುಕ್ಕಾಣಿ ಹಿಡಿದ ಬಿ.ಕೆ. ಹರಿಪ್ರಸಾದ್

2028ರಲ್ಲೂ ಅಧಿಕಾರ: ‘ಕೈ’ ಸಂಕಲ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 2028ರ ವಿಧಾನಸಭೆ ಚುನಾವಣೆ ಗೆದ್ದು ಪಕ್ಷವನ್ನು ಮತ್ತೊಮ್ಮೆ ಅಧಿಕಾರದ ಗದ್ದುಗೆಗೇರಿಸುವ, 2029ರಲ್ಲಿ ರಾಹುಲ್ ಗಾಂಧಿಗೆ ಪ್ರಧಾನಿ ಪಟ್ಟ ಕಟ್ಟುವ ‘ಸಂಕಲ್ಪ’ ತೊಟ್ಟು, ಕಾಂಗ್ರೆಸ್ ನಾಯಕರು ಕೆಪಿಸಿಸಿ ಚುಕ್ಕಾಣಿಯನ್ನು ಬಿ.ಕೆ. ಹರಿಪ್ರಸಾದ್ ‘ಕೈ’ಗೆ ಕೊಟ್ಟರು. ಕಾಂಗ್ರೆಸ್‌ನಲ್ಲಿ ನಡೆದ ಈ ನಾಯಕತ್ವ ಬದಲಾವಣೆ ರಾಜ್ಯ ರಾಜಕೀಯದಲ್ಲಿ ಹೊಸ ಸಂಚಲನ ಮೂಡಿಸಿದೆ.

ಅರಮನೆ ಮೈದಾನದ ತ್ರಿಪುರವಾಸಿನಿ ಆವರಣದಲ್ಲಿ ಭಾನುವಾರ ಅದ್ದೂರಿಯಾಗಿ ನಡೆದ ಹರಿಪ್ರಸಾದ್ ಪದಗ್ರಹಣ ಸಮಾರಂಭವು ಕಾಂಗ್ರೆಸ್ ಪಾಳಯದಲ್ಲಿ ಹೊಸ ಚೈತನ್ಯ, ಹುರುಪು, ಸಂಭ್ರಮಕ್ಕೆ ಸಾಕ್ಷಿಯಾಯಿತು. ಕೆಪಿಸಿಸಿಯ ನಿಕಟಪೂರ್ವ ಅಧ್ಯಕ್ಷ ಡಿ.ಕೆ. ಶಿವಕುಮಾರ್ ನೂತನ ಅಧ್ಯಕ್ಷರಿಗೆ ಅಧಿಕಾರ ಹಸ್ತಾಂತರಿಸಿದರು.

ಪಕ್ಷದ ನಾಯಕರು ಮತ್ತು ಕಾರ್ಯಕರ್ತರಿಗೆ ಒಗ್ಗಟ್ಟಿನ ಮಂತ್ರ ಬೋಧಿಸಿದ ಈ ಕಾರ್ಯಕ್ರಮ, ಮುಂಬರುವ ಚುನಾವಣೆಗಳಿಗೆ ರಣಕಹಳೆಯಾಗಿ ಮಾರ್ಪಟ್ಟಿತು. ಜೊತೆಗೆ, ರಾಜ್ಯದಲ್ಲಿ ನಡೆಯಲಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ (ಎಸ್‌ಐಆರ್) ಅಪಾಯ, ಮತದಾನದ ಹಕ್ಕು ಉಳಿಸಲು ವಹಿಸಬೇಕಾದ ಎಚ್ಚರಿಕೆಯ ಕರೆಗಂಟೆಗೆ ವೇದಿಕೆಯಾಯಿತು.

▸7

ಸಿ.ಎಂ ಹೊಸ ಘೋಷಣೆ
- ಪ್ರತಿ ಪಂಚಾಯಿತಿ ಹಾಗೂ ವಾರ್ಡ್ ಮಟ್ಟದಲ್ಲಿ ಐವರು ಸದಸ್ಯರ ಗ್ಯಾರಂಟಿ ಸಮಿತಿ ರಚನೆ. ಆ ಮೂಲಕ ಕಾಂಗ್ರೆಸ್ ಕಾರ್ಯಕರ್ತರಿಗೆ ಅಧಿಕಾರ
- ಕಾಲೇಜುಗಳಲ್ಲಿ ವಿದ್ಯಾರ್ಥಿ ಚುನಾವಣೆ ನಡೆಸಲು ಮುಂದಿನ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ

> **ಇದು ಅಧಿಕಾರ ಅಲ್ಲ, ಜವಾಬ್ದಾರಿ. ಶೋಷಿತರ ಪರವಾದ ಎಲ್ಲ ಹೋರಾಟಗಳಿಗೆ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಕೈ ಜೋಡಿಸಬೇಕು. ಕಾಂಗ್ರೆಸ್ ಪಕ್ಷದ ಸಿದ್ಧಾಂತಗಳು ದುರ್ಬಲವಾಗಲು ಬಿಡಬಾರದು**
> **ಬಿ.ಕೆ. ಹರಿಪ್ರಸಾದ್,** ಕೆಪಿಸಿಸಿ ಅಧ್ಯಕ್ಷ

ಅನಿಲ ಸೋರಿಕೆ ಇಬ್ಬರು ಸಾವು

ಪ್ರಜಾವಾಣಿ ವಾರ್ತೆ/ಪಿಟಿಐ

ಚೆನ್ನೈ: ತಮಿಳುನಾಡಿನ ತಿರುವಳ್ಳೂರ್ ಜಿಲ್ಲೆಯ ಮಂಜಂಗರನೈನಲ್ಲಿರುವ ಖಾಸಗಿ ಮೀನು ಸಂಸ್ಕರಣಾ ಘಟಕದಲ್ಲಿ ಭಾನುವಾರ ಅಮೋನಿಯಂ ಅನಿಲ ಸೋರಿಕೆಯಾಗಿ ಇಬ್ಬರು ಯುವತಿಯರು ಮೃತಪಟ್ಟು, ತೀವ್ರ ಉಸಿರಾಟದ ಸಮಸ್ಯೆ ಎದುರಿಸುತ್ತಿದ್ದ 60 ಮಂದಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ಪೈಕಿ ಐವರ ಸ್ಥಿತಿ ಗಂಭೀರವಾಗಿದೆ.

ಅಸ್ಸಾಂ, ಜಾರ್ಖಂಡ್ ಮತ್ತು ಒಡಿಶಾದ 120 ವಲಸೆ ಕಾರ್ಮಿಕರು ‘ಸೇಂಟ್ ಪೀಟರ್ಸ್ ಪೌಲ್ ಸೀಫುಡ್ ಎಕ್ಸ್‌ಪೋರ್ಟ್ ಪ್ರೈವೆಟ್ ಲಿಮಿಟೆಡ್’ ಹೆಸರಿನ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದಾರೆ. 24ರಿಂದ 25 ವರ್ಷ ವಯಸ್ಸಿನ ಯುವತಿಯರೇ ಘಟಕದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕೆಲಸ ಮಾಡುತ್ತಿದ್ದರು. ಘಟಕದಲ್ಲಿ ಒಟ್ಟು 64 ಮಂದಿ ಕೆಲಸ ಮಾಡುತ್ತಿದ್ದರು. ಈ ಪೈಕಿ 60 ಮಂದಿ ಮಹಿಳೆಯರಿದ್ದರು ಮತ್ತು ನಾಲ್ವರು ಪುರುಷರಿದ್ದರು.

ಮುಖ್ಯಮಂತ್ರಿ ವಿಜಯ್ ಅವರು ಮೃತರ ಕುಟುಂಬಗಳಿಗೆ ತಲಾ ₹2 ಲಕ್ಷ ಪರಿಹಾರ ಘೋಷಿಸಿದ್ದಾರೆ.

ಶರವೇಗದ ಅರ್ಧಶತಕ ‘ವೈಭವ’



94 ರನ್
29 ಎಸೆತ
10 ಬೌಂಡರಿ
8 ಸಿಕ್ಸರ್
ಈ ಪಂದ್ಯದಲ್ಲಿ ವೈಭವ್ ಸೂರ್ಯವಂಶಿ ಗಳಿಸಿದ ಒಟ್ಟು ಮೊತ್ತ

ದಂಬುಲ್ಲಾದಲ್ಲಿ ಭಾನುವಾರ ನಡೆದ ತ್ರಿಕೋನ ಏಕದಿನ ಕ್ರಿಕೆಟ್ ಸರಣಿಯ ಫೈನಲ್‌ನಲ್ಲಿ ಭಾರತ ಎ ತಂಡದ ಆಟಗಾರ 15 ವರ್ಷದ ವೈಭವ್ ಸೂರ್ಯವಂಶಿ ಅತಿವೇಗದ ಅರ್ಧಶತಕದ ದಾಖಲೆ ಮಾಡಿದರು.

- ಲಿಸ್ಟ್ ಎ ಕ್ರಿಕೆಟ್‌ನಲ್ಲಿ ಅತಿ ವೇಗದ ಅರ್ಧಶತಕ ದಾಖಲೆ **50 (11ಎ, 4x5, 6x5)**
- ಐರ್ಲೆಂಡ್‌ನಲ್ಲಿ ನಡೆಯಲಿರುವ ಟಿ20 ಸರಣಿಯಲ್ಲಿ ಆಡುವ ಭಾರತ ತಂಡಕ್ಕೆ ಆಯ್ಕೆ

ಫೈನಲ್ ಸ್ಕೋರ್
ಭಾರತ ಎ: **9ಕ್ಕೆ377** (50 ಓವರ್)
ಶ್ರೀಲಂಕಾ ಎ: **311** (47.1 ಓವರ್)
ಫಲಿತಾಂಶ: ಭಾರತಕ್ಕೆ **66** ರನ್ ಜಯ.

ಹಿಜ್ಬುಲ್ಲಾ ಬೆಂಬಲಿಸಿದರೆ ದಾಳಿ: ಇರಾನ್‌ಗೆ ಟ್ರಂಪ್ ಎಚ್ಚರಿಕೆ

ಅತ್ತ ಮಾತುಕತೆ ಇತ್ತ ಬೆದರಿಕೆ

ವಾಷಿಂಗ್ಟನ್ (ಎಎಫ್‌ಪಿ): ಲೆಬನಾನ್‌ನಲ್ಲಿ ಹಿಜ್ಬುಲ್ಲಾ ಬಂಡುಕೋರರ ಹಾವಳಿಗೆ ತಡೆ ಹಾಕದಿದ್ದರೆ ಇರಾನ್ ಮೇಲೆ ಹಿಂದೆಂದಿಗಿಂತಲೂ ಭಾರಿ ಪ್ರಮಾಣದಲ್ಲಿ ದಾಳಿ ಮಾಡುವುದಾಗಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತೆ ಬೆದರಿಕೆ ಹಾಕಿದ್ದಾರೆ.



ಡೊನಾಲ್ಡ್ ಟ್ರಂಪ್

ಅಂತಿಮ ಒಪ್ಪಂದದ ಮಾತುಕತೆಗಾಗಿ ಅಮೆರಿಕ, ಇರಾನ್ ಮತ್ತು ಮಧ್ಯಸ್ಥಿಕೆ ವಹಿಸಿರುವ ಪಾಕಿಸ್ತಾನದ ನಿಯೋಗವು ಭಾನುವಾರ ಸ್ವಿಟ್ಜರ್ಲೆಂಡ್‌ಗೆ ಬಂದಿಳಿದ ವೇಳೆ, ಟ್ರಂಪ್ ಈ ಹೇಳಿಕೆ ನೀಡಿದ್ದಾರೆ. ಇದರ ಬೆನ್ನಲ್ಲೇ, ಇರಾನ್ ನಿಯೋಗ ಮಾತುಕತೆ ನಡೆಯಲಿದ್ದ ಸ್ಥಳದಿಂದ ವಾಪಸಾಯಿತು ಎಂದು ಇರಾನ್ ಸರ್ಕಾರಿ ಸ್ವಾಮ್ಯದ ಮಾಧ್ಯಮ ವರದಿ ಮಾಡಿದೆ.

▸8

ಮತ್ತೆ ಸುಂಕ ಹೇರಿಕೆ ಬೆದರಿಕೆ

ಟೈರ್/ಲೆಬನಾನ್ (ಎಪಿ): ‘ಇರಾನ್ ಜತೆಗೆ 60 ದಿನಗಳಲ್ಲಿ ಅಂತಿಮ ಒಪ್ಪಂದಕ್ಕೆ ಸಂಬಂಧಿಸಿದ ಮಾತುಕತೆ ಪೂರ್ಣಗೊಳ್ಳದಿದ್ದರೆ, ನಿರ್ಣಾಯಕ ಜಲಮಾರ್ಗದಲ್ಲಿ ಸುಂಕ ವಿಧಿಸುತ್ತೇವೆ’ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬೆದರಿಕೆ ಹಾಕಿದ್ದಾರೆ.

‘ಟೋಲ್ ಮೂಲಕ ಸಂಗ್ರಹವಾಗುವ ಹಣವನ್ನು ಪಶ್ಚಿಮ ಏಷ್ಯಾ ದೇಶಗಳಿಗೆ ರಕ್ಷಣೆ ಒದಗಿಸಿದವರಿಗೆ ನೀಡಲಾಗುವುದು’ ಎಂದು ಅವರು ಹೇಳಿದ್ದಾರೆ. ಸದ್ಯ ಇರಾನ್ ಮತ್ತು ಅಮೆರಿಕ ನಡುವಿನ ತಾತ್ಕಾಲಿಕ ಒಪ್ಪಂದವು 60 ದಿನಗಳವರೆಗೆ ಟೋಲ್‌-ಮುಕ್ತ ಪ್ರಯಾಣಕ್ಕೆ ಅವಕಾಶ ನೀಡುತ್ತದೆ.

▸8

ಹೊರ್ಮುಜ್ ಕೇಂದ್ರಬಿಂದು

ಪಶ್ಚಿಮ ಏಷ್ಯಾ ಸಂಘರ್ಷ ಕೊನೆಗೊಳಿಸುವ ಶಾಂತಿ ಒಪ್ಪಂದಕ್ಕೆ ಅಮೆರಿಕ ಮತ್ತು ಇರಾನ್ ಜೂನ್ 18ರಂದು ಸಹಿ ಹಾಕಿದ್ದವು. ಖಾತರಿದಾರನಾಗಿ ಪಾಕಿಸ್ತಾನ ಕೂಡ ಸಹಿ ಹಾಕಿದೆ. ಒಪ್ಪಂದದ ಪ್ರಕಾರ, ಉಭಯ ದೇಶಗಳು ಮುಂದಿನ 60 ದಿನಗಳಲ್ಲಿ ಅಂತಿಮ ಒಪ್ಪಂದಕ್ಕೆ ಸಂಬಂಧಿಸಿದ ಮಾತುಕತೆ ಪೂರ್ಣಗೊಳಿಸಬೇಕು. ಹೊರ್ಮುಜ್ ಜಲಸಂಧಿ ತೆರೆಯುವ ವಿಚಾರವೇ ಅಂತಿಮ ಒಪ್ಪಂದದ ನಿರ್ಣಾಯಕ ಅಂಶವಾಗಿದೆ.

ಧರ್ಮಸ್ಥಳದಲ್ಲಿ ಶಾಸಕಾಂಗ ಪಕ್ಷದ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಪರಿಷತ್ ಚುನಾವಣೆಯಲ್ಲಿ ನಡೆದ ಅಡ್ಡ ಮತದಾನದ ಕಾವು ಬಿಜೆಪಿಯಲ್ಲಿ ದಿನದಿಂದ ದಿನಕ್ಕೆ ಏರುತ್ತಿರುವ ಬೆನ್ನಲ್ಲೇ, ಧರ್ಮಸ್ಥಳದಲ್ಲಿ ಶಾಸಕರಿಂದ ಆಣೆ–ಪ್ರಮಾಣ ಮಾಡಿಸಲು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಮುಂದಾಗಿರುವುದು ಪಕ್ಷದಲ್ಲಿ ಚರ್ಚೆಗೆ ಕಾರಣವಾಗಿದೆ. ಇದಕ್ಕೆ ಪಕ್ಷದಲ್ಲಿ ಆಕ್ಷೇಪವೂ ವ್ಯಕ್ತವಾಗಿದೆ.

ಬಿಜೆಪಿ ಕಚೇರಿ ಆವರಣದಲ್ಲಿ ಭಾನುವಾರ ನಡೆದ ಯೋಗ ದಿನಾಚರಣೆ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ವಿಜಯೇಂದ್ರ, ‘ಅಡ್ಡ ಮತದಾನದ ಆರೋಪದ ಕುರಿತು ಅತಿ ಶೀಘ್ರದಲ್ಲೇ ಧರ್ಮಸ್ಥಳದಲ್ಲಿ ಶಾಸಕಾಂಗ ಪಕ್ಷದ ಸಭೆ ಕರೆಯಲು ನಿರ್ಧರಿಸಿದ್ದೇನೆ’ ಎಂದು ಹೇಳಿದರು.

‘ನಾವೆಲ್ಲರೂ ದೇವರನ್ನು ನಂಬುವವರು. ಅಡ್ಡ ಮತದಾನ ಮಾಡಿದ್ದು ತಾಯಿಗೇ ದ್ರೋಹ ಬಗೆದ ಕೃತ್ಯಕ್ಕೆ ಸಮನಾದುದು. ಆ ರೀತಿ ದ್ರೋಹ ಬಗೆದ ಶಾಸಕರು ಯಾರು ಎಂಬ ಸತ್ಯ ಗೊತ್ತಾಗಬೇಕಿದೆ. ಅದು ಶ್ರೀಕ್ಷೇತ್ರ ಧರ್ಮಸ್ಥಳದಲ್ಲೇ ತೀರ್ಮಾನ ಆಗಬೇಕು ಎಂದು ನಿರ್ಧಾರ ಮಾಡಿದ್ದೇನೆ. ಈ ಕುರಿತು ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರ ಜತೆ ಮಾತನಾಡುತ್ತೇನೆ’ ಎಂದರು.

‘ಇವೆಲ್ಲದರಿಂದ ಕಾರ್ಯಕರ್ತರಿಗೆ ನೋವಾಗುವುದು ಸಹಜ. ಅಡ್ಡ ಮತದಾನವನ್ನು ನನ್ನ ಮನಸಾಕ್ಷಿ ಒಪ್ಪುತ್ತಿಲ್ಲ’ ಎಂದರು.

▸8



> **ನಮ್ಮ ಯೋಗ್ಯತೆ ಬದಿಗಿಡಿ. ಶಾಸಕರು ಎಷ್ಟೇ ದೊಡ್ಡವರಾಗಿದ್ದರೂ ಗೌಪ್ಯ ಮತದಾನ ನಡೆದ ಕಾರಣ ನನ್ನನ್ನೂ ಸೇರಿ 63 ಶಾಸಕರನ್ನೂ ಅನುಮಾನಿಸುವ ಪರಿಸ್ಥಿತಿ ನಿರ್ಮಾಣವಾಗಿದೆ**
> **ಬಿ.ವೈ.ವಿಜಯೇಂದ್ರ**
> ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ದೇಶ-ವಿದೇಶಗಳಲ್ಲಿ ಯೋಗ ಸಂಭ್ರಮ

ಪ್ರಧಾನಿ ಮೋದಿ, ರಾಷ್ಟ್ರಪತಿ, ಕೇಂದ್ರ ಸಚಿವರು ಭಾಗಿ

ಕೋಲ್ಕತ್ತ/ಜಬಲ್ಪುರ (ಪಿಟಿಐ): ಅಂತರರಾಷ್ಟ್ರೀಯ ಯೋಗ ದಿನದ ಅಂಗವಾಗಿ ‘ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ’ ಎಂಬ ಧ್ಯೇಯದಡಿ ದೇಶದಾದ್ಯಂತ ಕೋಟ್ಯಂತರ ಜನರು ಭಾನುವಾರ ಯೋಗಾಸನ ಮಾಡಿದರು.

ಕೋಲ್ಕತ್ತದ ಐತಿಹಾಸಿಕ ರೆಡ್ ರೋಡ್‌ನಲ್ಲಿ ಸಾವಿರಾರು ಜನರ ಜೊತೆ ಪ್ರಧಾನಿ ನರೇಂದ್ರ ಮೋದಿ ಅವರು ಯೋಗ ಮಾಡಿದರು. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಜಬಲ್ಪುರದಲ್ಲಿ ಯೋಗಾಸನ ಮಾಡಿದರು. ಕೇಂದ್ರ ಸಚಿವರು, ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳು ಮತ್ತು ರಾಜ್ಯಪಾಲರು ಹಲವೆಡೆ ನಡೆದ ಯೋಗ ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದರು.


ಯೋಗ ದಿನದ ಅಂಗವಾಗಿ ದೇಶವನ್ನುದ್ದೇಶಿಸಿ ಮಾತನಾಡಿದ ಮೋದಿ ಅವರು, ‘ವಿಶ್ವದ ಅತ್ಯಂತ ದೀರ್ಘ ದಿನವಾದ ಜೂನ್ 21 ಯೋಗದ ಕಾರಣಕ್ಕಾಗಿ ಬೃಹತ್ ಸಮುದಾಯವು ಸಂಭ್ರಮಿಸುವ ದಿನವಾಗಿದೆ. ಯೋಗವು ಜನರನ್ನು ಒಗ್ಗೂಡಿಸುತ್ತದೆ’ ಎಂದರು.

‘20 ವರ್ಷಕ್ಕಿಂತ 40 ವರ್ಷ ವಯಸ್ಸಿನಲ್ಲಿ ಎಲ್ಲದಕ್ಕೂ ಹೊಂದಿಕೊಳ್ಳುವಂತಿರಬೇಕು. 30 ವರ್ಷಕ್ಕಿಂತ 50 ವರ್ಷ ವಯಸ್ಸಿನಲ್ಲಿ ಶಕ್ತಿಯುತರಾಗಿರಬೇಕು. 50 ವರ್ಷಕ್ಕಿಂತ 70 ವರ್ಷ ವಯಸ್ಸಿನಲ್ಲಿ ಹೆಚ್ಚು ರೋಗನಿರೋಧಕ ಶಕ್ತಿಯನ್ನು ಹೊಂದಿರಬೇಕು ಎಂಬುದು ನಮ್ಮ ಗುರಿ. ಯೋಗ ಇದಕ್ಕೆ ಸಹಾಯ ಮಾಡುತ್ತದೆ’ ಎಂದು ಹೇಳಿದರು.

▸8

ಶಾಂಘೈ, ನ್ಯೂಯಾರ್ಕ್‌ನಲ್ಲಿ ಸಡಗರ

- ಚೀನಾದ ಶಾಂಘೈನಲ್ಲಿರುವ ಭಾರತೀಯ ಕಾನ್ಸುಲೇಟ್ ಕಚೇರಿಯಲ್ಲಿ ನಡೆದ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ 400ಕ್ಕೂ ಹೆಚ್ಚು ಜನ ಭಾಗವಹಿಸಿದ್ದರು
- ಜಪಾನ್‌ನ ಐತಿಹಾಸಿಕ ದೇವಾಲಯದಲ್ಲಿ ಭಾರತೀಯ ರಾಯಭಾರ ಕಚೇರಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 2,100ಕ್ಕೂ ಅಧಿಕ ಮಂದಿ ಯೋಗಾಸನ ಮಾಡಿದರು. ಭಾರಿ ಮಳೆಯ ನಡುವೆಯೂ ಹಲವರು ಯೋಗಾಸನದಲ್ಲಿ ನಿರತರಾಗಿದ್ದರು
- ನ್ಯೂಯಾರ್ಕ್‌ನ ಐತಿಹಾಸಿಕ ಟೈಮ್ಸ್ ಸ್ಕ್ವೇರ್‌ನಲ್ಲಿ ನಡೆದ ಯೋಗ ಕಾರ್ಯಕ್ರಮದಲ್ಲಿ ಸಾವಿರಾರು ಜನ ಭಾಗಿಯಾಗಿದ್ದರು. ವಾಷಿಂಗ್ಟನ್ ಸೇರಿದಂತೆ ಅಮೆರಿಕದ ಹಲವೆಡೆ ಯೋಗ ದಿನಾಚರಣೆ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು.
- ಬ್ರಿಟನ್, ಆಸ್ಟ್ರೇಲಿಯಾ, ಬಾಂಗ್ಲಾದೇಶ ಸೇರಿದಂತೆ ವಿಶ್ವದ ಹಲವು ರಾಷ್ಟ್ರಗಳಲ್ಲಿ ಯೋಗ ಕಾರ್ಯಕ್ರಮಗಳು ನಡೆದವು
- ಮಾಸ್ಕೊದಲ್ಲಿನ ಭಾರತೀಯ ರಾಯಭಾರ ಕಚೇರಿಯು ಅಲ್ಲಿನ ನಗರಾಡಳಿತದ ಸಹಕಾರದೊಂದಿಗೆ ಯೋಗ ದಿನ ಕಾರ್ಯಕ್ರಮವನ್ನು ಆಯೋಜಿಸಿತ್ತು



ಚಿನಕುರುಳಿ ಪ್ರಕಾಶ್ ಶೆಟ್ಟಿ



ಹೊಸ ಬದಲಾವಣೆಯಿಂದ ವಿದ್ಯಾರ್ಥಿಗಳಿಗೆ ಹೆಚ್ಚಿನ ತೊಂದರೆ

ತುರ್ತು ಪ್ರಮಾಣಪತ್ರಕ್ಕೆ ತೊಡಕಾದ ‘ಫಿಫೊ’

• ಎಂ.ಮಹೇಶ್

ಮೈಸೂರು: ಅಟಲ್‌ಜೀ ಜನಸ್ನೇಹಿ ನಿರ್ದೇಶನಾಲಯದ ‘ನಾಡಕಚೇರಿ ತಂತ್ರಾಂಶ’ದಲ್ಲಿ (ಎಜೆಎಸ್‌ಕೆ ಎನ್‌ಕೆ5) ಕಳೆದ ತಿಂಗಳಿಂದ ಮಾಡಲಾದ ಹೊಸ ಬದಲಾವಣೆಯ ಪರಿಣಾಮ, ತುರ್ತು ಕಾರ್ಯಕ್ಕಾಗಿ ಜಾತಿ ಪ್ರಮಾಣಪತ್ರ ಅಗತ್ಯವಾದವರು ಪರದಾಡುವಂತಾಗಿದೆ. ವಿದ್ಯಾರ್ಥಿಗಳಿಗೆ ಹೆಚ್ಚು ತೊಂದರೆ ಆಗುತ್ತಿದೆ.

ಶಾಲೆ–ಕಾಲೇಜು ಪ್ರವೇಶ, ಎಂಜಿನಿಯರಿಂಗ್ ಮೊದಲಾದ ವೃತ್ತಿಪರ ಕೋರ್ಸ್‌ಗಳ ಸಿಇಟಿ ಕೌನ್ಸೆಲಿಂಗ್‌ಗೆ ಸಲ್ಲಿಸಲು, ಸರ್ಕಾರಿ ನೌಕರಿ ಸೇರ್ಪಡೆ, ಆಸ್ಪತ್ರೆಗಳಲ್ಲಿ ವೈದ್ಯಕೀಯ ಸೇವೆಗೆ ರಿಯಾಯಿತಿ ಪಡೆಯುವುದು ಮೊದಲಾದ ಸಂದರ್ಭದಲ್ಲಿ ಜಾತಿ ಪ್ರಮಾಣಪತ್ರ ತುರ್ತಾಗಿ ಸಿಗುತ್ತಿಲ್ಲ. ಹೀಗಾಗಿ, ಸಾರ್ವಜನಿಕರು ತೊಂದರೆ ಅನುಭವಿಸುವಂತಾಗಿದೆ. ಕಾಲೇಜುಗಳಲ್ಲಿ ಸೀಟು, ಕೆಲಸದ ಅವಕಾಶ ಕಳೆದುಕೊಳ್ಳುವ ಆತಂಕದಲ್ಲಿ ಅವರಿದ್ದಾರೆ.


ಏನೇನು ಬದಲಾವಣೆ?: ಹೊಸ ಬದಲಾವಣೆ ಪ್ರಕಾರ, ಎಲ್ಲಾ ಅಟಲ್‌ಜೀ ಜನಸ್ನೇಹಿ ಕೇಂದ್ರಗಳ ವಿಷಯ ನಿರ್ವಾಹಕರ ಲಾಗಿನ್ ತೆಗೆಯಲಾಗಿದೆ (ಹೈ.ಕ. 371ಜೆ, ಎಸ್.ಸಿ., ಎಸ್.ಟಿ., ವಲಸಿಗ ಮತ್ತು ಗೇಣಿರಹಿತ ಪ್ರಮಾಣಪತ್ರಗಳನ್ನು ಹೊರತುಪಡಿಸಿ).

‘ಫಿಫೊ’ (ಎಫ್‌ಐಎಫ್‌ಒ– ಫಸ್ಟ್ ಇನ್ ಫಸ್ಟ್ ಔಟ್) ವ್ಯವಸ್ಥೆಯನ್ನು ಎಲ್ಲಾ ಅಟಲ್‌ಜೀ ಜನಸ್ನೇಹಿ ಕೇಂದ್ರಗಳ ಸೇವೆಗಳಿಗೆ ಅಳವಡಿಸಲಾಗಿದೆ. ಗ್ರಾಮ ಆಡಳಿತಾಧಿಕಾರಿಗಳ ಲಾಗಿನ್‌ನಲ್ಲಿ ಗ್ರಾಮ/ ವಾರ್ಡ್‌ವಾರು ಹಾಗೂ ಸೇವಾವಾರು ‘ಫಿಫೊ’ ವ್ಯವಸ್ಥೆ ಅಳವಡಿಸಲಾಗಿದೆ. ಅಂತೆಯೇ ರಾಜಸ್ವ ನಿರೀಕ್ಷಕರ ಲಾಗಿನ್‌ನಲ್ಲಿಯೂ ಈ ವ್ಯವಸ್ಥೆ ಜಾರಿಗೊಳಿಸಲಾಗಿದೆ. ಪರಿಣಾಮ, ಅಧಿಕಾರಿಗಳು ತಮ್ಮ ಲಾಗಿನ್‌ಗೆ ಮೊದಲು ಬಂದ ಅರ್ಜಿಯನ್ನು ಮಾತ್ರವೇ ಮೊದಲಿಗೆ ವಿಲೇವಾರಿ ಮಾಡಬಹುದಾಗಿದೆ.

▸8

ಮುಖ್ಯಾಂಶಗಳು

- ಕಳೆದ ತಿಂಗಳಿಂದ ಹೊಸ ವ್ಯವಸ್ಥೆ
- ಸರ್ವರ್ ಸಮಸ್ಯೆಯಿಂದಲೂ ತೊಂದರೆ



ಅಟಲ್‌ಜೀ ಜನಸ್ನೇಹಿ ಕೇಂದ್ರ (ಸಂಗ್ರಹ ಚಿತ್ರ)

ಹಿಂದಿನ ವಿಳಾಸ ನಮೂದಿಸಲು ಅವಕಾಶ

ನಿವಾಸಿ ದೃಢೀಕರಣ ಪತ್ರಕ್ಕಾಗಿ ಅರ್ಜಿ ಸಲ್ಲಿಸುವಾಗ ಅರ್ಜಿದಾರರ ಆಧಾರ್ ಕಾರ್ಡ್‌ನಲ್ಲಿ ಇತರೆ ರಾಜ್ಯದ ವಿಳಾಸವಿದ್ದಲ್ಲಿ ಆ ಅರ್ಜಿಯನ್ನು ಸ್ವೀಕರಿಸಲು ಹಾಗೂ ಅರ್ಜಿದಾರರು ಈ ಹಿಂದೆ ಕರ್ನಾಟಕ ರಾಜ್ಯದಲ್ಲಿ ವಾಸವಿದ್ದ ವಿಳಾಸವನ್ನು ನಮೂದು ಮಾಡಲು ಈಗ ಅವಕಾಶ ಕಲ್ಪಿಸಲಾಗಿದೆ.

ತಹಶೀಲ್ದಾರ್, ಉಪತಹಶೀಲ್ದಾರ್, ಉಪವಿಭಾಗಾಧಿಕಾರಿ ಅವರ ಲಾಗಿನ್‌ನಲ್ಲಿ ಒಟಿಪಿ (ಒನ್ ಟೈಂ ಪಾಸ್‌ವರ್ಡ್) ಬದಲಿಗೆ ಒಡಿಪಿ (ಒನ್ ಡೇ ಪಾಸ್‌ವರ್ಡ್) ಅಳವಡಿಸಲಾಗಿದೆ ಎಂದು ಅಟಲ್‌ಜೀ ಜನಸ್ನೇಹಿ ನಿರ್ದೇಶನಾಲಯದ ಆದೇಶದಲ್ಲಿ ತಿಳಿಸಲಾಗಿದೆ.

> **ಸರ್ಕಾರದ ನಿಯಮದಂತೆ ನಾವು ಕೆಲಸ ಮಾಡುತ್ತಿದ್ದೇವೆ. ತೀರಾ ತುರ್ತು ಇದ್ದವರು ದಾಖಲೆ ಸಹಿತ ಜಿಲ್ಲಾಧಿಕಾರಿ ಮೊರೆ ಹೋಗಬಹುದು**
> **ಬಿ.ಕೆ. ಶ್ರೀನಿವಾಸ್**
> ಗ್ರೇಡ್‌–2 ತಹಶೀಲ್ದಾರ್ ಮೈಸೂರು

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ, ಅಲ್ಲಲ್ಲಿ ಮಳೆ ಸಾಧ್ಯತೆ

ಎಲ್ಲೆಡೆ 'ಯೋಗ' ದಿನಾಚರಣೆ

ವಿವಿಧ ಸಂಘ, ಸಂಸ್ಥೆ, ಕಚೇರಿಗಳಲ್ಲಿ ಸಂಭ್ರಮ • ಚಿತ್ರ ತಾರೆಯರು, ರಾಜಕಾರಣಿಗಳು, ವಿದ್ಯಾರ್ಥಿಗಳು ಭಾಗಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ವಿವಿಧ ಸಂಘ ಸಂಸ್ಥೆಗಳು, ಕಚೇರಿಗಳಲ್ಲಿ ವಿಶ್ವ ಯೋಗ ದಿನವನ್ನು ಸಂಭ್ರಮದಿಂದ ಆಚರಿಸಲಾಯಿತು.

ನೈರುತ್ಯ ರೈಲ್ವೆ: ನೈರುತ್ಯ ರೈಲ್ವೆ ಬೆಂಗಳೂರು ವಿಭಾಗದ ವತಿಯಿಂದ ಎಂ.ಜಿ. ಕಾಲೊನಿಯ ರೈಲ್ವೆ ಮೈದಾನದಲ್ಲಿ ಸಾಮೂಹಿಕ ಯೋಗ ಪ್ರದರ್ಶನ ಮಾಡಲಾಯಿತು. ರೈಲ್ವೆ ಅಧಿಕಾರಿಗಳು, ಸಿಬ್ಬಂದಿ ಮತ್ತು ಅವರ ಕುಟುಂಬ ಸದಸ್ಯರು ಭಾಗವಹಿಸಿದ್ದರು. ಬೆಂಗಳೂರು ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಅಶುತೋಷ್ ಕುಮಾರ್ ಸಿಂಗ್ ಯೋಗದ ಮಹತ್ವ ವಿವರಿಸಿದರು.

ಆರ್ಟ್ ಆಫ್ ಲಿವಿಂಗ್‌ನ ಯೋಗ ತರಬೇತುದಾರ ಕಿಶೋರ್ ಮತ್ತು ತಂಡದ ಮಾರ್ಗದರ್ಶನದಲ್ಲಿ ಯೋಗಾಭ್ಯಾಸವನ್ನು ನಡೆಸಲಾಯಿತು. ಬೆಂಗಳೂರು ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಅಶುತೋಷ್ ಕುಮಾರ್ ಸಿಂಗ್, ಹಿರಿಯ ಉಪ ಮಹಾಪ್ರಬಂಧಕ ಮನೋಜ್ ಕುಮಾರ್, ಮುಖ್ಯ ಸುರಕ್ಷತಾ ಅಧಿಕಾರಿ ಎಂ. ರಾಮಕೃಷ್ಣ, ಹೆಚ್ಚುವರಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕರಾದ ಪರೀಕ್ಷಿತ್ ಮೋಹನ್ ಪುರಿಯಾ, ಪ್ರವೀಣ್ ಕಾತರಕಿ, ಹಿರಿಯ ವಿಭಾಗೀಯ ಸಿಬ್ಬಂದಿ ಅಧಿಕಾರಿ ಉಮಾ ಶರ್ಮಾ, ವೆಂಕಟೇಶ್ ನಾಯಕ್; ಮಹಿಳಾ ಕಲ್ಯಾಣ ಸಂಘಟನೆಯ ಅಧ್ಯಕ್ಷೆ ರೀನಾ ಸಿಂಗ್ ಭಾಗವಹಿಸಿದ್ದರು.

ಜಯದೇವ ಆಸ್ಪತ್ರೆ: ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ನಿರ್ದೇಶಕ ಡಾ.ಬಿ. ದಿನೇಶ್ ನೇತೃತ್ವದಲ್ಲಿ ಯೋಗ ದಿನ ಆಚರಿಸಲಾಯಿತು. ಹೃದ್ರೋಗಿಗಳು, ಆರೈಕೆದಾರರು ಹಾಗೂ ವಿದ್ಯಾರ್ಥಿಗಳಿಗೆ ಯೋಗಾಭ್ಯಾಸದ ಪ್ರಾತ್ಯಕ್ಷಿಕೆ ನೀಡಲಾಯಿತು.

ಬೆಂಗಳೂರು ನಗರ ವಿ.ವಿ: ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ವತಿಯಿಂದ ಜ್ಞಾನಜ್ಯೋತಿ ಕ್ಯಾಂಪಸ್‌ನಲ್ಲಿ ಕುಲಪತಿ ರಮೇಶ್ ಬಿ. ಮತ್ತು ಕುಲಸಚಿವ ಎ. ನವೀನ್ ಜೋಸೆಫ್ ಮಾರ್ಗದರ್ಶನದಲ್ಲಿ ಯೋಗ ದಿನ ಆಚರಿಸಲಾಯಿತು.

ಕುಲಸಚಿವ (ಮೌಲ್ಯಮಾಪನ) ರಮೇಶ ಬಿ.ಕುಡೇನಟ್ಟಿ, ಹಿರಿಯ ಪ್ರಾಧ್ಯಾಪಕರಾದ ಜ್ಯೋತಿ ವೆಂಕಟೇಶ್, ಮೇಧಾ ಇಟಗಿ ಹುಯಿಲಗೋಳ, ಅತಿಥಿ ಉಪೇಂದ್ರ ಟಿ. ಉಪಸ್ಥಿತರಿದ್ದರು.



ಬಿಜೆಪಿ ರಾಜ್ಯ ಕಾರ್ಯಾಲಯದ ಮುಂಭಾಗದಲ್ಲಿ ನಡೆದ ಯೋಗ ಪ್ರದರ್ಶನದಲ್ಲಿ ಬಿ.ವೈ. ವಿಜಯೇಂದ್ರ, ಸಿ.ಎನ್. ಅಶ್ವತ್ಥನಾರಾಯಣ ಭಾಗವಹಿಸಿದ್ದರು

ಸಿಎಂಆರ್ ವಿವಿಯಲ್ಲಿ ಯೋಗ

ಸಿಎಂಆರ್ ವಿಶ್ವವಿದ್ಯಾಲಯ ಹಾಗೂ ಸಿಎಂಆರ್ ತಾಂತ್ರಿಕ ಮಹಾವಿದ್ಯಾಲಯ ಸೇರಿದಂತೆ ಸಿಎಂಆರ್ ಸಮೂಹ ಶಿಕ್ಷಣ ಸಂಸ್ಥೆಗಳ ವಿವಿಧ ಕ್ಯಾಂಪಸ್‌ಗಳಲ್ಲಿ ಭಾನುವಾರ ಸಾಮೂಹಿಕ ಯೋಗ ದಿನ ಆಚರಿಸಲಾಯಿತು. 600ಕ್ಕೂ ಹೆಚ್ಚು ವಿದ್ಯಾರ್ಥಿಗಳು, ಪ್ರಾಧ್ಯಾಪಕರು, ಸಿಬ್ಬಂದಿ ಪ್ರಾಣಾಯಾಮ, ಸೂರ್ಯನಮಸ್ಕಾರ ಸೇರಿ ವಿವಿಧ ಯೋಗಾಸನಗಳನ್ನು ಮಾಡಿದರು

ಬಿಜೆಪಿ: 'ಇಂದಿನ ಆಧುನಿಕ ಕಾಲದಲ್ಲಿ ನಾವೆಲ್ಲ ಒತ್ತಡದಲ್ಲಿದ್ದೇವೆ. ಈ ಒತ್ತಡ ನಿರ್ವಹಣೆಗೆ ಯೋಗವೇ ಮದ್ದು' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯ 'ಜಗನ್ನಾಥ ಭವನ'ದ ಮುಂಭಾಗದಲ್ಲಿ ಹಮ್ಮಿಕೊಂಡಿದ್ದ ಯೋಗ ದಿನಾಚರಣೆಯಲ್ಲಿ ಅವರು ಮಾತನಾಡಿದರು.

ಶಾಸಕ ಸಿ.ಎನ್. ಅಶ್ವತ್ಥನಾರಾಯಣ ಮಾತನಾಡಿ, 'ಒತ್ತಡ ನಿವಾರಣೆಗೆ ನಾವೆಲ್ಲ ಪ್ರತಿ ದಿನ ಯೋಗ ಮಾಡೋಣ. ನಮ್ಮ ಬದುಕು ಉತ್ತಮವಾಗಲು, ಉತ್ತಮ ಬದುಕು ಕಾಣಲು ಪ್ರತಿ ದಿನ ಯೋಗಾಭ್ಯಾಸ ಮಾಡಲೇಬೇಕು' ಎಂದು ತಿಳಿಸಿದರು.

ಚಿತ್ರ ನಟಿ ಕಾರುಣ್ಯ ಗೌಡ, 'ಥಟ್ ಅಂತ ಹೇಳಿ' ಖ್ಯಾತಿಯ ನಾ. ಸೋಮೇಶ್ವರ, ಯೋಗ ಗುರುಗಳಾದ ಮಂಜುನಾಥ್, ಗೀತಾ ಮಂಜುನಾಥ್, ಬಿಜೆಪಿಯ ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷ ಎಸ್. ಹರೀಶ್, ಕೇಂದ್ರ ಜಿಲ್ಲಾಧ್ಯಕ್ಷ ಸಪ್ತಗಿರಿ ಗೌಡ ಭಾಗವಹಿಸಿದ್ದರು.



ಸಿಎಂಆರ್ ವಿಶ್ವವಿದ್ಯಾಲಯದಲ್ಲಿ ಯೋಗ ದಿನ ಆಚರಿಸಲಾಯಿತು

45 ಸಾವಿರ ವಿದ್ಯಾರ್ಥಿಗಳಿಂದ ಯೋಗ

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ವತಿಯಿಂದ ಭಾನುವಾರ ನಡೆದ ಸಾಮೂಹಿಕ ಯೋಗ ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ ಸಂಯೋಜನೆಯಡಿ ಬರುವ ಸುಮಾರು 600 ಆರೋಗ್ಯ ವಿಜ್ಞಾನ ಸಂಸ್ಥೆಗಳ 45 ಸಾವಿರ ವಿದ್ಯಾರ್ಥಿಗಳು ಏಕಕಾಲದಲ್ಲಿ ಯೋಗಾಭ್ಯಾಸ ಮಾಡಿದರು.

ಯೋಗವು ಒಂದು ದಿನದ ಆಚರಣೆಯಾಗದೆ, ಪ್ರತಿಯೊಬ್ಬರ ಜೀವನದ ಅವಿಭಾಜ್ಯ ಅಂಗವಾಗಬೇಕು. ಮಾನಸಿಕ ಹಾಗೂ ಶಾರೀರಿಕ ಯೋಗಕ್ಷೇಮಕ್ಕೆ ಯೋಗ ಸಹಕಾರಿ ಎಂದು ಕುಲಪತಿ ಡಾ.ಭಗವಾನ್ ಬಿ.ಸಿ. ಅಭಿಪ್ರಾಯಪಟ್ಟರು.

ಯೋಗ: ಸ್ಪರ್ಶ ಮತ್ತು ಬ್ರೈಲ್ ಆವೃತ್ತಿ ಬಿಡುಗಡೆ

ದೃಷ್ಟಿದೋಷ ಹಾಗೂ ಇತರ ಅಂಗವೈಕಲ್ಯ ಹೊಂದಿರುವ ವ್ಯಕ್ತಿಗಳಿಗಾಗಿ ಶಂಕರ ಕಣ್ಣಿನ ಆಸ್ಪತ್ರೆಯು ಯಂಗ್ ಇಂಡಿಯನ್ ಸಂಸ್ಥೆಯ ಸಹಯೋಗದೊಂದಿಗೆ ವಿಶೇಷ ಯೋಗ ಶಿಬಿರ ಆಯೋಜಿಸಿತ್ತು. ಸ್ಪರ್ಶದ ಮೂಲಕ ಯೋಗಾಸನಗಳನ್ನು ಅರ್ಥ ಮಾಡಿಕೊಳ್ಳಲು ಮತ್ತು ಅಭ್ಯಾಸ ಮಾಡಲು ಅವಕಾಶ ಮಾಡಿ ಕೊಡಲಾಯಿತು ಎಂದು ತರಬೇತುದಾರರಾದ ಶಾಲಿನಿ, ಡಾ.ದೃಷ್ಟಿ ತಿಳಿಸಿದರು.



ಹೆಣ್ಣೂರು ಬಾಣಸವಾಡಿ ಕಾಸ್ಮೋಪಾಲಿಟನ್ ಕ್ಲಬ್ (ಎಚ್‌ಬಿಸಿಸಿ) ಆಯೋಜಿಸಿದ್ದ ಯೋಗ ಶಿಬಿರದಲ್ಲಿ ಸದಸ್ಯರು 108 ಸೂರ್ಯ ನಮಸ್ಕಾರ ಮಾಡಿದರು. ಕ್ಲಬ್ ಅಧ್ಯಕ್ಷ ಸುಬ್ಬಯ್ಯ, ಕ್ಲಬ್‌ನ ಸಾಂಸ್ಕೃತಿಕ ಸಮಿತಿ ಅಧ್ಯಕ್ಷ ಶ್ರೀ ಹರ್ಷ, ಪದಾಧಿಕಾರಿಗಳು ಭಾಗವಹಿಸಿದ್ದರು



ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಯೋಗ ಪ್ರದರ್ಶನ ನಡೆಯಿತು



ಶಂಕರ ಕಣ್ಣಿನ ಆಸ್ಪತ್ರೆ ವತಿಯಿಂದ ದೃಷ್ಟಿದೋಷ ಹಾಗೂ ಇತರ ಅಂಗವೈಕಲ್ಯ ಹೊಂದಿರುವ ವ್ಯಕ್ತಿಗಳಿಗಾಗಿ ವಿಶೇಷ ಯೋಗ ಶಿಬಿರ ಆಯೋಜಿಸಲಾಗಿತ್ತು

33 ನಿಮಿಷ-310 ಆಸನ ಬಾಲಕಿ ಸಾಧನೆ

ಪ್ರಜಾವಾಣಿ ವಾರ್ತೆ

ಮಡಿಕೇರಿ: ತಾಲ್ಲೂಕಿನ ಮದೆನಾಡು ಗ್ರಾಮದ ಬಿಜಿಎಸ್ ಶಾಲೆಯ 7ನೇ ತರಗತಿ ವಿದ್ಯಾರ್ಥಿನಿ ಬಿ.ಕೆ. ಸಿಂಚನಾ ಯೋಗ ದಿನಾಚರಣೆಯಲ್ಲಿ 33 ನಿಮಿಷಗಳಲ್ಲಿ 310 ಆಸನಗಳನ್ನು ಮಾಡಿ ಗಮನಸೆಳೆದಳು.

'ನಮಸ್ಕಾರ ಆಸನದಿಂದ ಹಿಡಿದು ಶವಾಸನ'ದವರೆಗಿನ ಯೋಗಾಸನ ಪ್ರದರ್ಶಿಸಿದಳು. ನಿಗದಿತ ಗುರಿಗಿಂತ ಮೊದಲೇ ಕೇವಲ 33 ನಿಮಿಷ ಗಳಲ್ಲೇ 310 ಯೋಗಾಸನಗಳನ್ನು ಮಾಡಿದಳು.

ಗ್ಯಾಂಗ್ರಿನ್‌ನಿಂದ ಬಳಲುತ್ತಿರುವ ಒಂಟಿ ಮಹಿಳೆ

• ಪ್ರಸನ್ನಕುಮಾರ್ ಯಾದವ್

ಪೀಣ್ಯ ದಾಸರಹಳ್ಳಿ: ತನ್ನವರು ಎಂದು ಯಾರೂ ಇಲ್ಲದ ಮಹಿಳೆಯೊಬ್ಬರು ಶೆಡ್‌ನಲ್ಲಿ ಒಂಟಿಯಾಗಿದ್ದಾರೆ. ಗ್ಯಾಂಗ್ರಿನ್ ಆಗಿ ಒಂದು ಕಾಲು ಕಳೆದುಕೊಂಡಿದ್ದು, ಗಾಯ ಕೀವು ಆಗಿ ನರಕಯಾತನೆ ಅನುಭವಿಸುತ್ತಿದ್ದಾರೆ.

ಚೊಕ್ಕಸಂದ್ರ ವಾರ್ಡ್ ಅಶ್ವತ್ಥ ಕಟ್ಟೆಯ ಬಳಿ ನೋವಿಂದ ಬಳಲುತ್ತಿದ್ದ ಸುಮಾರು 60 ವರ್ಷದ ಮಹಿಳೆಯ ಹೆಸರು ತಿಪ್ಪಮ್ಮ. ಅವರ ಕಾಲುಗಳು ಗ್ಯಾಂಗ್ರಿನ್ ಆಗಿ ವಾಸನೆಯಿಂದ ಇಲಿಗಳು ರಾತ್ರಿ ವೇಳೆ ಕಚ್ಚುತ್ತಿವೆ. ಔಷಧ ಕೊಡಿಸುವವರಿಲ್ಲ, ಊಟ ಹಾಕುವವರಿಲ್ಲ. ಅಕ್ಕಪಕ್ಕದವರು ಊಟ ನೀಡುತ್ತಿದ್ದಾರೆ.

'ನಿತ್ಯ ಕಾಲುಗಳ ಡ್ರೆಸ್ಸಿಂಗ್ ಮಾಡಬೇಕು. ನನಗೆ ನಡೆಯಲು ಆಗುವುದಿಲ್ಲ ಕೆಲವೊಮ್ಮೆ ತೆವಳಿಕೊಂಡು ಬಾತ್ ರೂಮಿಗೆ ಹೋಗುತ್ತೇನೆ. ಹೋಗಲು ಆಗದೇ ಇದ್ದರೆ ಬಟ್ಟೆಯಲ್ಲೇ ಎಲ್ಲ ಆಗುತ್ತದೆ. ಇಲಿಗಳು ಕಚ್ಚಿ ಗಾಯ ಮಾಡಿವೆ. ನೋವು ತಡೆಯಲಾಗುತ್ತಿಲ್ಲ. ನನ್ನ ಹಿಂಸೆ ಯಾರಿಗೂ ಬರಬಾರದು' ಎಂದು ತಿಪ್ಪಮ್ಮ ತಮ್ಮ ಅಳಲು ತೋಡಿಕೊಂಡರು.

'ನಾವು ತಿಪ್ಪಮ್ಮನ ಹಿಂಸೆ ನೋಡಲಾರದೆ ಬಿಜಿಎಸ್ ಆಸ್ಪತ್ರೆಗೆ ಸೇರಿಸಿದ್ದೆವು. ಆಕೆಯ ಕಾಲುಗಳಲ್ಲಿ ನೀರು ಸೋರುತಿತ್ತು. ವೈದ್ಯರು ಪರೀಕ್ಷೆ ಮಾಡಿ ಕಾಲು ಕತ್ತರಿಸದಿದ್ದರೆ ಜೀವ ಉಳಿಯದು ಎಂದು ಕತ್ತರಿಸಿದರು. ಆಸ್ಪತ್ರೆಯಲ್ಲೇ ಇನ್ನಷ್ಟು ದಿನ ಇರಬೇಕಿತ್ತು. ಆದರೆ, ನೋಡಿಕೊಳ್ಳುವವರು ಇಲ್ಲದ ಕಾರಣ ಕರೆತರಬೇಕಾಯಿತು. ಆಸ್ಪತ್ರೆ ವೆಚ್ಚ ಪಾವತಿಸಲು ಹಣ ಕೊರತೆಯಾದಾಗ ಶಾಸಕರಿಗೆ ತಿಳಿಸಿದ್ದರಿಂದ ಕೊರತೆಯಾಗಿದ್ದ ₹ 5000 ನೀಡಿದರು. ಈಗ ಕಾಲು ಕೀವಾಗಿದೆ, ನೋವು ಜಾಸ್ತಿ ಆಗಿದೆ' ಎಂದು ಪಕ್ಕದ ಮನೆ ನಿವಾಸಿ ರೇಣುಕಾ ದೇಸಾಯಿ ವಿವರಿಸಿದರು.



ಗ್ಯಾಂಗ್ರಿನ್ ನಿಂದ ಕಾಲು ಕಳೆದುಕೊಂಡ ಮಹಿಳೆಗೆ ಸ್ಥಳೀಯರು ನೆರವಾದರು

ಡ್ರೆಸ್ಸಿಂಗ್‌ಗೆ ವ್ಯವಸ್ಥೆ

'ಚೊಕ್ಕಸಂದ್ರದಲ್ಲಿ ತಿಪ್ಪಮ್ಮ ಅವರನ್ನು ಭೇಟಿ ಮಾಡಿ ಅವರಿಗೆ ಶಾಸಕ ಮುನಿರಾಜು ಅವರ ಕಡೆಯಿಂದ ದಿನಸಿ, ಔಷಧ ಮತ್ತು ಪ್ರತಿದಿನ ನರ್ಸ್ ಅವರಿಗೆ ಡ್ರೆಸ್ಸಿಂಗ್ ಮಾಡುವ ವ್ಯವಸ್ಥೆ ಮಾಡಲಾಗಿದೆ. ವೀಲ್‌ಚೇರ್ ನೀಡಿ ಧೈರ್ಯ ತುಂಬಿದ್ದೇವೆ' ಎಂದು ಬಿಜೆಪಿ ಮುಖಂಡ ಗುರು ನಿಶ್ಚಲ್ ಪಿ. ತಿಳಿಸಿದರು.

ಕೊಂಬೆ ಕತ್ತರಿಸುವಾಗ ಬಿದ್ದು ಮಹಿಳೆ ಸಾವು

ಬೆಂಗಳೂರು: ಮನೆಯ ಚಾವಣಿಗೆ ಚಾಚಿಕೊಂಡಿದ್ದ ಮರದ ಕೊಂಬೆಗಳನ್ನು ತೆರವುಗೊಳಿಸುವ ವೇಳೆ ಟೆರೇಸ್‌ನಿಂದ ಆಯತಪ್ಪಿ ಬಿದ್ದು ಮಹಿಳೆ ಮೃತಪಟ್ಟಿರುವ ಘಟನೆ ರಾಜಾಜಿನಗರದ ಪ್ರಕಾಶ್ ನಗರದಲ್ಲಿ ನಡೆದಿದೆ.



ಪ್ರಮೀಳಾ ಬಾಯಿ

ಘಟನೆಗೆ ಜಿಬಿಎ ಅಧಿಕಾರಿಗಳ ನಿರ್ಲಕ್ಷ್ಯ ಕಾರಣ ಎಂದು ಆರೋಪಿಸಲಾಗಿದೆ.

ಪ್ರಕಾಶ್ ನಗರ ನಿವಾಸಿ ಪ್ರಮೀಳಾ ಬಾಯಿ (57) ಮೃತರು. ಅವರ ಮನೆಯ ಚಾವಣಿಗೆ ರಸ್ತೆ ಪಕ್ಕದ ಮರದ ಕೊಂಬೆಗಳು ಚಾಚಿಕೊಂಡಿದ್ದವು. ಇದರಿಂದ ಸಮಸ್ಯೆಯಾಗುತ್ತಿದ್ದ ಕಾರಣ ಪ್ರಮೀಳಾ ಬಾಯಿ ಕುಟುಂಬ ಸದಸ್ಯರು ಜಿಬಿಎಗೆ ದೂರು ಕೊಟ್ಟು, ಮರದ ಕೊಂಬೆಗಳನ್ನು ತೆರವುಗೊಳಿಸುವಂತೆ ಮನವಿ ಮಾಡಿದ್ದರು. ಆದರೆ, ಅಧಿಕಾರಿಗಳು ಮರದ ಕೊಂಬೆಗಳನ್ನು ತೆರವು ಮಾಡಿರಲಿಲ್ಲ.

ಸಮಸ್ಯೆಗೆ ಜಿಬಿಎ ಅಧಿಕಾರಿಗಳು ಸ್ಪಂದಿಸದ ಕಾರಣ ಪ್ರಮೀಳಾ ಬಾಯಿ ಅವರು ಜೂನ್ 18ರಂದು ಮನೆಯ ಟೆರೇಸ್‌ಗೆ ಹೋಗಿ ಕೊಂಬೆಗಳನ್ನು ತೆರವುಗೊಳಿಸಲು ಮುಂದಾಗಿದ್ದರು. ನೆಲ ಒರೆಸುವ ಮಾಪ್ ಕಡ್ಡಿಯಿಂದ ಕೊಂಬೆಯನ್ನು ದೂರಕ್ಕೆ ತಳ್ಳುವ ಯತ್ನದಲ್ಲಿ ಅವರು ಟೆರೇಸ್‌ನ ಕೊಠಡಿಯ ಶೀಟ್ ಮೇಲೆ ಕಾಲಿಟ್ಟಿದ್ದಾರೆ. ಆಗ ಅವರ ಭಾರಕ್ಕೆ ಶೀಟ್ ತುಂಡಾಗಿ, ಟೆರೇಸ್‌ನಿಂದ ಕೆಳಗೆ ಬಿದ್ದು ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

'ಮರದ ಕೊಂಬೆಗಳಿಂದ ತುಂಬಾ ಸಮಸ್ಯೆಯಾಗುತ್ತಿತ್ತು. ಈ ಸಂಬಂಧ ಜಿಬಿಎಗೆ ಹಲವು ಬಾರಿ ದೂರು ಕೊಟ್ಟು ಕೊಂಬೆಗಳನ್ನು ಕತ್ತರಿಸುವಂತೆ ಮನವಿ ಮಾಡಿದ್ದರೂ ಅಧಿಕಾರಿಗಳು ಸ್ಪಂದಿಸಲಿಲ್ಲ. ಹೀಗಾಗಿ, ಪತ್ನಿಯು ಕೊಂಬೆಗಳನ್ನು ತೆರವು ಮಾಡಲು ಹೋಗಿ, ಕೆಳಗೆ ಬಿದ್ದು ಮೃತಪಟ್ಟಿದ್ದಾಳೆ. ನನ್ನ ಕಾಲಿಗೆ ಶಸ್ತ್ರಚಿಕಿತ್ಸೆಯಾಗಿದ್ದು, ಪತ್ನಿಯೇ ನೋಡಿಕೊಳ್ಳುತ್ತಿದ್ದಳು. ಈಗ ನನ್ನನ್ನು ನೋಡಿಕೊಳ್ಳುವವರು ಯಾರು?' ಎಂದು ಪ್ರಮೀಳಾ ಬಾಯಿ ಪತಿ ಸಿದ್ದಲಿಂಗರಾವ್ ಅಲವತ್ತುಕೊಂಡರು.

'ರಸಗೊಬ್ಬರ ಅಕ್ರಮ ಮಾರಾಟ: ಕಠಿಣ ಕ್ರಮ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಿಗದಿಗಿಂತ ಹೆಚ್ಚು ಬೆಲೆಗೆ ರಸಗೊಬ್ಬರ ಮಾರಾಟ ಮಾಡುತ್ತಿರುವ ಮತ್ತು ಅಕ್ರಮ ವಹಿವಾಟು ನಡೆಸುತ್ತಿರುವವರ ವಿರುದ್ಧ ಕೃಷಿ ಇಲಾಖೆಯು ಕಠಿಣ ಕ್ರಮ ತೆಗೆದುಕೊಳ್ಳುವ ಭರವಸೆ ನೀಡಿದೆ' ಎಂದು ಕೆಆರ್‌ಎಸ್ ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿ ರಘುಪತಿ ಭಟ್ ತಿಳಿಸಿದ್ದಾರೆ.

ಮೋಸ ನಡೆಯುತ್ತಿದ್ದರೆ ರೈತರು ತಕ್ಷಣವೇ ಪಕ್ಷದ ಸಹಾಯವಾಣಿ ಮೊ. 73495 77130 ಕರೆ ಮಾಡಬೇಕು' ಎಂದು ತಿಳಿಸಿದ್ದಾರೆ.



79ನೇ ಸೀನಿಯರ್ ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್‌ನಲ್ಲಿ ಸಮಗ್ರ ಪ್ರಶಸ್ತಿ ಗೆದ್ದ ಕರ್ನಾಟಕ ತಂಡ

ಕರ್ನಾಟಕ ತಂಡ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಪುರುಷರ ಮತ್ತು ಮಹಿಳೆಯರ ತಂಡಗಳು ಅಹಮದಾಬಾದ್‌ನಲ್ಲಿ ಭಾನುವಾರ ಮುಕ್ತಾಯಗೊಂಡ 79ನೇ ಸೀನಿಯರ್ ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್‌ನಲ್ಲಿ ಸಮಗ್ರ ಪ್ರಶಸ್ತಿಯನ್ನು ಗೆದ್ದುಕೊಂಡವು.

ರಾಜ್ಯದ ಪುರುಷರ ತಂಡವು 164 ಅಂಕ ಗಳಿಸಿದರೆ, ಮಹಿಳೆಯರ ತಂಡವು 170 ಅಂಕಗಳೊಂದಿಗೆ ಅಭಿಯಾನ ಮುಗಿಸಿದವು. ರಾಜ್ಯದ ಈಜುಪಟುಗಳು 19 ಚಿನ್ನ, 16 ಬೆಳ್ಳಿ ಮತ್ತು 12 ಕಂಚಿನೊಂದಿಗೆ ಒಟ್ಟು 47 ಪದಕಗಳನ್ನು ಗೆದ್ದರು. ಮಹಾರಾಷ್ಟ್ರ ತಂಡವು (16 ಪದಕ) ರನ್ನರ್ಸ್‌ಅಪ್ ಆಯಿತು.

ಎರಡು ಕೂಟ ದಾಖಲೆಯೊಂದಿಗೆ ಮೂರು ಚಿನ್ನ ಮತ್ತು ಒಂದು ಕಂಚು ಗೆದ್ದ ಗುಜರಾತ್‌ನ ಆರ್ಯನ್ ನೆಹ್ರಾ ಅವರು ಪುರುಷರ ವಿಭಾಗದ ವೈಯಕ್ತಿಕ ಸಮಗ್ರ ಪ್ರಶಸ್ತಿ ಗೆದ್ದರು. ಮಹಾರಾಷ್ಟ್ರದ ಸಾನ್ವಿ ದೇಶ್ವಾಲ್ (3 ಚಿನ್ನ, 1 ಬೆಳ್ಳಿ) ಅವರು ಮಹಿಳೆಯರ ವಿಭಾಗದ ವೈಯಕ್ತಿಕ ಸಮಗ್ರ ಪ್ರಶಸ್ತಿ ಮುಡಿಗೇರಿಸಿಕೊಂಡರು.

ಕರ್ನಾಟಕದ ನೀನಾ ವೆಂಕಟೇಶ್ ಅವರು ಮಹಿಳೆಯರ 50 ಮೀಟರ್ ಬಟರ್‌ಫ್ಲೈ ಸ್ಪರ್ಧೆಯಲ್ಲಿ ರಾಷ್ಟ್ರೀಯ ದಾಖಲೆಯೊಂದಿಗೆ ಚಿನ್ನ ಗೆದ್ದರು. 27.67 ಸೆಕೆಂಡ್‌ಗಳಲ್ಲಿ ಗುರಿ ತಲುಪಿದ ಅವರು ತಮ್ಮದೇ (27.74ಸೆ) ದಾಖಲೆಯನ್ನು ಉತ್ತಮ ಪಡಿಸಿಕೊಂಡರು. ಕರ್ನಾಟಕದ ತನಿಶಿ ಗುಪ್ತಾ ಬೆಳ್ಳಿ ಪದಕ ಗೆದ್ದರು.

ಮಹಿಳೆಯರ 4x100 ಮೆಡ್ಲೆ ರಿಲೇ ಸ್ಪರ್ಧೆಯಲ್ಲಿ ಕರ್ನಾಟಕ ತಂಡವು ರಾಷ್ಟ್ರೀಯ ದಾಖಲೆಯೊಂದಿಗೆ ಪ್ರಶಸ್ತಿ ಗೆದ್ದಿತು. ನೀನಾ ವೆಂಕಟೇಶ್, ಎಸ್. ಲಕ್ಷ್ಯಾ, ತನಿಶಿ ಗುಪ್ತಾ ಮತ್ತು ಧಿನಿಧಿ ದೇಸಿಂಗು ಅವರನ್ನು ಒಳಗೊಂಡ ತಂಡವು 4ನಿ.18.72 ಸೆಕೆಂಡ್‌ಗಳಲ್ಲಿ ಗುರಿ ಮುಟ್ಟಿತು.

ಪುರುಷರ 200 ಮೀ. ಬಟರ್‌ಫ್ಲೈ ಸ್ಪರ್ಧೆಯಲ್ಲಿ ದರ್ಶನ್ ಎಸ್., 400 ಮೀ. ಫ್ರೀಸ್ಟೈಲ್‌ನಲ್ಲಿ ಅನೀಶ್ ಎಸ್.ಗೌಡ ಬೆಳ್ಳಿ ಪದಕ ಗೆದ್ದರು.

ಶಿವಕುಮಾರ್ ಚಾಣಕ್ಯ ಅಲ್ಲ: ಅಶೋಕ

ಬೆಳಗಾವಿ: 'ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಚಾಣಕ್ಯ ಅಲ್ಲ. ಚಾಣಕ್ಯ ಎಂದೂ ಕುದುರೆ ವ್ಯಾಪಾರ ಮಾಡಿಲ್ಲ. ಈಗ ಕುದುರೆ ವ್ಯಾಪಾರ ಮಾಡುತ್ತಿರುವ ಕಾಂಗ್ರೆಸ್, ಇದಕ್ಕೆ ತಕ್ಕ ಪಾಠ ಕಲಿಯುತ್ತದೆ' ಎಂದು ವಿಧಾನಸಭೆ ವಿಪಕ್ಷ ನಾಯಕ ಆರ್.ಅಶೋಕ ಲೇವಡಿ ಮಾಡಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ವಿಧಾನ ಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್‌ನವರು ಕುದುರೆ ವ್ಯಾಪಾರ ಮಾಡಿದ್ದಾರೆ. 2019ರಲ್ಲಿ ಬಿಜೆಪಿ ವಿರುದ್ಧ ಆಪರೇಷನ್ ಕಮಲದ ಕುರಿತಾಗಿ ಟೀಕಾ ಪ್ರಹಾರ ಮಾಡಿದ್ದ ಇದೇ ಕಾಂಗ್ರೆಸ್ ನವರಿಗೆ, ಈಗ ಆಪರೇಷನ್ ಹಸ್ತ ಮಾಡಿದ್ದಕ್ಕೆ ನಾಚಿಕೆಯಾಗಬೇಕು' ಎಂದು ಟೀಕಿಸಿದರು.

'ವಿಧಾನ ಪರಿಷತ್ ಚುನಾವಣೆಯಲ್ಲಿ ಶಾಸಕರು ಅಡ್ಡ ಮತದಾನ ಮಾಡಿದವರನ್ನು ಪತ್ತೆ ಮಾಡಿ, ಮುಂದೆ ಅವರು ಚುನಾವಣೆಗೆ ನಿಲ್ಲದ ಹಾಗೆ ಮಾಡುತ್ತೇವೆ' ಎಂದು ಎಚ್ಚರಿಕೆ ಕೊಟ್ಟರು. ಜತೆಗೆ 'ಈ ಚುನಾವಣೆ ವೇಳೆ ನಡೆದಿರುವ ಬೆಳವಣಿಗೆಗಳ ಕುರಿತು ಚರ್ಚಿಸಲು ಪಕ್ಷದ ರಾಷ್ಟ್ರೀಯ ಅಧ್ಯಕ್ಷರ ಸಮಯ ಕೇಳಿದ್ದೇವೆ. ಸಮಯ ನಿಗದಿಯಾದ ಮೇಲೆ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರ ಜತೆ ನಾವೆಲ್ಲರೂ ದೆಹಲಿಗೆ ಹೋಗಿ, ಪರಿಸ್ಥಿತಿ ಮನವರಿಕೆ ಮಾಡಿಕೊಡುತ್ತೇವೆ' ಎಂದರು.

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ...

9606038256



'ರಸ್ತೆ ದುರಸ್ತಿ ಮಾಡಿ'

ಶಿವಾನಂದ ವೃತ್ತದ ಬಳಿ ಇರುವ ರೈಲ್ವೆ ಕೆಳಸೇತುವೆ ರಸ್ತೆಯು ಶೇಷಾದ್ರಿಪುರಂಗೆ ಸಂಪರ್ಕ ಕಲ್ಪಿಸುತ್ತದೆ. ವಾಹನ ದಟ್ಟಣೆಯಿಂದ ಕೂಡಿರುವ ಈ ರಸ್ತೆಯುದ್ದಕ್ಕೂ ಗುಂಡಿಗಳಿವೆ. ಮಳೆ ನೀರಿನ ಚರಂಡಿಯು ಶಿಥಿಲಗೊಂಡಿದ್ದು, ಸರಾಗವಾಗಿ ಹರಿಯದೇ ನೀರು ನಿಲ್ಲುತ್ತಿದೆ. ಸರಣಿ ಅಪಘಾತಗಳೂ ಸಂಭವಿಸಿವೆ. ಪಾಲಿಕೆ ದುರಸ್ತಿ ಮಾಡಿ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಲಿ

ಎಸ್.ಶಿವಪ್ರಸಾದ್, ಸ್ಥಳೀಯ ನಿವಾಸಿ



ವರದಿ ಪರಿಣಾಮ

'ರಸ್ತೆಗೆ ಡಾಂಬರು ಬಂದಿತು'

ಸದಾನಂದನಗರದ ವಾರ್ಡ್-50ರ 8ನೇ ಮುಖ್ಯ ರಸ್ತೆಯ 3ನೇ ಅಡ್ಡ ರಸ್ತೆ ದುರಸ್ತಿ ಕಾಮಗಾರಿ ಹಲವು ತಿಂಗಳಿನಿಂದ ನಿಂತಿತ್ತು. 'ರಸ್ತೆ ಡಾಂಬರೀಕರಣ ಮಾಡಿ' ಎಂಬ ಶೀರ್ಷಿಕೆಯಲ್ಲಿ 'ಪ್ರಜಾವಾಣಿ'ಯಲ್ಲಿ ಪ್ರಕಟವಾಗಿತ್ತು. ಇದೀಗ ದುರಸ್ತಿಗೊಂಡಿದ್ದು, ಕಲ್ಲುಮಣ್ಣಿನ ರಸ್ತೆಗೆ ಡಾಂಬರು ಬಂದಿದೆ.

ಸಿದ್ದುವಾಲಿ

'ತಳ್ಳುಗಾಡಿಗಳಿಂದ ಸಮಸ್ಯೆ'



ಅವೆನ್ಯೂ ರಸ್ತೆ, ಮೈಸೂರು ಬ್ಯಾಂಕ್ ವೃತ್ತದಲ್ಲಿ ರಸ್ತೆಯ ಎರಡೂ ಬದಿ ಹಣ್ಣು- ತರಕಾರಿ ವ್ಯಾಪಾರಿಗಳ ತಳ್ಳುಗಾಡಿಗಳು ಸದಾ ನಿಂತಿದ್ದು, ವಾಹನಗಳ ಸುಗಮ ಸಂಚಾರಕ್ಕೆ ತೊಂದರೆಯಾಗಿದೆ. ಸಂಚಾರ ಪೊಲೀಸರು ಕ್ರಮವಹಿಸುತ್ತಿಲ್ಲ

ಜ್ಯೋತಿ, ಚಿಕ್ಕಲಸಂದ್ರ

'ಮರ ತೆರವು ಮಾಡಿ'

ಜಂಬೂಸವಾರಿ ದಿಣ್ಣೆಯ ತೀರ್ಥ ಆಶ್ರಮದ ಎದುರು ಜೂನ್ 12ರಂದೇ ಮರ ಉರುಳಿ ಬಿದ್ದಿದ್ದು, ಅದರ ವಿಲೇವಾರಿ ಆಗಿಲ್ಲ. ಪಾದಚಾರಿ ಮಾರ್ಗದಲ್ಲಿಯೇ ರಾಶಿ ಹಾಕಲಾಗಿದ್ದು, ಬೀದಿ ಬದಿ ವ್ಯಾಪಾರಿಗಳು ಅದರ ಅಕ್ಕಪಕ್ಕದಲ್ಲೇ ವಹಿವಾಟು ನಡೆಸಿದ್ದಾರೆ. ಅದರಿಂದ ವಾಹನ ದಟ್ಟಣೆ ಹೆಚ್ಚಾಗಿದೆ. ಪಾದಚಾರಿಗಳು ಓಡಾಡಲು ಆಗುತ್ತಿಲ್ಲ

ಎಚ್.ದೊಡ್ಡಮಾರಯ್ಯ, ಸ್ಥಳೀಯ ನಿವಾಸಿ





'ದುರಸ್ತಿಗೊಳಿಸಿ ಪ್ರಾಣ ಉಳಿಸಿ'

ಅಂಜನಾಪುರ ಎರಡನೇ ಬ್ಲಾಕ್ ಬಸ್ ನಿಲ್ದಾಣದ ಜಂಕ್ಷನ್‌ನಲ್ಲಿರುವ ಕನಕಪುರ, ಬನ್ನೇರುಘಟ್ಟ ರಸ್ತೆಗಳು ಗುಂಡಿಮಯವಾಗಿದ್ದು ಅಪಘಾತದ ಸ್ಥಳವಾಗಿದೆ. ಕೂಡಲೇ ದುರಸ್ತಿಗೊಳಿಸಿ ಪ್ರಾಣ ಉಳಿಸಿ

ಸಿದ್ಧರಾಮಪ್ಪ ದಿನ್ನಿ, ಅಂಜನಾಪುರ ನಿವಾಸಿ



'ಗುಂಡಿ ಮುಚ್ಚಿಸಿಕೊಡಿ'

ಬಾಬೂಸಾಬ್ ಪಾಳ್ಯದ ವೆಂಟೇಶಪ್ಪ ಬಡಾವಣೆಯಲ್ಲಿ ಡಾಂಬರೀಕರಣಗೊಂಡ ರಸ್ತೆಯನ್ನು ಅನಧಿಕೃತವಾಗಿ ಅಗೆದು ಗುಂಡಿ ಮುಚ್ಚಿಲ್ಲ. ಪಕ್ಕದಲ್ಲಿಯೇ ಕೊಳವೆಬಾವಿ ಪಂಪ್‌ನ ಮೋಟಾರು ಇದೆ. ವಯಸ್ಸಾದವರು- ಮಕ್ಕಳು ಓಡಾಡಲು ತೊಂದರೆ ಆಗುತ್ತಿದೆ.

ಆಕಾಶ್, ಸ್ಥಳೀಯ ನಿವಾಸಿ

ನೀಟ್: ತಡವಾಗಿ ಬಂದವರಿಗೆ ಸಿಗದ ಅವಕಾಶ

ಕಣ್ಣೀರಿಟ್ಟ ವಿದ್ಯಾರ್ಥಿಗಳು • ಸಂಚಾರ ದಟ್ಟಣೆಯಿಂದ ಸಮಸ್ಯೆ– ನೆಟ್ಟಿಗರ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಚಾರ ದಟ್ಟಣೆ ಸೇರಿದಂತೆ ನಾನಾ ಕಾರಣಗಳಿಂದ ತಡವಾಗಿ ಬಂದ ನೀಟ್ ಪರೀಕ್ಷಾರ್ಥಿಗಳಿಗೆ ಪರೀಕ್ಷಾ ಕೇಂದ್ರದ ಒಳಗೆ ಬಿಡಲಿಲ್ಲ. ಕೇಂದ್ರದ ಸಿಬ್ಬಂದಿ ವಾಪಸ್ ಕಳುಹಿಸಿದ್ದರಿಂದ ಕಣ್ಣೀರು ಹಾಕುತ್ತಲೇ ಮನೆಗೆ ತೆರಳುತ್ತಿರುವ ದೃಶ್ಯ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಸಂಚಾರ ದಟ್ಟಣೆಯ ಕಾರಣಕ್ಕೆ ವಿದ್ಯಾರ್ಥಿಗಳು ನಿಗದಿತ ಸಮಯಕ್ಕೆ ಪರೀಕ್ಷಾ ಕೇಂದ್ರ ತಲುಪಲು ಸಾಧ್ಯವಾಗಿಲ್ಲ ಎಂದು ಜಾಲತಾಣದಲ್ಲಿ ನೆಟ್ಟಿಗರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಬಳ್ಳಾರಿ ರಸ್ತೆಯ ಅರಮನೆ ಮೈದಾನದಲ್ಲಿ ಭಾನುವಾರ ಆಯೋಜಿಸಿದ್ದ ಕೆಪಿಸಿಸಿ ಅಧ್ಯಕ್ಷರ ಪದಗ್ರಹಣ ಸಮಾರಂಭಕ್ಕೆ ರಾಜ್ಯದ ವಿವಿಧ ಜಿಲ್ಲೆಗಳಿಂದ ಪಕ್ಷದ ಕಾರ್ಯಕರ್ತರು, ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬಂದಿದ್ದರು. ಅರಮನೆ ಮೈದಾನ, ಮೇಖ್ರಿ ವೃತ್ತ, ಗುಟ್ಟಹಳ್ಳಿ ನಿಲ್ದಾಣ ಬಳಿ ವಿಪರೀತ ವಾಹನ ದಟ್ಟಣೆ ಉಂಟಾಗಿತ್ತು. ಈ ಬಗ್ಗೆ ಪೊಲೀಸರು ಮೊದಲೇ ಎಚ್ಚರಿಕೆ ನೀಡಿದ್ದರು.

ಆರ್.ಸಿ ಕಾಲೇಜಿನ ಪರೀಕ್ಷಾ ಕೇಂದ್ರಕ್ಕೆ ಮೂವರು ಅಭ್ಯರ್ಥಿಗಳು ಎರಡು ನಿಮಿಷ ತಡವಾಗಿ ಬಂದರು. ಸಂಚಾರ ದಟ್ಟಣೆ ಹಿನ್ನೆಲೆಯಲ್ಲಿ ಒಬ್ಬ ವಿದ್ಯಾರ್ಥಿ ತಡವಾಗಿ ಬಂದರೆ, ಮತ್ತೊಬ್ಬ ವಿದ್ಯಾರ್ಥಿನಿಗೆ ಬಸ್ ಬರುವುದು ತಡವಾಯಿತು. ಮತ್ತೊಬ್ಬರು ಹಳೆಯ ಪ್ರವೇಶ ಪತ್ರ ತಂದಿದ್ದರು.

ತಡವಾಗಿ ಬಂದ ಪರೀಕ್ಷಾರ್ಥಿಗಳು ಒಳಗೆ ಬಿಡುವಂತೆ ಗೇಟ್ ಮುಂದೆ ನಿಂತು ಕಣ್ಣೀರು ಹಾಕಿದರು.



ತಡವಾಗಿ ಬಂದ ನೀಟ್ ಪರೀಕ್ಷಾರ್ಥಿಗಳು ಪರೀಕ್ಷಾ ಕೇಂದ್ರದ ಒಳಗೆ ಬಿಡುವಂತೆ ಮನವಿ ಮಾಡುತ್ತಾ ಕಣ್ಣೀರು ಹಾಕಿದರು

ವಿದ್ಯಾರ್ಥಿನಿ ತಡೆಗೋಡೆ ಏರಿ ಒಳಗೆ ಹೋಗಲು ಯತ್ನಿಸಿದಳು. ಆದರೆ, ತಕ್ಷಣ ಮಧ್ಯಪ್ರವೇಶಿಸಿದ ಪೊಲೀಸರು ವಿದ್ಯಾರ್ಥಿನಿಯನ್ನು ಕೆಳಗಿಳಿಸಿ ವಾಪಸ್ ಕಳಿಸಿದರು.

‘ನಿಯಮ ಪ್ರಕಾರ ಮಧ್ಯಾಹ್ನ 1.30 ರವರೆಗೂ ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರದ ಒಳಗೆ ಬಿಡಲಾಗಿದೆ. ತಡವಾಗಿ ಬಂದವರಿಗೆ ಅವಕಾಶ ನೀಡಿಲ್ಲ’ ಎಂದು ಕೇಂದ್ರದ ಸಿಬ್ಬಂದಿ ತಿಳಿಸಿದರು.



ನೆಲಮಂಗಲ ತಾಲ್ಲೂಕಿನ ಸೋಲೂರಿನಲ್ಲಿ ಕೆಟ್ಟು ನಿಂತ ರೈಲು

ಕೆಟ್ಟು ನಿಂತ ರೈಲು: ವಿದ್ಯಾರ್ಥಿಗಳಿಗೆ ತೊಂದರೆ

ನೆಲಮಂಗಲ: ಬೆಂಗಳೂರಿನಿಂದ ಸೊಲ್ಲಾಪುರಕ್ಕೆ ಹೊರಟಿದ್ದ ರೈಲು ತಾಲ್ಲೂಕಿನ ಸೋಲೂರಿನಲ್ಲಿ ಕೆಟ್ಟು ನಿಂತಿದ್ದರಿಂದ ನೀಟ್ ವಿದ್ಯಾರ್ಥಿಗಳು ಸಮಸ್ಯೆ ಎದುರಿಸಿದರು. ರೈಲಿನಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡು ಕೆಟ್ಟು ನಿಂತಿದ್ದರಿಂದ ಇತರೆ ರೈಲುಗಳ ಸಂಚಾರಕ್ಕೂ ಅಡ್ಡಿಯಾಯಿತು. ಒಂದು ತಾಸು ಸಮಸ್ಯೆ ಉಂಟಾಯಿತು. ಹಾಸನದಿಂದ ಬೆಂಗಳೂರು ಕಡೆಗೆ ಬರುತ್ತಿದ್ದ ರೈಲು ಮುಂದೆ ಸಾಗಲು ಪರ್ಯಾಯ ಹಳಿ ವ್ಯವಸ್ಥೆ ಇಲ್ಲದೆ ಪ್ರಯಾಣಿಕರು ಪರದಾಡಿದರು. ವಿದ್ಯಾರ್ಥಿಗಳು ರೈಲಿನಿಂದ ಇಳಿದು ರಸ್ತೆ ಮಾರ್ಗವಾಗಿ ಬೆಂಗಳೂರು ತಲುಪಿದರು.

ಎನ್‌ಟಿಎ ರದ್ದತಿಗೆ ಆಗ್ರಹ • ಸ್ವಾತಂತ್ರ್ಯ ಉದ್ಯಾನದಲ್ಲಿ ವಿವಿಧ ಸಂಘಟನೆಗಳಿಂದ ಪ್ರತಿಭಟನೆ

ಧರ್ಮೇಂದ್ರ ಪ್ರಧಾನ್ ರಾಜೀನಾಮೆಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೀಟ್ ಪರೀಕ್ಷೆ ಪ್ರಶ್ನೆ ಪತ್ರಿಕೆ ಸೋರಿಕೆ ಹಿನ್ನೆಲೆಯಲ್ಲಿ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆಗೆ ಆಗ್ರಹಿಸಿ ಹಾಗೂ ವಿದ್ಯಾರ್ಥಿಗಳ ಸರಣಿ ಆತ್ಮಹತ್ಯೆ ಖಂಡಿಸಿ ಎಐಎಸ್‌ಎಫ್, ಎಸ್‌ಎಫ್‌ಐ, ಎಐಡಿಎಸ್‌ಒ, ಎಐಎಸ್‌ಎ ನೇತೃತ್ವದಲ್ಲಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಭಾನುವಾರ ಪ್ರತಿಭಟನೆ ನಡೆಯಿತು.

ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಹಾಗೂ ಕೇಂದ್ರ ಸರ್ಕಾರದ ವಿರುದ್ಧ ಪ್ರತಿಭಟನಕಾರರು ಘೋಷಣೆ ಕೂಗಿದರು.

ಎಸ್‌ಎಫ್‌ಐ ರಾಜ್ಯ ಘಟಕದ ಅಧ್ಯಕ್ಷ ಶಿವಪ್ಪ ಅಂಬಲಿಕಲ್ ಮಾತನಾಡಿ. ‘ವಿದ್ಯಾರ್ಥಿ ಗಳು ಯಾವುದೇ ಭಯವಿಲ್ಲದೇ ಪರೀಕ್ಷೆ ಬರೆಯಬೇಕು. ಆದರೆ, ಇಂದು ಕ್ರಮ ಕೈಗೊಂಡಿಲ್ಲ. ಈ ಬಾರಿ ಭಯದಲ್ಲಿ ಇದ್ದಾರೆ. ಅನೇಕ ಬಾರಿ ಪ್ರಶ್ನೆಪತ್ರಿಕೆ ಸೋರಿಕೆಯಾಗಿದ್ದರೂ ನೀಟ್ ಅವಾಂತರದಿಂದಾಗಿ 29 ವಿದ್ಯಾರ್ಥಿಗಳು ಸಾವಿಗೀಡಾಗಿದ್ದಾರೆ.



ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆಗೆ ಒತ್ತಾಯಿಸಿ ಎಸ್‌ಎಫ್‌ಐ, ಎಐಡಿಎಸ್‌ಒ, ಎಐಎಸ್‌ಎಫ್ ಎಐಎಸ್‌ಎ ಸಂಘಟನೆಗಳ ಕಾರ್ಯಕರ್ತರು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟಿಸಿದರು —ಪ್ರಜಾವಾಣಿ ಚಿತ್ರ

ಕೇಂದ್ರ ಸರ್ಕಾರವೇ ಇದಕ್ಕೆ ಹೊಣೆ. ಈ ಪರೀಕ್ಷೆಗಳನ್ನು ನಡೆಸುತ್ತಿರುವ ಎನ್‌ಟಿಎ ರದ್ದುಗೊಳಿಸಬೇಕು’ ಎಂದು ಸರ್ಕಾರವನ್ನು ಆಗ್ರಹಿಸಿದರು.

ಎಐಎಸ್‌ಎನ ಶಶಿರೇಖಾ ಮಾತನಾಡಿ, ‘ದೇಶದಲ್ಲಿ ಶಿಕ್ಷಣ ವ್ಯವಸ್ಥೆ ಹದಗೆಟ್ಟಿದೆ. ಬಡ ಹಾಗೂ ಹಿಂದುಳಿದ ವರ್ಗಗಳಿಂದ ಶಿಕ್ಷಣವನ್ನು ಕಿತ್ತುಕೊಳ್ಳಲಾಗುತ್ತಿದೆ. ದೇಶದ ಎಲ್ಲ ವಿದ್ಯಾರ್ಥಿಗಳೂ ಈ ಅನ್ಯಾಯದ ವಿರುದ್ಧ ಹೋರಾಡಬೇಕು’ ಎಂದು ಸಲಹೆ ನೀಡಿದರು.

ಎಐಎಸ್‌ಎಫ್‌ನ ರಾಜ್ಯ ಅಧ್ಯಕ್ಷ ವೀಣಾ ನಾಯಕ್ ಮಾತನಾಡಿ, ‘ನೀಟ್ ಪ್ರಶ್ನೆಪತ್ರಿಕೆ ಸೋರಿಕೆಯಿಂದ ವಿದ್ಯಾರ್ಥಿಗಳ ವರ್ಷಗಳ ಪರಿಶ್ರಮಕ್ಕೆ ಕೊಳ್ಳಿ ಇಟ್ಟಂತಾಗಿದೆ. ವಿದ್ಯಾರ್ಥಿಗಳ ಸರಣಿ ಆತ್ಮಹತ್ಯೆ ನಡೆಯುತ್ತಿದ್ದರೂ ಪ್ರಧಾನಿ ಮೋದಿ ಮತ್ತು ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಸ್ಪಂದಿಸಿಲ್ಲ. ಅವರು ಕೂಡಲೇ ರಾಜೀನಾಮೆ ನೀಡಬೇಕು’ ಎಂದು ಆಗ್ರಹಿಸಿದರು.

ಎಐಡಿಎಸ್‌ಒ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್, ‘ನೀಟ್ ಅನ್ನು ಸಂಪೂರ್ಣವಾಗಿ ಕೋಚಿಂಗ್ ಮಾಫಿಯಾ ವಶಕ್ಕೆ ನೀಡಲಾಗಿದೆ. ನೀಟ್ ಅವಾಂತರದ ವಿರುದ್ಧ ದೇಶದಾದ್ಯಂತ ಹೋರಾಟ ನಡೆದಿದೆ. ಆದರೆ, ನಿಜವಾದ ಜನ ಹೋರಾಟ ಬೆಳೆಯುವುದು ವೈಚಾರಿಕ ಸ್ಪಷ್ಟತೆಯಿಂದ. ಎಲ್ಲ ಪ್ರಜಾತಾಂತ್ರಿಕ ಶಕ್ತಿಗಳನ್ನು ಒಟ್ಟುಗೂಡಿಸಿ ಎಡ ವಿದ್ಯಾರ್ಥಿ ಸಂಘಟನೆಗಳು ಈ ಹೋರಾಟವನ್ನು ಮುನ್ನಡೆಸಬೇಕು’ ಎಂದು ಸಲಹೆ ನೀಡಿದರು.

ಎಐಎಸ್‌ಎಫ್, ಎಸ್‌ಎಫ್‌ಐ, ಎಐಡಿಎಸ್‌ಒ, ಎಐಎಸ್‌ಎ ಸದಸ್ಯರು ಹಾಗೂ ನೂರಾರು ವಿದ್ಯಾರ್ಥಿಗಳು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ನಗರದ ಹಲವೆಡೆ ವಿದ್ಯುತ್ ವ್ಯತ್ಯಯ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಪಿಟಿಸಿಎಲ್ ವತಿಯಿಂದ ತುರ್ತು ನಿರ್ವಹಣಾ ಕಾಮಗಾರಿ ಕೈಗೊಂಡಿರುವ ಕಾರಣ ಸೋಮವಾರ ಬೆಳಿಗ್ಗೆಯಿಂದ ಸಂಜೆವರೆಗೆ ನಗರದ ಹಲವು ಕಡೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.

ಬೆಳಿಗ್ಗೆ 10ರಿಂದ ಸಂಜೆ 5: ಲೊಟ್ಟೆ ಗೊಲ್ಲಹಳ್ಳಿ, ಮುನಿಹನುಮಯ್ಯ ಕಾಲೊನಿ, ಆರ್.ಕೆ. ಉದ್ಯಾನ, ಸಂಜೀವಪ್ಪ ಕಾಲೊನಿ, ಎಂಎಲ್‌ಎ ಲೇಔಟ್, ನೇತಾಜಿ ನಗರ, ಪೈಪ್‌ಲೈನ್ ರಸ್ತೆ, ಮತ್ತಿಕೆರೆ, ಮೋಹನ್ ಕುಮಾರ್ ನಗರ, ಜೆ.ಪಿ ಪಾರ್ಕ್, ಅಕ್ಕಿಯಪ್ಪ ಉದ್ಯಾನ, ಬಿ.ಕೆ.ನಗರ, ಎಲ್‌ಐಸಿ ಕಾಲೊನಿ, ಪಂಪ ನಗರ, ಮತ್ತಿಕೆರೆ, 1ನೇ ಮುಖ್ಯರಸ್ತೆ ಯಶವಂತಪುರ, ಎಚ್‌ಎಂಟಿ ಲೇಔಟ್, ಎಲ್‌ಸಿಆರ್ ಶಾಲಾ ರಸ್ತೆ, ಗೋಕುಲ 1ನೇ ಹಂತ, ಗುರುಮೂರ್ತಿ ರೆಡ್ಡಿ ಕಾಲೊನಿ, ಬೃಂದಾವನ ನಗರ, ಎಚ್‌ಎಂಟಿ ಮುಖ್ಯ ರಸ್ತೆ, ಎಂಆರ್‌ಜೆ ಕಾಲೊನಿ, ಸಂಜೀವಪ್ಪ ಕಾಲೊನಿ, 3ನೇ ಮುಖ್ಯರಸ್ತೆ, ಮತ್ತಿಕೆರೆ 2ನೇ ಮುಖ್ಯ ರಸ್ತೆಯಿಂದ 10ನೇ ಮುಖ್ಯರಸ್ತೆ, ವಿಆರ್ ಲೇಔಟ್, ಟ್ಯಾಂಕ್ ಬಂಡ್ ರಸ್ತೆ ಸುತ್ತಮುತ್ತಲಿನ ಪ್ರದೇಶ.

ಮಲ್ಲೇಶ್ವರ, ಎಂ.ಡಿ.ಬ್ಲಾಕ್, ವೈಯಾಲಿಕಾವಲ್, ಕೋದಂಡರಾಮಪುರ, ರಂಗನಾಥ ಪುರ, ಬಿಎಚ್‌ಇಎಲ್, ಐಐಎಸ್‌ಸಿ ಬ್ರೈನ್ ಸೆಂಟರ್, ಅಂಬೇಡ್ಕರ್ ನಗರ, ಯಶವಂತಪುರ ಪೈಪ್‌ಲೈನ್ ರಸ್ತೆ, ಎಲ್‌ಎನ್ ಕಾಲೊನಿ, ದಿವಾನರ ಪಾಳ್ಯ, ಯಶವಂತಪುರ 1ನೇ ಮುಖ್ಯರಸ್ತೆ, ಎಚ್.ಎಂ.ಟಿ. ಮುಖ್ಯ ರಸ್ತೆ, ಮಾಡೆಲ್ ಕಾಲೊನಿ, ಷರೀಫ್ ನಗರ.

ಬೆಳಿಗ್ಗೆ 10.30ರಿಂದ 4: ಎಲ್‌ಆರ್‌ಪಿ ಕಚೇರಿ, ದಿವ್ಯ ಶಾಂತಿ, ಗೋವಿಂದಪುರ, ಕಾರ್ಲೆ, ಬೃಂದಾವನ ನಗರ, ಟೈಟಾನ್ ಗ್ಯಾರೇಜ್, ಗಾಂಧಿನಗರ, ಭೈರವಿ ಅಪಾರ್ಟ್‌ಮೆಂಟ್, ಹೆಗಡೆ ನಗರ, ಚಂದ್ರಿಕಾ ಸೋಪ್ ಫ್ಯಾಕ್ಟರಿ, ಬಿಎಂಟಿಸಿ ಡಿಪೊ ಮತ್ತು ಸುತ್ತಮುತ್ತಲಿನ ಪ್ರದೇಶ

10ರಿಂದ 4: ಐಎನ್‌ಜಿ ವೈಶ್ಯ ಬ್ಯಾಂಕ್, ನ್ಯೂ ಪ್ರೆಸ್ಟೀಜ್ (ಕಟ್ಟಡ), ಗಂಗಾಧರ್ ಚೆಟ್ಟಿ ರಸ್ತೆ, ಅಗಬ್ಬಸಲಿ ರಸ್ತೆ, ಹೌದಿನ್ ರಸ್ತೆ, ಎಂ.ವಿ ಗಾರ್ಡನ್, ಸೇಂಟ್ ಸ್ಟ್ರೀಟ್, ಪಿ.ಎಂ ಸ್ಟ್ರೀಟ್, ನಾಲಾ ರಸ್ತೆ, ಎಂ.ಜಿ ರಸ್ತೆಯ ಯುಟಿಲಿಟಿ ಕಟ್ಟಡ, ಉದಾನಿ ಲೇಔಟ್, ಜೋಗುಪಾಳ್ಯ ಮುಖ್ಯ ರಸ್ತೆ, ಕೇಂಬ್ರಿಡ್ಜ್ ಲೇಔಟ್, ರೆಸಿಡೆನ್ಸಿ ರಸ್ತೆ, ವಿಶ್ರಾಂತಿ ಗೃಹ ರಸ್ತೆ, ಮ್ಯೂಸಿಯಂ ರಸ್ತೆ, ಸೇಂಟ್ ಮಾರ್ಕ್ಸ್ ರಸ್ತೆ, ಹೇಯ್ಸ್ ರಸ್ತೆ, ಕಾನ್ವೆಂಟ್ ರಸ್ತೆ, ಕ್ರೆಸೆಂಟ್ ರಸ್ತೆ, ಎಂ.ಜಿ ರಸ್ತೆ, ಬ್ರಿಗೇಡ್ ರಸ್ತೆ, ಸಾಯಿಬಾಬಾ ದೇವಾಲಯ ರಸ್ತೆ, ಜೀವನ್ ಕೇಂದ್ರ ಲೇಔಟ್, ಕೇಂಬ್ರಿಡ್ಜ್ ಲೇಔಟ್, ಗೌತಮಪುರ ಆರ್ಟಿಲರಿ ರಸ್ತೆ.

ಇಂದು, ನಾಳೆ ವಿದ್ಯುತ್ ಇಲ್ಲ

ಸೋಮವಾರ ಮತ್ತು ಮಂಗಳವಾರ ಬೆಳಿಗ್ಗೆ 8ರಿಂದ ರಾತ್ರಿ 8ರವರೆಗೆ ಈ ಕೆಳಕಂಡ ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆ ಇರುವುದಿಲ್ಲ.

ತರಬನಹಳ್ಳಿ, ಹುರುಳಿಚಿಕ್ಕನಹಳ್ಳಿ, ಟಿ.ಬಿ ಕ್ರಾಸ್, ಹೆಸರಘಟ್ಟ, ಬಿಳಿಜಾಜಿ, ದ್ವಾರಕಾನಗರ, ಚಿಕ್ಕಬಾಣಾವರ, ಮಾರುತಿ ನಗರ, ಗಣಪತಿ ನಗರ, ಶಾಂತಿನಗರ, ಕೃಷ್ಣಾ ಕಾಲೇಜು ರಸ್ತೆ, ರಾಘವೇಂದ್ರ ಲೇಔಟ್, ಸಾಸುವೆಘಟ್ಟ, ಬಜ್ಜಪ್ಪ ಲೇಔಟ್, ಶಿವಕುಮಾರ ಸ್ವಾಮೀಜಿ ಲೇಔಟ್, ಗುಡ್ಡದಹಳ್ಳಿ, ದಾಸೇನಹಳ್ಳಿ, ತೋಟಗೆರೆ ಬಸವಣ್ಣ ದೇವಸ್ಥಾನ, ಹೊಸಹಳ್ಳಿ ಪಾಳ್ಯ, ಸಿಡಿಪಿಒ, ಕೆಎಂಎಫ್, ಪಶುಸಂಗೋಪನೆ, ಗುಣಿಅಗ್ರಹಾರ, ಸೋಮಶೀತಿಹಳ್ಳಿ, ಗಾಣಿಗರಹಳ್ಳಿ, ಕೆ.ಟಿ.ಪುರ, ಐಐಎಚ್‌ಆರ್, ಮಠಕೂರ್, ಐವರಕೊಂಡಪುರ, ಸೀತಕೆಂಪನಹಳ್ಳಿ, ಲಿಂಗನಹಳ್ಳಿ, ಮಾದಪ್ಪನಹಳ್ಳಿ, ಕಾಳೇನಹಳ್ಳಿ ಶಿವಕೋಟೆ ಗ್ರಾಮ, ಮಾವಳ್ಳಿಪುರ, ಕೊಂಡಶೆಟ್ಟಿಹಳ್ಳಿ, ಮಧುಗಿರಿವೇಹಳ್ಳಿ, ಕುರುಬರಹಳ್ಳಿ ಪಾಕೇಗೌಡನಪಾಳ್ಯ, ರಾಘವೇಂದ್ರ ಧಾಮ, ಬೈಲಕೆರೆ, ಆಚಾರ್ಯ ಕಾಲೇಜು ಮುಖ್ಯರಸ್ತೆ, ಅಚ್ಯುತ್ ನಗರ, ಸೋಲದೇವನಹಳ್ಳಿ ಮತ್ತು ಸುತ್ತಮುತ್ತಲಿನ ಪ್ರದೇಶ.

ನಟ ವಿನೋದ್ ಪ್ರಭಾಕರ್ ಕ್ಷೇಮ

ಬೆಂಗಳೂರು: ನಟ ವಿನೋದ್ ಪ್ರಭಾಕರ್ ಅವರು ಆರೋಗ್ಯವಾಗಿದ್ದಾರೆ. ಕಡಿಮೆ ರಕ್ತದೊತ್ತಡದ ಕಾರಣದಿಂದಾಗಿ ಶನಿವಾರ ಅವರು ಆಸ್ಪತ್ರೆಗೆ ತೆರಳಿ ತಪಾಸಣೆಗೆ ಒಳಗಾಗಿದ್ದರು ಎಂದು ‘ಬಲರಾಮನ ದಿನಗಳು’ ಚಿತ್ರದ ನಿರ್ದೇಶಕ ಕೆ.ಎಂ.ಚೈತನ್ಯ ತಿಳಿಸಿದ್ದಾರೆ.



ಕಲಾಶಿಬಿರದಲ್ಲಿ ಚಿತ್ರ ಬರೆಯುವಲ್ಲಿ ನಿರತರಾಗಿದ್ದ ಚಿಣ್ಣರು

‘ಹವಾಮಾನ ಬದಲಾವಣೆ’ ಕಲಾ ಶಿಬಿರ

ಬೆಂಗಳೂರು: ‘ಬೆಂಗಳೂರು ಹವಾಮಾನ ಶೃಂಗ ಸಮಾವೇಶ’ದ ಭಾಗವಾಗಿ ನಗರದಲ್ಲಿ ಆಯೋಜಿಸಿದ್ದ ‘ರಾಷ್ಟ್ರೀಯ ಆನ್‌ಲೈನ್ ಕಲಾ ಪ್ರದರ್ಶನ ಮತ್ತು ಮಾರಾಟ ಮೇಳ’ದಲ್ಲಿ ನೂರಾರು ಕಲಾವಿದರು, ವಿದ್ಯಾರ್ಥಿಗಳು ಪಾಲ್ಗೊಂಡರು.

ವಿಮೋವೇ ಪ್ರತಿಷ್ಠಾನವು ಆಯೋಜಿಸಿದ್ದ ಪ್ರದರ್ಶನ ಮತ್ತು ಕಲಾ ತರಬೇತಿ ಶಿಬಿರಕ್ಕೆ ಪ್ರತಿಷ್ಠಾನದ ಸಂಸ್ಥಾಪಕ ವಿನಯ್ ಶಿಂಧೆ, ಕಲಾವಿದರಾದ ಎಂ.ಜಿ.ದೊಡ್ಡಮನೆ, ಗಣೇಶ್ ದೊಡ್ಡಮನಿ ಚಾಲನೆ ನೀಡಿದರು. ಶಿಬಿರದಲ್ಲಿ ಹವಾಮಾನ ಬದಲಾವಣೆ ಪರಿಣಾಮಗಳು, ಜವಾಬ್ದಾರಿಯ ಕುರಿತು ಕಲಾಕೃತಿಗಳು ರೂಪುಗೊಂಡವು.

ಕಲಾವಿದರಾದ ಕೃಷ್ಣಶೆಟ್ಟಿ, ಶಂಕರ ಡಿ.ಕಡಕುಂಟ್ಲ, ಶಾಲನ ಮುರಗೋಡ, ಪರಮೇಶ್ ಡಿ.ಜೋಳದ, ಎಂ.ಎಸ್.ಪ್ರಕಾಶ್ ಬಾಬು, ರೆಹಮಾನ್ ಪಟೇಲ್, ಪ್ರಭು ಹರಸೂರು, ಶಿವಕುಮಾರ್, ಬಿ.ಶಿವಾನಂದ, ಎಚ್.ಎಂ.ಮಧುಶ್ರೀ, ಡಿ.ಎಂ.ಪ್ರದೀಪ್ ಕುಮಾರ್ ಪಾಲ್ಗೊಂಡಿದ್ದರು.

ನಾಗಸಂದ್ರ ಮೆಟ್ರೊ ನಿಲ್ದಾಣದಲ್ಲಿ ಬೆಂಕಿ: ತಪ್ಪಿದ ಅನಾಹುತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಮ್ಮ ಮೆಟ್ರೊ ಹಸಿರು ಮಾರ್ಗದ ನಾಗಸಂದ್ರ ನಿಲ್ದಾಣದಲ್ಲಿ ಭಾನುವಾರ ಮಧ್ಯಾಹ್ನ ವಿದ್ಯುತ್ ಶಾರ್ಟ್ ಸರ್ಕಿಟ್‌ನಿಂದ ಬೆಂಕಿ ಅವಘಡ ಸಂಭವಿಸಿದ್ದು, ಯಾವುದೇ ಪ್ರಾಣಾಪಾಯ ಉಂಟಾಗಿಲ್ಲ.

ಮಧ್ಯಾಹ್ನ 1.30ರ ಹೊತ್ತಿಗೆ ನಿಲ್ದಾಣದ ಹೊರಗೆ ದಟ್ಟ ಹೊಗೆ ಕಾಣಿಸಿಕೊಂಡಿತು. ಇದನ್ನು ಕಂಡ ಪ್ರಯಾಣಿಕರು, ಸಾರ್ವಜನಿಕರು ಕೂಡಲೇ ನಿಲ್ದಾಣದ ಸಿಬ್ಬಂದಿಯ ಗಮನಕ್ಕೆ ತಂದರು. ಪರೀಕ್ಷಿಸಿದಾಗ ನಿಲ್ದಾಣದ ತುರ್ತು ನಿರ್ಗಮನ (ಎಮರ್ಜೆನ್ಸಿ ಎಕ್ಸಿಟ್) ಪ್ರದೇಶದ ಸಮೀಪ ಅಳವಡಿಸಿದ್ದ ಸೂಚನಾ ಫಲಕದಲ್ಲಿ (ಸೈನ್ ಬೋರ್ಡ್) ಬೆಂಕಿ ಹೊತ್ತಿ ಉರಿಯುತ್ತಿತ್ತು. ಕಾರ್ಯಾಚರಣೆ ಹಾಗೂ ಅಗ್ನಿಶಾಮಕ ತಂಡಗಳು ಸ್ಥಳಕ್ಕೆ ಬಂದು ಅಗ್ನಿ ನಂದಿಸಿದವು.

ಈ ಘಟನೆಯಿಂದ ಯಾವುದೇ ಅನಾಹುತ ಸಂಭವಿಸಿಲ್ಲ ಹಾಗೂ ಮೆಟ್ರೊ ರೈಲು ಸಂಚಾರದಲ್ಲಿ ಯಾವುದೇ ವ್ಯತ್ಯಯ ಉಂಟಾಗಿಲ್ಲ. ಮೆಟ್ರೊ ಸಂಚಾರ ಎಂದಿನಂತೆ ಸುಗಮವಾಗಿ ಸಾಗಿತು. ಸಾರ್ವಜನಿಕರು ಆತಂಕ ಪಡುವ ಅಗತ್ಯವಿಲ್ಲ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.



ನಾಗಸಂದ್ರ ಮೆಟ್ರೊ ನಿಲ್ದಾಣದ ಸೂಚನಾ ಫಲಕದಲ್ಲಿ ಶಾರ್ಟ್ ಸರ್ಕಿಟ್‌ನಿಂದ ಬೆಂಕಿ ಹೊತ್ತಿಕೊಂಡಿತು

ನಗರದಲ್ಲಿ ಇಂದು

ರಾಮಾಂಜನೇಯಸ್ವಾಮಿ ಮಹಾಕುಂಭಾಭಿಷೇಕ ಮಹೋತ್ಸವ: ಆಯೋಜನೆ ಮತ್ತು ಸ್ಥಳ: ರಾಮಾಂಜನೇಯ ದೇವಸ್ಥಾನ, 2ನೇ ಮುಖ್ಯರಸ್ತೆ, ನಾಗಸಂದ್ರ, ಬೆಳಿಗ್ಗೆ 9

‘250 ಅಷ್ಟಕ ಸ್ತೋತ್ರಗಳು’ ಗ್ರಂಥ ಜನಾರ್ಪಣೆ: ಅಹಲ್ಯಾ ಶರ್ಮಾ, ಎಸ್.ದಯಾಶಂಕರ್, ಲೇಖಕ: ಕೆ.ಜಿ.ಸುಬ್ರಾಯಶರ್ಮಾ, ಅತಿಥಿ: ಗಿರೀಶ್ ಚಂದ್ರ, ಕೆ.ರಾಮಕೃಷ್ಣಭಟ್, ಆಯೋಜನೆ ಮತ್ತು ಸ್ಥಳ: ವೇದಾಂತ ಸತ್ಸಂಗ ಕೇಂದ್ರ, ಅಧ್ಯಾತ್ಮ ಪ್ರಕಾಶ ಶಾಖಾ ಕಾರ್ಯಾಲಯ, 2ನೇ ಬ್ಲಾಕ್, ತ್ಯಾಗರಾಜನಗರ, ಬೆಳಿಗ್ಗೆ 9



ಅಹಲ್ಯಾ ಶರ್ಮಾ

‘ಚಿತ್ರ ಭಾರತಿ’ ಕಲಾ ಶಿಬಿರ: ಉದ್ಘಾಟನೆ: ಎಸ್.ಜಿ. ವಾಸುದೇವ, ಆಯೋಜನೆ ಮತ್ತು ಸ್ಥಳ: ಭಾರತೀಯ ವಿದ್ಯಾ ಭವನ, ಶ್ರೀರಾಮಪುರ, ಬೆಳಿಗ್ಗೆ 11

ರೇಬಾ ಹೋರೆ ಜನ್ಮಶತಮಾನೋತ್ಸವ ಪ್ರಯುಕ್ತ ‘ಬ್ರೋಕನ್ ಫುಟ್ ಜರ್ನಲ್ ಮತ್ತು ಇತರ ಕಥನಗಳು’ ವಿಶೇಷ ಕಲಾ ಪ್ರದರ್ಶನ: ಆಯೋಜನೆ: ‘ಸೀಗಲ್’ ಕೋಲ್ಕತ್ತ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

‘ಶರ್ಮಿಷ್ಠೆ’ ನಾಟಕ ಕೃತಿ ಲೋಕಾರ್ಪಣೆ: ಹಂಪ ನಾಗರಾಜಯ್ಯ, ಲೇಖಕ: ಬೇಲೂರು ರಘುನಂದನ್, ಕೃತಿ ಕುರಿತು ಮಾತು: ಪಿ.ಚಂದ್ರಿಕಾ, ರಂಗ ದೃಶ್ಯಾವಳಿಗೆ ಚಾಲನೆ: ದಿಲಾವರ್ ರಾಮದುರ್ಗ, ಅಧ್ಯಕ್ಷತೆ: ಬಂಜಗೆರೆ ಜಯಪ್ರಕಾಶ, ಎಂ.ಪ್ರಕಾಶಮೂರ್ತಿ, ರಂಗಗೀತೆಗಳ ಪ್ರಸ್ತುತಿ: ರಂಗ ಪಯಣ ತಂಡ, ಆಯೋಜನೆ: ರಂಗ ಚಂದಿರ ಟ್ರಸ್ಟ್, ಸ್ಥಳ: ನಯನ ಸಭಾಂಗಣ, ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 4.30



ಬೇಲೂರು ರಘುನಂದನ್

ಕರ್ನಾಟಕ ಶಾಸ್ತ್ರೀಯ ಸಂಗೀತ ಪಾಠ ಆರಂಭ: ಬಿ.ಎಸ್. ಆನಂದ, ಆಯೋಜನೆ ಮತ್ತು ಸ್ಥಳ: ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ, ಗಾಯತ್ರಿ ಭವನ, 14ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ, ಸಂಜೆ 5.30

26ನೇ ವರ್ಷದ ಪ್ರವಚನ ವಾಹಿನಿ: ‘ಭಾಗವತದಲ್ಲಿ ನಾರಾಯಣ ಪರ್ವ’ ಕುರಿತು ಉಪನ್ಯಾಸ: ಪವಮಾನಾಚಾರ್ ಮಡನೂರು, ಆಯೋಜನೆ ಮತ್ತು ಸ್ಥಳ: ಸಾಂಸ್ಕೃತಿಕ ಮಂದಿರ, ರಾಗೀಗುಡ್ಡ ಶ್ರೀ ಪ್ರಸನ್ನ ಆಂಜನೇಯ ಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ 9ನೇ ಬಡಾವಣೆ, ಸಂಜೆ 6.30

‘ವಿಕಾಸ ಪಥ’ ಕೃತಿ ಜನಾರ್ಪಣೆ ಮತ್ತು ಸಂವಾದ: ಎಸ್.ಆರ್.ವಿಶ್ವನಾಥ್, ರವಿಕುಮಾರ್, ಕೇಶವ ಪ್ರಸಾದ್, ಅಂಕೇಗೌಡ, ಲೇಖಕ: ಪ್ರಕಾಶ್ ಶೇಷರಾಘವಾಚಾರ್, ಸ್ಥಳ: ಸೆಂಚುರಿ ಕ್ಲಬ್, ಮೈಸೂರು ಡೈನಿಂಗ್ ಹಾಲ್, ಕಬ್ಬನ್ ಉದ್ಯಾನ, ಸಂಜೆ 6.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ವಿಚಾರಣೆಗೆ ಸಹಕರಿಸದ ಇನ್‌ಸ್ಪೆಕ್ಟರ್

ಹಣ ದರೋಡೆ ಪ್ರಕರಣ: ತಾಂತ್ರಿಕ ಸಾಕ್ಷ್ಯಾಧಾರಗಳ ಸಂಗ್ರಹಕ್ಕೆ ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇರಳದ ಉದ್ಯಮಿಯನ್ನು ಬೆದರಿಸಿ ₹20 ಲಕ್ಷ ದರೋಡೆ ಮಾಡಿದ ಪ್ರಕರಣದಲ್ಲಿ ಬಂಧನ ಭೀತಿ ಯಿಂದ ತಲೆಮರೆಸಿಕೊಂಡಿರುವ ಆರೋಪಿಗಳಾದ ಷಫಿ, ಶಾನಿ ಮತ್ತು ಹ್ಯಾರಿಸ್ ಪತ್ತೆ ಕಾರ್ಯಾಚರಣೆ ಚುರುಕುಗೊಂಡಿದೆ.

ಮೂವರು ಆರೋಪಿಗಳು ₹6 ಲಕ್ಷ ಹಣದೊಂದಿಗೆ ತಲೆಮರೆಸಿಕೊಂಡಿದ್ದು, ಅವರ ಮೊಬೈಲ್ ಕರೆಗಳ ವಿವರ, ಘಟನೆ ನಡೆದ ಸ್ಥಳದಲ್ಲಿದ್ದ ಸಿ.ಸಿ.ಟಿ.ವಿ ಕ್ಯಾಮೆರಾಗಳ ದೃಶ್ಯಾವಳಿಯನ್ನು ಪರಿಶೀಲನೆ ನಡೆಸ ಲಾಗುತ್ತಿದೆ ಎಂದು ಪೊಲೀಸ್ ಮೂಲಗಳು ಹೇಳಿವೆ.

ಮತ್ತೊಂದೆಡೆ, ಪ್ರಕರಣದಲ್ಲಿ ಬಂಧಿತರಾಗಿರುವ ಸಿಐಡಿ ಇನ್‌ಸ್ಪೆಕ್ಟರ್ ಮಹೇಶ್ ಕನಕಗಿರಿ ಅವರು ವಿಚಾರಣೆಗೆ ಸಹಕರಿಸದೆ ಸತಾಯಿಸುತ್ತಿದ್ದು, ಪೊಲೀಸರಿಗೆ ತನಿಖೆಯು ಸವಾಲಾಗಿದೆ. ಮಹೇಶ್, ಇತರೆ ಆರೋಪಿಗಳಾದ ಕುಪೇಂದ್ರ ರೆಡ್ಡಿ ಮತ್ತು ವಸಂತ್ ಕುಮಾರ್ ಪರಸ್ಪರ ವ್ಯತಿರಿಕ್ತ ಹೇಳಿಕೆ ನೀಡಿ ಗೊಂದಲ ಸೃಷ್ಟಿಸಿದ್ದಾರೆ. ಹೀಗಾಗಿ, ತನಿಖಾಧಿಕಾರಿಗಳು ತಾಂತ್ರಿಕ ಸಾಕ್ಷ್ಯಾಧಾರಗಳ ಸಂಗ್ರಹಕ್ಕೆ ಮುಂದಾಗಿದ್ದಾರೆ.

'ಮಹೇಶ್ ಸೂಚನೆಯಂತೆ ಮಡಿವಾಳದ ವೈಟ್ ಸ್ಟೋನ್ ಲಾಡ್ಜ್‌ಗೆ ಹೋಗಿ ಕೇರಳದ ಉದ್ಯಮಿ ಜುನೀಶ್ ಬಾಬು ಮತ್ತು ಅವರ ಸ್ನೇಹಿತರಿಂದ ₹20 ಲಕ್ಷ ದರೋಡೆ ಮಾಡಿದೆವು' ಎಂದು ಕುಪೇಂದ್ರ ರೆಡ್ಡಿ ಹಾಗೂ ವಸಂತ್‌ಕುಮಾರ್ ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದಾರೆ.

ಇದಕ್ಕೆ ವ್ಯತಿರಿಕ್ತ ಹೇಳಿಕೆ ಕೊಟ್ಟಿರುವ ಮಹೇಶ್, 'ದರೋಡೆ ಬಗ್ಗೆ ಏನೂ ಗೊತ್ತಿಲ್ಲ. ಕುಪೇಂದ್ರ ರೆಡ್ಡಿ ಪರಿಚಯವಿದ್ದ ಕಾರಣ ಆತನೊಂದಿಗೆ ಇಲಾಖೆಯ ಜೀಪಿನಲ್ಲಿ ಲಾಡ್ಜ್ ಬಳಿ ಹೋಗಿದ್ದೆ. ದರೋಡೆಗೂ ತನಗೂ ಯಾವುದೇ ಸಂಬಂಧವಿಲ್ಲ. ಕುಪೇಂದ್ರ ರೆಡ್ಡಿ ಬಂಧನದ ನಂತರವಷ್ಟೇ ದರೋಡೆ ವಿಚಾರ ಗೊತ್ತಾಯಿತು. ಜೀಪಿನ ಡ್ಯಾಶ್ ಬೋರ್ಡ್‌ನಲ್ಲಿ ಇಟ್ಟಿದ್ದ ಇಲಾಖೆ ಗುರುತಿನ ಚೀಟಿಯನ್ನು ಕುಪೇಂದ್ರ ರೆಡ್ಡಿ ನನ್ನ ಗಮನಕ್ಕೆ ಬಾರದಂತೆ ಕೊಂಡೊಯ್ದು ದುರ್ಬಳಕೆ ಮಾಡಿಕೊಂಡಿದ್ದಾನೆ. ಈ ಸಂಬಂಧ ದೂರು ಸಹ ಕೊಡುತ್ತೇನೆ' ಎಂದು ಮಹೇಶ್ ಹೇಳಿರುವುದಾಗಿ ತನಿಖಾಧಿಕಾರಿಗಳು ತಿಳಿಸಿದ್ದಾರೆ.

'ದರೋಡೆಗೂ ಮುನ್ನ ಕುಪೇಂದ್ರ ರೆಡ್ಡಿ ಜತೆ ನಿರಂತರ ಸಂಪರ್ಕದಲ್ಲಿದ್ದ ಮಹೇಶ್ ಅವರು, ಆತನಿಗೆ ಹಲವು ಬಾರಿ ಕರೆ ಮಾಡಿ ಮಾತನಾಡಿರುವುದು ದೃಢಪಟ್ಟಿದೆ. ಅಲ್ಲದೆ, ದರೋಡೆ ಸಂಬಂಧ ವಾಟ್ಸ್‌ಆ್ಯಪ್ ಮೂಲಕ ಕುಪೇಂದ್ರ ರೆಡ್ಡಿಗೆ ಸಂದೇಶಗಳನ್ನು ಕಳುಹಿಸಿರುವುದು ಗೊತ್ತಾಗಿದೆ ಮಹೇಶ್ ಮೊಬೈಲ್ ಜಪ್ತಿ ಮಾಡಿ, ತಾಂತ್ರಿಕ ಪರಿಶೀಲನೆಗಾಗಿ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ (ಎಫ್‌ಎಸ್‌ಎಲ್) ಕಳುಹಿಸಲಾಗಿದೆ' ಎಂದು ತನಿಖಾಧಿಕಾರಿಗಳು ಹೇಳಿದ್ದಾರೆ. ದರೋಡೆ ನಡೆದ ಲಾಡ್ಜ್‌ನ ಸಿ.ಸಿ.ಟಿ.ವಿ. ಕ್ಯಾಮೆರಾಗಳ ದೃಶ್ಯಾವಳಿ ಸೇರಿದಂತೆ ಹಲವು ತಾಂತ್ರಿಕ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಲಾಗಿದೆ. ತಲೆಮರೆಸಿಕೊಂಡಿರುವ ಆರೋಪಿ ಷಫಿ ವಿರುದ್ಧ ಈ ಹಿಂದೆಯೇ ದರೋಡೆ ಪ್ರಕರಣಗಳು ದಾಖಲಾಗಿದ್ದವು. ಆ ಪ್ರಕರಣಗಳಿಗೂ ಇನ್‌ಸ್ಪೆಕ್ಟರ್ ಮಹೇಶ್‌ಗೂ ನಂಟಿದೆಯೇ ಎಂಬ ಬಗ್ಗೆಯೂ ಪರಿಶೀಲನೆ ಮಾಡಲಾಗುತ್ತಿದೆ ಎಂದು ತನಿಖಾಧಿಕಾರಿಗಳು ತಿಳಿಸಿದ್ದಾರೆ.

ನ್ಯಾಯಾಲಯ, ಮಹೇಶ್ ಅವರನ್ನು 14 ದಿನ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ, ಆದೇಶ ಹೊರಡಿಸಿದೆ. ಹೀಗಾಗಿ, ಪೊಲೀಸರು ಮಹೇಶ್‌ರನ್ನು ಭಾನುವಾರ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಕಳುಹಿಸಿದ್ದಾರೆ.

ಕುಪೇಂದ್ರ ರೆಡ್ಡಿ ಹಾಗೂ ವಸಂತ ಕುಮಾರ್ ಪೊಲೀಸ್ ಬಾತ್ಮೀದಾರರಾಗಿ ಕೆಲಸ ಮಾಡುತ್ತಿದ್ದರು. ಹಾಗಾಗಿ ಮಹೇಶ್‌ಗೆ ಕೆಲವು ತಿಂಗಳಿನಿಂದ ಆತ್ಮೀಯರಾಗಿದ್ದರು. ದೂರುದಾರ ಕೇರಳದ ಉದ್ಯಮಿ ಜುನೀಶ್ ಬಾಬು, ಇಬ್ಬರು ಸ್ನೇಹಿತರೊಂದಿಗೆ ಟ್ರೇಡಿಂಗ್ (ವ್ಯಾಪಾರ) ಉದ್ದೇಶಕ್ಕಾಗಿ ಮಡಿವಾಳದ ಲಾಡ್ಜ್‌ನಲ್ಲಿ ವಾಸ್ತವ್ಯ ಹೂಡಿದ್ದರು. ಷಫಿ, ಶಾನಿ ಮತ್ತು ಹ್ಯಾರಿಸ್ ಅವರೇ ಜುನೀಶ್ ಬಾಬು ಅವರನ್ನು ಸಂಪರ್ಕಿಸಿ ಟ್ರೇಡಿಂಗ್ ನೆಪದಲ್ಲಿ ನಗರಕ್ಕೆ ಕರೆಸಿಕೊಂಡಿದ್ದರು ಎಂಬುದು ವಿಚಾರಣೆ ವೇಳೆಗೊತ್ತಾಗಿದೆ.

'ಭೂಗಳ್ಳರಿಗೆ ನೆರವಾಗಿದ್ದ ಇನ್‌ಸ್ಪೆಕ್ಟರ್'


ಮಹೇಶ್ ಕನಕಗಿರಿ

ಇಂಡಿಯನ್ ಆಯಿಲ್ ಕಾರ್ಪೋರೇಷನ್‌ಗೆ (ಐಒಸಿ) ಸೇರಿದ ಕೋಟ್ಯಂತರ ರೂಪಾಯಿ ಬೆಲೆ ಬಾಳುವ ಜಾಗದ ಒತ್ತುವರಿಗೆ ಇನ್‌ಸ್ಪೆಕ್ಟರ್ ಮಹೇಶ್ ಕನಕಗಿರಿ ಅವರು ಭೂಗಳ್ಳರಿಗೆ ನೆರವಾಗಿರುವ ವಿಚಾರ ತನಿಖೆ ವೇಳೆ ಗೊತ್ತಾಗಿದೆ.

ಐಒಸಿ, ನಗರದಲ್ಲಿ ಪೆಟ್ರೋಲ್ ಬಂಕ್ ನಿರ್ಮಾಣಕ್ಕಾಗಿ ಈ ಹಿಂದೆ ಬಿಡಿಎಗೆ ₹1.53 ಕೋಟಿ ಪಾವತಿಸಿ ಸಿಎ ನಿವೇಶನ ಖರೀದಿಸಿತ್ತು. ಈ ನಿವೇಶನ ಒತ್ತುವರಿ ಮಾಡಲು ಮಹೇಶ್ ಕನಕಗಿರಿ ಅವರು ಬಿಬಿಎಂಪಿ ಮಾಜಿ ಕಾರ್ಪೊರೇಟರ್‌ಗೆ ಸಹಕರಿಸಿದ್ದರು ಎಂಬ ವಿಚಾರ ಗೊತ್ತಾಗಿದೆ.

ಐಒಸಿಗೆ ಸೇರಿದ ಜಾಗಕ್ಕೆ ಪೊಲೀಸ್ ಭದ್ರತೆಯೊಂದಿಗೆ ಹೋಗಿದ್ದ ಮಹೇಶ್, ಪೆಟ್ರೋಲ್ ಪಂಪ್ ಅಳವಡಿಸಿದ್ದರೂ ತೆರವುಗೊಳಿಸಿ, ಅಲ್ಲಿನ ಸಿಬ್ಬಂದಿಗೆ ಬೆದರಿಕೆ ಹಾಕಿದ್ದರು.

ಅಲ್ಲದೆ, ಈ ಜಾಗದ ವಿಚಾರವಾಗಿ 2023ರಲ್ಲಿ ವಿಧಾನಮಂಡಲ ಅಧಿವೇಶನದಲ್ಲಿ ಬಂದಿದ್ದ ಪ್ರಶ್ನೆಯ ಸಂಬಂಧ ಗೃಹ ಸಚಿವರಿಗೆ ಸುಳ್ಳು ಮಾಹಿತಿ ಕೊಟ್ಟಿದ್ದರು. ಐಒಸಿ ಜಾಗದ ಸಂಬಂಧ ಹೈಕೋರ್ಟ್‌ನಲ್ಲಿ ಪ್ರಕರಣವಿದೆ ಎಂದು ಮಹೇಶ್ ಅವರು ಗೃಹ ಸಚಿವರಿಗೆ ಸುಳ್ಳು ವರದಿ ಕೊಟ್ಟಿದ್ದರು.

ಹೀಗಾಗಿ, ಗೃಹ ಸಚಿವರಿಂದ ಸದನಕ್ಕೆ ತಪ್ಪು ಮಾಹಿತಿ ರವಾನೆ ಆಗಿತ್ತು. ಮಹೇಶ್, ಹಣದಾಸೆಗೆ ಭೂಗಳ್ಳ ಕಾರ್ಪೊರೇಟರ್‌ಗೆ ನೆರವಾಗಿ ದ್ದರು ಎಂಬುದು ಪೊಲೀಸರ ತನಿಖೆಯಿಂದ ಗೊತ್ತಾಗಿದೆ.

ಇಲ್ಲಿದೆ ನೋಡಿ ಕಸ...

ಪ್ರಜಾವಾಣಿ ಸಿಟಿಜನ್ ಕನೆಕ್ಟ್
ಉತ್ತಮ ಬೆಂಗಳೂರಿಗಾಗಿ ಸಹಯೋಗ
96060 38256
dhpvcitizenconnect@printersmysore.co.in

ಬಿಎಸ್‌ಡಬ್ಲ್ಯುಎಂಎಲ್ ಅಧಿಕಾರಿಗಳ ಸಂಪರ್ಕ
- ಕರೀಗೌಡ-ಸಿಇಒ- 77605 04651
- ರಾಮಮಣಿ-ಸಿಒಒ- 94481 97256
- ರಾಜೇಶ್-ಸಿಜಿಎಂ- 948068 54046
- ರಾಘವೇಂದ್ರ ಪ್ರಸಾದ್ -ಸಿಜಿಎಂ-91102 89696

ನಗರದಲ್ಲಿ ದಿನವೂ ಕಸ ವಿಲೇವಾರಿ ಆಗುತ್ತಿದೆ ಎಂದು ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ (ಬಿಎಸ್‌ಡಬ್ಲ್ಯುಎಂಎಲ್) ಅಧಿಕಾರಿಗಳು ಹೇಳುತ್ತಿದ್ದರೂ, ಮುಖ್ಯರಸ್ತೆ, ವಾರ್ಡ್ ರಸ್ತೆಗಳಲ್ಲಿ ಕಸದ ರಾಶಿ ನಿತ್ಯವೂ ಬಿದ್ದಿರುತ್ತದೆ. ನಿಮ್ಮ ಪ್ರದೇಶಗಳಲ್ಲಿ ಇಂತಹ ಸಮಸ್ಯೆ ಇದ್ದರೆ, ಚಿತ್ರಸಹಿತ ವಿವರಗಳೊಂದಿಗೆ ಬಿಎಸ್‌ಡಬ್ಲ್ಯುಎಂಎಲ್ ಅಧಿಕಾರಿಗಳಿಗೆ ಕಳುಹಿಸಿಕೊಡಿ ಮತ್ತು ಆ ಮಾಹಿತಿಯನ್ನು 'ಪ್ರಜಾವಾಣಿ'ಗೂ ಕಳುಹಿಸಿಕೊಡಿ. ಅದನ್ನು ಪ್ರಕಟಿಸಲಾಗುತ್ತದೆ.


ಸುಲ್ತಾನ್‌ಪಾಳ್ಯದ ಜೆಎಂ ಇನ್ವೆಸ್ಟ್ ಸಿಲ್ವರ್ ಕಾರ್ನರ್ ಅಪಾರ್ಟ್‌ಮೆಂಟ್ ಬಳಿ ಕಸದ ರಾಶಿ


ಪದ್ಮನಾಭ ನಗರದ ಆರ್‌ಕೆ.ಲೇಔಟ್‌ನ 1ನೇ ಹಂತದ 6ನೇ ಕ್ರಾಸ್‌ನಲ್ಲಿ ರಸ್ತೆ ಆವರಿಸಿಕೊಂಡ ತ್ಯಾಜ್ಯ


ಚಾಮರಾಜಪೇಟೆ ವ್ಯಾಪ್ತಿಯ ಕಸ್ತೂರಬಾ ನಗರದ ಅಶ್ವಥ್ ಕಟ್ಟೆ ರಸ್ತೆಯಲ್ಲಿ ವಿಲೇವಾರಿಯಾಗದೆ ಬಿದ್ದಿರುವ ಕಸದ ರಾಶಿ



ಇಂದಿರಾನಗರದ ಎಚ್‌ಎಎಲ್ 2ನೇ ಹಂತದ 15ನೇ ಮುಖ್ಯರಸ್ತೆಯ 2ನೇ ಕ್ರಾಸ್‌ನಲ್ಲಿ ವಿಲೇವಾರಿಯಾಗದ ಕಸ


ಕಬ್ಬನ್ ಪೇಟೆಯ ಆಂಜನೇಯ ಗುಡಿ ಬೀದಿಯಲ್ಲಿ ಎಸೆದಿರುವ ಕಸದ ರಾಶಿ

ಕಂಪನಿ ಮಾಲೀಕನಂತೆ ಸೋಗು • ಕಮಿಷನ್ ರೂಪದಲ್ಲಿ ಹಣ ಪಡೆದಿದ್ದರು

₹2.66 ಕೋಟಿ ವಂಚನೆ: ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಂಪನಿ ಮಾಲೀಕನ ಸೋಗಿನಲ್ಲಿ ಕರೆ ಮಾಡಿ ಕೋಟ್ಯಂತರ ರೂಪಾಯಿ ವ್ಯವಹಾರ ಕೊಡಿಸುವುದಾಗಿ ನಂಬಿಸಿ, ವ್ಯಕ್ತಿಯಿಂದ ಕಮಿಷನ್ ರೂಪದಲ್ಲಿ ₹2.66 ಕೋಟಿ ಪಡೆದು ವಂಚಿಸಿದ್ದ ಮೂವರು ಆರೋಪಿಗಳನ್ನು ಬಾಗಲಗುಂಟೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

ವಂಚನೆಗೊಳಗಾದ ಸುಬ್ರಮಣ್ಯ ಎಂಬುವರು ನೀಡಿದ ದೂರಿನ ಮೇರೆಗೆ ಹೆಸರಘಟ್ಟದ ಆಕ್ಸಿಸ್ ಬ್ಯಾಂಕ್ ಮ್ಯಾನೇಜರ್ ವಿನೋದ್ ಕುಮಾರ್, ಈತನ ಸಹಚರರಾದ ಅರುಣ್ ಹಾಗೂ ಕಿರಣ್ ಎಂಬುವರನ್ನು ಬಂಧಿಸಿ, ವಿಚಾರಣೆ ನಡೆಸುತ್ತಿದ್ದಾರೆ.

ಸುಬ್ರಮಣ್ಯ ಅವರು ಲಾಜಿಸ್ಟಿಕ್ ಮತ್ತು ಮ್ಯಾನ್ ಪವರ್ ಸರ್ವೀಸ್ ಕಂಪನಿ ನಡೆಸುತ್ತಿದ್ದು, ಜತೆಗೆ ನೆಲಮಂಗಲದಲ್ಲಿರುವ ಸಂಬಂಧಿಯ ಹೆಸರಿನಲ್ಲಿ ಕಂಪನಿ ನಿರ್ವಹಿಸುತ್ತಿದ್ದಾರೆ. ಹಣಕಾಸು ವ್ಯವಹಾರಕ್ಕಾಗಿ ಹೆಸರಘಟ್ಟ ಶಾಖೆಯ ಆಕ್ಸಿಸ್ ಬ್ಯಾಂಕ್‌ನಲ್ಲಿ ಖಾತೆ ತೆರೆದಿದ್ದಾರೆ. ಕೆಲಸ ನಿಮಿತ್ತ ಬ್ಯಾಂಕ್‌ಗೆ ಹೋಗಿ ಬರುತ್ತಿದ್ದ ಸುಬ್ರಮಣ್ಯ ಅವರಿಗೆ ಮ್ಯಾನೇಜರ್ ವಿನೋದ್ ಪರಿಚಯವಾಗಿದೆ.

ಕಂಪನಿಯ ವ್ಯವಹಾರ ಬಗ್ಗೆ ಅರಿತಿದ್ದ ವಿನೋದ್ , ದೂರುದಾರರ ಮೊಬೈಲ್ ನಂಬರ್ ಪಡೆದುಕೊಂಡಿದ್ದರು. ಕಳೆದ ವರ್ಷ ಅಕ್ಟೋಬರ್‌ನಲ್ಲಿ ರಾಹುಲ್ ಹೆಸರಿನಲ್ಲಿ ಕರೆ ಮಾಡಿದ ವಿನೋದ್, ಲಾಜಿಸ್ಟಿಕ್ ಹಾಗೂ ಮ್ಯಾನ್ ಪವರ್ ಸೇರಿದಂತೆ ಇತರೆ ವ್ಯವಹಾರ ಮಾಡುತ್ತಿದ್ದೇನೆ. ಒಂದು ವರ್ಷದೊಳಗೆ ಸುಮಾರು ₹25 ರಿಂದ ₹30 ಕೋಟಿ ವ್ಯವಹಾರ ನೀಡುವುದಾಗಿ ನಂಬಿಸಿದ್ದಾರೆ. ಮುಂಗಡವಾಗಿ ಶೇಕಡ 10 ಕಮಿಷನ್ ಹಣ ಕೊಡುವಂತೆ ಕೇಳಿದ್ದರು ಎಂದು ದೂರಿನಲ್ಲಿ ತಿಳಿಸಲಾಗಿದೆ.

ಫೋನ್ ಕರೆಯಲ್ಲಿ ಮಾತನಾಡುವಾಗ ದೂರುದಾರರಿಗೆ ವಿನೋದ್ ಅವರ ಧ್ವನಿ ಎಂಬಂತೆ ಭಾಸವಾದರೂ ಅನುಮಾನ ಪಡದೆ 2025ರ ಫೆಬ್ರುವರಿಯಿಂದ ₹2.66 ಕೋಟಿ ಹಣವನ್ನು ಆರ್‌ಟಿಜಿಎಸ್ ಮೂಲಕ ಮಲ್ಲಿಕಾರ್ಜುನ್ ಎಂಬುವರ ಬ್ಯಾಂಕ್ ಖಾತೆಗೆ ಹಣ ವರ್ಗಾಯಿಸಿದ್ದರು. ಹಣ ನೀಡಿ ಕೆಲ ತಿಂಗಳಾದರೂ ಯಾವುದೇ ವ್ಯವಹಾರ ಕೊಟ್ಟಿರಲಿಲ್ಲ. ಈ ಬಗ್ಗೆ ಪ್ರಶ್ನಿಸಿದಾಗ ಸಬೂಬು ಹೇಳಿಕೊಂಡು ಮುಂದೂಡುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಅನುಮಾನಗೊಂಡು ಪರಿಶೀಲಿಸಿದಾಗ ರಾಹುಲ್ ಹೆಸರಿನಲ್ಲಿ ವಿನೋದ್ ಕೋಟ್ಯಂತರ ರೂಪಾಯಿ ವಂಚನೆ ಮಾಡಿರುವುದು ಗೊತ್ತಾಗಿದೆ. ಬಂಧಿತರ ವಿಚಾರಣೆ ನಡೆಸಲಾಗುತ್ತಿದೆ. ವಂಚನೆಯಲ್ಲಿ ಇನ್ನೂ ಕೆಲವರು ಭಾಗಿಯಾಗಿದ್ದು, ಬಂಧನಕ್ಕಾಗಿ ಹುಡುಕಾಟ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದ್ದಾರೆ.

ಮನೆಗೆ ನುಗ್ಗಿ ಸುಲಿಗೆ; ಇಬ್ಬರ ಸೆರೆ

ಅಪರಾಧ ಸುದ್ದಿ

ಬೆಂಗಳೂರು: ಮನೆಗೆ ನುಗ್ಗಿ ಕಬ್ಬಿಣದ ರಾಡ್‌ನಿಂದ ಹಲ್ಲೆ ಮಾಡಿ, ದುಬಾರಿ ಬೆಲೆಯ ಕಾರು, ಸ್ಕೂಟರ್, ನಾಲ್ಕು ಐಫೋನ್ ಸೇರಿದಂತೆ ಇನ್ನಿತರ ವಸ್ತುಗಳ ಜತೆಗೆ ಪರಾರಿಯಾಗಿದ್ದ ಇಬ್ಬರು ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಹಲ್ಲೆಗೊಳಗಾದ ಯಾಸೀನ್ ಅಲಿ ಎಂಬುವರು ನೀಡಿದ ದೂರಿನ ಮೇರೆಗೆ 8 ಮಂದಿ ವಿರುದ್ಧ ಪ್ರಕರಣ ದಾಖಲಿಸಿ ತನಿಖೆ ನಡೆಸಿದ ಪೊಲೀಸರು, ವಿಜಯ್ ಹಾಗೂ ಇಬ್ರಾಹಿಂ ಎಂಬುವವರನ್ನು ಬಂಧಿಸಿ ವಿಚಾರಣೆ ನಡೆಸಿದ್ದಾರೆ.

ಕೃತ್ಯದಲ್ಲಿ ಕೆ.ಜಿ.ಹಳ್ಳಿ ರೌಡಿಶೀಟರ್ ರುಬೇನ್ ಪ್ರಮುಖ ಆರೋಪಿಯಾಗಿದ್ದು, ಅಪರಾಧ ಪ್ರಕರಣವೊಂದರಲ್ಲಿ ಭಾರತಿನಗರ ಪೊಲೀಸರು ಬಂಧಿಸಿ ಜೈಲಿಗೆ ಕಳುಹಿಸಿದ್ದಾರೆ. ಸದ್ಯ ಬಾಡಿ ವಾರಂಟ್ ಮೂಲಕ ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ದೂರುದಾರ ಯಾಸೀನ್ ಇ-ಕಾಮರ್ಸ್ ಕಂಪನಿ ಅಮೆಜಾನ್ ಸೇರಿದಂತೆ ಇತರೆ ಕಂಪನಿಗಳಲ್ಲಿ ಮೊಬೈಲ್ ಸೇರಿದಂತೆ ಎಲೆಕ್ಟ್ರಾನಿಕ್ ವಸ್ತುಗಳ ಮಾರಾಟದ ಡೀಲರ್ ಆಗಿದ್ದಾರೆ. ಪತ್ನಿಯಿಂದ ದೂರವಾಗಿ ಶಾಂಪುರದಲ್ಲಿ ಪ್ರತ್ಯೇಕವಾಗಿ ವಾಸವಾಗಿದ್ದಾರೆ. ಪತ್ನಿಯ ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ಮೋಸಿನ್ ಎಂಬಾತ, ರೌಡಿಶೀಟರ್ ರುಬೇನ್‌ಗೆ ಪ್ರತ್ಯೇಕವಾಗಿ ವಾಸ ಮಾಡುತ್ತಿರುವ ವಿಚಾರ ಹೇಳಿದ್ದ. ಆತ ತನ್ನ ಸಹಚರರಾದ ವಿಜಯ್, ಇಬ್ರಾಹಿಂ, ಅರ್ಷದ್ ಜತೆ ಮನೆಗೆ ಬಂದು ಮಾರಕಾಸ್ತ್ರಗಳಿಂದ ಯಾಸೀನ್ ಮೇಲೆ ಹಲ್ಲೆ ಮಾಡಿದ್ದಾರೆ. ಮನೆಯಲ್ಲಿದ್ದ ನಾಲ್ಕು ಮೊಬೈಲ್, ಲ್ಯಾಪ್ ಟಾಪ್, ಕಾರು, ಎಲೆಕ್ಟ್ರಿಕ್ ಬೈಕ್, ವಾಚ್, ಜೇಬಿನಲ್ಲಿದ್ದ ₹80 ಸಾವಿರ ತೆಗೆದುಕೊಂಡು ಪರಾರಿಯಾಗಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

'ಘಟನೆ ಬಗ್ಗೆ ಯಾಸೀನ್ ಪರಿಚಯಸ್ಥ ಸೈಯದ್‌ಗೆ ವಿಷಯ ತಿಳಿಸಿದ್ದಾರೆ. ಈತ ರುಬೇನ್‌ನೊಂದಿಗೆ ಮಾತುಕತೆ ನಡೆಸಿ, ಸುಲಿಗೆ ಮಾಡಿದ್ದ ವಸ್ತುಗಳನ್ನು ವಾಪಸ್ ಕೊಡಿಸುವುದಾಗಿ ನಂಬಿಸಿದ್ದ. ಜೂನ್ 5ರ ರಾತ್ರಿ ತನ್ನ ಸಹಚರರಾದ ಶಕೀಲ್ ಹಾಗೂ ಮೆಹಬೂಬ್ ಜತೆ ರುಬೇನ್ ಮನೆಗೆ ಹೋಗಿ ಮಾತುಕತೆ ನಡೆಸಿದ್ದರು. ಬಳಿಕ ಆರೋಪಿಗಳು ಯಾಸೀನ್ ಮನೆಗೆ ಬಂದು ಡ್ರಗ್ಸ್ ತಯಾರಿಸುತ್ತೀಯಾ ಎಂದು ನಿಂದಿಸಿ, ಹಲ್ಲೆ ಮಾಡಿದ್ದಾರೆ. ಮೊಬೈಲ್ ಕಸಿದು ಆನ್‌ಲೈನ್ ಮೂಲಕ ₹56 ಸಾವಿರ ವರ್ಗಾವಣೆ ಮಾಡಿಸಿ ಕೊಂಡು ಪರಾರಿಯಾಗಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

ಕಾಣೆಯಾಗಿದ್ದ ನಾಯಿ 'ಚಿನ್ನು' ಪತ್ತೆ

ಪುತ್ತೂರು: ಕಬಕ ಸಮೀಪದ ಪೋಳ್ಯ ನಿವಾಸಿ ಗಣೇಶ್ ಕೇರ ಅವರ ಮನೆಯ ನಾಪತ್ತೆಯಾಗಿದ್ದ 'ಚಿನ್ನು' ಹೆಸರಿನ ದೇಸಿ ತಳಿಯ ನಾಯಿ ಪತ್ತೆಯಾಗಿದೆ. ಪೋಳ್ಯದ ಪುರಂದರ ಎಂಬವರು ನಾಯಿಯನ್ನು ಹುಡುಕಿಕೊಟ್ಟಿದ್ದು, ಕೊಟ್ಟ ಮಾತಿನಂತೆ ಅವರಿಗೆ ₹ 50 ಸಾವಿರ ಬಹುಮಾನ ನೀಡುವುದಾಗಿ ನಾಯಿಯ ಮಾಲೀಕರು ತಿಳಿಸಿದ್ದಾರೆ. ಗಣೇಶ್ ಕೇರ ಅವರು ಮನೆಯಲ್ಲಿ ವಿವಿಧ ತಳಿಗಳ 30 ನಾಯಿಗಳನ್ನು ಸಾಕುತ್ತಿದ್ದಾರೆ. 'ಚಿನ್ನು' ಫಿಟ್ಸ್‌ನಿಂದಾಗಿ ಕಾಲಿನ ಸ್ವಾಧೀನ ಕಳೆದುಕೊಂಡಿತ್ತು. ಮೂರು ವಾರಗಳ ಹಿಂದೆ ಅದು ಕಾಣೆಯಾಗಿತ್ತು.

4 ರಾಜ್ಯದಲ್ಲಿ ಮತದಾರರ ಗುರುತಿನ ಚೀಟಿ ಹೊಂದಿರುವ ಆರೋಪ

ಪ್ರಕಾಶ್ ರಾಜ್‌ಗೆ ಜಾಮೀನು ರಹಿತ ವಾರಂಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಂದಕ್ಕಿಂತ ಹೆಚ್ಚು ರಾಜ್ಯಗಳಲ್ಲಿ ಮತದಾರರ ಗುರುತಿನ ಚೀಟಿ ಹೊಂದಿದ್ದಾರೆ ಎಂಬ ಆರೋಪ ಸಂಬಂಧ ನಗರದ 48ನೇ ಎಸಿಜೆಎಂ ನ್ಯಾಯಾಲಯವು ನಟ ಪ್ರಕಾಶ್‌ರಾಜ್ ವಿರುದ್ಧ ಜಾಮೀನು ರಹಿತ ವಾರಂಟ್ ಜಾರಿ ಮಾಡಿದ್ದು, ಬಂಧನ ಭೀತಿ ಎದುರಾಗಿದೆ.

ಪ್ರಕಾಶ್ ರಾಜ್ ಅವರು ಕರ್ನಾಟಕ, ತಮಿಳುನಾಡು, ತೆಲಂಗಾಣ ಸೇರಿದಂತೆ 4 ರಾಜ್ಯಗಳಲ್ಲಿ ಮತದಾರರ ಗುರುತಿನ ಚೀಟಿ ಹೊಂದಿದ್ದಾರೆ ಎಂದು ಆರೋಪಿಸಿ ವಕೀಲ ದಿಲೀಪ್ ಕುಮಾರ್ ಎಂಬುವರು 2019ರಲ್ಲಿ ಹಲಸೂರು ಗೇಟ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು.

ಆದರೆ, ಪೊಲೀಸರು ಯಾವುದೇ ಕ್ರಮ ಕೈಗೊಂಡಿರಲಿಲ್ಲ. ಹೀಗಾಗಿ, ದಿಲೀಪ್ ಕುಮಾರ್ ಅವರು ಬೆಂಗಳೂರು ನಗರ ಪೊಲೀಸ್ ಕಮಿಷನರ್ ಹಾಗೂ ಕೇಂದ್ರ ಚುನಾವಣಾ ಆಯೋಗಕ್ಕೆ ದೂರು ಕೊಟ್ಟಿದ್ದರು. ಅಲ್ಲಿ ಕ್ರಮ ತೆಗೆದುಕೊಳ್ಳದ ಕಾರಣ, ನ್ಯಾಯಾಲಯದ ಮೆಟ್ಟಿಲೇರಿದ್ದರು. ಕೇಂದ್ರದ ಚುನಾವಣಾ ನಿಯಮಗಳ ಪ್ರಕಾರ, ಒಬ್ಬ ನಾಗರಿಕ ದೇಶದ ಯಾವುದೇ ಒಂದು ಕಡೆಯಲ್ಲಿ ಮಾತ್ರ ಮತದಾರರ ಗುರುತಿನ ಚೀಟಿ ಹೊಂದಲು ಅವಕಾಶವಿದೆ. ಆದರೆ, ಪ್ರಕಾಶ್ ರಾಜ್ ಅವರು ಚುನಾವಣಾ ನಿಯಮಗಳನ್ನು ಗಾಳಿಗೆ ತೂರಿ ದಕ್ಷಿಣ ಭಾರತದ 4 ಪ್ರಮುಖ ರಾಜ್ಯಗಳಲ್ಲಿ ಮತದಾರರ ಗುರುತಿನ ಚೀಟಿ ಹೊಂದಿದ್ದಾರೆ. ಇದು ಕಾನೂನಿನ ಪ್ರಕಾರ ಗಂಭೀರ ಅಪರಾಧವಾಗಿದೆ ಎಂದು ದಿಲೀಪ್ ಕುಮಾರ್ ಆರೋಪಿಸಿದ್ದರು.

ದೂರಿನ ಸಂಬಂಧ ವಿಚಾರಣೆಗೆ ಹಾಜರಾಗುವಂತೆ ಕೋರ್ಟ್, ಪ್ರಕಾಶ್ ರಾಜ್ ಅವರಿಗೆ ಎರಡು ಬಾರಿ ಸಮನ್ಸ್ ಹೊರಡಿಸಿತ್ತು. ಆದರೆ, ಅವರು ಎರಡು ಬಾರಿಯೂ ವಿಚಾರಣೆಗೆ ಗೈರಾಗಿದ್ದರು. ನ್ಯಾಯಾಲಯದ ಆದೇಶವನ್ನು ಪದೇ ಪದೇ ಧಿಕ್ಕರಿಸಿ ವಿಚಾರಣೆಗೆ ಗೈರಾದ ಅವರ ವರ್ತನೆಯನ್ನು ಗಂಭೀರವಾಗಿ ಪರಿಗಣಿಸಿದ ಕೋರ್ಟ್ ಇದೀಗ ಅವರ ವಿರುದ್ಧ ಜಾಮೀನು ರಹಿತ ಬಂಧನದ ವಾರಂಟ್ ಹೊರಡಿಸಿದೆ.

ಕಾನ್‌ಸ್ಟೆಬಲ್ ಪತ್ನಿ ಸಾವು, ಕೊಲೆ ಶಂಕೆ

ಹರಪನಹಳ್ಳಿ (ವಿಜಯನಗರ ಜಿಲ್ಲೆ): ತಾಲ್ಲೂಕಿನ ಗುಳೇದಹಟ್ಟಿ ತಾಂಡಾದಲ್ಲಿ ನವವಿವಾಹಿತೆ ಕೌಶಲ್ಯ (25) ಅವರ ಮೃತದೇಹ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾದ ಪ್ರಕರಣ ಹೊಸ ತಿರುವು ಪಡೆದುಕೊಂಡಿದ್ದು, 'ನನ್ನ ಕಣ್ಣೆದುರೇ ಮಗಳ ಮೇಲೆ ಹಲ್ಲೆ ಮಾಡಿ ನೇಣು ಹಾಕಲಾಗಿದೆ' ಎಂದು ಆರೋಪಿಸಿ ತಾಯಿ ಜಯಬಾಯಿ ಅರಸೀಕೆರೆ ಠಾಣೆಗೆ ಶನಿವಾರ ದೂರು ನೀಡಿದ್ದಾರೆ.

ಬೆಂಗಳೂರು ಕೋಣನಕುಂಟೆ ಪೊಲೀಸ್ ಠಾಣೆಯ ಕಾನ್‌ಸ್ಟೆಬಲ್ ಶಿವಕುಮಾರ್ ನಾಯ್ಕ್ (ಪತಿ), ಸಚಿನ್ (ಮೈದುನ), ಸಕ್ರ್ಯಾನಾಯ್ಕ (ಮಾವ), ಶಾರದಾಬಾಯಿ (ಅತ್ತೆ) ಅವರಿಂದ ಈ ಕೃತ್ಯ ನಡೆದಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ಸದ್ಯ ಆರೋಪಿಗಳೆಲ್ಲ ತಲೆಮರೆಸಿಕೊಂಡಿದ್ದಾರೆ.

ಘಟನೆ ವಿವರ: ಕಳೆದ ಮಾರ್ಚ್ 15ರಂದು ಕೌಶಲ್ಯ–ಶಿವಕುಮಾರ್ ಮದುವೆ ನಡೆದಿತ್ತು. ಆಗ 13 ತೊಲೆ ಚಿನ್ನ ಹಾಗೂ ₹3.50 ಲಕ್ಷ ನಗದನ್ನು ವರದಕ್ಷಿಣೆ ರೂಪದಲ್ಲಿ ನೀಡಲಾಗಿತ್ತು. ಆರಂಭದಲ್ಲಿ ದಂಪತಿ ಚೆನ್ನಾಗಿದ್ದರು. ಈಚೆಗೆ ಹೆಂಡತಿಯನ್ನು ಬೆಂಗಳೂರಿನಿಂದ ಕರೆತಂದು ಗುಳೇದಹಟ್ಟಿ ತಾಂಡಾದಲ್ಲಿ ಬಿಟ್ಟಿದ್ದ ಶಿವಕುಮಾರ್, ಬಳಿಕ ಕುಟುಂಬದ ಸದಸ್ಯರೊಂದಿಗೆ ಸೇರಿ ಹೆಚ್ಚಿನ ವರದಕ್ಷಿಣೆಗೆ ಪೀಡಿಸುತ್ತಿದ್ದರು ಹಾಗೂ ಶೀಲ ಶಂಕಿಸಿ ದೈಹಿಕ, ಮಾನಸಿಕ ಕಿರುಕುಳ ನೀಡಿದ್ದರು ಎಂದು ದೂರಿನಲ್ಲಿ ತಿಳಿಸಲಾಗಿದೆ.


ಕೌಶಲ್ಯ


ಶಿವಕುಮಾರ್

'ಜೂನ್ 19ರಂದು ರಜೆಯ ಮೇಲೆ ಬೆಂಗಳೂರಿನಿಂದ ಬಂದಿದ್ದ ಶಿವಕುಮಾರ್ ಕೌಶಲ್ಯಳಿಗೆ ಕೊಲೆ ಬೆದರಿಕೆ ಹಾಕಿದ್ದ. ಜೂನ್ 20ರಂದು ಬೆಳಿಗ್ಗೆ 10.38ರ ಸುಮಾರಿಗೆ ಕೌಶಲ್ಯ ನನಗೆ ಫೋನ್ ಮಾಡಿ, ಪತಿ ಮತ್ತು ಆತನ ಮನೆಯವರು ನನ್ನ ಶೀಲ ಶಂಕಿಸಿ ತೀವ್ರವಾಗಿ ಹೊಡೆಯುತ್ತಿದ್ದಾರೆ ಎಂದು ಹೇಳಿದ್ದಳು. ಮಗಳ ಆಕ್ರಂದನ ಕೇಳಿ ಗಾಬರಿಯಾಗಿ ನಾನು ಗುಳೇದಹಟ್ಟಿ ತಾಂಡಾಕ್ಕೆ ಧಾವಿಸಿದೆ. ಮಧ್ಯಾಹ್ನ 12.30ರ ಸುಮಾರಿಗೆ ಮಗಳ ಮನೆಗೆ ತಲುಪಿದೆ. ಶಿವಕುಮಾರ್ ಸೇರಿ ಇಡೀ ಕುಟುಂಬಸ್ಥರು ಮಗಳನ್ನು ನೇಣು ಬಿಗಿದು ಕೊಲೆ ಮಾಡುತ್ತಿರುವ ದೃಶ್ಯ ಕಣ್ಣಾರೆ ಕಂಡೆ' ಎಂದು ಜಯಬಾಯಿ ದೂರಿನಲ್ಲಿ ತಿಳಿಸಿದ್ದಾರೆ.

'ದೂರಿನ ಸತ್ಯಾಸತ್ಯತೆ ಬಗ್ಗೆ ಪರಿಶೀಲಿಸಲಾಗುತ್ತಿದೆ, ಸದ್ಯ ಯಾರನ್ನೂ ವಶಕ್ಕೆ ಪಡೆದಿಲ್ಲ' ಎಂದು ಡಿವೈಎಸ್‌ಪಿ ಸಂತೋಷ್ ಚೌವ್ಹಾಣ್ ತಿಳಿಸಿದ್ದಾರೆ.

ಮಹಿಳೆಗೆ ಬೆದರಿಕೆ ₹1.25 ಲಕ್ಷ ಸುಲಿಗೆ

ಬೆಂಗಳೂರು: ಸಾಮೂಹಿಕ ಅತ್ಯಾಚಾರ ಪ್ರಕರಣದಲ್ಲಿ ಮಗನನ್ನು ಬಂಧಿಸಲಾಗಿದೆ ಎಂದು ಮಹಿಳೆಗೆ ಬೆದರಿಸಿದ ಸೈಬರ್ ವಂಚಕರು, ₹1.25 ಲಕ್ಷ ಸುಲಿಗೆ ಮಾಡಿರುವ ಘಟನೆ ನಡೆದಿದೆ.

46 ವರ್ಷದ ಮಹಿಳೆ ನೀಡಿರುವ ದೂರಿನನ್ವಯ ಎಚ್‌ಎಎಲ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಂಡಿದ್ದಾರೆ.

'ಜೂನ್ 18ರಂದು ಪೊಲೀಸ್ ಅಧಿಕಾರಿ ಸೋಗಿನಲ್ಲಿ ಕರೆ ಮಾಡಿದ ವಂಚಕ, 'ನಿಮ್ಮ ಮಗನನ್ನು ಅತ್ಯಾಚಾರ ಪ್ರಕರಣದಲ್ಲಿ ಬಂಧಿಸಿದ್ದು, ಪ್ರಕರಣ ರದ್ದುಪಡಿಸಿ ಮಗ ಮತ್ತು ಆತನ ಬೈಕ್ ಬಿಡುಗಡೆ ಮಾಡಲು ಹಣ ನೀಡ ಬೇಕು' ಎಂದು ಒತ್ತಾಯಿಸಿದ್ದಾರೆ. ಅಲ್ಲದೆ, ಮತ್ತೊಬ್ಬ ವ್ಯಕ್ತಿ, ದೂರುದಾರ ಮಹಿಳೆ ಮಗನ ಧ್ವನಿಯಲ್ಲೇ ಮಾತನಾಡಿದ್ದ.

ಈಡಿಗ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸ್ಪರ್ಧಾತ್ಮಕ ಯುಗದಲ್ಲಿ ಯಾವುದೇ ಕ್ಷೇತ್ರದಲ್ಲಿ ಉನ್ನತ ಸ್ಥಾನ ಹೊಂದಬೇಕಾದರೂ ಶ್ರದ್ಧೆ, ಏಕಾಗ್ರತೆ ಮತ್ತು ದೃಢತೆಯಿಂದ ಕಾರ್ಯಪ್ರವೃತರಾಗಬೇಕು' ಎಂದು ಕೇಂದ್ರ ನಗರ ಪಾಲಿಕೆ ಆಯುಕ್ತ ಜಿ.ಜಗದೀಶ್ ಅವರು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಬೆಂಗಳೂರು ಈಡಿಗರ ವಿದ್ಯಾರ್ಥಿ ನಿಲಯದ ಹಳೆ ವಿದ್ಯಾರ್ಥಿಗಳ ಸಂಘವು ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ, 2025–26ನೇ ಸಾಲಿನ ಸಮುದಾಯದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ವಿತರಿಸಿ ಅವರು ಮಾತನಾಡಿದರು.

'ವಿದ್ಯಾರ್ಥಿಗಳು ಪದವಿ ಜತೆಗೆ ವೃತ್ತಿ ಜೀವನಕ್ಕೆ ಪೂರಕವಾಗುವ ತಾಂತ್ರಿಕ ತರಬೇತಿ ಪಡೆದು, ಉದ್ಯೋಗಾವಕಾಶಗಳಿಗೆ ತೆರೆದುಕೊಳ್ಳುವುದು ಅತ್ಯಗತ್ಯ. ಈಡಿಗ ಸಮುದಾಯದಲ್ಲಿ ಐಎಎಸ್ ಅಧಿಕಾರಿಗಳ ಸಂಖ್ಯೆ ಕಡಿಮೆ ಯಿದ್ದು, ಮುಂದಿನ ದಿನಗಳಲ್ಲಿ ಈ ಸಮುದಾಯದಿಂದ ಹೆಚ್ಚಿನ ಸಂಖ್ಯೆಯಲ್ಲಿ ಅಧಿಕಾರಿಗಳು ಬರುವಂತಾಗಬೇಕು. ಮುಂದಿನ ವರ್ಷದಿಂದ ಮೂವತ್ತು ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರವನ್ನು ನನ್ನ ಕೈಯಿಂದ ಭರಿಸಲಾಗುವುದು' ಎಂದರು.


ಕಾರ್ಯಕ್ರಮದಲ್ಲಿ ಜಿ.ಜಗದೀಶ್ ಅವರು ವಿದ್ಯಾರ್ಥಿ ವೇತನ ವಿತರಿಸಿದರು. ಎಂ.ನಾಗರಾಜ್, ಟಿ.ಎಲ್. ಹನುಮಂತರಾಯ, ಎಸ್.ಎಚ್. ಪದ್ಮಾ ರವೀಂದ್ರ ಉಪಸ್ಥಿತರಿದ್ದರು

ಸಂಘದ ಅಧ್ಯಕ್ಷ ಎಂ.ನಾಗರಾಜ್, '2025-26ನೇ ಸಾಲಿಗೆ ವಿದ್ಯಾರ್ಥಿ ವೇತನಕ್ಕೆ ಒಟ್ಟು 343 ಮಂದಿ ಅರ್ಜಿ ಸಲ್ಲಿಸಿದ್ದರು. 141 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುತ್ತಿದೆ. ಒಟ್ಟು ₹ 7 ಲಕ್ಷ ಖರ್ಚು ಮಾಡಲಾಗುತ್ತಿದೆ' ಎಂದು ಮಾಹಿತಿ ನೀಡಿದರು.

ಇದೇ ವೇಳೆ ಸಂಘದ ಹಿರಿಯ ಸದಸ್ಯರಿಗೆ ಸನ್ಮಾನ ಮಾಡಲಾಯಿತು. ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘದ ಉಪಾಧ್ಯಕ್ಷ ಎಸ್.ಎಚ್. ಪದ್ಮಾರವೀಂದ್ರ, ಹಳೆ ವಿದ್ಯಾರ್ಥಿಗಳ ಸಂಘದ ಉಪಾಧ್ಯಕ್ಷ ನಾಗಪ್ಪ, ಕಾರ್ಯದರ್ಶಿ ಟಿ.ಎಲ್. ಹನುಮಂತರಾಯ, ಕೆ.ಎ.ರಾಮಕೃಷ್ಣ ಮೂರ್ತಿ, ಇ.ವಿ.ಸತ್ಯನಾರಾಯಣ, ಕೆ.ಎನ್. ಮುದ್ದುಕೃಷ್ಣಯ್ಯ, ರಾಜೇಶ್ ಉಪಸ್ಥಿತರಿದ್ದರು.


ಪದಗ್ರಹಣ ಸಮಾರಂಭದಲ್ಲಿ ಪಾಲ್ಗೊಂಡಿದ್ದ ಬೊಮ್ಮನಹಳ್ಳಿಯ ಕಾಂಗ್ರೆಸ್ ಕಾರ್ಯಕರ್ತರು

ಬೊಮ್ಮನಹಳ್ಳಿ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರಿಂದ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೊಮ್ಮನಹಳ್ಳಿ: ಕೆಪಿಸಿಸಿ ನೂತನ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಅವರ ಪದಗ್ರಹಣ ಸಮಾರಂಭಕ್ಕೆ ಬೊಮ್ಮನಹಳ್ಳಿಯಿಂದ ಬಸ್‌ಗಳಲ್ಲಿ ತೆರಳಿದ್ದ ಕಾಂಗ್ರೆಸ್ ಕಾರ್ಯಕರ್ತರು, ಅರಮನೆ ಮೈದಾನದಲ್ಲಿ ಘೋಷಣೆಗಳನ್ನು ಕೂಗುತ್ತಾ ಸಂಭ್ರಮಿಸಿದರು.

'ಬಿ.ಕೆ. ಹರಿಪ್ರಸಾದ್ ಅವರು ಈ ಹಿಂದೆ ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿದ್ದರು. ಅಂದಿನಿಂದ ಬೊಮ್ಮನಹಳ್ಳಿ ಕ್ಷೇತ್ರದ ಜತೆಗೆ ಅವರ ಒಡನಾಟವಿದೆ. ಅವರ ಮಾರ್ಗದರ್ಶನದಲ್ಲೇ ನಾವು ಪಕ್ಷ ಸಂಘಟನೆ ಮಾಡುತ್ತಿದ್ದೇವೆ. ಅವರು ಈಗ ಕೆಪಿಸಿಸಿ ಅಧ್ಯಕ್ಷರಾಗಿರುವುದು ಇಲ್ಲಿನ ಕಾರ್ಯಕರ್ತರಿಗೆ ಮತ್ತಷ್ಟು ಹುಮ್ಮಸ್ಸು ತಂದಿದೆ' ಎಂದು ಬೊಮ್ಮನಹಳ್ಳಿಯ ಕಾಂಗ್ರೆಸ್ ಮುಖಂಡ ಟಿ. ವಾಸುದೇವರೆಡ್ಡಿ ಹೇಳಿದರು. ಸ್ಥಳೀಯ ಕಾಂಗ್ರೆಸ್ ಮುಖಂಡರಾದ ಕೂಡ್ಲುಗೇಟ್ ರವೀಂದ್ರ, ಕೆ. ವಾಸುದೇವ ರೆಡ್ಡಿ, ಸಯ್ಯದ್ ಸರ್ದಾರ್, ಬಾಲಕೃಷ್ಣ ರೆಡ್ಡಿ, ಶ್ರೀನಿವಾಸ್, ಅಶ್ವಥ್ ನಾರಾಯಣ, ಯುವ ಮುಖಂಡ ಅನಿಲ್ ರೆಡ್ಡಿ ಪಾಲ್ಗೊಂಡಿದ್ದರು.

ಪಕ್ಷದ ಬಾವುಟ ನೀಡಿ ಬರಮಾಡಿಕೊಂಡ ರಾಜ್ಯ ಘಟಕದ ಅಧ್ಯಕ್ಷ ಎಚ್‌.ಡಿ. ಕುಮಾರಸ್ವಾಮಿ

ಜೆಡಿಎಸ್‌ಗೆ ಮರಳಿದ ಅಖಂಡ ಶ್ರೀನಿವಾಸಮೂರ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಮತ್ತು ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ಸಮ್ಮುಖದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪುಲಕೇಶಿ ನಗರದ ಮಾಜಿ ಶಾಸಕ ಅಖಂಡ ಶ್ರೀನಿವಾಸಮೂರ್ತಿ ಅವರು ಜೆಡಿಎಸ್‌ಗೆ ಮರಳಿದರು.


ನಗರದ ಪಿಳ್ಳಣ್ಣ ಗಾರ್ಡನ್‌ನ ಫುಟ್‌ಬಾಲ್ ಮೈದಾನದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಶ್ರೀನಿವಾಸಮೂರ್ತಿ ಮತ್ತು ಅವರ ಕುಟುಂಬದವರು ಭಾಗಿಯಾಗಿದ್ದರು. ಶ್ರೀನಿವಾಸಮೂರ್ತಿ ಮತ್ತು ಅವರ ಬೆಂಬಲಿಗರು ಜೆಡಿಎಸ್ ಬಾವುಟವನ್ನು ಹಿಡಿದು ಪಕ್ಷ ಸೇರಿದರು.

ಪಕ್ಷ ಸೇರ್ಪಡೆಯ ನಂತರ ಮಾತನಾಡಿದ ಶ್ರೀನಿವಾಸಮೂರ್ತಿ, 'ಕುಮಾರಸ್ವಾಮಿ ಅವರನ್ನು ಮುಖ್ಯಮಂತ್ರಿ ಮಾಡುವುದೇ ನನ್ನ ಗುರಿ. ಅವರ ಮಾರ್ಗದರ್ಶನದಲ್ಲಿ ಪಕ್ಷವನ್ನು ಸಂಘಟಿಸುತ್ತೇನೆ' ಎಂದರು.

2013ರಲ್ಲಿ ಜೆಡಿಎಸ್ ಟಿಕೆಟ್‌ನಿಂದ ಪುಲಕೇಶಿ ನಗರದ ವಿಧಾನಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಿ, ವಿಧಾನಸಭೆ ಪ್ರವೇಶಿಸಿದ್ದರು. ನಂತರ 2018ರಲ್ಲಿ ಕಾಂಗ್ರೆಸ್ ಟಿಕೆಟ್‌ನಿಂದ ಸ್ಪರ್ಧಿಸಿ ಮತ್ತೊಮ್ಮೆ ಶಾಸಕರಾಗಿದ್ದರು. 2020ರಲ್ಲಿ ನಡೆದಿದ್ದ ಡಿ.ಜೆ.ಹಳ್ಳಿ ಗಲಭೆ ಪ್ರಕರಣದ ಕಾರಣ 2023ರ ಚುನಾವಣೆಯಲ್ಲಿ ಅವರಿಗೆ ಪ್ರಮುಖ ಪಕ್ಷಗಳ ಟಿಕೆಟ್ ಕೈತಪ್ಪಿತು. ಬಿಎಸ್‌ಪಿ ಅಭ್ಯರ್ಥಿಯಾಗಿ ಕಣಕ್ಕೆ ಇಳಿದು ಸೋತಿದ್ದರು. ನಂತರ ಬಿಜೆಪಿ ಸೇರಿದ್ದರು. 2024ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗಳ ಪರ ಪ್ರಚಾರ ನಡೆಸಿದ್ದರು.

ಕುಮಾರಸ್ವಾಮಿ ಅವರು ಈಚೆಗೆ ಅಖಂಡ ಶ್ರೀನಿವಾಸಮೂರ್ತಿ ಅವರನ್ನು ಭೇಟಿ ಮಾಡಿ, ಮಾತುಕತೆ ನಡೆಸಿದ್ದರು. ಅವರು ಜೆಡಿಎಸ್‌ಗೆ ಮರಳುವುದು ಖಚಿತವಾಗಿತ್ತು.

2028ರ ಚುನಾವಣೆಯಲ್ಲಿ ನೆಲಮಂಗಲ ಅಥವಾ ಪುಲಕೇಶಿನಗರ ವಿಧಾನಸಭಾ ಕ್ಷೇತ್ರದಿಂದ ಟಿಕೆಟ್ ನೀಡುವಂತೆ ಅವರು ಕೇಳಿದ್ದಾರೆ. ಆದರೆ ಪಕ್ಷವು ಯಾವುದೇ ತೀರ್ಮಾನ ತೆಗೆದುಕೊಂಡಿಲ್ಲ. ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಪಾಲಿಕೆಗಳ ಚುನಾವಣೆಯಲ್ಲಿ ಅವರು ಪಕ್ಷದ ಬಲವನ್ನು ಹೆಚ್ಚಿಸಲಿದ್ದಾರೆ ಎಂದು ಜೆಡಿಎಸ್ ನಾಯಕರೊಬ್ಬರು ತಿಳಿಸಿದರು.


ನಗರದ ಪಿಳ್ಳಣ್ಣ ಗಾರ್ಡನ್‌ನ ಫುಟ್‌ಬಾಲ್ ಮೈದಾನದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಎಚ್‌.ಡಿ. ಕುಮಾರಸ್ವಾಮಿ ಅವರು, ಅಖಂಡ ಶ್ರೀನಿವಾಸಮೂರ್ತಿ ಅವರಿಗೆ ಜೆಡಿಎಸ್ ಧ್ವಜ ನೀಡಿ ಪಕ್ಷಕ್ಕೆ ಬರಮಾಡಿಕೊಂಡರು

'ಜನಪರ ಆಡಳಿತ ತರುವುದೇ ಗುರಿ'

'ರಾಜ್ಯದಲ್ಲಿನ ಭ್ರಷ್ಟ ಕಾಂಗ್ರೆಸ್ ಸರ್ಕಾರವನ್ನು ಕಿತ್ತೊಗೆದು, ಜನಪರ ಆಡಳಿತ ತರುವುದೇ ನನ್ನ ಗುರಿ' ಎಂದು ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ಹೇಳಿದರು.

ಕಾರ್ಯಕ್ರಮದಲ್ಲಿ ಅಖಂಡ ಶ್ರೀನಿವಾಸಮೂರ್ತಿ ಅವರನ್ನು ಪಕ್ಷಕ್ಕೆ ಬರಮಾಡಿಕೊಂಡ ನಂತರ ಕುಮಾರಸ್ವಾಮಿ ಅವರು ಸುದ್ದಿಗಾರರ ಜತೆ ಮಾತನಾಡಿದರು.

'ಕಾಂಗ್ರೆಸ್ ಪಕ್ಷದ ಕೆಟ್ಟ ಆಡಳಿತದ ಕಾರಣಕ್ಕೆ ಹೊರ ಜಗತ್ತಿನಲ್ಲಿ ರಾಜ್ಯದ ಬಗ್ಗೆ ಇದ್ದ ಒಳ್ಳೆಯ ಅಭಿಪ್ರಾಯಕ್ಕೆ ಧಕ್ಕೆಯಾಗಿದೆ. ಅದನ್ನು ಸರಿಪಡಿಸುವ ಕೆಲಸ ಆಗಬೇಕಿದೆ. ರಾಜ್ಯದ ಗೌರವ ಮತ್ತು ಪ್ರತಿಷ್ಠೆಯನ್ನು ಮರಳಿ ತರಬೇಕಿದೆ. ಇದೇ ನನ್ನ ಆದ್ಯತೆ' ಎಂದರು.

ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಆಗಲಿ ಎಂಬ ಅಖಂಡ ಶ್ರೀನಿವಾಸಮೂರ್ತಿ ಅವರ ಹೇಳಿಕೆ ಬಗ್ಗೆ ಪ್ರಶ್ನಿಸಿದಾಗ, 'ಅವರು ಪ್ರೀತಿ ವಿಶ್ವಾಸದಿಂದ ಆ ಮಾತು ಹೇಳಿರಬಹುದು. ಆದರೆ, ಯಾರು ಮುಖ್ಯಮಂತ್ರಿ ಆಗಬೇಕು ಎಂಬುದನ್ನು ರಾಜ್ಯ ಜನ ಮತ್ತು ದೇವರು ನಿರ್ಧರಿಸುತ್ತಾರೆ' ಎಂದರು.

ಕಾಂಗ್ರೆಸ್ ಶಾಸಕ ಜಮೀರ್ ಅಹಮದ್ ಖಾನ್ ಅವರು ಜೆಡಿಎಸ್‌ಗೆ ಮರಳುತ್ತಾರೆ ಎಂಬ ಸುದ್ದಿ ಇದೆಯಲ್ಲಾ ಎಂದು ಪ್ರಶ್ನಿಸಿದಾಗ, 'ಈ ಬಗ್ಗೆ ನಾನು ಏನೂ ಹೇಳಲಾರೆ. ಯಾವ ಪಕ್ಷ ಅಧಿಕಾರಕ್ಕೆ ಬರಬೇಕು ಎಂಬುದನ್ನು ಜನರು ತೀರ್ಮಾನಿಸುತ್ತಾರೆ. ತಮಿಳುನಾಡಿನಲ್ಲಿ ವಿಜಯ್ ಅಧಿಕಾರಕ್ಕೆ ಬರುತ್ತಾರೆ ಎಂಬ ನಿರೀಕ್ಷೆ ಇತ್ತೇ? ಬೇರೆ ವಿಚಾರ ಬದಿಗೊತ್ತಿ, ರಾಜ್ಯ ಸರ್ಕಾರದ ದುರಾಡಳಿತ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಕೆಲಸ ಮಾಡಬೇಕು' ಎಂದರು.

'ಆಣೆಯಿಂದ ಸಮಸ್ಯೆ ಬಗೆಹರಿಯದು'

ಬೆಂಗಳೂರು: 'ಆಣೆ–ಪ್ರಮಾಣದಿಂದ ನಮ್ಮ ಪಕ್ಷದಲ್ಲಿನ ಸಮಸ್ಯೆ ಬಗೆಹರಿಯುವುದಿಲ್ಲ. ಹೀಗಾಗಿ ನಾನು ಆಣೆ ಮಾಡಿಸಲ್ಲ. ಸೂಕ್ತ ಸಮಯದಲ್ಲಿ ಕ್ರಮ ತೆಗೆದುಕೊಳ್ಳುತ್ತೇನೆ' ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಮತ್ತು ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಅಡ್ಡ ಮತದಾನ ತುಂಬಾ ಬೇಸರದ ವಿಷಯ. ಧರ್ಮಸ್ಥಳದಲ್ಲಿ ಆಣೆ ಮಾಡಿಸಿದರೆ, ಅಡ್ಡ ಮತದಾನ ಮಾಡಿದವರು ಯಾರು ಬಯಲಾಗಬಹುದು ಎಂಬುದು ಬಿಜೆಪಿ ಅವರ ನಂಬಿಕೆ. ಹೀಗಾಗಿ ಧರ್ಮಸ್ಥಳದಲ್ಲಿ ಶಾಸಕಾಂಗ ಪಕ್ಷದ ಸಭೆ ಕರೆದಿರಬಹುದು' ಎಂದರು.

'ವಿಧಾನ ಪರಿಷತ್ತಿನ ಚುನಾವಣೆಯ ನಂತರ ನಾನು ನಮ್ಮ ಪಕ್ಷದ ಶಾಸಕರ ಜತೆಗೆ ಸಭೆ ನಡೆಸಿದೆ. 18 ಶಾಸಕರ ಪೈಕಿ 17 ಮಂದಿ ಭಾಗಿಯಾಗಿದ್ದರು. ತಮ್ಮ ಅಭಿವೃದ್ಧಿಗಾಗಿ ಮತ ಹಾಕಿದ್ದೇವೆ ಎಂದು ಹೇಳಿದರು. ಮುಂದಿನ ದಿನಗಳಲ್ಲಿ ಇವನ್ನೆಲ್ಲಾ ಬಿಡಬೇಕು ಎಂದು ಹೇಳಿದ್ದೇನೆ' ಎಂದರು.



ಮಂಗಳೂರಿನ ಸೇಂಟ್ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ಕ್ಯಾಂಪಸ್
ಚಿತ್ರ: ಫಕ್ರುದ್ದೀನ್ ಎಚ್.

ಕನ್ನಡ ಭಾಷೆಯ ಅಧ್ಯಯನಕ್ಕೆ ಉದ್ಯೋಗಾವಕಾಶ ಸೀಮಿತ ಎಂಬ ಮಾತಿಗೆ ಇನ್ನು ಜಾಗವಿಲ್ಲ. ಡಿಜಿಟಲ್ ಸ್ಪರ್ಶದೊಂದಿಗೆ ಕೌಶಲಕ್ಕೆ ಒತ್ತು ನೀಡಿ, ಕನ್ನಡವನ್ನು ವೃತ್ತಿ ಬದುಕಿನೊಂದಿಗೆ ಬೆಸೆಯಲಿದೆ, ಮಂಗಳೂರಿನ ಸೇಂಟ್ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದಲ್ಲಿ ಆರಂಭವಾಗಲಿರುವ 'ಕನ್ನಡ ಎಂ.ಎ. ಪ್ರೊಫೆಷನಲ್' ಕೋರ್ಸ್.

ಕನ್ನಡ ಅಧ್ಯಯನಕ್ಕೆ ಹೊಸ ಮೆರುಗು

ವೃತ್ತಿಬದುಕಿಗೆ ಕೊಂಡಿಯಾಗಲಿದೆ 'ಪ್ರೊಫೆಷನಲ್ ಕೋರ್ಸ್'

• ವಿಕ್ರಂ ಕಾಂತಿಕೆರೆ

ವ್ಯಾಕರಣ, ಛಂದಸ್ಸು, ಕಾವ್ಯಮೀಮಾಂಸೆಯ ವಿಸ್ತೃತ ಅಧ್ಯಯನದ ಜೊತೆಯಲ್ಲಿ ಪುರಾಣಗಳ ಒಳಹೊಕ್ಕು ಹೊಸನೋಟ ಹುಡುಕುವ, ಸಾಹಿತಿಗಳು, ಸಾಹಿತ್ಯ ಮತ್ತು ಕನ್ನಡ ಚರಿತ್ರೆಯ ಬಗ್ಗೆ ಆಳವಾದ ಅಧ್ಯಯನ ಮಾಡುವ ಕನ್ನಡ ಸ್ನಾತಕೋತ್ತರ ಪದವಿಯಲ್ಲಿ ಡಿಜಿಟಲ್ ಸಂವಹನ, ಅನುವಾದ ಉದ್ಯಮದ ಪರಿಚಯ, ಸ್ಕ್ರಿಪ್ಟ್ ರೈಟಿಂಗ್ ಪರಿಣತಿ, ಪ್ರತಿಭೆ ಪ್ರದರ್ಶನಕ್ಕೆ ಭೂಮಿಕೆ ಎಲ್ಲವೂ ಒದಗಿಬಂದರೆ ಹೇಗೆ?

ಹೀಗೊಂದು ಪ್ರಶ್ನೆಯು ಪದವಿಯಲ್ಲಿ ಕನ್ನಡ ಐಚ್ಛಿಕ ವಿಷಯ ಓದಿ ಸ್ನಾತಕೋತ್ತರದತ್ತ ಮುಖ ಮಾಡುವ ಬಹುತೇಕರಲ್ಲಿ ಮೂಡದೇ ಇರಲಾರದು– ವಿಶೇಷವಾಗಿ ಇಂದಿನ ವೃತ್ತಿಪರ ಕೋರ್ಸ್‌ಗಳ ಕಾಲದಲ್ಲಿ.

ಇನ್ನು ಮುಂದೆ ಇದು ಪ್ರಶ್ನೆಯಾಗಿಯೇ ಉಳಿದುಕೊಳ್ಳುವುದಿಲ್ಲ. ಕನ್ನಡ ಎಂ.ಎ ಓದುವವರಿಗೆ 'ಕನ್ನಡ ಸ್ನಾತಕೋತ್ತರ ಪ್ರೊಫೆಷನಲ್' ಎಂಬ ಪರಿಕಲ್ಪನೆಯೊಂದಿಗೆ ಹೊಸ ಪಠ್ಯಕ್ರಮ ರೂಪಿಸಿದೆ ಮಂಗಳೂರಿನ ಸೇಂಟ್ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯ. ಈ ಶೈಕ್ಷಣಿಕ ವರ್ಷದಿಂದಲೇ ಅಂದರೆ ಜುಲೈ ತಿಂಗಳಲ್ಲಿ ಇದು ಜಾರಿಗೆ ಬರಲಿದೆ.

ಸಾಹಿತ್ಯ ವಿಷಯದ ಅಧ್ಯಯನಕ್ಕೆ ಇತ್ತೀಚೆಗೆ ವಿದ್ಯಾರ್ಥಿಗಳು ಬರುವುದು ಕಡಿಮೆ. ಅದಕ್ಕೆ ಮುಖ್ಯ ಕಾರಣ ಉದ್ಯೋಗದ ಸಮಸ್ಯೆ. ಕನ್ನಡ ಓದಿದರೆ ಅಧ್ಯಾಪನದಂಥ ಸೀಮಿತ ಉದ್ಯೋಗ ಬಿಟ್ಟರೆ ವಿಸ್ತೃತ ಅವಕಾಶ ಇಲ್ಲ ಎಂಬ ಕಾರಣಕ್ಕೆ ಅತ್ತ ತಲೆ ಹಾಕುವವರು ವಿರಳ. ಹೀಗಾಗಿ, ಕನ್ನಡ ಮತ್ತು ವೃತ್ತಿಯ ನಡುವಿನ ಕೊಂಡಿಯಾಗುವುದು ಹೊಸ ವಿನ್ಯಾಸದ ಉದ್ದೇಶ ಎಂಬುದು ವಿಶ್ವವಿದ್ಯಾಲಯದ ಆಶಯ.

'ವರ್ತಮಾನದಲ್ಲಿ ಕನ್ನಡವನ್ನು ಬಳಸಿಕೊಂಡು ಡಿಜಿಟಲ್ ಮಾಧ್ಯಮ ಹಾಗೂ ನವಮಾಧ್ಯಮದ ಮೂಲಕ ಕನ್ನಡದ ಉದ್ಯೋಗಾವಕಾಶಗಳನ್ನು ಪಡೆದುಕೊಳ್ಳಲು ಅಪಾರ ಸಾಧ್ಯತೆಗಳಿವೆ. ಆದರೆ ಸೂಕ್ತ ತರಬೇತಿ ಸಿಗುತ್ತಿಲ್ಲ. ಕನ್ನಡ ಸಾಹಿತ್ಯ, ಭಾಷೆ ಮತ್ತು ಸಂಸ್ಕೃತಿಯ ಜ್ಞಾನದೊಂದಿಗೆ ಆಧುನಿಕ ಡಿಜಿಟಲ್ ತಂತ್ರಜ್ಞಾನ ಹಾಗೂ ಕೌಶಲಗಳಲ್ಲಿ ಪರಿಣತಿಯೂ ಇದ್ದರೆ ಉದ್ಯೋಗಾವಕಾಶದ ಹಾದಿ ಸುಗಮವಾಗುತ್ತದೆ. ಈ ದೃಷ್ಟಿಯಿಂದ ಪ್ರೊಫೆಷನಲ್ ಕನ್ನಡ ಎಂ.ಎ ಆರಂಭಿಸಲು ನಿರ್ಧರಿಸಲಾಗಿದೆ' ಎಂದು ಕನ್ನಡ ವಿಭಾಗದ ಮುಖ್ಯಸ್ಥ ದಿನೇಶ್ ನಾಯಕ್ ಹೇಳುತ್ತಾರೆ.

'ಕನ್ನಡ ಎಂ.ಎ ಪ್ರೊಫೆಷನಲ್‌ಗೆ ಸೇರಲು ಪದವಿ ತರಗತಿಯ ಅಂತಿಮ ಫಲಿತಾಂಶಕ್ಕಾಗಿ ಕಾಯುವುದು ಬೇಡ, ಪ್ರಥಮ ಮತ್ತು ದ್ವಿತೀಯ ಪದವಿಯ ಅಂಕಪಟ್ಟಿಗಳೊಂದಿಗೆ ಬಂದರೆ ಪ್ರವೇಶ ಪಡೆಯಬಹುದು. ಕನ್ನಡ ಭಾಷೆ ಮತ್ತು ನೆಲದ ಸತ್ವ ಉಳಿಸಿಕೊಂಡೇ ಡಿಜಿಟಲ್ ಕಮ್ಯುನಿಕೇಷನ್, ಸಣ್ಣ ಮತ್ತು ದೊಡ್ಡ ಒಟಿಟಿ, ನವಮಾಧ್ಯಮ, ಅನುವಾದ ಉದ್ಯಮ, ಕಂಟೆಂಟ್ ಬರಹ, ಎಐ ಆಧಾರಿತ ಎಂಜಿನಿಯರಿಂಗ್, ಸ್ಕ್ರಿಪ್ಟ್ ಬರಹ ಮತ್ತು ರಂಜನೀಯ ವೇದಿಕೆಗಳಲ್ಲಿ ಉದ್ಯೋಗಾವಕಾಶ ಸೃಷ್ಟಿಗೆ ಅನುಕೂಲಕರ ರೀತಿಯಲ್ಲಿ ಪಠ್ಯಕ್ರಮ ವಿನ್ಯಾಸಗೊಳಿಸಲಾಗಿದೆ' ಎನ್ನುತ್ತಾರೆ ಅವರು.

ಹೀಗೆ ಅರ್ಜಿ ಸಲ್ಲಿಸಿ

https://staloysius.edu.in/apply-online ಅಥವಾ https://pgadmissions.staloysius.edu.in/regis ಮೂಲಕ ಅರ್ಜಿ ಸಲ್ಲಿಸಬಹುದು. ಮಾಹಿತಿಗೆ: ದಿನೇಶ್ ನಾಯಕ್ (9449255056), ಮಹಾಲಿಂಗ ಭಟ್ ಕೆ. (9449615469), ಕ್ರಿಸ್ಟೋಫರ್ ನೀನಾಸಂ (9113226234), ಪ್ರಶಾಂತಿ ಶೆಟ್ಟಿ (9972261201)

ಅರ್ಹತೆ ಏನು?

• ಕನಿಷ್ಠ ಶೇಕಡ 55ರಷ್ಟು ಅಂಕಗಳೊಂದಿಗೆ ಯಾವುದೇ ಪದವಿ ಪಾಸಾಗಿದ್ದು, ಕನ್ನಡ ಭಾಷೆಯಲ್ಲಿ ಓದಲು, ಬರೆಯಲು ಮತ್ತು ಮಾತನಾಡಲು ಗೊತ್ತಿರಬೇಕು.

ಸೆಮಿಸ್ಟರ್‌ಗಳಲ್ಲಿ ಏನೇನಿದೆ?

• ಭಾಷೆಯ ಹೊಸ ಸಾಫ್ಟ್‌ವೇರ್ • ಆಧುನಿಕ ಡಿಬೆಟರ್ ಸಂವಹನ ತಂತ್ರಜ್ಞಾನ • ನವ ಪತ್ರಿಕೋದ್ಯಮ • ಕೃತಕ ಬುದ್ಧಿಮತ್ತೆ, ಪ್ರಾಮ್ಟ್ ಎಂಜಿನಿಯರಿಂಗ್ • ಸಾಂಸ್ಕೃತಿಕ ಪ್ರವಾಸೋದ್ಯಮ • ಕನ್ನಡಪರ ಜ್ಞಾನಕೋಶ ನಿರ್ಮಾಣ • ಪ್ರಮುಖ ಪತ್ರಿಕೆಗಳಾಗಿ ಐಎಎಸ್ ಪರೀಕ್ಷೆಯ ಕನ್ನಡ ಸಿಲೆಬಸ್ • ಯುಜಿಸಿ ನೆಟ್ ಕನ್ನಡ ಸಿಲೆಬಸ್‌ನ ಮುಖ್ಯ ಭಾಗ • ಆಧುನಿಕ, ಮಧ್ಯಕಾಲೀನ, ಪ್ರಾಚೀನ ಕನ್ನಡ ಸಾಹಿತ್ಯ • ಕನ್ನಡದ ಸಾಂಸ್ಕೃತಿಕ ಇತಿಹಾಸ • ಕನ್ನಡ ಛಂದಸ್ಸು, ಭಾಷಾ ವಿಜ್ಞಾನ, ವ್ಯಾಕರಣ • ಕಾವ್ಯಮೀಮಾಂಸೆ • ಜಾನಪದ ಅಧ್ಯಯನ • ಸಂಶೋಧನೆಯ ಸ್ವರೂಪ, • ಅನುವಾದ ಉದ್ಯಮ • ಬರವಣಿಗೆ • ರಂಗ–ಚಿತ್ರಸ್ಕ್ರಿಪ್ಟ್ • ರಂಗ ಪ್ರಸ್ತುತಿ...

ನಾಗರಿಕ ಸೇವೆಗೂ ತರಬೇತಿ

ಐಎಎಸ್ ಪರೀಕ್ಷೆ ಬರೆಯಲು ಸಿದ್ಧತೆ ನಡೆಸುವವರಿಗೂ ಅನುಕೂಲ ಆಗುವ ವಿಷಯಗಳನ್ನು 'ಕನ್ನಡ ಸ್ನಾತಕೋತ್ತರ ಪ್ರೊಫೆಷನಲ್' ಪಠ್ಯಕ್ರಮದಲ್ಲಿ ಸೇರಿಸಲಾಗಿದೆ. ಸ್ನಾತಕೋತ್ತರ ತರಗತಿ ಮುಗಿಯುವಷ್ಟರಲ್ಲಿ ಐಎಎಸ್ ಕನ್ನಡದ ಸಿಲೆಬಸ್ ಮತ್ತು ಪಠ್ಯಪುಸ್ತಕಗಳನ್ನು ವಿಸ್ತಾರವಾಗಿ ಕಲಿತು ಮುಗಿಸಲು ಇಲ್ಲಿ ಅವಕಾಶ ಇದೆ.

ಮಹಾಲಿಂಗ ಭಟ್ ಕೆ., ಅಧ್ಯಾಪಕ, ಕನ್ನಡ ವಿಭಾಗ, ಸೇಂಟ್ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯ, ಮಂಗಳೂರು

ವಿಶ್ವವಿದ್ಯಾಲಯದಲ್ಲಿ ಕಂಪ್ಯೂಟರ್‌ಗಳು ಸಾಕಷ್ಟು ಇವೆ. ಭಾಷಾ ಪ್ರಯೋಗಾಲಯ ಇದೆ. ನೀನಾಸಂನಲ್ಲಿ ತರಬೇತಿ ಪಡೆದು ರಂಗಭೂಮಿ, ಚಲನಚಿತ್ರ ಕ್ಷೇತ್ರದಲ್ಲಿ ತೊಡಗಿಸಿಕೊಂಡವರಿಂದ ಕನ್ನಡ ವಿಭಾಗವು ಸಮೃದ್ಧವಾಗಿದೆ. ರೇಡಿಯೊ ಸಾರಂಗ್ ಇದೆ, ಮೊಸ್ಕೆನಿ ಕಲಾ ಗ್ಯಾಲರಿ, ಪ್ರದರ್ಶನಾಲಯ, ರಂಗಮಂದಿರದಂತಹ ಸೌಲಭ್ಯಗಳಿಂದ ತುಂಬಿರುವ ವಿಶ್ವವಿದ್ಯಾಲಯದ ಕ್ಯಾಂಪಸ್ ಪೂರ್ತಿ ಸೃಜನಶೀಲತೆಗೆ ತೆರೆದುಕೊಂಡಿದೆ. ಇದೆಲ್ಲವನ್ನೂ ಬಳಸಿಕೊಂಡು ಕನ್ನಡವನ್ನು ವೃತ್ತಿಪರಗೊಳಿಸುವ ಉದ್ದೇಶ ಕನ್ನಡ ವಿಭಾಗದ್ದು.

'ಕೌಶಲಗಳನ್ನು ವೃತ್ತಿಪರವಾಗಿ ಬೆಳೆಸುವುದಕ್ಕಾಗಿ ಹೊರಗಿನ ಸಂಪನ್ಮೂಲ ವ್ಯಕ್ತಿಗಳನ್ನೂ ಸೇರಿಸಿಕೊಂಡು ಪಠ್ಯಕ್ರಮ ರೂಪಿಸಲಾಗಿದೆ. ಸಿನಿಮಾ ನಿರ್ದೇಶಕ ಅಭಯಸಿಂಹ ಮೊದಲಾದವರು ವಿಭಾಗದೊಂದಿಗೆ ಇದ್ದು ಕೌಶಲ ತರಬೇತಿ ನೀಡಲಿದ್ದಾರೆ. ಕೋರ್ಸ್ ಒಂದನ್ನು ವೃತ್ತಿಪರವಾಗಿ ಬೆಳೆಸುವುದು ಮತ್ತು ಬಳಸುವುದು ಹೇಗೆ ಎಂದು ಅರಿತುಕೊಂಡವರು ವಿಭಾಗದ ಮತ್ತು ಕ್ಯಾಂಪಸ್‌ನ ಹೊರಗೆ ಅನೇಕ ಮಂದಿ ಇದ್ದಾರೆ. ಅವರನ್ನು ಸಂಪನ್ಮೂಲವಾಗಿ ಬಳಸಿಕೊಳ್ಳಲಾಗುವುದು' ಎಂದು ವಿಭಾಗದ ಅಧ್ಯಾಪಕ ಮಹಾಲಿಂಗ ಭಟ್ ಕೆ. ವಿವರಿಸಿದರು.

ವಿದ್ಯಾರ್ಥಿ ವೇತನ ಕೈಪಿಡಿ

ಅಮಲ್ ಕ್ಲೂನಿ ವಿದ್ಯಾರ್ಥಿವೇತನ

ದಿ ಯೂನಿವರ್ಸಿಟಿ ಆಫ್ ಲಾ, ಅಮಲ್ ಕ್ಲೂನಿ ಹಾಗೂ ಕ್ಲೂನಿ ಫೌಂಡೇಷನ್ ಫಾರ್ ಜಸ್ಟಿಸ್ ಸಂಸ್ಥೆಗಳ ಸಹಯೋಗದೊಂದಿಗೆ ನೀಡುತ್ತಿರುವ ವಿದ್ಯಾರ್ಥಿವೇತನ ಇದಾಗಿದೆ.

ಅರ್ಹತೆ: ಸ್ನಾತಕೋತ್ತರ ಪದವಿ ಕೋರ್ಸ್‌ಗೆ ಪ್ರವೇಶ ಪಡೆದಿರಬೇಕು (ಅಲ್ಪಾವಧಿ ಕೋರ್ಸ್‌ಗಳನ್ನು ಪರಿಗಣಿಸುವುದಿಲ್ಲ). ಪದವಿಯಲ್ಲಿ ಉತ್ತಮ ಅಂಕ ಗಳಿಸಿರಬೇಕು. ಈ ವಿದ್ಯಾರ್ಥಿವೇತನ ಪಡೆಯಲು ನಡೆಸುವ ಆನ್‌ಲೈನ್ ಮೌಲ್ಯಮಾಪನ ಪರೀಕ್ಷೆಯಲ್ಲಿಯೂ ಉತ್ತಮ ಅಂಕಗಳನ್ನು ಗಳಿಸಬೇಕು.

ಆರ್ಥಿಕ ನೆರವು: ಪೂರ್ಣ ಪ್ರಮಾಣದ ಬೋಧನಾ ಶುಲ್ಕ

ಅರ್ಜಿ ಸಲ್ಲಿಸಲು ಕೊನೇ ದಿನ: 28-06-2026

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್

ಮಾಹಿತಿಗೆ: www.b4s.in/praja/ULCS8

ಸಕಾಲ್ ಇಂಡಿಯಾ ಫೌಂಡೇಷನ್

ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಉತ್ತೇಜಿಸಲು ಸಕಾಲ್ ಇಂಡಿಯಾ ಫೌಂಡೇಷನ್ 2026–27ನೇ ಸಾಲಿನ ಈ 'ಶೈಕ್ಷಣಿಕ ಸಾಲ ವಿದ್ಯಾರ್ಥಿವೇತನ'ವನ್ನು ನೀಡುತ್ತಿದೆ.

ಅರ್ಹತೆ: ಭಾರತೀಯ ನಾಗರಿಕರಾಗಿರಬೇಕು. ಭಾರತದ ಅಥವಾ ವಿದೇಶದ ಶೈಕ್ಷಣಿಕ ಸಂಸ್ಥೆಯಲ್ಲಿ ಪಿಎಚ್.ಡಿ ಅಧ್ಯಯನಕ್ಕೆ ಪ್ರವೇಶವನ್ನು ದೃಢೀಕರಿಸಿಕೊಂಡಿರಬೇಕು ಅಥವಾ ಪದವಿ, ಸ್ನಾತಕೋತ್ತರ ಪದವಿ, ಪಿ.ಜಿ ಡಿಪ್ಲೊಮಾ, ಪಿಎಚ್.ಡಿ ಕೋರ್ಸ್‌ಗೆ ಈಗಾಗಲೇ ದಾಖಲಾಗಿರಬೇಕು. ಹಿಂದಿನ ಕೋರ್ಸ್‌ಗಳಲ್ಲಿ ಉತ್ತಮ ಶೈಕ್ಷಣಿಕ ಸಾಧನೆ ಮಾಡಿರಬೇಕು.

ಆರ್ಥಿಕ ನೆರವು: ₹ 1 ಲಕ್ಷದವರೆಗೆ ಬಡ್ಡಿರಹಿತ ಶೈಕ್ಷಣಿಕ ಸಾಲ

ಅರ್ಜಿ ಸಲ್ಲಿಸಲು ಕೊನೇ ದಿನ: 30-06-2026

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್

ಮಾಹಿತಿಗೆ: www.b4s.in/praja/SKFE1

ಇವಳೋ ತಿಂಡಿಪೋತಿ ಅರ್ಥವಾಗುತ್ತಿಲ್ಲ ನಮ್ಮ ಕಕ್ಕುಲಾತಿ



ಸಮಾಧಾನ

ಡಾ. ಡಿ.ಎಂ.ಹೆಗಡೆ, ಆಪ್ತಸಮಾಲೋಚಕ

• **16 ವರ್ಷದ ನನ್ನ ಮಗಳಿಗೆ ವಯಸ್ಸಿಗೆ ಮೀರಿದ ದೈಹಿಕ ಬೆಳವಣಿಗೆ. ತಿಂಡಿಪೋತಿ. ಬುದ್ಧಿಮಾತು ಕೇಳುವುದಿಲ್ಲ. ವೈದ್ಯರಿಗೆ ತೋರಿಸಿದೆವು. ಅವರು ಹೇಳಿದಂತೆ ಕೂಡ ಈಕೆ ಕೇಳುವುದಿಲ್ಲ. ಪಥ್ಯ ಮಾಡುವುದಿಲ್ಲ, ವ್ಯಾಯಾಮ ಮಾಡುವುದಿಲ್ಲ. 'ಮನುಷ್ಯರಾಗಿ ಹುಟ್ಟಿದ ಮೇಲೆ ಸಾಯೋದಂತೂ ಗ್ಯಾರಂಟಿ. ಬೇಕೆನಿಸಿದ್ದನ್ನು ತಿನ್ನಬೇಕು, ಇದ್ದಷ್ಟು ದಿನ ಇರಬೇಕು. ನಾನು ಹೇಗಿದ್ದೀನೋ ಹಾಗೇ ಒಪ್ಪಿಕೊಳ್ಳಿ' ಎಂದು ವಾದಿಸುತ್ತಾಳೆ. ಓದಿನಲ್ಲಿಯೂ ಅಷ್ಟಕ್ಕಷ್ಟೆ. ಬೈದರೆ ಮನೆಬಿಟ್ಟು ಓಡಿ ಹೋಗುತ್ತೇನೆ ಎಂದೆಲ್ಲ ಹೆದರಿಸುತ್ತಾಳೆ. ತಿನ್ನುವುದು, ದಿನಕ್ಕೆ ಎರಡು–ಮೂರು ಸಲ ಸ್ನಾನ ಮಾಡುವುದು, ಮಲಗುವುದು, ಮೊಬೈಲ್ ನೋಡುವುದು ಇಷ್ಟೇ ಆಗಿದೆ. ಅವಳನ್ನು ಸರಿದಾರಿಗೆ ತರುವುದು ಹೇಗೆ?**

ವತ್ಸಲಾ ಮಹಾದೇವಸ್ವಾಮಿ, ತುಮಕೂರು

ಇದು, ಇಂದು ಹಲವಾರು ಪೋಷಕರಿಗೆ ಎದುರಾಗುತ್ತಿರುವ ಒಂದು ಸಾಮಾನ್ಯ, ಆದರೆ ಅಷ್ಟೇ ಗಂಭೀರವಾದ ಪರಿಸ್ಥಿತಿ. ನಿಮ್ಮ ಮಗಳಿಗೆ ಈಗ ದೇಹದ ಬೆಳವಣಿಗೆ ಮಾತ್ರವಲ್ಲ, ಮಾನಸಿಕ ಬದಲಾವಣೆಗಳು, ಸ್ವಾತಂತ್ರ್ಯದ ಆಸೆ, ಸ್ವಪ್ರತಿಷ್ಠೆ, ಸ್ವಾವಲಂಬನೆ, ಜೊತೆಗೆ ಅಷ್ಟೇ ವಿರೋಧಾತ್ಮಕ ವರ್ತನೆ ರೂಪುಗೊಳ್ಳುವ- ಹೆಚ್ಚಾಗುವ ವಯಸ್ಸು. ಹಾಗಾಗಿ, ಅವಳು ನಿಮ್ಮ ಬುದ್ಧಿಮಾತನ್ನು ಕೇಳುವುದಿಲ್ಲ ಎಂದುಕೊಳ್ಳುವುದಕ್ಕಿಂತಲೂ ಸ್ವಲ್ಪ ಆಳವಾಗಿ ಆಲೋಚಿಸಬೇಕಾದ ಅಗತ್ಯವಿದೆ.

ಹದಿಹರೆಯದಲ್ಲಿ ಮಕ್ಕಳಿಗೆ 'ನನ್ನ ಜೀವನ ನನ್ನದು, ಅದನ್ನು ನನಗಿಷ್ಟ ಬಂದಹಾಗೆ ಬದುಕುತ್ತೇನೆ' ಎಂಬೆಲ್ಲ ಆಲೋಚನೆಗಳು ಹೆಪ್ಪುಗಟ್ಟುತ್ತಿರುತ್ತವೆ. ತಮಗೆ ಬೇಕು ಬೇಕಾದ ಹಾಗೆ ಕೇಶವಿನ್ಯಾಸ ಮಾಡಿಸಿಕೊಳ್ಳುವುದು, ಬೇಕು ಬೇಕಾದ್ದನ್ನು ತಿನ್ನುವುದು, ವಿಚಿತ್ರ ವಿನ್ಯಾಸದ ಬಟ್ಟೆ ಧರಿಸುವುದು, ಕಂಡಕಂಡಲ್ಲಿ ತಿರುಗುವುದು, ಕಂಡಕಂಡವರ ಸ್ನೇಹ ಮಾಡುವುದು... ಇಂತಹ ಅವರ ಗುಣವಿಶೇಷಗಳನ್ನು ಪಾಲಕರು ಗಮನಿಸಬೇಕು.

ಎಳವೆಯಲ್ಲಿ ರೂಢಿಯಾದ ಶಿಸ್ತು ಮತ್ತು ಶಿಕ್ಷಣವು ಮಕ್ಕಳ ಭವ್ಯ ಭವಿಷ್ಯತ್ತಿಗೆ ಬುನಾದಿಯಾಗಿರುತ್ತವೆ. ಮಕ್ಕಳನ್ನು ಯಾವಾಗಲೂ ಶಿಕ್ಷಿಸಬಾರದು. ಪ್ರೀತಿಯಿಂದ ವ್ಯವಹರಿಸುತ್ತಾ, ನಯವಾಗಿ, ನಾಜೂಕಾಗಿ ಅವರನ್ನು ತಿದ್ದುತ್ತಾ ಬೆಳೆಸಬೇಕು. ಮಠದ ಗಿಳಿಯು ಪಡೆಯುವ ಶಿಕ್ಷಣದ ವಾತಾವರಣ ಇರಬೇಕು. ಕಟುಕರ ಮನೆಯಲ್ಲಿ ಕರುಣಾಳು ಸಿಗುವುದು ಸಾಧ್ಯವಿಲ್ಲ.

ಒಂಟಿತನದಿಂದ, ಒತ್ತಡದಿಂದ ಅಥವಾ ಮನಸ್ಸಿನೊಳಗಿನ ಖಾಲಿತನದಿಂದಾಗಿಯೂ ಮಕ್ಕಳು ಹೆಚ್ಚು ತಿನ್ನುವುದು, ಹೆಚ್ಚು ಸಮಯ ಮೊಬೈಲ್ ನೋಡುವುದು, ಹೆಚ್ಚು ನಿದ್ರೆ ಮಾಡುವುದು, ಮಾಡಬೇಕಾದ ಕೆಲಸವನ್ನು ಬಿಟ್ಟು ಬೇರೆ ಕೆಲಸವನ್ನು ಮಾಡುತ್ತಾ ಕಾಲಕಳೆಯುವುದು, ಅನಗತ್ಯವಾಗಿ ಸ್ನಾನ ಮಾಡುವಂತಹವನ್ನು ರೂಢಿಸಿಕೊಳ್ಳುತ್ತಾರೆ. ನಿಮ್ಮ ಮಗಳಿಗೆ ಎಳವೆಯಿಂದಲೂ ಕೀಳರಿಮೆ, ಭಯ ಅಥವಾ ತನ್ನನ್ನು ಯಾರೂ ಪ್ರೀತಿಸುವುದಿಲ್ಲ ಎನ್ನುವ ಭಾವನೆ ಬೆಳೆದಿರುವ ಸಾಧ್ಯತೆ ಇದೆ. ತಾನು ಇರುವ ಹಾಗೆಯೇ ತನ್ನನ್ನು ಒಪ್ಪಿಕೊಳ್ಳಿ ಎನ್ನುವುದರ ಹಿಂದೆ, ಅವಳ ಮನಸ್ಸಿನಾಳದ ಬಂಡಾಯವು ವ್ಯಕ್ತವಾದಂತಿದೆ. ನೀವು ಅವಳಿಗೆ ಬೈದರೆ, ಶಿಕ್ಷಿಸಿದರೆ ಆಕೆ ಮಾನಸಿಕವಾಗಿ ನಿಮ್ಮಿಂದ ಇನ್ನೂ ದೂರವಾಗುತ್ತಾಳೆ. ತೀರಾ ಸಮಾಧಾನದಿಂದ, ಬಹಳ ವಿಶ್ವಾಸದಿಂದ ಮಾತನಾಡಿಸಿ, ಅವಳ ವರ್ತನೆಗೆ ಕಾರಣ ಕೇಳಿ. ನಿಮ್ಮನ್ನು ದೂಷಿಸಿದರೂ ಕೇಳಿಸಿಕೊಳ್ಳಿ. ಪ್ರತಿಯಾಗಿ ಅವಳನ್ನು ದೂಷಿಸಬೇಡಿ.

ಮನೆಯಲ್ಲಿ ಎಲ್ಲರೂ ಮೊಬೈಲ್ ನೋಡಲು, ಒಟ್ಟಿಗೆ ಕುಳಿತು ಊಟ ಮಾಡಲು, ಮಾತನಾಡಲು... ಹೀಗೆ ಎಲ್ಲದಕ್ಕೂ ಇಂತಿಷ್ಟು ಸಮಯ ಎಂದು ನಿಗದಿಪಡಿಸಿ, ಅದನ್ನು ಎಲ್ಲರೂ ಪಾಲಿಸಿ. ಜಂಕ್‌ಫುಡ್ ನಿಲ್ಲಿಸಿ, ಮನೆಯ ಅಡುಗೆಗೆ ಮಹತ್ವ ಇರಲಿ. ವಾರಕ್ಕೊಮ್ಮೆ ಅವಳನ್ನು ಕರೆದುಕೊಂಡು ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಹೋಗಿ. ಅವಳ ಆಸಕ್ತಿಗೆ ಅನುಗುಣವಾದ ಅಭ್ಯಾಸವನ್ನು ರೂಢಿಸಿಕೊಳ್ಳಲು ನೆರವಾಗಿ. ಅವಳು ನಿಮ್ಮ ಬದುಕಿನಲ್ಲಿ ಯಾವತ್ತಿಗೂ ಅಗತ್ಯದ ವ್ಯಕ್ತಿ, ಅವಳನ್ನು ನೀವು ಪ್ರೀತಿಸುತ್ತೀರಿ ಎಂದು ಅವಳಿಗೆ ಅನ್ನಿಸುವ ಹಾಗೆ ವರ್ತಿಸಿ. ಅದನ್ನೆಲ್ಲ ಬಾಯಿಬಿಟ್ಟು ಅವಳಿಗೆ ಹೇಳಿ. ನೀವು ಆಕೆಯ ವಿರೋಧಿಗಳಲ್ಲ, ಶ್ರೇಯೋಭಿಲಾಷಿಗಳು ಎಂದು ಅವಳಿಗೆ ಅನ್ನಿಸಬೇಕು. ನಿಮ್ಮೆಲ್ಲರ ಮಾತು ಮತ್ತು ವರ್ತನೆಯಿಂದ ಅವಳಿಗೆ ಏನು ಅನ್ನಿಸುತ್ತದೆ ಎನ್ನುವುದು ಇಲ್ಲಿ ಮುಖ್ಯವಾಗುತ್ತದೆ.

ಉದ್ಯೋಗ ಕಿರಣ

ವರ್ಕ್ ಫ್ರಂ ಹೋಮ್ ಇಂಟರ್ನ್‌ಶಿಪ್

ಜೆಇಇ ಮೇನ್ಸ್ ಫಿಸಿಕ್ಸ್ ಆನ್‌ಲೈನ್ ಟೀಚಿಂಗ್

ಕ್ರ್ಯಾಕ್ ಫಿಸಿಕ್ಸ್: ಸಂಸ್ಥೆಯು ಜೆಇಇ ಮೇನ್ಸ್ ಫಿಸಿಕ್ಸ್ ಆನ್‌ಲೈನ್ ಟೀಚಿಂಗ್ ಇಂಟರ್ನಿಗಳನ್ನು ಆಹ್ವಾನಿಸಿದೆ. ಆನ್‌ಲೈನ್ ಮೂಲಕ ಫಿಸಿಕ್ಸ್ (ಭೌತವಿಜ್ಞಾನ) ಬೋಧಿಸಬಲ್ಲ ಹಾಗೂ ಇಂಗ್ಲಿಷ್‌ನಲ್ಲಿ ಮಾತನಾಡಬಲ್ಲ ವಿದ್ಯಾರ್ಥಿಗಳು ಜುಲೈ 11ರ ಒಳಗೆ ಅರ್ಜಿ ಸಲ್ಲಿಸಬಹುದು.
ಸ್ಟೈಪೆಂಡ್– ತಿಂಗಳಿಗೆ ₹ 18,000– 36,000.
ಸಂಪರ್ಕ: internshala.com/i/652907.

ಎಸ್ಎಂಇ– ಮ್ಯಾಥಮೆಟಿಕ್ಸ್

ಆ್ಯವೆರಾನ್ ಲ್ಯಾಬ್ಸ್: ಎಸ್ಎಂಇ– ಮ್ಯಾಥಮೆಟಿಕ್ಸ್ ಇಂಟರ್ನಿಗಳನ್ನು ನೇಮಕ ಮಾಡಿಕೊಳ್ಳಲಿದೆ. ವಿದ್ಯಾರ್ಥಿಗಳಿಗೆ ಇಂಗ್ಲಿಷ್‌ನಲ್ಲಿ ಬರೆಯುವ ಸಾಮರ್ಥ್ಯ ಇರಬೇಕು. ಜೆಮಿನಿ, ಮ್ಯಾಥಮೆಟಿಕ್ಸ್‌ನಲ್ಲಿ ಬೋಧನೆಯ ಜ್ಞಾನ ಇರಬೇಕು. ಸಬ್ಜೆಕ್ಟ್ ಮ್ಯಾಟರ್ ಎಕ್ಸ್‌ಪರ್ಟ್ (ಎಸ್ಎಂಇ) ಆಗಿರಬೇಕು. ಜುಲೈ 11 ಅರ್ಜಿ ಸಲ್ಲಿಕೆಗೆ ಕಡೇ ದಿನ.
ಸ್ಟೈಪೆಂಡ್– ತಿಂಗಳಿಗೆ ₹ 11,000– 14,000.
ಸಂಪರ್ಕ: internshala.com/i/3504d3.

ಬೆಂಗಳೂರು ಕೇಂದ್ರಿತ ಇಂಟರ್ನ್‌ಶಿಪ್

ಟೆಕ್ನಿಕಲ್ ಆ್ಯನಲಿಸ್ಟ್

ಟ್ರೇಡ್ ಬ್ರೇನ್ಸ್: ಟೆಕ್ನಿಕಲ್ ಆ್ಯನಲಿಸ್ಟ್ ಇಂಟರ್ನಿಗಳನ್ನು ನೇಮಿಸಿಕೊಳ್ಳಲಿದೆ. ಈಕ್ವಿಟಿ ರಿಸರ್ಚ್, ಫೈನಾನ್ಷಿಯಲ್ ಆ್ಯನಲಿಸಿಸ್, ಫೈನಾನ್ಷಿಯಲ್ ಲಿಟರೆಸಿ, ಫೈನಾನ್ಷಿಯಲ್ ಪ್ಲ್ಯಾನಿಂಗ್, ಇನ್‌ವೆಸ್ಟಿಂಗ್, ರಿಸರ್ಚ್ ಮತ್ತು ಆ್ಯನಲಿಟಿಕ್ಸ್, ಸ್ಟಾಕ್ ಟ್ರೇಡಿಂಗ್, ಟೆಕ್ನಿಕಲ್ ಆ್ಯನಲಿಸಿಸ್ ಮತ್ತು ವ್ಯಾಲ್ಯುಯೇಷನ್ ಬಗ್ಗೆ ಜ್ಞಾನ ಇರಬೇಕು. ಜುಲೈ 10ರ ಒಳಗೆ ಅರ್ಜಿ ಸಲ್ಲಿಸಬೇಕು.
ಸ್ಟೈಪೆಂಡ್– ತಿಂಗಳಿಗೆ ₹ 12,000– 15,000
ಸಂಪರ್ಕ: internshala.com/i/a7f928.

ಕಸ್ಟಮರ್ ಸಕ್ಸಸ್

Ctruh: ಕಸ್ಟಮರ್ ಸಕ್ಸಸ್ ಇಂಟರ್ನಿಗಳನ್ನು ನೇಮಕ ಮಾಡಿಕೊಳ್ಳಲಿದೆ. ವಿದ್ಯಾರ್ಥಿಗಳಿಗೆ ಕ್ಲೈಂಟ್ ಇಂಟರ‍್ಯಾಕ್ಷನ್, ಕ್ಲೈಂಟ್ ರಿಲೇಷನ್‌ಶಿಪ್ ಮ್ಯಾನೇಜ್‌ಮೆಂಟ್ (ಸಿಆರ್‌ಎಂ), ಕಾನ್‌ಫ್ಲಿಕ್ಟ್ ಮ್ಯಾನೇಜ್‌ಮೆಂಟ್, ಪ್ರಾಬ್ಲಂ ಸಾಲ್ವಿಂಗ್, ಅಟೆನ್ಷನ್ ಟು ಡೀಟೇಲ್, ಆ್ಯನಲಿಟಿಕಲ್ ಥಿಂಕಿಂಗ್ ಗೊತ್ತಿರಬೇಕು. ಪರಿಣಾಮಕಾರಿ ಸಂವಹನ ಸಾಮರ್ಥ್ಯ ಇರಬೇಕು. ಜುಲೈ 10 ಅರ್ಜಿ ಸಲ್ಲಿಕೆಗೆ ಕೊನೇ ದಿನ.
ಸ್ಟೈಪೆಂಡ್– ತಿಂಗಳಿಗೆ ₹ 25,000– 30,000.
ಸಂಪರ್ಕ: internshala.com/i/6faf87.

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಸಮಾಜವಿಜ್ಞಾನ (ಇತಿಹಾಸ)

ಅಧ್ಯಾಯ–2 ಬ್ರಿಟಿಷ್ ಆಳ್ವಿಕೆಯ ವಿಸ್ತರಣೆ

ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿ ಮಾಡಿ.

1. ಮೊದಲನೇ ಆಂಗ್ಲೋ–ಮರಾಠ ಯುದ್ಧದ ಅಂತ್ಯದಲ್ಲಿ ಮರಾಠರು ಮತ್ತು ಬ್ರಿಟಿಷರ ಮಧ್ಯ ______ ಒಪ್ಪಂದ ಆಯಿತು.
2. ಸಹಾಯಕ ಸೈನ್ಯ ಪದ್ಧತಿಯನ್ನು ಜಾರಿಗೆ ತಂದವನು ______ .
3. ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯನ್ನು ______ ರಲ್ಲಿ ಜಾರಿಗೆ ತರಲಾಯಿತು.
4. ದತ್ತು ಮಕ್ಕಳಿಗೆ ಹಕ್ಕಿಲ್ಲವೆಂಬ ನೀತಿಯನ್ನು ಜಾರಿಗೆ ತಂದವನು ______

ಉತ್ತರ:– 1) ಸಾಲ್‌ಬಾಯ್ ಒಪ್ಪಂದವನ್ನು 2) ವೆಲ್ಲೆಸ್ಲಿ 3) 1848 4) ಡಾಲ್‌ಹೌಸಿ

ಹೆಚ್ಚಿನ ಪ್ರಶ್ನೆಗಳು

5) ಬಕ್ಸಾರ್ ಕದನದಲ್ಲಿ ಸೋತು ಬ್ರಿಟಿಷರ ಆಶ್ರಯದಲ್ಲಿದ್ದ ಮೊಗಲ್ ಚಕ್ರವರ್ತಿ ಎರಡನೇ ಷಾ ಆಲಂನನ್ನು ....ರು ಕರೆತಂದು ಮತ್ತೆ ದೆಹಲಿಯ ಸಿಂಹಾಸನದಲ್ಲಿ ಕುಳ್ಳಿರಿಸಿದರು

ಉತ್ತರ:– ಮರಾಠ

6) ಸಹಾಯಕ ಸೈನ್ಯ ಪದ್ಧತಿಯ ನಿಬಂಧನೆಗೆ ಒಳಗಾದ ಮೊದಲ ರಾಜ್ಯ ....

ಉತ್ತರ:– ಹೈದರಾಬಾದ್

7) ಮರಾಠ ಮನೆತನಗಳ ನಾಯಕರ ನಡುವಿನ ಸಂಘರ್ಷವೇ .... ಯುದ್ಧಕ್ಕೆ ಕಾರಣವಾಯಿತು

ಉತ್ತರ:– ಎರಡನೇ ಆಂಗ್ಲೋ–ಮರಾಠ ಯುದ್ಧ

8) ಪೇಶ್ವೆಯು ....ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪಿದನು. ಪೇಶ್ವೆಯು ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪಿದ್ದನು

ಉತ್ತರ:– ಬೆಸ್ಸಿನ್

9) 1839ರಲ್ಲಿ ರಣಜಿತ್ ಸಿಂಗನು ಮರಣ ಹೊಂದಿದ ನಂತರ ಪಂಜಾಬಿನಲ್ಲಿ ರಾಜಕೀಯ ಅರಾಜಕತೆ ತಲೆ ಎತ್ತಿತು. ....ರ 'ನಿರಂತರ ಮೈತ್ರಿ ಒಪ್ಪಂದ'ವನ್ನು ಉಲ್ಲಂಘಿಸಿ ಪಂಜಾಬನ್ನು ಆಕ್ರಮಿಸಲು ಬ್ರಿಟಿಷರು ಸಂಚು ರೂಪಿಸಿದರು.

ಉತ್ತರ:– 1809

10) 1780ರಲ್ಲಿ ಜನಿಸಿದ ರಣಜಿತ್ ಸಿಂಗನು ಸಿಖ್‌ರ 12 ಮಿಸ್ಲ್ (ಒಕ್ಕೂಟ)ಗಳಲ್ಲಿ ಒಂದಾದ ....ಮಿಸ್ಲ್‌ನ ನಾಯಕ ಮಹಾಸಿಂಗ್‌ನ ಮಗ.

ಉತ್ತರ:– ಸುಖರ್ ಚಾಕೀಯಾ

11) ರಣಜಿತ್ ಸಿಂಗನು ....ನಲ್ಲಿ ಫಿರಂಗಿಗಳನ್ನು ತಯಾರಿಸಲು ಎರಕ ಹೊಯ್ಯುವ ಕಾರ್ಖಾನೆಯನ್ನು ತೆರೆದನು.

ಉತ್ತರ:– **ಲಾಹೋರ್**

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

1) ಮೊದಲ ಆಂಗ್ಲೋ–ಮರಾಠ ಯುದ್ಧ ಬಗ್ಗೆ ಬರೆಯಿರಿ

ಉತ್ತರ: ಬಕ್ಸಾರ್ ಕದನದಲ್ಲಿ ಸೋತು ಬ್ರಿಟಿಷರ ಆಶ್ರಯದಲ್ಲಿದ್ದ ಮೊಗಲ್ ಚಕ್ರವರ್ತಿ ಎರಡನೇ ಷಾ ಆಲಂನನ್ನು ಮರಾಠರು ಕರೆತಂದು ಮತ್ತೆ ದೆಹಲಿಯ ಸಿಂಹಾಸನದಲ್ಲಿ ಕುಳ್ಳಿರಿಸಿದರು. ಚಕ್ರವರ್ತಿಯು ಮೊದಲು ಬ್ರಿಟಿಷರಿಗೆ ನೀಡಿದ್ದ ಕೋರ ಮತ್ತು ಅಲಹಾಬಾದ್‌ಗಳನ್ನು ಮರಾಠರಿಗೆ ಕೊಟ್ಟನು. ಇದರಿಂದ ಮರಾಠರು ಮತ್ತು ಬ್ರಿಟಿಷರ ನಡುವೆ ವೈರತ್ವವು ಮನೆ ಮಾಡಿತು. ಮರಾಠರ ಬಲಿಷ್ಠ ಪೇಶ್ವೆ ಮಾಧವರಾವ್ ಇದೇ ಸಮಯದಲ್ಲಿ ತೀರಿಕೊಂಡದ್ದು ಮರಾಠರಿಗೆ ತುಂಬಲಾರದ ನಷ್ಟವಾಯಿತು. ಪೇಶ್ವೆಯ ಸ್ಥಾನಕ್ಕೆ ಅವನ ತಮ್ಮ ನಾರಾಯಣ ರಾಯನು ಬಂದನಾದರೂ ಅವನನ್ನು ಅವನ ಚಿಕ್ಕಪ್ಪ ರಘೋಬ(ರಘುನಾಥ ರಾವ್)ನು ಕೊಲೆ ಮಾಡಿದನು. ಇದರಿಂದ ಪೇಶ್ವೆಯ ಸ್ಥಾನಕ್ಕೆ ಕಲಹ ಏರ್ಪಟ್ಟಿತು. ನಾನಾ ಫಡ್ನವೀಸ್ ನೇತೃತ್ವದಲ್ಲಿ ಪೇಶ್ವೆ ಸ್ಥಾನಾಕಾಂಕ್ಷಿಯಾದ ರಘೋಬನ ಬದಲು ನಾರಾಯಣರಾಯನ ಮಗ ಎರಡನೇ ಮಾಧವರಾವ್‌ಗೆ ಮರಾಠ ಒಕ್ಕೂಟವು ಪಟ್ಟಕಟ್ಟಿತು. ಮರಾಠ ಮನೆತನಗಳಿಂದ ನಿರೀಕ್ಷಿತ ಬೆಂಬಲ ಸಿಗದ ರಘೋಬನು ಬ್ರಿಟಿಷರ ಬೆಂಬಲ ಕೋರಿದನು. ಬ್ರಿಟಿಷರು ಈ ಸಂದರ್ಭವನ್ನು ತಮ್ಮ ಲಾಭಕ್ಕೆ ಬಳಸಿಕೊಳ್ಳಲು ಯೋಚಿಸಿದರು. ಬ್ರಿಟಿಷರು ಮತ್ತು ಮರಾಠ ಒಕ್ಕೂಟಗಳ ನಡುವೆ 1775–1782ರವರೆಗೆ ನಡೆದ ದೀರ್ಘ ಯುದ್ಧದಲ್ಲಿ ಮರಾಠರು ಪ್ರಾರಂಭಿಕ ಯಶಸ್ಸನ್ನು ಸಾಧಿಸಿದರೂ, ಅಂತಿಮವಾಗಿ ಅಹಮದಾಬಾದ್ ಅನ್ನು ಕಳೆದುಕೊಂಡರು. ಮರಾಠ ಒಕ್ಕೂಟವು ಯುದ್ಧ ಮುಂದುವರೆಸಲಾಗದೇ ಬ್ರಿಟಿಷರೊಂದಿಗೆ ಸಾಲ್‌ಬಾಯ್ ಒಪ್ಪಂದವನ್ನು ಮಾಡಿಕೊಂಡಿತು. ಎರಡನೇ ಮಾಧವರಾವನನ್ನು ಪೇಶ್ವೆಯಾಗಿ ನೇಮಿಸಲಾಯಿತು

2) ಸಹಾಯಕ ಸೈನ್ಯ ಪದ್ಧತಿ ನಿಬಂಧನೆಗಳು ಯಾವುವು?

ಉತ್ತರ: ಭಾರತೀಯ ರಾಜ್ಯಗಳನ್ನು ನಿಯಂತ್ರಣಕ್ಕೆ ಒಳಪಡಿಸಿಕೊಳ್ಳುವ ಸಲುವಾಗಿ ಸಹಾಯಕ ಸೈನ್ಯ ಪದ್ಧತಿ ಎಂಬ ನೀತಿಯನ್ನು ವೆಲ್ಲೆಸ್ಲಿಯು 1798ರಲ್ಲಿ ಜಾರಿಗೆ ತಂದನು. ಸಹಾಯಕ ಸೈನ್ಯ ಪದ್ಧತಿಯು ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ ಮತ್ತು ಭಾರತೀಯ ರಾಜ್ಯಗಳ ನಡುವಿನ ಒಂದು ಸೈನಿಕ ಒಪ್ಪಂದವಾಗಿದೆ.

ಸಹಾಯಕ ಸೈನ್ಯ ಪದ್ಧತಿಯ ನಿಬಂಧನೆಗಳು:

1. ಭಾರತೀಯ ರಾಜನು ಬ್ರಿಟಿಷ್ ಸೈನಿಕ ತುಕಡಿಯನ್ನು ತನ್ನ ರಾಜ್ಯದಲ್ಲಿ ಇರಿಸಿಕೊಳ್ಳಬೇಕು.
2. ಸೇನೆಯ ವೇತನ ಮತ್ತು ನಿರ್ವಹಣೆಯ ವೆಚ್ಚವನ್ನು ಸಂಬಂಧಪಟ್ಟ ರಾಜ್ಯವೇ ಭರಿಸಬೇಕು. ಇಲ್ಲವೆ ನಿರ್ದಿಷ್ಟ ಕಂದಾಯ ಪ್ರದೇಶವನ್ನು ಬಿಟ್ಟುಕೊಡಬೇಕು.
3. ರಾಜನ ಆಸ್ಥಾನದಲ್ಲಿ ಬ್ರಿಟಿಷ್ ರೆಸಿಡೆಂಟನನ್ನು ನೇಮಿಸಿಕೊಳ್ಳಬೇಕು.
4. ಬ್ರಿಟಿಷರ ಅನುಮತಿ ಇಲ್ಲದೆ ಆಸ್ಥಾನದಲ್ಲಿ ಯಾವುದೇ ಯುರೋಪಿಯನ್ನರನ್ನು ನೇಮಿಸಿಕೊಳ್ಳುವಂತಿಲ್ಲ
5. ಭಾರತದ ಯಾವುದೇ ರಾಜ್ಯಗಳೊಂದಿಗೆ ಯುದ್ಧ ಅಥವಾ ಸಂಧಾನ ಮಾಡಿಕೊಳ್ಳಬೇಕಾದರೆ ಗವರ್ನರ್ ಜನರಲ್‌ನ ಸಮ್ಮತಿ ಬೇಕು.
6. ಇದಕ್ಕೆ ಪ್ರತಿಯಾಗಿ ಕಂಪನಿಯು ಆ ರಾಜ್ಯಕ್ಕೆ ಆಂತರಿಕ ಮತ್ತು ಬಾಹ್ಯ ರಕ್ಷಣೆಯನ್ನು ಒದಗಿಸುವುದು.

3) ಸಹಾಯಕ ಸೈನ್ಯ ಪದ್ಧತಿಗೆ ಒಳಗಾದ ಮೊದಲ ರಾಜ್ಯ ಯಾವುದು?

ಉತ್ತರ:– ಸಹಾಯಕ ಸೈನ್ಯ ಪದ್ಧತಿಗೆ ಒಪ್ಪಂದಕ್ಕೆ ಸಹಿ ಮಾಡಿದ ಮೊದಲ ರಾಜ್ಯ ಹೈದರಾಬಾದ್ ಸಂಸ್ಥಾನ.

4) ಸಹಾಯಕ ಸೈನ್ಯ ಪದ್ಧತಿಗೆ ಒಳಗಾದ ರಾಜ್ಯಗಳನ್ನು ಹೆಸರಿಸಿ

ಉತ್ತರ:– ಮೈಸೂರು, ಔದ್, ತಂಜಾವೂರು, ಮರಾಠ, ಆರ್ಕಾಟ್, ಪೂನಾ, ಬಿರಾರ್, ಗ್ವಾಲಿಯರ್ ಮೊದಲಾದ ರಾಜ್ಯಗಳು ಈ ಒಪ್ಪಂದಕ್ಕೆ ಒಳಪಟ್ಟವು

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ


PHYSICS

Chapter – 1

ELECTRIC CHARGES AND FIELDS

9. Sketch roughly the electric field lines for a thin, circular and uniformly positively charged disc of finite radius.

Ans:- **(.....Contd)**



If the disc is negatively charged the lines are to be shown directed inward toward the disc.

10. Give the tentative values of electric field near a charged plastic comb, at the surface of a uranium nucleus, electric discharge in air, lower layers of atmosphere near earth and on copper wiring of household installation.

Ans:- Charged plastic comb = 10^3 N C^{-1}
Surface of uranium nucleus = 10^{21} NC^{-1}
Electric discharge in air = 10^6 NC^{-1}
Lower atmosphere = 10^2 NC^{-1}
Household copper wiring = 10^{-2} NC^{-1}

Notes:- (1) Gaussian surface is an imaginary closed surface containing electric charges such that the electric field intensity at all points on its surface is same.

(2) Variation of Electric Field Intensity (E) with the distance (r) from the centre (O) of the solid sphere –
(a)Electric field intensity at the centre of the charged solid sphere is zero.
(b)As the distance (r) from the centre of solid sphere increases, electric field intensity also increases along OA and becomes maximum at the surface of the solid sphere.
(c)As the distance (r) further increases beyond the surface of the solid sphere, electric field intensity varies inversely with r^2 and hence decreases.


Answer the following:-

1. Deduce Coulomb's law from Gauss' theorem.

Ans:- DEDUCTION OF COULOMB'S LAW FROM GAUSS' THEOREM

Consider two point charges q_1 and q_2 separated by a distance r. Draw a sphere of radius r with O (position of charge q_1) as the centre. Surface of this sphere is called **Gaussian Surface.**

Now consider a small area element of area dS over the sphere. The angle between $d\vec{S}$ and electric field intensity $\vec{E}$ is zero i.e., $\theta = 0^0$.



According to Gauss' theorem,

$$\oint_S \vec{E}.d\vec{S} = \frac{q_1}{\epsilon_0} \quad (or) \quad \oint_S E\,dS\cos\theta = \frac{q_1}{\epsilon_0}$$

$$(or) \quad \oint_S E\,dS\cos\theta^0 = \frac{q_1}{\epsilon_0}$$

$$(or) \quad \oint_S E\,dS = \frac{q_1}{\epsilon_0} \qquad (\cos 0^0 = 1)$$

Since $\vec{E}$ is constant at all points on the Gaussian surface, so

$$E\oint_S dS = \frac{q_1}{\epsilon_0}.$$

But $\oint_S dS$ = surface area of the sphere = $4\pi r^2$

$$\therefore E \times 4\pi r^2 = \frac{q_1}{\epsilon_0} \; (or) \; E = \frac{1}{4\pi\epsilon_0}\frac{q_1}{r^2} \quad \text{........(i)}$$

This is the value of electric field intensity at point P where charge q_2 is placed.

∴ force experienced by q_2 is given by

$$F = q_2E = q_2 \times \frac{1}{4\pi\epsilon_0}\frac{q_1}{r^2}$$


$$ie., \; F = \frac{1}{4\pi\epsilon_0}\frac{q_1q_2}{r^2} \quad \text{.........(ii)}$$

Eqn (ii) is mathematical from of Coulomb's law

2. Find the Electric field intensity due to an infinitely long straight uniformly charged wire or line applying Gauss' theorem.

Ans:- Consider an infinite and very thin straight wire having uniform linear charge density (i.e., charge per unit length) λ. This wire is symmetrical about linear axis.

To calculate the electric field intensity E at a point P, distant r from the line drawn on imaginary **cylinder** (*Gaussian surface*) of radius *r* and length *l* around the charged line.



The charge enclosed by the Gaussian surface, q = λ *l*.

According to Gauss' theorem,

$$\oint_S \vec{E}.d\vec{S} = \frac{q}{\epsilon_0} = \frac{\lambda l}{\epsilon_0}$$

The charge enclosed by the Gaussian surface, q = λ *l*.

According to Gauss' theorem,

$$\oint_S \vec{E}.d\vec{S} = \frac{q}{\epsilon_0} = \frac{\lambda l}{\epsilon_0} \quad \text{........(i)}$$

(Contd.........)

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in



ಸುಭಾಷಿತ

ನಂಬಿ ಅನುಭವಿಸುವುದಕ್ಕಿಂತ, ಅನುಭವಿಸಿ ನಂಬುವುದೇ ಶಾಶ್ವತ ಮತ್ತು ಸತ್ಯ. ಕುರುಡು ನಂಬಿಕೆಯ ಮೇಲೆ ನಿಂತ ಅನುಭವವೂ ಕುರುಡಾದುದೇ.


– ಕುವೆಂಪು

ಸಂಪಾದಕೀಯ

ಪಾದಚಾರಿ ಹಕ್ಕುಗಳಿಗೆ ಕಾನೂನು ಬಲ ಘನತೆ–ಸುರಕ್ಷತೆಗೆ ‘ಸುಪ್ರೀಂ’ ಒತ್ತು

ಸುರಕ್ಷಿತ ಮತ್ತು ಸುಸಜ್ಜಿತ ಪಾದಚಾರಿ ಮಾರ್ಗಗಳನ್ನು ಹೊಂದುವುದು ನಾಗರಿಕರ ಮೂಲಭೂತ ಹಕ್ಕುಗಳಲ್ಲೊಂದಾಗಿದೆ ಎಂದು ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು, ನಾಗರಿಕರ ಹಕ್ಕುಗಳನ್ನು ವಿಸ್ತರಿಸುವ ಮಹತ್ವದ ನಡೆಯಾಗಿದೆ. ನಗರ– ಗ್ರಾಮೀಣ ಪ್ರದೇಶಗಳಲ್ಲಿ ರಸ್ತೆ ಮತ್ತು ಸಂಚಾರದ ಪರಿಕಲ್ಪನೆಯನ್ನು ಬದಲಿಸುವ ನಿಟ್ಟಿನಲ್ಲಿ ಈ ತೀರ್ಪಿಗೆ ವಿಶೇಷ ಮಹತ್ವವಿದೆ. ಜೀವಿಸುವ ಹಕ್ಕನ್ನು ಖಾತರಿಪಡಿಸುವ ಸಂವಿಧಾನದ 21ನೇ ವಿಧಿಯ ವ್ಯಾಪ್ತಿಯನ್ನು ಸುಪ್ರೀಂ ಕೋರ್ಟ್ ನಿರಂತರವಾಗಿ ವಿಸ್ತರಿಸುತ್ತಲೇ ಇದ್ದು, ಆ ವಿಸ್ತರಣೆಯ ರೂಪದಲ್ಲಿ ಈಗಿನ ‘ನಡಿಗೆಯ ಸ್ವಾತಂತ್ರ್ಯ’ದ ಕುರಿತ ತೀರ್ಪನ್ನು ನೋಡಬಹುದಾಗಿದೆ. ಸುರಕ್ಷಿತ ನಡಿಗೆಯು ಮನುಷ್ಯನ ಜೀವನದಲ್ಲಿ ಅತಿ ಸರಳ ಚಟುವಟಿಕೆಯಾಗಿದೆ ಹಾಗೂ ಅದು ಗೌರವಯುತ ಜೀವನದ ಅವಿಭಾಜ್ಯ ಅಂಗವಾಗಿದೆ ಎಂದು ಕೋರ್ಟ್ ಅಭಿಪ್ರಾಯಪಟ್ಟಿದೆ. ಸ್ವತಂತ್ರವಾಗಿ ನಡೆಯುವುದು ಒಂದು ಮೂಲಭೂತ ಹಕ್ಕಾಗಿದ್ದು, ಸುರಕ್ಷಿತ ನಡಿಗೆ ಖಚಿತಗೊಂಡಾಗ ಮಾತ್ರ ಆ ಹಕ್ಕು ಅರ್ಥಪೂರ್ಣವಾಗುತ್ತದೆ ಎಂದೂ ಕೋರ್ಟ್ ಹೇಳಿದೆ. ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಹಾಗೂ ಎ.ಎಸ್. ಚಂದೂರ್ಕರ್ ಅವರನ್ನೊಳಗೊಂಡ ಪೀಠವು, ನಿಗದಿತ ಪಾದಚಾರಿ ಮಾರ್ಗಗಳಲ್ಲಿ ನಡೆಯುವ ಹಕ್ಕಿಗೆ ಧಕ್ಕೆ ಬಂದಾಗ ನಾಗರಿಕರು ಪರಿಹಾರ ಮತ್ತು ಪರಿಹಾರಧನಕ್ಕಾಗಿ ಕಾನೂನುಬದ್ಧ ಕ್ರಮಗಳನ್ನು ಅವಲಂಬಿಸುವ ಹಕ್ಕು ಹೊಂದಿರುತ್ತಾರೆ ಎಂದು ತೀರ್ಪು ನೀಡಿದೆ.

ನಾಗರಿಕರ ಸುರಕ್ಷಿತ ರಸ್ತೆ ಹಕ್ಕನ್ನು ಒಪ್ಪಿಕೊಂಡು, ಪಾದಚಾರಿಗಳಿಗೆ ಅಗತ್ಯವಾದ ಮೂಲಸೌಕರ್ಯಗಳನ್ನು ನಿರ್ಮಿಸಿ ನಿರ್ವಹಿಸುವುದು ಪುರಸಭೆಗಳು ಮತ್ತು ಸ್ಥಳೀಯ ಸಂಸ್ಥೆಗಳ ಕರ್ತವ್ಯವೆಂದು ಹೊಣೆಗಾರಿಕೆ ನಿಗದಿಪಡಿಸುವ ಕಾನೂನನ್ನು ಜಾರಿಗೆ ತರುವಂತೆ ಸುಪ್ರೀಂ ಕೋರ್ಟ್ ಸರ್ಕಾರಕ್ಕೆ ಸೂಚಿಸಿದೆ. ರಸ್ತೆಯಲ್ಲಿ ನಡೆಯುತ್ತಿದ್ದಾಗ ನೀರಿನ ಟ್ಯಾಂಕರ್ ಡಿಕ್ಕಿಯಿಂದ ಮೃತಪಟ್ಟಿದ್ದ ಐದು ವರ್ಷದ ಶಾಲಾ ಬಾಲಕನೊಬ್ಬನ ಸಾವಿಗೆ ಸಂಬಂಧಿಸಿದ ಪ್ರಕರಣದಲ್ಲಿ ಈ ತೀರ್ಪು ಪ್ರಕಟಗೊಂಡಿದೆ. ವಾಹನಗಳು ಸೇರಿದಂತೆ ಎಲ್ಲ ಅನುಕೂಲಗಳನ್ನು ಹೊಂದಿರುವ ಶ್ರೀಮಂತರು ಮತ್ತು ಇತರೆ ಉನ್ನತ ವರ್ಗದವರ ಅನುಕೂಲಕ್ಕೆ ತಕ್ಕಂತೆ ನಗರಗಳು ವಿನ್ಯಾಸಗೊಳ್ಳುತ್ತಿವೆ. ಈ ಹಿನ್ನೆಲೆಯಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು, ಪಾದಚಾರಿಗಳು, ಅಂಗವಿಕಲರು, ಮಕ್ಕಳು ಮತ್ತು ಹಿರಿಯ ನಾಗರಿಕರು ಸೇರಿದಂತೆ ಎಲ್ಲ ವರ್ಗದ ಜನರಿಗೂ ನಗರಗಳು ಸೇರಿವೆ ಎನ್ನುವ ಸಮಾನತೆಯ ಪರಿಕಲ್ಪನೆಯನ್ನು ಪ್ರತಿಪಾದಿಸುವಂತಿದೆ. ಮನುಷ್ಯಸ್ವಭಾವದ ಮುಖ್ಯ ಲಕ್ಷಣಗಳಲ್ಲಿ ಒಂದಾಗಿರುವ, ವೈಯಕ್ತಿಕ ಹಾಗೂ ಸಾಮೂಹಿಕ ಜೀವನದಲ್ಲಿ ಮುಖ್ಯ ಪಾತ್ರ ಹೊಂದಿರುವ ಚಟುವಟಿಕೆಯಾದ ನಡಿಗೆಯ ಸಾಮಾಜಿಕ ಮತ್ತು ಸಾಂಸ್ಕೃತಿಕ ಮಹತ್ವವನ್ನು ನ್ಯಾಯಾಲಯ ಗುರುತಿಸಿದೆ. ‘ಮೋಟಾರು ವಾಹನಗಳ ಕಾಯ್ದೆ’ಯು ಅನೇಕ ರೀತಿಯಲ್ಲಿ ಪಾದಚಾರಿಗಳ ಅಮೂಲ್ಯ ಹಕ್ಕುಗಳಿಗೆ ಅಡ್ಡಿಯಾಗಿದೆ ಹಾಗೂ ಪಾದಚಾರಿಗಳ ಹಕ್ಕುಗಳನ್ನು ದುರ್ಬಲಗೊಳಿಸಿದೆ ಎನ್ನುವುದನ್ನೂ ಕೋರ್ಟ್ ಗಮನಿಸಿದೆ.



ಉತ್ತಮ ಪಾದಚಾರಿ ಮಾರ್ಗ ಹೊಂದುವುದು ಮೂಲಭೂತ ಹಕ್ಕು ಎಂದು ಹೇಳಿರುವ ಸುಪ್ರೀಂ ಕೋರ್ಟ್ ತೀರ್ಪು, ರಸ್ತೆ ಮತ್ತು ಸಂಚಾರದ ಪರಿಕಲ್ಪನೆಯನ್ನು ವಿಸ್ತರಿಸುವಂತಿದೆ.

ನಾಗರಿಕರಿಗೆ ಸುರಕ್ಷಿತ ಹಾಗೂ ಸುಸಜ್ಜಿತ ಪಾದಚಾರಿ ಮಾರ್ಗಗಳನ್ನು ಒದಗಿಸಿಕೊಡುವ ಉತ್ತರದಾಯಿತ್ವವನ್ನು ಸರ್ಕಾರ ಹಾಗೂ ನಾಗರಿಕ ಆಡಳಿತಗಳಿಗೆ ಸುಪ್ರೀಂ ಕೋರ್ಟ್ ತೀರ್ಪು ಗೊತ್ತುಪಡಿಸಿದೆ. ದೇಶದ ಯಾವುದೇ ಪಟ್ಟಣ ಅಥವಾ ನಗರದಲ್ಲಿ ಸಂಪೂರ್ಣ ಸುರಕ್ಷಿತ ಪಾದಚಾರಿ ಮಾರ್ಗವಿಲ್ಲ. ಬಹುತೇಕ ಪಾದಚಾರಿ ಮಾರ್ಗಗಳು ಹದಗೆಟ್ಟಿವೆ, ಅತಿಕ್ರಮಣಕ್ಕೊಳಗಾಗಿವೆ ಹಾಗೂ ಸಮರ್ಪಕ ನಿರ್ವಹಣೆ ಇಲ್ಲದೆ ವಿರೂಪಗೊಂಡಿವೆ. ವಾಹನಗಳ ನಿಲುಗಡೆ ಸ್ಥಳವಾಗಿಯೂ, ಕಟ್ಟಡ ಕಾಮಗಾರಿ ಸಾಮಗ್ರಿಗಳನ್ನು ಹಾಕುವ ಹಾಗೂ ತ್ಯಾಜ್ಯವನ್ನು ಚೆಲ್ಲುವ ಸ್ಥಳಗಳಾಗಿಯೂ ಪಾದಚಾರಿ ಮಾರ್ಗಗಳು ಬಳಕೆಯಾಗುತ್ತಿವೆ. ಬೀದಿಬದಿ ವ್ಯಾಪಾರಿಗಳು, ತರಕಾರಿ ಮಾರಾಟಗಾರರು ಹಾಗೂ ಸಾಕುನಾಯಿಗಳ ಮಾಲೀಕರಿಗೂ ಪಾದಚಾರಿ ಮಾರ್ಗಗಳು ಬಳಕೆಯಾಗುತ್ತಿವೆ. ಪಾದಚಾರಿ ಮಾರ್ಗಗಳನ್ನು ಸ್ವಚ್ಛ ಹಾಗೂ ಸುರಕ್ಷಿತಗೊಳಿಸಲು ಹೊಸತಾದ ನಗರ ಸಂಸ್ಕೃತಿ ಮತ್ತು ಆಡಳಿತ ದೃಷ್ಟಿಕೋನದ ಅಗತ್ಯವನ್ನು ಸುಪ್ರೀಂ ಕೋರ್ಟ್ ಪ್ರತಿಪಾದಿಸಿದೆ. ಆದರೆ, ಈ ತೀರ್ಪನ್ನು ಅನುಷ್ಠಾನಗೊಳಿಸುವ ಇಚ್ಛಾಶಕ್ತಿ ಹಾಗೂ ಸಾಮರ್ಥ್ಯ ಆಡಳಿತ ವ್ಯವಸ್ಥೆಗೆ ಇದೆಯೇ ಹಾಗೂ ಅದಕ್ಕೆ ಅಗತ್ಯವಾದ ಸಂಪನ್ಮೂಲಗಳಿವೆಯೇ ಎನ್ನುವ ಪ್ರಶ್ನೆಗಳಿಗೆ ಉತ್ತರಗಳು ಸರಳವಾಗಿಲ್ಲ. ಜೀವಿಸುವ ಹಕ್ಕು ಹಾಗೂ ಜೀವನೋಪಾಯದ ಹಕ್ಕಿನ ನಡುವೆ ಸಂಘರ್ಷ ಉಂಟಾಗಬಹುದು, ವಿವಿಧ ಹಿತಾಸಕ್ತಿಗಳ ನಡುವಿನ ತಿಕ್ಕಾಟಕ್ಕೂ ಕಾರಣವಾಗಬಹುದು. ಕರ್ನಾಟಕ ಹೈಕೋರ್ಟ್ ಸೇರಿದಂತೆ ಕೆಲವು ನ್ಯಾಯಾಲಯಗಳು ಈ ಹಿಂದೆ ಇಂತಹ ತೀರ್ಪುಗಳನ್ನು ನೀಡಿದ್ದರೂ ಪರಿಣಾಮ ಅಷ್ಟಕ್ಕಷ್ಟೇ.

ಜಾಲಡಿ

ಹೆಸರು ಬದಲಿಸುವ ಯುಗದಲ್ಲಿ...



‘ಆಲ್ ಇಂಡಿಯಾ ಫುಟ್‌ಬಾಲ್ ಫೆಡರೇಶನ್’ ತನ್ನ ಹೆಸರನ್ನು ‘ಫುಟ್‌ಬಾಲ್ ಫೆಡರೇಶನ್ ಆಫ್ ಭಾರತ’ ಎಂದು ಬದಲಾಯಿಸಲು ಉದ್ದೇಶಿಸಿದೆ. ವಾಹ್, ಎಂಥ ಅದ್ಭುತ ಕಲ್ಪನೆ! ಆಟದ ದಿಕ್ಕನ್ನೇ ಬದಲಾಯಿಸುವಂತಹ ಸಾಧನೆಗಳನ್ನು ಮಾಡುವ ಬದಲು, ನಾವು ಈಗ ಹೆಸರು ಬದಲಾಯಿಸುವ ಯುಗದಲ್ಲಿ ಬದುಕುತ್ತಿದ್ದೇವೆ!

ರಾಜದೀಪ್ ಸರ್ದೇಸಾಯಿ, ಪತ್ರಕರ್ತ, ‘ಎಕ್ಸ್’ನಿಂದ

ಕಿಡಿನುಡಿ



ರಾಮ ಮಂದಿರವು ಕೋಟ್ಯಂತರ ಹಿಂದೂಗಳ ನಂಬಿಕೆ ಮತ್ತು ಭಕ್ತಿಯ ಪ್ರತೀಕ. ಆ ಮಂದಿರದಿಂದ ಕೋಟ್ಯಂತರ ರೂಪಾಯಿ ಮೌಲ್ಯದ ದೇಣಿಗೆ ಹಣ ಕಳವಾಗಿರುವುದಾಗಿ ಹೇಳಲಾಗುತ್ತಿದೆ. ಇದುವರೆಗೆ ಒಂದೇ ಒಂದು ಎಫ್‌ಐಆರ್ ದಾಖಲಾಗಿಲ್ಲ. ಸರ್ಕಾರ ಯಾರನ್ನು ರಕ್ಷಿಸುತ್ತಿದೆ?

ಅರವಿಂದ ಕೇಜ್ರಿವಾಲ್, ಮಾಜಿ ಮುಖ್ಯಮಂತ್ರಿ, ದೆಹಲಿ

25 ವರ್ಷಗಳ ಹಿಂದೆ

ಶುಕ್ರವಾರ, 22-06-2001

• ಹೈಕೋರ್ಟ್ ಪೀಠಕ್ಕೆ ಒತ್ತಾಯಿಸಿ ಸ್ವಾಭಿಮಾನ ಸ್ತೂಪ ಸ್ಥಾಪನೆ

ಧಾರವಾಡ, ಜೂನ್ 21– ‘ಹೈಕೋರ್ಟ್ ಪೀಠ ಸ್ಥಾಪನೆ ಆಗಲೇಬೇಕು’, ‘ನಂಜುಂಡಪ್ಪ ಸಮಿತಿ ಮಧ್ಯಂತರ ವರದಿ ಜಾರಿಗೆ ಬರಲಿ’ ಎಂದು ಆಗ್ರಹಿಸಿ ಧಾರವಾಡದಲ್ಲಿ ಮೆರವಣಿಗೆ ನಡೆಸಿದ ಉತ್ತರ ಕರ್ನಾಟಕ ಸಮಗ್ರ ಅಭಿವೃದ್ಧಿ ವೇದಿಕೆ ಕಾರ್ಯಕರ್ತರು ಜಿಲ್ಲಾಧಿಕಾರಿ ಕಚೇರಿ ಮುಂದೆ ‘ಉತ್ತರ ಕರ್ನಾಟಕದ ಸ್ವಾಭಿಮಾನ ಸ್ತೂಪ’ ನೆಟ್ಟರು.

ಕಳೆದ ವರ್ಷ ಇದೇ ದಿನ ವೇದಿಕೆಯ ಕಾರ್ಯಕರ್ತರು ಪ್ರತ್ಯೇಕ ಉತ್ತರ ಕರ್ನಾಟಕಕ್ಕೆ ಆಗ್ರಹಿಸಿ ಆರ್.ಎನ್. ಶೆಟ್ಟಿ ಕ್ರೀಡಾಂಗಣದಲ್ಲಿ ಧ್ವಜಾರೋಹಣ ಮಾಡಿದ್ದರು. ಪ್ರಥಮ ವಾರ್ಷಿಕೋತ್ಸವದ ನೆನಪಿಗಾಗಿ ಈ ಸ್ವಾಭಿಮಾನ ಸ್ತೂಪ ನೆಡಲಾಯಿತು.

• ಕೆಲವು ಶಿಕ್ಷಣ ಸಂಸ್ಥೆಗಳಿಗೆ ಅನುದಾನ ಕಡಿತ

ಬೆಂಗಳೂರು, ಜೂನ್ 21– ಶಾಲಾ ಕಾಲೇಜುಗಳಲ್ಲಿ ಪರಿಶಿಷ್ಟ ಜಾತಿ ಹಾಗೂ ಪಂಗಡಗಳಿಗೆ ಸೂಕ್ತ ಪ್ರಾತಿನಿಧ್ಯ ನೀಡದ ಕೆಲವು ಶಿಕ್ಷಣ ಸಂಸ್ಥೆಗಳಿಗೆ ತಕ್ಷಣ ಅನುದಾನ ನಿಲ್ಲಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತಿದೆ ಎಂದು ಸಮಾಜ ಕಲ್ಯಾಣ ಸಚಿವ ಕಾಗೋಡು ತಿಮ್ಮಪ್ಪ ಅವರು ಇಂದು ಇಲ್ಲಿ ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದರು.

75 ವರ್ಷಗಳ ಹಿಂದೆ

ಶುಕ್ರವಾರ, 22-06-2001

• ಮಸಾದಿಕ್‌ರ ತೈಲ ನೀತಿಗೆ ಪಾರ್ಲಿಮೆಂಟ್ ಬೆಂಬಲ

ಟೆಹರಾನ್, ಜೂನ್ 21– ಪರ್ಷಿಯಾದ ಪ್ರಧಾನಿ ಮಸಾದಿಕ್‌ರವರು ತಮ್ಮ ಎಣ್ಣೆ ನೀತಿಯ ಬಗ್ಗೆ ಇಂದು ಪಾರ್ಲಿಮೆಂಟಿನ ವಿಶ್ವಾಸ ಪಡೆದರು. ‘ನಿಮ್ಮ ವಿಶ್ವಾಸ ವ್ಯಕ್ತಪಡಿಸಿ. ಇಲ್ಲದಿದ್ದರೆ ಜವಾಬ್ದಾರಿ ನನ್ನದಲ್ಲ’ ಎಂಬುದಾಗಿ ಬೆದರಿಕೆ ಹಾಕಿದ ನಂತರ 91 ಮಂದಿ ಪ್ರತಿನಿಧಿಗಳು ಪರವಾಗಿ ಓಟು ಮಾಡಿದರು.

ಸಹಸ್ರಾರು ಪರ್ಷಿಯನ್ನರು ರಾಜಧಾನಿಯ ರಸ್ತೆಗಳಲ್ಲಿ ನುಗ್ಗಿ ಆಂಗ್ಲೋ–ಇರಾನ್ ಎಣ್ಣೆ ಕಂಪನಿಯ ಬೋರ್ಡು ಕಿತ್ತರು. ಪೊಲೀಸರನ್ನು ಅಲಕ್ಷ್ಯ ಮಾಡಿ ಕಂಪನಿ ಕಚೇರಿಯಲ್ಲಿ ನುಗ್ಗಿದರು. ಆದರೆ, ಬ್ರಿಟಿಷರಾರಿಗೂ ಸ್ವಲ್ಪವೂ ಪೆಟ್ಟು ಬೀಳಲಿಲ್ಲ.

• ಲಾಹೋರ್ ಜೈಲಿಗೆ ಖಾನ್

ಲಾಹೋರ್, ಜೂನ್ 21– ವೈದ್ಯ ಸಲಹೆ ಮತ್ತು ಚಿಕಿತ್ಸೆಗಾಗಿ ಗಡಿನಾಡಿನ ಗಾಂಧಿ ಖಾನ್ ಅಬ್ದುಲ್ ಗಫಾರ್ ಖಾನರನ್ನು ರಾವಲ್ಪಿಂಡಿಯಿಂದ ಲಾಹೋರ್ ಜೈಲಿಗೆ ವರ್ಗಾಯಿಸಲಾಗಿದೆಯೆಂದು ಸುದ್ದಿ ಬಂದಿದೆ.

ಮೋದಿ: 12 ವರ್ಷಗಳ ಪರ್ವಕಾಲ

ಸೂರ್ಯ ನಮಸ್ಕಾರ



ಎ. ಸೂರ್ಯಪ್ರಕಾಶ್

> ದೇಶದ ಅತ್ಯಂತ ದೀರ್ಘ ಕಾಲದ ಚುನಾಯಿತ ಪ್ರಧಾನಿ ಎನ್ನುವ ದಾಖಲೆಗೆ ಪಾತ್ರರಾಗಿರುವ ನರೇಂದ್ರ ಮೋದಿ ಅವರ ಆಡಳಿತಾವಧಿ ಸಾಧನೆಗಳ ಕಾರಣದಿಂದಲೂ ಗಮನಸೆಳೆಯುವಂತಿದೆ. ಸಾಮಾಜಿಕ ಬಿಕ್ಕಟ್ಟುಗಳ ನಿರ್ವಹಣೆಯಲ್ಲಿನ ತೊಡಕುಗಳ ನಡುವೆಯೂ, ಮೋದಿ ಅವರ ಅವಧಿಯಲ್ಲಿ ಹಲವು ಕ್ಷೇತ್ರಗಳಲ್ಲಿ ದೇಶ ಗಮನಾರ್ಹ ಪ್ರಗತಿ ಸಾಧಿಸಿದೆ.

ದೇಶದ ಆಡಳಿತವನ್ನು ಹತ್ತಾರು ವರ್ಷಗಳ ಕಾಲ ಅತ್ಯಂತ ನಿಕಟವಾಗಿ ಗಮನಿಸುವ ಅವಕಾಶ ಪಡೆದ ಯಾರಾದರೂ ಈ ಅಂಕಣಕಾರನಂತೆ, ಪ್ರಧಾನಿ ನರೇಂದ್ರ ಮೋದಿ ಅವರು ಅತ್ಯಂತ ವಿಶಿಷ್ಟ ನಾಯಕ ಎನ್ನುವ ಸಂಗತಿಯನ್ನು ಒಪ್ಪಲೇಬೇಕು. ಅವರ ವಿಶಿಷ್ಟ ಸಾಮರ್ಥ್ಯ, ಯಾವುದಾದರೊಂದು ವಿಷಯದ ಬಗ್ಗೆ ಗಮನ ಕೇಂದ್ರೀಕರಿಸುವ ಬಗೆ, ದೂರದೃಷ್ಟಿ ಅಥವಾ ಆಡಳಿತದ ವಿಷಯದಲ್ಲಿನ 360 ಡಿಗ್ರಿ ದೃಷ್ಟಿಕೋನ, ಇವೆಲ್ಲದರ ಹಿನ್ನೆಲೆಯಲ್ಲಿ ಅವರಿಗೆ ಪರ್ಯಾಯ ಇಲ್ಲ.

ಮೋದಿ ಅವರ ನೇತೃತ್ವದಲ್ಲಿ ಕಳೆದ ಹನ್ನೆರಡು ವರ್ಷಗಳಲ್ಲಿ ದೇಶವು ಪ್ರತಿಯೊಂದು ಕ್ಷೇತ್ರದಲ್ಲಿ ಇಟ್ಟಿರುವ ದಾಪುಗಾಲನ್ನು ಗಮನಿಸಿ: ಮೂಲಸೌಕರ್ಯ, ಬಡತನ ನಿರ್ಮೂಲನೆ, ಆರ್ಥಿಕ ಪ್ರಗತಿ, ಆರೋಗ್ಯ ಕ್ಷೇತ್ರದ ಸುಧಾರಣೆ, ಕೈಗಾರಿಕೋದ್ಯಮ, ಕೃಷಿ, ವಿದೇಶಾಂಗ ನೀತಿ, ರಕ್ಷಣೆ, ಡಿಜಿಟಲ್ ಇಂಡಿಯಾ ಅಥವಾ ಸಾಮಾಜಿಕ ಕ್ಷೇತ್ರಗಳಲ್ಲಿನ ಗಣನೀಯ ಸಾಧನೆಗಳು... ಎಲ್ಲದರಲ್ಲೂ ಮೋದಿ ಅವರ ಛಾಪು ಎದ್ದು ಕಾಣಿಸುವಂತಿದೆ.

ಮೋದಿ ಅವಧಿಯಲ್ಲಿ ದೇಶ ಸಾಧಿಸಿರುವ ಯಶಸ್ಸು ಎಷ್ಟು ದೊಡ್ಡದಾಗಿದೆ ಎಂದರೆ, ಒಂದು ಅಂಕಣ ಬರಹದಲ್ಲಿ ಎಲ್ಲವನ್ನೂ ಪಟ್ಟಿ ಮಾಡುವುದು ಸಾಧ್ಯವಿಲ್ಲ. ಹೀಗಾಗಿ ನಿರ್ದಿಷ್ಟ ಕ್ಷೇತ್ರ ಆಧಾರವಾಗಿಟ್ಟುಕೊಂಡು ಅವರ ಸಾಧನೆಯನ್ನು ವಿಶ್ಲೇಷಿಸಬಹುದು. ಉದಾಹರಣೆಗೆ, ಬಡವರ ಸಬಲೀಕರಣದ ಯೋಜನೆಗಳು. ಸಂವಿಧಾನದ 36ರಿಂದ 51ನೇ ವಿಧಿಗಳಲ್ಲಿನ ಸರ್ಕಾರದ ಯೋಜನಾ ನಿರ್ದೇಶಿತ ತತ್ತ್ವಗಳಿಗೆ ಅನುಗುಣವಾಗಿ ಕಲ್ಯಾಣ ಸಮಾಜವನ್ನು ಸ್ಥಾಪಿಸುವ ಉದ್ದೇಶದ ಹೆಜ್ಜೆಗಳನ್ನು ಈ ಯೋಜನೆಗಳಲ್ಲಿ ಗುರ್ತಿಸಬಹುದಾಗಿದೆ.

ಮೋದಿ ಅವರ ಯೋಜನೆಗಳಲ್ಲಿ ‘ಪ್ರಧಾನಮಂತ್ರಿ ಜನಧನ ಯೋಜನೆ’ ಮುಖ್ಯವಾದುದು. ವಿಶ್ವದಲ್ಲೇ ಅತಿದೊಡ್ಡ ಪ್ರಮಾಣದ ಆರ್ಥಿಕ ಒಳಗೊಳ್ಳುವಿಕೆಯ ಮಹತ್ವಾಕಾಂಕ್ಷಿ ಯೋಜನೆ ಇದು. ಈ ಯೋಜನೆಯನ್ನು 2014ರ ಆಗಸ್ಟ್ 15ರಂದು ಘೋಷಿಸಲಾಯಿತು. ಬ್ಯಾಂಕಿಂಗ್ ಕ್ಷೇತ್ರದ ವ್ಯಾಪ್ತಿಗೆ ಬಡವರನ್ನು ತರುವುದು ಯೋಜನೆಯ ಉದ್ದೇಶವಾಗಿತ್ತು. ಇದರ ಫಲವಾಗಿ, ದಾಖಲೆಯ 58 ಕೋಟಿ ಬ್ಯಾಂಕ್ ಖಾತೆಗಳನ್ನು ಇದುವರೆಗೆ ದೇಶದಲ್ಲಿ ತೆರೆಯಲಾಗಿದೆ. ಆ ಖಾತೆಗಳ ಪೈಕಿ ಶೇ 56ರಷ್ಟು ಮಹಿಳೆಯರಿಗೆ ಸೇರಿವೆ.

ಬಡತನ ರೇಖೆಗಿಂತ ಕೆಳಮಟ್ಟದಲ್ಲಿ ಇರುವವರಿಗೆ ಶೌಚಾಲಯಗಳನ್ನು ನಿರ್ಮಿಸಲು ಸಹಾಯಧನ ನೀಡುವುದು ಮೋದಿ ಅವರ ಅವಧಿಯಲ್ಲಿ ಜಾರಿಗೊಂಡಿರುವ ಎರಡನೇ ಮಹತ್ವದ ಯೋಜನೆ. 2014ರ ಅಕ್ಟೋಬರ್ 2ರಂದು ಇದನ್ನು ಪ್ರಾರಂಭಿಸಲಾಯಿತು. ಇದುವರೆಗೆ ಈ ಯೋಜನೆಯು 12.5 ಕೋಟಿ ಮನೆಗಳನ್ನು ತಲಪಿದೆ. ಎಲ್‌ಪಿಜಿ ಸಿಲಿಂಡರ್ ಅನ್ನು ರಿಯಾಯಿತಿ ದರದಲ್ಲಿ ಪೂರೈಸುವ ‘ಪ್ರಧಾನ ಮಂತ್ರಿ ಉಜ್ವಲ ಯೋಜನೆ’ಯು ಮೂರನೆಯ ಪ್ರಮುಖ ಹೆಜ್ಜೆಯಾಗಿದೆ. 2016ರಲ್ಲಿ ಪ್ರಾರಂಭವಾದ ಈ ಯೋಜನೆಯು ಇದುವರೆಗೆ 10.5 ಕೋಟಿ ಮನೆಗಳಲ್ಲಿ ಒಲೆಗಳು ಉರಿಯುವಂತೆ ಮಾಡಿದೆ. ಕೊಲ್ಲಿ ಯುದ್ಧದ ಕಾರಣದಿಂದಾಗಿ ಪೂರೈಸುತ್ತಿರುವ ಸಿಲಿಂಡರ್‌ಗಳ ಸಂಖ್ಯೆಯನ್ನು ಕಡಿಮೆ ಮಾಡಲಾಗಿದೆಯಾದರೂ, ಯೋಜನೆಯ ಉದ್ದೇಶ ಮೌಲಿಕವಾದುದು. ಹಳ್ಳಿಗಾಡಿನ ಮಹಿಳೆಯರಿಗೆ ಅನುಕೂಲ ಕಲ್ಪಿಸಿದ ಈ ಎರಡೂ ಯೋಜನೆಗಳು ಪ್ರಧಾನಿಯವರ ದೂರದೃಷ್ಟಿಯ ಫಲ.

ಗ್ರಾಮೀಣ ಭಾರತದ ಕುಟುಂಬಗಳಿಗೆ ನೀರಿನ ಸಮಸ್ಯೆಯನ್ನು ಪರಿಹರಿಸಲು ಕೈಗೊಂಡ ಯೋಜನೆಯೂ ಉಲ್ಲೇಖನಾರ್ಹ. ದೇಶದ ಪ್ರತಿ ಹಳ್ಳಿಗೂ, ಪ್ರತಿ ಮನೆಗೂ ನಲ್ಲಿ ಮೂಲಕ ನೀರು ಪೂರೈಸುವ ಖಾತರಿಯನ್ನು ನೀಡುವ ಈ ಯೋಜನೆ ಹಳ್ಳಿಗರ ಬದುಕನ್ನು ಸಹನೀಯಗೊಳಿಸುವ ಪ್ರಯತ್ನವಾಗಿದೆ. 2019ರ ಆಗಸ್ಟ್15ರಂದು ಈ ಯೋಜನೆಗೆ ಚಾಲನೆ ನೀಡಲಾಗಿತ್ತು. ಇದುವರೆಗೆ 19 ಕೋಟಿ ಮನೆಗಳಿಗೆ ನೀರಿನ ಸಂಪರ್ಕ ಕಲ್ಪಿಸಲಾಗಿದೆ. ಈ ಪೈಕಿ ಶೇ 73ರಷ್ಟರಲ್ಲಿ ಈಗಾಗಲೇ ನೀರು ಬರುತ್ತಿದೆ.

2024ರ ಜನವರಿ 1ರಂದು ಪ್ರಾರಂಭಿಸಲಾದ ‘ಪ್ರಧಾನಮಂತ್ರಿ ಗರಿಬ್ ಕಲ್ಯಾಣ್ ಅನ್ನ ಯೋಜನೆ’ಯು ಕಳೆದೊಂದು ದಶಕದಲ್ಲಿ ಕೇಂದ್ರ ಸರ್ಕಾರ ಕೈಗೊಂಡ ಪ್ರಮುಖ ನಿರ್ಧಾರಗಳಲ್ಲಿ ಒಂದಾಗಿದೆ. ಈ ಯೋಜನೆಯಡಿ, ಪ್ರಸ್ತುತ ಸುಮಾರು 81 ಕೋಟಿ ಜನರಿಗೆ ಉಚಿತ ದಿನಸಿ ದೊರೆಯುತ್ತಿದೆ. ಈ ಯೋಜನೆಯನ್ನು ಕೋವಿಡ್ ಸಂದರ್ಭದಲ್ಲಿ ಶುರು ಮಾಡಲಾಯಿತಾದರೂ, ಆಮೇಲೆ ಅದನ್ನು ಅಧಿಕೃತಗೊಳಿಸಲಾಯಿತು. ಇಷ್ಟು ದೊಡ್ಡ ಸಂಖ್ಯೆಯ ಜನರಿಗೆ ಪ್ರತಿ ತಿಂಗಳೂ ಜೀವನವಶ್ಯವಾದ ದಿನಸಿಯನ್ನು ಉಚಿತವಾಗಿ ನೀಡುವ ಇಂಥ ಯೋಜನೆಯನ್ನು ಬಹುಶಃ ಬೇರೆ ಯಾವ ದೇಶವೂ ಅನುಷ್ಠಾನಗೊಳಿಸಿಲ್ಲ. ಕಳೆದ ಐವತ್ತು ವರ್ಷಗಳಿಂದಲೂ ಕಾರ್ಯನಿರ್ವಹಿಸುತ್ತಿರುವ ಪಡಿತರ ಕೇಂದ್ರಗಳು ರಿಯಾಯಿತಿ ದರದಲ್ಲಿ ದವಸ ನೀಡುತ್ತಿವೆ. ಆದರೆ, ಉಚಿತವಾಗಿ ದಿನಸಿ ಪೂರೈಸುವ ಉಪಕ್ರಮ ಶುರುವಾದದ್ದು ಮೋದಿ ಅವರ ಅವಧಿಯಲ್ಲಿಯೇ. ಬಡತನ ನಿರ್ಮೂಲನೆ ಮಾಡುವ ಇಂತಹ ಯೋಜನೆಗಳ ಬಗ್ಗೆ ಪ್ರತಿಯೊಬ್ಬ ಭಾರತೀಯ ಹೆಮ್ಮೆ ಪಡಬೇಕು.

ಮೇಲಿನ ಯೋಜನೆಗಳ ಜೊತೆಗೆ, ಮಹಿಳಾ ಸಬಲೀಕರಣವು ಮೋದಿ ಅವರ ಸರ್ಕಾರದ ಮುಖ್ಯ ಮಂತ್ರ ಆಗಿದೆ. ರಾಜ್ಯಗಳ ವಿಧಾನಸಭೆಗಳಲ್ಲಿ ಹಾಗೂ ಸಂಸತ್‌ನಲ್ಲಿ ಮಹಿಳೆಯರಿಗೆ ಮೂರನೇ ಒಂದು ಭಾಗದಷ್ಟು ಸ್ಥಾನಗಳ ಪ್ರಾತಿನಿಧ್ಯ ನೀಡುವ ವಿಷಯಕ್ಕೆ ಮೋದಿ ಸರ್ಕಾರ ಒತ್ತುನೀಡುತ್ತಲೇ ಬಂದಿದೆ ಹಾಗೂ ಈ ಪ್ರಾತಿನಿಧ್ಯವನ್ನು ಕಾನೂನುಬದ್ಧಗೊಳಿಸುವ ಪ್ರಯತ್ನದಲ್ಲೂ ತೊಡಗಿದೆ. ಸಶಸ್ತ್ರ ಪಡೆಗಳಲ್ಲಿ ಮಹಿಳೆಯರನ್ನು ಶಾಶ್ವತವಾಗಿ ನಿಯೋಜಿಸುವ ಕ್ರಿಯೆಯನ್ನೂ ಸಾಕಾರಗೊಳಿಸಿದೆ. ರಾಷ್ಟ್ರೀಯ ರಕ್ಷಣಾ ಅಕಾಡೆಮಿಯಲ್ಲಿ ತರಬೇತಿ ಪಡೆದ 17 ಮಹಿಳಾ ಅಧಿಕಾರಿಗಳನ್ನು ಇತ್ತೀಚೆಗಷ್ಟೇ ಸಶಸ್ತ್ರ ಪಡೆಗಳಲ್ಲಿ ನಿಯೋಜನೆ ಮಾಡಲಾಗಿದೆ.

ಮಹಿಳಾ ಸಮಸ್ಯೆಗಳ ಬಗ್ಗೆ ಸರ್ಕಾರದ ಸಂವೇದನಾಶೀಲತೆಗೆ ನಿದರ್ಶನವಾಗಿ ತಾಯಂದಿರ ಕುರಿತಾದ ಸರ್ಕಾರದ ಕಾಳಜಿಯನ್ನು ಗಮನಿಸಬಹುದು. ‘ಮಾತೃತ್ವ ಪ್ರಯೋಜನ ಕಾಯ್ದೆ–2017’ಕ್ಕೆ ತಿದ್ದುಪಡಿ ತರುವ ಮೂಲಕ, ಮಹಿಳೆಯರಿಗೆ ಇದ್ದ 12 ವಾರಗಳ ಹೆರಿಗೆ ರಜೆಯನ್ನು 26 ವಾರಗಳಿಗೆ (ಆರು ತಿಂಗಳಿಗೆ) ವಿಸ್ತರಿಸಲಾಗಿದೆ. ಈ ಕ್ರಮವು, ಸರ್ಕಾರವು ಮಹಿಳೆಯರ ಹಿತವನ್ನು ಎಷ್ಟು ಸೂಕ್ಷ್ಮವಾಗಿ ಯೋಚಿಸುತ್ತಿದೆ ಎನ್ನುವುದಕ್ಕೆ ಸಾಕ್ಷಿಯಾಗಿದೆ. ಮೊದಲ ಎರಡು ಮಕ್ಕಳ ಹೆರಿಗೆ ಸಂದರ್ಭದಲ್ಲಿ ಸಂಬಳ ಸಹಿತ ‘ಮಾತೃತ್ವ ರಜೆ’ ದೊರೆಯುತ್ತದೆ. ಮೂರನೇ ಮಗುವಿನ ಹೆರಿಗೆ ಸಂದರ್ಭದಲ್ಲಿ 12 ವಾರಗಳ ರಜೆ ಸಿಗುತ್ತದೆ.

ಜನಕಲ್ಯಾಣಕ್ಕಾಗಿ ಮೋದಿ ಅವರ ಸರ್ಕಾರ ಜಾರಿಗೆ ತಂದಿರುವ ಯೋಜನೆಗಳನ್ನು ಸಂವಿಧಾನದ ನಿರ್ದೇಶಿತ ತತ್ತ್ವಗಳ ಹಿನ್ನೆಲೆಯಲ್ಲಿ ಗಮನಿಸಬೇಕು. ಈ ಯೋಜನೆಗಳು ನಾಗರಿಕರ ಜೀವನಕ್ರಮದ ಸುಧಾರಣೆಗೆ ಒತ್ತುನೀಡಿವೆ. ನಾಗರಿಕರಿಗೆ ಸಮರ್ಪಕ ಜೀವನೋಪಾಯ ಕಲ್ಪಿಸುವ, ಪೌಷ್ಟಿಕಾಂಶದ ಮಟ್ಟ ಹೆಚ್ಚಿಸುವ, ಸಾರ್ವಜನಿಕ ಆರೋಗ್ಯ ಸುಧಾರಿಸುವ (ಆರ್ಟಿಕಲ್ 47), ಮಾನವೀಯ ಹಾಗೂ ನ್ಯಾಯಸಮ್ಮತ ಕೆಲಸದ ಪರಿಸ್ಥಿತಿಗಳನ್ನು ಖಚಿತಪಡಿಸುವ ಮತ್ತು ಮಾತೃತ್ವ ಪರಿಹಾರ ಒದಗಿಸುವ (ಆರ್ಟಿಕಲ್ 42), ಬದುಕಲು ಯೋಗ್ಯ ವೇತನ ಮತ್ತು ಉತ್ತಮ ಜೀವನಮಟ್ಟವನ್ನು ಖಚಿತಪಡಿಸುವ (ಆರ್ಟಿಕಲ್ 43) ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುವುದು ಸರ್ಕಾರದ ಹೊಣೆಗಾರಿಕೆಯಾಗಿದೆ ಎನ್ನುವುದನ್ನು ಸಂವಿಧಾನದ ನಿರ್ದೇಶಿತ ತತ್ತ್ವಗಳು ಸ್ಪಷ್ಟಪಡಿಸುತ್ತವೆ. ದೇಶದ 81 ಕೋಟಿ ಜನರಿಗೆ ಉಚಿತ ಪಡಿತರ ನೀಡುವುದು, ಬಡವರು ಹಾಗೂ ಹಿರಿಯ ನಾಗರಿಕರಿಗೆ ‘ಆಯುಷ್ಮಾನ್ ಭಾರತ್ ಆರೋಗ್ಯ ವಿಮೆ’ ಒದಗಿಸುವುದು, ಮಹಿಳೆಯರಿಗೆ ಆರು ತಿಂಗಳು ಹೆರಿಗೆ ರಜಾ ಕೊಡುವುದು, ಶೌಚಾಲಯ ನಿರ್ಮಾಣಕ್ಕೆ ಸಬ್ಸಿಡಿ ವಿತರಣೆ ಅಥವಾ ಜನಧನ ಯೋಜನೆ – ಇವೆಲ್ಲವೂ ದೇಶದ ನಾಗರಿಕರಿಗೆ ಸಂವಿಧಾನಬದ್ಧವಾಗಿ ದೊರೆಯಬೇಕಾದ ಅನುಕೂಲಗಳನ್ನು ದಕ್ಕಿಸಿಕೊಟ್ಟಿರುವ ಯೋಜನೆಗಳಾಗಿವೆ.

ಭಾರತದ ಇತಿಹಾಸದಲ್ಲೇ ಅತಿ ಹೆಚ್ಚು ಕಾಲ ಕಾರ್ಯ ನಿರ್ವಹಿಸಿರುವ ಚುನಾಯಿತ ಪ್ರಧಾನಿಯಾಗಿ 4,399 ದಿನಗಳ ಆಡಳಿತ ನಡೆಸಿದ ದಾಖಲೆಯನ್ನು ನರೇಂದ್ರ ಮೋದಿ ಅವರು ನಿರ್ಮಿಸಿದ್ದಾರೆ. ಇದು ಹೆಮ್ಮೆಯ ಸಂಗತಿ. ಹಾಗೆಯೇ, ಈ ಹನ್ನೆರಡು ವರ್ಷಗಳ ಅವಧಿಯಲ್ಲಿ ಉದ್ಭವಿಸಿರುವ ಸಾಮಾಜಿಕ ಬಿಕ್ಕಟ್ಟುಗಳ ನಿರ್ವಹಣೆಯಲ್ಲಿ ಮೋದಿ ಅವರು ಎಡವಿದ್ದಾರೆ ಎನ್ನುವ ಪ್ರತಿಪಕ್ಷಗಳ ಆರೋಪಗಳೂ ನ್ಯಾಯಸಮ್ಮತವಾಗಿವೆ. ಮುಂದಿನ ದಿನಗಳಲ್ಲಿ ಇಂತಹ ಬಿಕ್ಕಟ್ಟುಗಳನ್ನು ಪರಿಣಾಮಕಾರಿಯಾಗಿ ನಿಭಾಯಿಸುವತ್ತ ಮೋದಿ ಅವರು ಗಮನ ಹರಿಸಬೇಕು. ಈ ಸವಾಲಿನ ಹೊರತಾಗಿ, ಮೋದಿ ಅವರ ಸರ್ಕಾರ ಸಾಧಿಸಿರುವ ಸಂಗತಿಗಳನ್ನು ಹೇಳುವಾಗ ವಿಪಕ್ಷಗಳ ಧ್ವನಿ ಕ್ಷೀಣವಾಗುತ್ತದೆ.

ಅನೇಕ ಕ್ಷೇತ್ರಗಳಲ್ಲಿ ಪ್ರಧಾನಿ ಅವರು ಸಾಧಿಸಿರುವ ಯಶಸ್ಸಿನ ಶ್ರೇಯಸ್ಸನ್ನು ಅವರಿಗೆ ನೀಡದಿರುವುದು ನ್ಯಾಯಸಮ್ಮತವಲ್ಲ. ಪ್ರಸ್ತುತ ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತದ ವರ್ಚಸ್ಸು ಹಾಗೂ ಆರ್ಥಿಕ ಕ್ಷೇತ್ರದ ಸಾಧನೆ ಗಮನಾರ್ಹವಾದುದು. 2014ರಲ್ಲಿ ವಿಶ್ವದ 10ನೇ ದೊಡ್ಡ ಆರ್ಥಿಕ ರಾಷ್ಟ್ರ ಎನಿಸಿದ್ದ ಭಾರತ ಈಗ 4ನೇ ಸ್ಥಾನಕ್ಕೆ ಏರಿದೆ. ಮೂಲಸೌಕರ್ಯ ವಿಸ್ತರಣೆ (ಆ್ಯಕ್ಸಿಸ್ ನಿಯಂತ್ರಣವಿದ್ದ ಎಕ್ಸ್‌ಪ್ರೆಸ್‌ವೇ 2014ರಲ್ಲಿ 93 ಕಿ.ಮೀ ಇತ್ತು. ಈಗ ಅದು 3,694 ಕಿ.ಮೀ. ಆಗಿದೆ. 2014ರಲ್ಲಿ 74 ವಿಮಾನನಿಲ್ದಾಣಗಳಿದ್ದವು, ಈಗ ಈ ಸಂಖ್ಯೆ 164ಕ್ಕೆ ಏರಿಕೆಯಾಗಿದೆ) ಅಥವಾ ಮೋದಿ ತಂದಿರುವ ಡಿಜಿಟಲ್ ಕ್ರಾಂತಿಗೆ ಮೆಚ್ಚುಗೆಯ ಅಡಿಗೆರೆ ಎಳೆಯಬೇಕು. ಪ್ರತಿ ಕ್ಷೇತ್ರದಲ್ಲೂ ಭಾರತದ ಸಾಧನೆ ಕಣ್ಣಿಗೆ ಕಾಣಿಸುವಂತಿದೆ. ಈ ಸಾಧನೆಯನ್ನು ಅಲ್ಲಗಳೆಯುವವರು ತಮಗೆ ತಾವು ಆತ್ಮವಂಚನೆ ಮಾಡಿಕೊಳ್ಳುತ್ತಿರುತ್ತಾರೆ. ಹೊಸ, ‘ಸುಧಾರಿತ ಭಾರತ’ದಲ್ಲಿ ಈಗ ಭಾರತೀಯರು ಜೀವಿಸುತ್ತಿದ್ದಾರೆ. ಅದು ಮೋದಿ ಅವರ ಟೀಕಾಕಾರರಿಗೂ ತಿಳಿದಿದೆ.



ವಾಚಕರ ವಾಣಿ

ಜನಾರೋಗ್ಯಕ್ಕೆ ‘ಸಕ್ಕರೆ ತೆರಿಗೆ’ ಜಾರಿ ಅಗತ್ಯ

ಭಾರತವು ಜಗತ್ತಿನ ಮಧುಮೇಹದ ರಾಜಧಾನಿ ಎಂಬ ಕುಖ್ಯಾತಿಗೆ ಪಾತ್ರವಾಗಿದೆ. ನಮ್ಮ ದೇಶದ ನಾಗರಿಕರ ಆರೋಗ್ಯ ‘ಆಹಾರ ಮಾಫಿಯಾ’ದ ಕೈಯಲ್ಲಿ ಸಿಲುಕಿ ನಲುಗುತ್ತಿದೆ. ಈ ಮಾರಕ ಪರಿಸ್ಥಿತಿಯನ್ನು ತಡೆಯಲು ಸರ್ಕಾರಗಳು ಕಠಿಣ ನಿಯಮಗಳನ್ನು ಜಾರಿಗೆ ತರಬೇಕಿದೆ. ಧೂಮಪಾನದ ಪ್ಯಾಕೆಟ್‌ಗಳ ಮೇಲಿರುವಂತೆ, ಅತಿಯಾದ ಸಕ್ಕರೆ ಮತ್ತು ಹಾನಿಕಾರಕ ರಾಸಾಯನಿಕ ಹೊಂದಿರುವ ಆಹಾರ ಪದಾರ್ಥಗಳು ಹಾಗೂ ಪಾನೀಯಗಳ ಪ್ಯಾಕೆಟ್‌ಗಳ ಮೇಲೆ ‘ಆರೋಗ್ಯ ಎಚ್ಚರಿಕೆ’ಯನ್ನು ದೊಡ್ಡ ಅಕ್ಷರಗಳಲ್ಲಿ ಮುದ್ರಿಸುವುದನ್ನು ಕಡ್ಡಾಯಗೊಳಿಸಬೇಕು. ಸೆಲೆಬ್ರಿಟಿಗಳನ್ನು ಬಳಸಿಕೊಂಡು ಸಾರ್ವಜನಿಕರನ್ನು ವಂಚಿಸುವ ನಕಲಿ ಮತ್ತು ಸುಳ್ಳು ಪೌಷ್ಟಿಕಾಂಶದ ಜಾಹೀರಾತುಗಳನ್ನು ನೀಡುವ ಕಂಪನಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಜಾರಿಯಾಗಬೇಕು. ಹೆಚ್ಚು ಸಕ್ಕರೆ ಹೊಂದಿರುವ ಜಂಕ್ ಫುಡ್ ಹಾಗೂ ಪಾನೀಯಗಳ ಮೇಲೆ ಪ್ರತ್ಯೇಕ ‘ಶುಗರ್ ಟ್ಯಾಕ್ಸ್’ (ಸಕ್ಕರೆ ತೆರಿಗೆ) ವಿಧಿಸಬೇಕು ಹಾಗೂ ಅಂಥ ಪದಾರ್ಥಗಳ ಮಾರಾಟವನ್ನು ಶಾಲಾ ಕಾಲೇಜುಗಳ ಸುತ್ತಮುತ್ತ ನಿಷೇಧಿಸಬೇಕು.

ಡಾ. ವಿಜಯಕುಮಾರ್ ಎಚ್.ಕೆ., ರಾಯಚೂರು

ಪ್ರಜಾಸೇವೆ: ಜನರ ಸಮಸ್ಯೆಗೆ ಸ್ಪಂದಿಸಲಿ

ರಾಜ್ಯದ ನೂತನ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಜನರ ಸಮಸ್ಯೆಗಳನ್ನು ಕೇಳಿ ಪರಿಹರಿಸಲು ಹೊಸತಾಗಿ ‘ಪ್ರಜಾಸೇವೆ ಖಾತೆ’ ತೆರೆಯಲು ಹೊರಟಿರುವುದು ಸ್ವಾಗತಾರ್ಹ. ಇಂದಿನ ಆಡಳಿತ ವ್ಯವಸ್ಥೆಯಲ್ಲಿ ಜನಸಾಮಾನ್ಯರ ಸಮಸ್ಯೆಗಳಿಗೆ ಅಧಿಕಾರಿಗಳು ಹಾಗೂ ಜನಪ್ರತಿಧಿಗಳು ಸರಿಯಾಗಿ ಸ್ಪಂದಿಸುತ್ತಿಲ್ಲ. ಬಾಗಲಕೋಟೆಯ ‘ಬಿಟಿಡಿಎ ಕಚೇರಿ’ಯಲ್ಲಿ ಜನರ ಸಮಸ್ಯೆಗೆ ಸರಿಯಾಗಿ ಸ್ಪಂದಿಸುತ್ತಿಲ್ಲ ಎಂದು ರೈತನೊಬ್ಬ ನೌಕರನ ಮೇಲೆ ಹಲ್ಲೆ ನಡೆಸಿದ ಪ್ರಕರಣ ಜನಾಕ್ರೋಶಕ್ಕೆ ನಿದರ್ಶನದಂತಿದೆ. ಹೊಸ ಸಚಿವಾಲಯದಿಂದಾದರೂ ಜನರ ಸಮಸ್ಯೆಗಳಿಗೆ ಶೀಘ್ರ ಪರಿಹಾರ ದೊರೆಯುವಂತಾಗಲಿ.

ವಿ.ಜಿ. ಇನಾಮದಾರ, ಸಾರವಾಡ

ಹಟ ಬಿಡಿ, ಎಲ್ಲರ ಅಭಿಪ್ರಾಯ ಗೌರವಿಸಿ

ಎಚ್.ಡಿ. ಕುಮಾರಸ್ವಾಮಿ ಅವರು ಡಿನೋಟಿಫಿಕೇಷನ್ ಮಾಡಿದರು, ಬಿ.ಎಸ್. ಯಡಿಯೂರಪ್ಪ ಅವರು ಮುಂದುವರಿಸಿದರು ಎನ್ನುವುದನ್ನು ‘ಬಿಡದಿ ಟೌನ್‌ಶಿಪ್’ ಯೋಜನೆಗೆ ಸಮರ್ಥನೆಯನ್ನಾಗಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬಳಸಿಕೊಳ್ಳುತ್ತಿದ್ದಾರೆ. ಹಳೆಯ ತಪ್ಪುಗಳು ಅವರಿಗೆ ಮಾದರಿ ಆಗಬಾರದು. ಪರಿಹಾರದ ಹಣ ರೈತರ ಬಳಿ ಎಷ್ಟು ದಿನ ತಾನೆ ಉಳಿದೀತು? ಜಮೀನು ಕಳೆದುಕೊಂಡ ರೈತರು ಜೀವನ ನಡೆಸಲು ಮುಂದೇನು ಮಾಡಬೇಕು? ಇನ್ನೂ ಕಾಲ ಮಿಂಚಿಲ್ಲ. ಮುಖ್ಯಮಂತ್ರಿ ಶಿವಕುಮಾರ್ ಅವರು ಹಟಕ್ಕೆ ಬೀಳಬಾರದು. ಸರ್ವಪಕ್ಷಗಳು, ರೈತ ಪ್ರತಿನಿಧಿಗಳು, ಪರಿಸರ ತಜ್ಞರು ಹಾಗೂ ಜನನಾಯಕರ ಸಭೆ ಕರೆದು ಚರ್ಚಿಸಿ, ನಂತರ ಒಮ್ಮತದ ತೀರ್ಮಾನಕ್ಕೆ ಬರಲಿ.

ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು

ತೀರ್ಪಿನ ವ್ಯಾಪ್ತಿ ಮೀರಿರುವ ವ್ಯಾಖ್ಯಾನ

‘ಕಾನೂನಿನ ಕಣ್ಣಲ್ಲಿ ಆರ್‌ಎಸ್‌ಎಸ್’ (ಲೇ: ಸಿ.ಎಚ್. ಹನುಮಂತರಾಯ, ಜೂನ್ 19) ಲೇಖನವನ್ನು ಆಸಕ್ತಿಯಿಂದ ಓದಿದೆ. ಪ್ರಿಯಾಂಕ್ ಖರ್ಗೆ ಅವರ ಪತ್ರದಲ್ಲಿ ‘ವಾಸ್ತವ ಸಂಗತಿಗಳನ್ನು ಕುರಿತ ವಿವಾದಾಂಶಗಳೂ ಇಲ್ಲ, ಕಾನೂನಿನ ವಿವಾದಾಂಶಗಳೂ ಇಲ್ಲ’ ಎಂದು ಲೇಖಕರು ಹೇಳಿದ್ದಾರೆ. ಇದನ್ನು ಒಪ್ಪುವುದು ಕಷ್ಟ. ಪತ್ರದಲ್ಲಿ ಸಂಘದ ನೋಂದಣಿ, ಕಾನೂನುಬದ್ಧ ಸ್ಥಾನಮಾನ, ಆದಾಯ ತೆರಿಗೆ ವಿನಾಯಿತಿ, ಹಣಕಾಸಿನ ಪಾರದರ್ಶಕತೆ ಹಾಗೂ ಗುರುದಕ್ಷಿಣೆಯ ಲೆಕ್ಕಪತ್ರಗಳಂತಹ ವಿಷಯಗಳನ್ನು ಪ್ರಶ್ನಿಸಲಾಗಿದೆ. ಈ ಪ್ರಶ್ನೆಗಳಿಗೆ ಉತ್ತರ ಏನೇ ಇರಲಿ, ಅವು ನಿಸ್ಸಂದೇಹವಾಗಿ ವಾಸ್ತವಾಂಶಗಳ ಮತ್ತು ಕಾನೂನಿನ ಪ್ರಶ್ನೆಗಳ ವ್ಯಾಪ್ತಿಗೆ ಸೇರುತ್ತವೆ. ಒಂದು ಪ್ರಶ್ನೆಗೆ ನ್ಯಾಯಾಲಯ ಈಗಾಗಲೇ ಉತ್ತರ ನೀಡಿದೆ ಎಂಬ ಕಾರಣಕ್ಕೆ ಅದು ಕಾನೂನಿನ ಪ್ರಶ್ನೆಯೇ ಅಲ್ಲ ಎನ್ನಲಾಗುವುದಿಲ್ಲ. 1994ರ ಬಾಂಬೆ ಹೈಕೋರ್ಟ್ ತೀರ್ಪು ಆರ್‌ಎಸ್‌ಎಸ್‌ಗೆ ಆದಾಯ ತೆರಿಗೆ ವಿನಾಯಿತಿ ದೊರೆಯುವುದನ್ನು ಮಾನ್ಯ ಮಾಡಿರಬಹುದು. ಅದರಿಂದ ಸಂಘದ ಹಣಕಾಸು ಅಥವಾ ಪಾರದರ್ಶಕತೆಗೆ ಸಂಬಂಧಿಸಿದ ಎಲ್ಲ ಪ್ರಶ್ನೆಗಳೂ ಮುಕ್ತಾಯಗೊಂಡವು ಎಂಬ ತೀರ್ಮಾನ ಹೊರಬರುವುದಿಲ್ಲ. ಒಂದು ತೀರ್ಪಿನ ವ್ಯಾಪ್ತಿಯನ್ನು ಮೀರಿ ಅದಕ್ಕೆ ವಿಶಾಲ ಅರ್ಥ ನೀಡುವುದು ಕಾನೂನು ವ್ಯಾಖ್ಯಾನದ ಸರಿಯಾದ ವಿಧಾನವಲ್ಲ.

ಲೇಖನದ ಕೊನೆಯಲ್ಲಿ ‘ಸಂಭವನೀಯತೆಯ ಪ್ರಾಬಲ್ಯ ಆರ್‌ಎಸ್‌ಎಸ್ ಪರವಾಗಿದೆ’ ಎಂದು ಹೇಳಲಾಗಿದೆ. ಈ ತತ್ತ್ವವನ್ನು ನ್ಯಾಯಾಲಯಗಳು ಎರಡೂ ಕಡೆಯ ಸಾಕ್ಷ್ಯ ಮತ್ತು ವಾದಗಳನ್ನು ಪರಿಶೀಲಿಸಿದ ಬಳಿಕವೇ ಅನ್ವಯಿಸುತ್ತವೆ. ಲೇಖನದಲ್ಲಿ ಅಂತಹ ವಿಶ್ಲೇಷಣೆ ಕಾಣದೆ, ರಾಜಕೀಯ ಹಿನ್ನೆಲೆಯನ್ನು ಆಧರಿಸಿ ಕಾನೂನು ತೀರ್ಮಾನಕ್ಕೆ ಬರಲಾಗಿದೆ. ಒಂದು ರಾಜಕೀಯ ಪತ್ರದಿಂದ ಕಾನೂನು ಉಲ್ಲಂಘನೆ ಸಾಬೀತಾಗುವುದಿಲ್ಲ ಎಂಬುದನ್ನು ಒಪ್ಪಬಹುದು. ಅದೇ ಕಾರಣಕ್ಕೆ ಪತ್ರದಲ್ಲಿ ವಾಸ್ತವ ಅಥವಾ ಕಾನೂನಿನ ಪ್ರಶ್ನೆಗಳೇ ಇಲ್ಲ, ಅಥವಾ ಸಂಭವನೀಯತೆಯ ತೂಕ ಆರ್‌ಎಸ್‌ಎಸ್ ಪರವಾಗಿದೆ ಎಂದು ಹೇಳುವುದು ತಾರ್ಕಿಕವಾಗಿಯೂ ಕಾನೂನುಬದ್ಧವಾಗಿಯೂ ಸಮರ್ಥನೀಯವಲ್ಲ.

ಎಂ.ಜಿ. ಹೆಗಡೆ, ಕುಮಟಾ

ನೆಲದ ಮಕ್ಕಳ ಅಭಿವೃದ್ಧಿ ಆದ್ಯತೆ ಆಗಲಿ

ಒಬ್ಬ ವಿದ್ಯಾರ್ಥಿ ಇದ್ದರೂ ಶಾಲೆ ಮುಚ್ಚಬಾರದು. ಹಾಗೆಯೇ ಒಬ್ಬ ರೈತನ ಪ್ರತಿರೋಧ ಇದ್ದರೂ ಭೂಮಿ ಅತಿಕ್ರಮಣ ಮಾಡಬಾರದು. ಪರರಾಜ್ಯದವರು, ಪರಭಾಷಿಕರು ಮುಗಿಬೀಳಲಿಕ್ಕಾಗಿ ಕನ್ನಡಿಗರ ನೆಲ ಕಿತ್ತುಕೊಳ್ಳುವುದಾದರೆ ಬ್ರಿಟಿಷ್ ಸರ್ಕಾರಕ್ಕೂ ಪ್ರಜಾಪ್ರಭುತ್ವಕ್ಕೂ ಏನು ವ್ಯತ್ಯಾಸ? ಇಷ್ಟಕ್ಕೂ ನೆಲದ ಮಕ್ಕಳಿಗಾಗಿ ತಾನೆ ಅಭಿವೃದ್ಧಿ ಮಾಡಬೇಕಿರುವುದು.

ಮಧುಸೂದನ್ ಬಿ.ಎಸ್., ಬೆಂಗಳೂರು

ಚುರುಮುರಿ



ಪ್ರಶ್ನಿಸುವ ಎದೆಗಾರಿಕೆ

• ಸುಮಂಗಲಾ

‘**ಒಂದೂವರೆ** ವರ್ಷದ ನಂತರ ಗೆಳೆಯರ ಭೇಟಿ... ಆದರೆ ಆಲಿಂಗನವಿಲ್ಲ, ಬರಿಯ ಕೈಕುಲುಕಾಟ... ಅಕಟಕಟಾ!’ ಎಂದು ಬೆಕ್ಕಣ್ಣ ಉದ್ಗರಿಸಿತು.

‘ಯಾರಲೇ... ನಿನ್ನ ಗೆಳೆಯರ ಭೇಟಿನಾ?’ ಎಂದೆ.

‘ಊಹೂಂ... ಮೋದಿಮಾಮಾ–ಟ್ರಂಪಣ್ಣ ಭೇಟಿಯಾದಾಗ ಪ್ರತಿಸಲದಂತೆ ಈಸಲ ತಬ್ಬಿಕೊಂಡಿಲ್ಲ’ ಬೆಕ್ಕಣ್ಣ ಸುದ್ದಿ ಓದಿತು.

‘ಎಲ್ಲ ಯುದ್ಧಮಹಾತ್ಮೆ!’ ಎಂದೆ.

‘ಆದ್ರೆ ಮೋದಿಮಾಮಾ ಟ್ರಂಪಣ್ಣನ ಮ್ಯಾಗೆ ಫುಲ್ ಗರಂ ಅಗ್ಯಾರೆ. ನಮ್ಮ ಹಡಗಿನ ನಾವಿಕರ ಮ್ಯಾಗೆ ಎದಕ್ಕೆ ಗುಂಡು ಹಾರಿಸೀರಿ ಅಂತ ನೇರಾನೇರಾ ಕೇಳ್ಯಾರೆ’ ಬೆಕ್ಕಣ್ಣ ಮೀಸೆ ತಿರುವಿತು.

‘ಆಹಾ... ಅಗದಿ ಭಯಂಕರ ಎದೆಗಾರಿಕೆಯಿಂದ ಪ್ರಶ್ನಿಸ್ಯಾರೆ’ ಎಂದು ಕಿಚಾಯಿಸಿದೆ.

‘ತರೂರ್ ಅಂಕಲ್ಲೂ ಮೋದಿಮಾಮಾನ ಎದೆಗಾರಿಕೆಯನ್ನು ಹೊಗಳ್ಯಾರೆ! ಟ್ರಂಪಣ್ಣನೂ ಆಮೇಲೆ ಮೋದಿ ಮಾಮಾ ಜಗತ್ತಿನ ಅತಿ ಬುದ್ಧಿವಂತ ಮುತ್ಸದ್ದಿ ಅಂತ ಹೊಗಳ್ಯಾನೆ’ ಎಂದು ವಾದಿಸಿತು.

‘ನಿಮ್ ಹುಚ್‌ಪ್ಯಾಲಿ ಟ್ರಂಪಣ್ಣ ಯಾರಿನ್ನ ಯಾವಾಗ ಹೊಗಳ್ತಾನೆ, ಯಾವಾಗ ತೆಗಳ್ತಾನೆ ಅಂತ ದೇವರಿಗೂ ಹೇಳಕ್ಕೆ ಆಗಂಗಿಲ್ಲ. ಅದ್ಸರಿ... ಮೋದಿಮಾಮಾರು ಅಷ್ಟೇ ಎದೆಗಾರಿಕೆಯಿಂದ ನೀಟ್ ಅಕ್ರಮದ ಬಗ್ಗೆ ನಮ್ಮ ದೇಶದ ಶಿಕ್ಷಣ ಮಂತ್ರಿಗೂ ಪ್ರಶ್ನೆ ಮಾಡಬೇಕಿತ್ತಲ್ಲ’ ಎಂದೆ.

‘ಪರೀಕ್ಷೆ ಅಕ್ರಮಗಳು ನಮ್ ದೇಶದಾಗೆ ಎಲ್ಲ ಕಾಲದಾಗೂ ನಡೆದೈತಿ ಬಿಡು’ ಎಂದು ಉಡಾಫೆಯಿಂದ ಹೇಳಿತು.

‘ರಾಮ ಮಂದಿರ ದೇಣಿಗೆಯಲ್ಲಿ ಭಾರೀ ಅಕ್ರಮ ನಡೆದೈತಂತ. ಭಕ್ತಾದಿಗಳು ರಾಮನಿಗೆ ಅರ್ಪಿಸಿದ 3000 ಕೋಟಿ ಬೆಲೆಯ ಚಿನ್ನ, ಬೆಳ್ಳಿ, ರೊಕ್ಕ ಇತ್ಯಾದಿ ದೇಣಿಗೆಯಲ್ಲಿ 200 ಕೋಟಿಯಷ್ಟು ಈಗ ಕಾಣೆಯಾಗ್ಯೆತಂತ. ನಾನೂ ತಿನ್ನಲ್ಲ, ತಿನ್ನೋವ್ರಿಗೂ ಬಿಡಲ್ಲ ಅಂತಿದ್ದ ಮೋದಿಮಾಮಾರು ಮಂದಿರದ ಮಹಾಂತರನ್ನು ಯಾಕೆ ಇನ್ನೂ ಪ್ರಶ್ನಿಸಿಲ್ಲ?’ ನಾನೂ ವಾದಿಸಿದೆ.

‘ಕೋಟಿಗಟ್ಟಲೆ ದೇಣಿಗೆ ವ್ಯವಹಾರದಾಗೆ ಒಂದಿನ್ನೂರು ಆಚೀಚೆ ಆಗೂದು ಸಹಜ! ನಿಜವಾದ ರಾಮನನ್ನೇ ರಾಮಮಂದಿರದಿಂದ ಎತ್ತಂಗಡಿ ಮಾಡಿದವ್ರಿಗೆ ದೇಣಿಗೆಯ ಬೆಳ್ಳಿ, ಬಂಗಾರ ಎಲ್ಲ ಯಾವ ಲೆಕ್ಕ?’ ಎಂದು ಬೆಕ್ಕಣ್ಣ ಮುಸಿಮುಸಿ ನಕ್ಕಿತು.

ಸಂಗತ

ವಿಶ್ವಾಸಾರ್ಹತೆಯ ಕೊರತೆಯೇ ಸಮಸ್ಯೆ


ಸರ್ಕಾರಿ ವಲಯಕ್ಕೆ ಸಂಬಂಧಿಸಿದಂತೆ ಉನ್ನತ ಶಿಕ್ಷಣದ ನಿಜವಾದ ಸಮಸ್ಯೆ, ಆ ವ್ಯವಸ್ಥೆಯೊಳಗಿನ ಸ್ವಾತಂತ್ರ್ಯ– ವಿಶ್ವಾಸಾರ್ಹತೆಗೆ ಸಂಬಂಧಿಸಿದ ಕೊರತೆಯಲ್ಲಿದೆ.

• ಅಜಕ್ಕಳ ಗಿರೀಶ ಭಟ್

‘ಉನ್ನತ ಶಿಕ್ಷಣ: ಏನೆಲ್ಲ ತಲ್ಲಣ’ ಲೇಖನದಲ್ಲಿ (ಜೂನ್ 19, ಲೇ: ಅರವಿಂದ ಚೊಕ್ಕಾಡಿ) ಉನ್ನತ ಶಿಕ್ಷಣದ ಸಮಸ್ಯೆಯನ್ನು ಸರಿಯಾಗಿಯೇ ಗ್ರಹಿಸಲಾಗಿದೆ. ಆ ಲೇಖನಕ್ಕೆ ಪೂರಕವಾಗಿ, ಒಂದೆರಡು ಅಂಶಗಳ ಕಡೆಗೆ ಗಮನಹರಿಸುವುದು ಈ ಬರಹದ ಉದ್ದೇಶ.

ಶಿಕ್ಷಣಕ್ಷೇತ್ರದ ಸಮಸ್ಯೆಯನ್ನು ಸಮಗ್ರವಾಗಿ ನೋಡಬೇಕು ಎಂಬುದು ಸರಿ. ಆದರೆ, ಹೆಚ್ಚಿನ ಶಿಕ್ಷಣತಜ್ಞರು ಸಮಸ್ಯೆಯ ಮೂಲವನ್ನು ಗಮನಿಸುವ ಬದಲು ಶಿಕ್ಷಕರಿಗೆ ಇರುವ ಬೋಧನೇತರ ಹೊರೆಗಳು, ಕನ್ನಡ–ಇಂಗ್ಲಿಷ್ ಮಾಧ್ಯಮ, ಖಾಸಗಿ–ಸರ್ಕಾರಿ ಎನ್ನುವ ವಿಭಾಗ, ಇಂತಹ ಅಂಶಗಳನ್ನು ಮುಖ್ಯವಾಗಿ ಚರ್ಚಿಸುತ್ತಾರೆ. ಹೀಗೆ ಮೇಲುಸ್ತರದ ಸಮಸ್ಯೆಗಳಷ್ಟೇ ಅಲ್ಲದೆ, ಮೂಲ ಸಮಸ್ಯೆಯ ಕಡೆಗೆ ಗಮನ ನೀಡುವುದು ಅಗತ್ಯ. ನಾವಿಲ್ಲಿ ಮುಖ್ಯವಾಗಿ ಬೋಧನಾಕ್ರಮವನ್ನು ಪರಿಶೀಲಿಸಬೇಕಿದೆ.

ಪ್ರಾಥಮಿಕ–ಪ್ರೌಢಶಾಲೆಗಳಲ್ಲಿ ಮತ್ತು ಉನ್ನತಶಿಕ್ಷಣದಲ್ಲಿ ಬೋಧನೆ–ಕಲಿಕೆಯ ಪ್ರಕ್ರಿಯೆ ನಡುವೆ ಇರುವ ವ್ಯತ್ಯಾಸವನ್ನು ಗುರ್ತಿಸಬೇಕು. ಸಣ್ಣ ತರಗತಿಗಳಲ್ಲಿನ ಮುಖ್ಯವಾದ ಸಮಸ್ಯೆಯ ಮೂಲವಿರುವುದು ಬೋಧನೆಯ ವಿಧಾನದಲ್ಲಿ. ಇದನ್ನು ಮೂರು ನೆಲೆಗಳಲ್ಲಿ ಗುರ್ತಿಸಬಹುದು. ಒಂದು, ಭಾಷೆಯ ಬೋಧನೆಗೆ ಪ್ರಾಮುಖ್ಯ ನೀಡದಿರುವುದು. ಎರಡು, ತರ್ಕ-ಬುದ್ಧಿಯನ್ನು ಬೆಳೆಸದೆ ಇರುವುದು. ಮೂರು, ಪರಿಕಲ್ಪನಾತ್ಮಕ ಕಲಿಸುವಿಕೆ ಇಲ್ಲದೆ, ಬರೀ ಮಾಹಿತಿ ನೀಡುವ ರೀತಿಯಲ್ಲಿ ಮತ್ತು ಬಾಯಿಪಾಠ ಮಾಡಿಸುವ ರೀತಿಯ ಬೋಧನೆ ಇರುವುದು. ಇವು ಮೂರೂ ಪ್ರತ್ಯೇಕವಾದವುಗಳಲ್ಲ. ತರ್ಕಬುದ್ಧಿ ಬೆಳೆಯಲು ಭಾಷೆ ಅಗತ್ಯ. ಗಣಿತ, ವಿಜ್ಞಾನಗಳಂತಹ ವಿಷಯಗಳಲ್ಲಷ್ಟೇ ಅಲ್ಲ; ಇತಿಹಾಸದಂತಹ ವಿಷಯಗಳಲ್ಲೂ ಪರಿಕಲ್ಪನೆಯನ್ನು ತಿಳಿಸಿಕೊಡುವ ಬೋಧನೆ ಇಲ್ಲದಿದ್ದಾಗ ವಿಷಯದ ಗ್ರಹಿಕೆ ಸರಿಯಾಗಿ ಆಗುವುದಿಲ್ಲ. ತಿಳಿದುದನ್ನು ಮತ್ತೊಂದು ಕಡೆ ಸ್ವತಂತ್ರವಾಗಿ ಚಿಂತಿಸಿ ಅನ್ವಯಿಸಿ ನೋಡಲು ಸಾಧ್ಯವಾಗುವುದಿಲ್ಲ. ಮಕ್ಕಳು ತಾವು ಕಲಿತುದನ್ನು ಸರಿಯಾಗಿ ಅಭಿವ್ಯಕ್ತಿಸಲು ಸಾಧ್ಯವಾಗುವುದಿಲ್ಲ.



ಶಿಕ್ಷಣದ ಪರಿಕಲ್ಪನೆಯ ಬಗೆಗೆ ಎಷ್ಟೊಂದು ಅಪಕಲ್ಪನೆ ಇವೆ ಎಂದು ನೋಡಿ. ಪ್ರಾಥಮಿಕ ಅಥವಾ ಪ್ರೌಢಶಾಲೆಯಲ್ಲಿ ಕಲಿತ ಬೀಜಗಣಿತದ ಯಾವುದಾದರೊಂದು ಸರಳ ಸೂತ್ರವನ್ನು ಉದಾಹರಿಸಿ, ‘ಇದು ನನ್ನ ಜೀವನದಲ್ಲಿ ಎಲ್ಲೂ ಬಳಕೆಗೆ ಬರಲಿಲ್ಲ’ ಎಂದು ಸಾಕಷ್ಟು ಓದಿಕೊಂಡ ಹಿರಿಯರೂ ತಮಾಷೆ ಮಾಡುವುದಿದೆ. ಗಣಿತವನ್ನು ಕಲಿಸುವುದರ ನಿಜವಾದ ಉದ್ದೇಶವೇ ಅವರಿಗೆ ಗೊತ್ತಿಲ್ಲ. ಆ ಹಂತದಲ್ಲಿ ಗಣಿತವನ್ನು ಕಲಿಯುವುದು ಪ್ರತಿಯೊಂದು ಸೂತ್ರವನ್ನೂ ನೇರವಾಗಿ ಬದುಕಿನಲ್ಲಿ ಹಾಗೆಯೇ ಅನ್ವಯಿಸಲಿಕ್ಕಾಗಿ ಅಲ್ಲ. ಅದು ತರ್ಕಬದ್ಧವಾಗಿ ಚಿಂತಿಸುವುದಕ್ಕೆ ಇರುವ ತರಬೇತಿ! ಗಣಿತದ ಸಮಸ್ಯೆಯಂತೆಯೇ ಬೇರೆ ಯಾವುದೇ ‘ಸಮಸ್ಯೆ’ಯನ್ನು ಅರ್ಥ ಮಾಡಿಕೊಳ್ಳುವುದು ಹೇಗೆ; ಅದಕ್ಕೆ ಪರಿಹಾರವನ್ನು ಕಂಡುಕೊಳ್ಳಲು ತರ್ಕಬದ್ಧವಾಗಿ ಯಾವೆಲ್ಲ ದಿಕ್ಕಿನಿಂದ ಪ್ರವೇಶಿಸಬಹುದು; ಇಂತಹ ಅಂಶಗಳನ್ನು ಕಲಿಸಲಿಕ್ಕಾಗಿ ಇರುವುದು. ಹೀಗೆ ಪರಿಹಾರ ಕಂಡುಕೊಳ್ಳಬೇಕಾದ ‘ಸಮಸ್ಯೆ’ಯು ಗಣಿತದ್ದೇ ಆಗಬೇಕಿಲ್ಲ. ಅದು ಇತಿಹಾಸದ್ದಿರಬಹುದು; ಸಾಮಾಜಿಕ ಬದುಕಿನದ್ದಿರಬಹುದು; ರಾಜಕಾರಣದ್ದಿರಬಹುದು.

ಉನ್ನತಶಿಕ್ಷಣದ ವಿಚಾರಕ್ಕೆ ಬಂದರೆ, ನಮ್ಮ ಸಾರ್ವಜನಿಕ ವ್ಯವಸ್ಥೆಯಲ್ಲಿರುವ ಅತಿಮುಖ್ಯ ಸಮಸ್ಯೆ ವಿಶ್ವಾಸಾರ್ಹತೆಯದು. ಅಲ್ಲಿರುವ ವಿದ್ವಾಂಸರು ಶೈಕ್ಷಣಿಕವಾಗಿ, ಆಡಳಿತಾತ್ಮಕವಾಗಿ ವಿಶ್ವಾಸಾರ್ಹರೆನ್ನುವ ಭರವಸೆ ಆ ‘ಪಬ್ಲಿಕ್’ ವ್ಯವಸ್ಥೆಯೊಳಗೆ ಇರುವವರಿಗೂ ಇಲ್ಲ. ಹೀಗೆ ವಿಶ್ವಾಸವಿಲ್ಲದ್ದರಿಂದಲೇ ಕಾಲೇಜು–ವಿ.ವಿ.ಗಳ ಬೋಧಕರನ್ನು ಸಂದರ್ಶನದ ಮೂಲಕ (ವ್ಯಕ್ತಿನಿಷ್ಠ) ಆಯ್ಕೆ ಮಾಡುವ ಬದಲು ‘ವಸ್ತುನಿಷ್ಠ’ ವಿಧಾನಗಳ ಮೂಲಕ ಆಯ್ಕೆ ಮಾಡಲಾಗುತ್ತಿದೆ. ‘ವಸುನಿಷ್ಠ’ ವಿಧಾನಗಳ ಮೂಲಕವೇ ಪದೋನ್ನತಿ ನೀಡಲಾಗುತ್ತದೆ.

ಹಿಂದೆಯೆಲ್ಲ ಹಿರಿಯ ಪ್ರಾಧ್ಯಾಪಕರು ಸಂದರ್ಶನ ಮಾಡಿ ಪ್ರಾಧ್ಯಾಪಕರನ್ನು ಆಯ್ಕೆ ಮಾಡುತ್ತಿದ್ದರು ಅಥವಾ ಪದೋನ್ನತಿ ನೀಡುತ್ತಿದ್ದರು; ಆ ರೀತಿ ಈಗ ನಡೆಯುತ್ತಿಲ್ಲ. ಇದಕ್ಕೆ ಅಭ್ಯರ್ಥಿಗಳ ಸಂಖ್ಯಾಬಾಹುಳ್ಯ ಕಾರಣವಲ್ಲ. ನಿಜವಾದ ಕಾರಣ, ಒಳ್ಳೆಯ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಸಾಮರ್ಥ್ಯ ಹಿರಿಯ ಪ್ರಾಧ್ಯಾಪಕರಲ್ಲಿ ಇಲ್ಲವೆಂಬ ಭಾವನೆ ಅಥವಾ ಸಾಮರ್ಥ್ಯವಿದ್ದರೂ ಸರಿಯಾದವರನ್ನು ಆಯ್ಕೆ ಮಾಡುವ ಪ್ರಾಮಾಣಿಕತೆ ಇಲ್ಲವೆಂಬ ಭಾವನೆ.

ಖಾಸಗಿ ವಿಶ್ವವಿದ್ಯಾನಿಲಯಗಳಲ್ಲಿ ಈಗಲೂ ಬಹುಮಟ್ಟಿಗೆ ಸಂದರ್ಶನದ ಮೂಲಕವೇ ಬೋಧಕರ ಆಯ್ಕೆ ನಡೆಯುತ್ತದೆ. ಖಾಸಗಿ ಕಂಪನಿಗಳಲ್ಲಂತೂ ನಮ್ಮ ಪಬ್ಲಿಕ್ ವ್ಯವಸ್ಥೆಯಲ್ಲಿ ಇರುವಂತೆ ‘ವಸ್ತುನಿಷ್ಠತೆ’ಯ ಭ್ರಮೆ ಇಲ್ಲ. ಖಾಸಗಿ ವ್ಯವಸ್ಥೆಗೆ ಖಾಸಗಿ ವ್ಯಕ್ತಿಗಳ ಮೇಲೆ ವಿಶ್ವಾಸವಿದೆ. ಆದರೆ ಪಬ್ಲಿಕ್ ವ್ಯವಸ್ಥೆಯೊಳಗಿನ ವ್ಯಕ್ತಿಗಳ ಬಗೆಗೆ ಪಬ್ಲಿಕ್ ವ್ಯವಸ್ಥೆಗೇ ವಿಶ್ವಾಸವಿಲ್ಲ! ಸಾರ್ವಜನಿಕರಿಗೂ ವಿಶ್ವಾಸವಿಲ್ಲ.

ಖಾಸಗಿ ವಿ.ವಿ.ಗಳು ಪದವಿ ಮತ್ತು ಸ್ನಾತಕೋತ್ತರ ಪದವಿಗಳ ಪಠ್ಯಕ್ರಮವನ್ನು (ಸಿಲೆಬಸ್) ಔದ್ಯೋಗಿಕ ಮಾರುಕಟ್ಟೆಯ ಚಲನಶೀಲತೆಯ ಆಧಾರದಲ್ಲಿ ಕಾಲಕಾಲಕ್ಕೆ ಮರುರೂಪಿಸುತ್ತಾರೆ. ಉದ್ಯೋಗಾರ್ಹತೆ ಪಡೆಯುವ ಭರವಸೆಯಿಂದ ಲಕ್ಷಗಟ್ಟಲೆ ಶುಲ್ಕ ಕೊಟ್ಟು ಅಲ್ಲಿಗೆ ವಿದ್ಯಾರ್ಥಿಗಳು ಸೇರುತ್ತಾರೆ. ಹೀಗೆ ಕಾಲಕಾಲಕ್ಕೆ ಹೊಸ ಕೋರ್ಸುಗಳನ್ನು ಅಳವಡಿಸಿಕೊಳ್ಳಬೇಕಾದರೆ ಅಥವಾ ಹೊಸ ಪಠ್ಯಕ್ರಮವನ್ನು ರೂಪಿಸಬೇಕಾದರೆ ‘ಪಬ್ಲಿಕ್ ಸೆಕ್ಟರ್’ ಕಾಲೇಜುಗಳಿಗೆ ಮತ್ತು ವಿಶ್ವವಿದ್ಯಾನಿಲಯಗಳ ವಿಭಾಗಗಳಿಗೆ ಹೆಚ್ಚಿನ ಸ್ವಾಯತ್ತತೆ–ಸ್ವಾತಂತ್ರ್ಯ ನೀಡಬೇಕಾಗುತ್ತದೆ. ಸ್ವಾತಂತ್ರ್ಯ ನೀಡಲು ಇರುವ ಅಡ್ಡಿಯೇನು ಎಂದು ಆಡಳಿತಾರೂಢರಲ್ಲಿ ಕೇಳಿದರೆ ಬರುವ ಉತ್ತರವು ಅಂತಿಮವಾಗಿ ನಮ್ಮನ್ನು ಒಯ್ಯುವುದು, ವಿಶ್ವಾಸಾರ್ಹತೆಯ ಪ್ರಶ್ನೆಯತ್ತಲೇ ಹೊರತು ಬೇರೆ ಕಡೆಗಲ್ಲ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ವಿದ್ಯುತ್ ಪೂರೈಕೆ ಖಾಸಗಿಗೆ ಬೆಳಕೋ, ಬೆಂಕಿಯೋ?



ಕರ್ನಾಟಕದಲ್ಲಿ 19 ಜಿಲ್ಲೆಗಳ ವಿದ್ಯುತ್ ವಿತರಣಾ ಪರವಾನಗಿ ಕೋರಿ ಟಾಟಾ ಕಂಪನಿ ಅರ್ಜಿ ಸಲ್ಲಿಸಿದೆ. ವಿದ್ಯುತ್ ಪೂರೈಕೆ ಖಾಸಗಿಯವರಿಗೆ ವಹಿಸಿದರೆ ವಿದ್ಯುತ್ ಸರಬರಾಜು ಸಂಸ್ಥೆಗಳ ನಷ್ಟ ಭರಿಸುವುದು ತಪ್ಪುತ್ತದೆ, ವಿತರಣೆಯಲ್ಲಿನ ಸೋರಿಕೆ ತಡೆಯಬಹುದು, ದಕ್ಷತೆ ಹೆಚ್ಚುತ್ತದೆ ಎನ್ನುವುದು ಸಮರ್ಥಕರ ವಾದ. ಆದರೆ, ಈ ಪ್ರಸ್ತಾವಕ್ಕೆ ರಾಜ್ಯದ ರೈತರು, ನೇಕಾರರು ಸೇರಿದಂತೆ ವಿವಿಧ ಸಂಘಟನೆಗಳು, ಸಿಪಿಎಂ ವಿರೋಧ ವ್ಯಕ್ತಪಡಿಸಿವೆ. ವಿದ್ಯುತ್ ವಲಯದ ಖಾಸಗೀಕರಣಕ್ಕೆ ಕೇಂದ್ರ ಸರ್ಕಾರವು ಸೂತ್ರಧಾರನಾಗಿದೆ. ಇದರಿಂದ ರಾಜ್ಯಗಳ ಅಧಿಕಾರ ಮೊಟಕಾಗಲಿದೆ. ಜತೆಗೆ, ಇಡೀ ವಿದ್ಯುತ್ ಕ್ಷೇತ್ರ ಖಾಸಗಿಯವರ ತೆಕ್ಕೆಗೆ ಹೋಗಲಿದ್ದು, ದರ ದುಬಾರಿಯಾಗಲಿದೆ ಎನ್ನುವ ಆತಂಕ ವ್ಯಕ್ತವಾಗಿದೆ

● ಬಿ.ವಿ.ಶ್ರೀನಾಥ್, ಸೂರ್ಯನಾರಾಯಣ ವಿ.

ಕರ್ನಾಟಕ ವಿದ್ಯುತ್ ಕಾಯ್ದೆ 2003ರ ಸೆಕ್ಷನ್ 14 ಮತ್ತು 15ರ ಅಡಿ ವಿದ್ಯುತ್ ಪೂರೈಕೆ ವ್ಯವಸ್ಥೆಯನ್ನು ಖಾಸಗಿಯವರಿಗೆ ವಹಿಸಲು ಅವಕಾಶ ಇದೆ. ಈ ಕಾಯ್ದೆಯ ಅಡಿಯಲ್ಲಿಯೇ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ (ಕೆಇಆರ್‌ಸಿ) ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ ಅರ್ಜಿ ಸಲ್ಲಿಸಿದೆ. ಆದರೆ, ದರ ನಿಗದಿಯ ಅಧಿಕಾರವನ್ನು ಕೆಇಆರ್‌ಸಿಯೇ ಹೊಂದಿರುತ್ತದೆ. ಅಸ್ತಿತ್ವದಲ್ಲಿರುವ ಕೆಪಿಟಿಸಿಎಲ್‌ನ ವಿತರಣಾ ಜಾಲವನ್ನು ಬಳಸಿಕೊಂಡು ಒಂದಕ್ಕಿಂತ ಹೆಚ್ಚು ಖಾಸಗಿ ಕಂಪನಿಗಳು ವಿದ್ಯುತ್ ವಿತರಣೆ ಮಾಡುವುದಕ್ಕೆ ಕಾಯ್ದೆಯಲ್ಲಿ ಅವಕಾಶ ಇದೆ. ಇದರಿಂದ ಸರ್ಕಾರಿ ಸ್ವಾಮ್ಯದ ನಿಗಮಗಳ ಏಕಸ್ವಾಮ್ಯ ಕಡಿಮೆಯಾಗಲಿದ್ದು, ಗ್ರಾಹಕರಿಗೆ ಉತ್ತಮ ಸೇವೆ ಸಿಗಲಿದೆ ಎನ್ನುವುದು ಖಾಸಗಿ ಪ್ರಸ್ತಾವ ಸಮರ್ಥಕರ ವಾದ. ಆದರೆ, ದೇಶದ ವಿವಿಧ ರಾಜ್ಯಗಳಲ್ಲಿ ಈ ಪ್ರಯೋಗಗಳು ನಡೆದಿದ್ದು, ಮಿಶ್ರ ಫಲಿತಾಂಶಗಳು ಸಿಕ್ಕಿವೆ.

ಭಾರತದಲ್ಲಿ ಮೊದಲು ವಿದ್ಯುತ್ ಸಂಪರ್ಕ ಪಡೆದ ನಗರ ಸೂರತ್ (1883). ನಂತರ ಕೋಲ್ಕತ್ತ, ಡಾರ್ಜಿಲಿಂಗ್, ಮೈಸೂರು (ಕೆಜಿಎಫ್), ಹೈದರಾಬಾದ್, ದೆಹಲಿ, ಮುಂಬೈ, ಜೆಮ್‌ಶೆಡ್‌ಪುರ– ಹೀಗೆ ವಿವಿಧ ಪ್ರದೇಶಗಳು ವಿದ್ಯುತ್ ಸಂಪರ್ಕ ಪಡೆದವು. ಆಗ ವಿದ್ಯುತ್ ಪೂರೈಕೆಯನ್ನು ಖಾಸಗಿ ಕಂಪನಿಗಳು ನಿರ್ವಹಿಸುತ್ತಿದ್ದವು. ದೇಶ ಸ್ವಾತಂತ್ರ್ಯ ಗಳಿಸುವವರೆಗೆ ಇದೇ ಸ್ಥಿತಿ ಇತ್ತು. 1947ರ ನಂತರ ವಿದ್ಯುತ್ ಸರಬರಾಜು ವ್ಯವಸ್ಥೆಯನ್ನು ತನ್ನ ಸುಪರ್ದಿಗೆ ಪಡೆದ ಸರ್ಕಾರ, ವಿದ್ಯುತ್ ಉತ್ಪಾದನೆ, ಸಾಗಣೆ ಮತ್ತು ವಿತರಣೆಗಾಗಿ ದೇಶದಾದ್ಯಂತ ಮೂಲಸೌಕರ್ಯ ರೂಪಿಸಿತು. ದೇಶದಲ್ಲಿ ವಿದ್ಯುತ್ ವಿತರಣೆಯು ಸಮವರ್ತಿ ಪಟ್ಟಿಯಲ್ಲಿದ್ದು, ರಾಜ್ಯಗಳಲ್ಲಿ ಬಹುತೇಕ ರಾಜ್ಯ ಸರ್ಕಾರಗಳೇ ಇದನ್ನು ನಿರ್ವಹಿಸುತ್ತಿವೆ; ಕೇಂದ್ರಾಡಳಿತ ಪ್ರದೇಶಗಳಲ್ಲಿ ಕೇಂದ್ರ ಸರ್ಕಾರ ನಿರ್ವಹಿಸುತ್ತಿದೆ.

ವಿದ್ಯುತ್ ವಿತರಣಾ ವ್ಯವಸ್ಥೆಗಳನ್ನು ಯಾವ ಉದ್ದೇಶಕ್ಕಾಗಿ ಖಾಸಗಿಯವರಿಗೆ ವಹಿಸಲಾಗಿದೆ ಎನ್ನುವುದು ಮುಖ್ಯ. ಉತ್ತರ ಪ್ರದೇಶವು 1993ರಲ್ಲಿ ಗ್ರೇಟರ್ ನೊಯಿಡಾ ವಿದ್ಯುತ್ ಸರಬರಾಜನ್ನು ಖಾಸಗೀಕರಣಗೊಳಿಸಿತ್ತು. ಆದರೆ, ಆರ್ಥಿಕ ಲೆಕ್ಕಾಚಾರದ ಆಧಾರದಲ್ಲಿ ವಿದ್ಯುತ್ ಸರಬರಾಜನ್ನು ಖಾಸಗೀಕರಣಗೊಳಿಸುವ ಮೊದಲ ಪ್ರಯತ್ನ ಆರಂಭಿಸಿದ್ದು ಒಡಿಶಾ. 1999ರಲ್ಲಿ ಒಡಿಶಾ ವಿದ್ಯುತ್ ಸರಬರಾಜು ವ್ಯವಸ್ಥೆಯನ್ನು ಖಾಸಗೀಕರಣಗೊಳಿಸಲು ಪ್ರಯತ್ನಿಸಿತು. ಆದರೆ, ಅದು ನಿರೀಕ್ಷಿತ ಫಲ ನೀಡದೇ ಅರ್ಧದಲ್ಲಿಯೇ ಕೈಬಿಡಲಾಯಿತು. ದೆಹಲಿ 2002ರಲ್ಲಿ ವಿದ್ಯುತ್ ವಿತರಣೆಯನ್ನು ಖಾಸಗಿಯವರಿಗೆ ವಹಿಸಿತು. ಅದರ ಸ್ಫೂರ್ತಿಯಿಂದ ಒಡಿಶಾ 2020ರಲ್ಲಿ ಯಶಸ್ವಿಯಾಗಿ ಖಾಸಗಿಯವರಿಗೆ ವಹಿಸಿತು. ಕರ್ನಾಟಕ ಸೇರಿದಂತೆ ಬಹುತೇಕ ರಾಜ್ಯಗಳಲ್ಲಿ ಇಂದಿಗೂ ವಿದ್ಯುತ್ ಪೂರೈಕೆ ರಾಜ್ಯ ಸರ್ಕಾರದ ಒಡೆತನದಲ್ಲಿಯೇ ನಡೆಯುತ್ತಿದೆ.

ದೆಹಲಿಯ ಮೂರು ವಿದ್ಯುತ್ ವಿತರಣಾ ಸಂಸ್ಥೆಗಳ ನಿರ್ವಹಣೆಯನ್ನು ಎರಡು ಖಾಸಗಿ ಸಂಸ್ಥೆಗಳು (ರಿಲಯನ್ಸ್ ಇನ್‌ಫ್ರಾ ಮತ್ತು ಟಾಟಾ) ಯಶಸ್ವಿಯಾಗಿ ನಿರ್ವಹಣೆ ಮಾಡಿದವು. ಮೂರು ನಿಗಮಗಳ ವ್ಯಾಪ್ತಿಯಲ್ಲಿ ಒಟ್ಟಾರೆ ತಾಂತ್ರಿಕ ಮತ್ತು ವಾಣಿಜ್ಯ ನಷ್ಟವು (ಎಟಿ ಆ್ಯಂಡ್ ಸಿಎಲ್) ಶೇ 45ರಿಂದ ಶೇ 60ರವರೆಗೆ ಇತ್ತು. ಖಾಸಗಿಯವರಿಗೆ ನೀಡಿದ ನಂತರ ನಷ್ಟದ ಪ್ರಮಾಣ ಕಡಿಮೆಯಾಗಿತ್ತು. ಖಾಸಗಿಯವರಿಗೆ ವಹಿಸುವಾಗ ದೆಹಲಿ ಸರ್ಕಾರವು ನಷ್ಟ ತಗ್ಗಿಸುವ ಉದ್ದೇಶವನ್ನೇ ಉಲ್ಲೇಖಿಸಿ ಟೆಂಡರ್ ನೀಡಿತ್ತು. ಡಾಮನ್ ಡಿಯು, ದಾದ್ರಾ ಮತ್ತು ನಗರ್ ಹವೇಲಿಯಲ್ಲಿ ವಿದ್ಯುತ್ ಪೂರೈಕೆಯನ್ನು ಕೇಂದ್ರ ಸರ್ಕಾರವು 2022ರಲ್ಲಿ ಖಾಸಗಿಯವರಿಗೆ ವಹಿಸಿತ್ತು. ಇದೇ ರೀತಿ ಚಂಡೀಗಢದಲ್ಲಿಯೂ 2025ರಲ್ಲಿ ಮಾಡಲಾಗಿತ್ತು.

ವಿದ್ಯುತ್ ವಲಯವು ಸಮವರ್ತಿ ಪಟ್ಟಿಯಲ್ಲಿದ್ದು, ಈ ಸಂಬಂಧ ಕೇಂದ್ರ ಹಾಗೂ ರಾಜ್ಯ– ಎರಡೂ ನೀತಿ ನಿಯಮ ಕಾಯ್ದೆ ರೂಪಿಸಬಹುದಾಗಿದೆ. ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದವರಿಗೆ ನೆರವು ನೀಡಬೇಕು ಎನ್ನುವ ಸಂವಿಧಾನದ ಆಶಯಗಳಿಗೆ ತಕ್ಕಂತೆ ಗ್ರಾಮೀಣ ಭಾಗದವರಿಗೆ, ಕೃಷಿಗೆ, ಬಡವರಿಗೆ ಮತ್ತು ಕೆಲವು ಸಣ್ಣ ಕೈಗಾರಿಕೆಗಳಿಗೆ ಸರ್ಕಾರವು ರಿಯಾಯಿತಿ ದರದಲ್ಲಿ (ಕ್ರಾಸ್ ಸಬ್ಸಿಡಿ) ಇಲ್ಲವೇ ಉಚಿತವಾಗಿ ವಿದ್ಯುತ್ ಪೂರೈಕೆ ಮಾಡುತ್ತಿದೆ. ಈ ನಡುವೆ, ವಿದ್ಯುತ್ ವಲಯವನ್ನು ಖಾಸಗೀಕರಣಗೊಳಿಸುವ ಪ್ರಯತ್ನಗಳು ಕೇಂದ್ರದ ಮಟ್ಟದಲ್ಲಿ ನಿರಂತರವಾಗಿ ನಡೆಯುತ್ತಲೇ ಇವೆ. ನೀತಿ ಆಯೋಗವು ವಿದ್ಯುತ್ ಕ್ಷೇತ್ರದ ಸುಧಾರಣೆಗೆ ಸಂಬಂಧಿಸಿದ ತನ್ನ 2021ರ ಪ್ರಕಟಣೆಯಲ್ಲಿ ಹಲವು ಕ್ರಮಗಳನ್ನು ಕೈಗೊಳ್ಳುವ ಅಗತ್ಯದ ಬಗ್ಗೆ ಗಮನ ಸೆಳೆದಿತ್ತು. ಅವುಗಳಲ್ಲಿ ಸಬ್ಸಿಡಿಗಳನ್ನು ನಿಲ್ಲಿಸಬೇಕು, ವಿತರಣೆಯಲ್ಲಿ ಸರ್ಕಾರಿ ನಿಗಮಗಳ (ಎಸ್ಕಾಂಗಳ) ಏಕಸ್ವಾಮ್ಯವನ್ನು ಕೊನೆಗೊಳಿಸುವ ಮೂಲಕ (ಡಿಲೈಸೆನ್ಸಿಂಗ್) ಮೂಲಕ ಸ್ಪರ್ಧಾತ್ಮಕತೆಯನ್ನು ಉತ್ತೇಜಿಸಬೇಕು ಎಂದು ಪ್ರತಿಪಾದಿಸಿತ್ತು.

ಇದೇ ದಿಸೆಯಲ್ಲಿ 2022ರಲ್ಲಿ ಕೇಂದ್ರ ಸರ್ಕಾರವು ವಿದ್ಯುತ್ ತಿದ್ದುಪಡಿ ಮಸೂದೆಯನ್ನು ಲೋಕಸಭೆಯಲ್ಲಿ ಮಂಡಿಸಿತು. ಆದರೆ, ಅದಕ್ಕೆ ತೀವ್ರ ವಿರೋಧ ಬಂದ ಹಿನ್ನೆಲೆಯಲ್ಲಿ ಮಸೂದೆಯನ್ನು ಸಂಸತ್ತಿನ ಸ್ಥಾಯಿ ಸಮಿತಿಗೆ ವಹಿಸಿತು. ಅದರ ವರದಿಯ ಆಧಾರದಲ್ಲಿ ಕರಡು ವಿದ್ಯುತ್ (ತಿದ್ದುಪಡಿ) ಮಸೂದೆ–2025ರ ಚೌಕಟ್ಟನ್ನು ಪ್ರಕಟಿಸಿದೆ. ಸರ್ಕಾರದ ಜಾಲವನ್ನು ಬಳಸಿಕೊಂಡು ಖಾಸಗಿಯವರಿಗೆ ವಿದ್ಯುತ್ ವಿತರಣೆಗೆ ಅವಕಾಶ ನೀಡುವುದು, ಸ್ಪರ್ಧಾತ್ಮಕ ದರಕ್ಕೆ ಉತ್ತೇಜನ ಅದರ ಮುಖ್ಯ ಅಂಶಗಳು. ಈ ಮಸೂದೆ ಇನ್ನೂ ಚರ್ಚೆಯ ಹಂತದಲ್ಲಿದ್ದು, ವ್ಯಾಪಕ ವಿರೋಧವೂ ವ್ಯಕ್ತವಾಗುತ್ತಿದೆ. ಆದರೆ, ಕರ್ನಾಟಕ ಸೇರಿದಂತೆ ಹಲವು ರಾಜ್ಯಗಳು ಅದನ್ನೇ ಆಧಾರವಾಗಿಸಿಕೊಂಡು ವಿದ್ಯುತ್ ವಲಯದಲ್ಲಿ ಖಾಸಗಿಯವರಿಗೆ ಅವಕಾಶ ನೀಡಲು ಮುಂದಾಗಿವೆ ಎನ್ನಲಾಗುತ್ತಿದೆ.

ಆಧಾರ: ಸಂಸತ್ತಿನಲ್ಲಿ ಸಚಿವರ ಉತ್ತರ, ಡೌನ್ ಟು ಅರ್ತ್, ನೀತಿ ಆಯೋಗದ ವಿದ್ಯುತ್ ವಿತರಣಾ ವರದಿ–2021, ಮಾಧ್ಯಮ ವರದಿಗಳು

ಭಿನ್ನ ಮಾದರಿ

ದೇಶದಲ್ಲಿ ಭಿನ್ನ ರೀತಿಯಲ್ಲಿ ವಿದ್ಯುತ್ ವಿತರಣಾ ವ್ಯವಸ್ಥೆಯನ್ನು ಖಾಸಗಿಯವರಿಗೆ ವಹಿಸಲಾಗಿದೆ.

ಇಡೀ ವ್ಯವಸ್ಥೆಯನ್ನು ಖಾಸಗಿಯವರಿಗೆ ವಹಿಸುವುದು

ಸರ್ಕಾರಿ–ಖಾಸಗಿ ಸಹಭಾಗಿತ್ವ: ಅಂದರೆ, ವ್ಯವಸ್ಥೆಯಲ್ಲಿ ಸರ್ಕಾರಿ ಸ್ವಾಮ್ಯ ಕಂಪನಿ ಮತ್ತು ಖಾಸಗಿ ಕಂಪನಿ ಪಾಲು ಹೊಂದಿರುವುದು (ಖಾಸಗಿ ಕಂಪನಿಗಳು ಶೇ 51ರಷ್ಟು ಪಾಲು ಹೊಂದಿದ್ದರೆ, ಸರ್ಕಾರಿ ಕಂಪನಿಗಳ ಶೇ 49ರನ್ನು ಹೊಂದಿರುತ್ತವೆ)

ಫ್ರಾಂಚೈಸಿ ಹಂಚಿಕೆ ಮಾದರಿ: ಸರ್ಕಾರಿ ಕಂಪನಿಗಳು ಕೆಲವು ನಿರ್ದಿಷ್ಟ ಕೆಲಸವನ್ನು ಖಾಸಗಿಯವರಿಗೆ ಹಂಚುವುದು. ಇಲ್ಲಿ ಕಂಪನಿ ಮಾಲೀಕತ್ವ ಸರ್ಕಾರದ ಕೈಯಲ್ಲೇ ಇರುತ್ತದೆ

ದೆಹಲಿ, ಒಡಿಶಾದ ನಾಲ್ಕು ವಲಯಗಳು, ಗುಜರಾತ್‌ನ ಅಹಮದಾಬಾದ್, ಸೂರತ್ ಮತ್ತು ದಾಹೇಜ್, ಪಶ್ಚಿಮ ಬಂಗಾಳದ ಕೋಲ್ಕತ್ತ, ಮಹಾರಾಷ್ಟ್ರದ ಮುಂಬೈ, ಮಾಲೇಗಾಂವ್ ಇನ್ನಿತರ ಪ್ರದೇಶಗಳು, ಉತ್ತರ ಪ್ರದೇಶದ ಗ್ರೇಟರ್ ನೋಯಿಡಾ, ಆಗ್ರಾ, ರಾಜಸ್ಥಾನದ ಕೋಟಾ, ಭರತ್‌ಪುರ ಮತ್ತು ಬೀಕಾನೆರ್‌ನಲ್ಲಿ ಖಾಸಗಿ ಕಂಪನಿಗಳು ವಿದ್ಯುತ್ ಪೂರೈಸುತ್ತಿವೆ. ಟಾಟಾ, ಅದಾನಿ, ರಿಲಯನ್ಸ್, ಟೊರೆಂಟ್ ಪವರ್ ಸೇರಿದಂತೆ ದೇಶದಲ್ಲಿ 12 ಖಾಸಗಿ ವಿದ್ಯುತ್ ವಿತರಣಾ ಕಂಪನಿಗಳು ಕಾರ್ಯಾಚರಿಸುತ್ತಿವೆ.

ಖಾಸಗಿಯವರಿಗೆ ಬೇಡ ಎನ್ನುವವರ ವಾದವೇನು?

- ಕೇಂದ್ರ ಸರ್ಕಾರವು ವಿದ್ಯುತ್ ವಲಯವನ್ನು ಖಾಸಗಿಯವರಿಗೆ ವಹಿಸುವ ಪ್ರಯತ್ನ ನಡೆಸುತ್ತಿದ್ದು, ರಾಜ್ಯ ಸರ್ಕಾರಗಳು ಅದಕ್ಕೆ ತಕ್ಕಂತೆ ವರ್ತಿಸುತ್ತಿವೆ. ಖಾಸಗೀಕರಣ ವಿಚಾರದಲ್ಲಿ ಕೇಂದ್ರ ಸರ್ಕಾರವು ಮಾನದಂಡಗಳನ್ನು ರೂಪಿಸುತ್ತದೆ. ಇದರಿಂದ ರಾಜ್ಯಗಳ ಅಧಿಕಾರ ಮೊಟಕಾಗುತ್ತದೆ
- ಸಾರ್ವಜನಿಕರ ಹಣದಿಂದ ನೂರಾರು ವರ್ಷಗಳಲ್ಲಿ ಅಭಿವೃದ್ಧಿಪಡಿಸಲಾಗಿರುವ ವಿದ್ಯುತ್ ಜಾಲವು ಸರ್ಕಾರದ ಹಿಡಿತದಿಂದ ಕೈತಪ್ಪುವ ಅಪಾಯ ಇದೆ. ಅಸ್ತಿತ್ವದಲ್ಲಿರುವ ವಿದ್ಯುತ್ ಪೂರೈಕೆ ಜಾಲವನ್ನೇ ಬಳಸಿಕೊಳ್ಳಲು ಅನುಮತಿಸಲಾಗುತ್ತದೆ. ಖಾಸಗಿ ಕಂಪನಿಗಳಿಗೆ ಪ್ರತ್ಯೇಕ ವ್ಯವಸ್ಥೆ ರೂಪಿಸಿಕೊಳ್ಳಬೇಕಾದ ಅಗತ್ಯವಿಲ್ಲ; ಅಲ್ಪಸ್ವಲ್ಪ ಹಣ ನೀಡಿದರೆ ಸಾಕು
- ರಾಜಕೀಯ ನೀತಿಗಳಿಂದ ನಷ್ಟ ಅನುಭವಿಸುತ್ತಿರುವ ಸರ್ಕಾರಿ ವಿದ್ಯುತ್ ವಿತರಣೆ ಸಂಸ್ಥೆಗಳನ್ನು ರೋಗಗ್ರಸ್ತ ಎಂದು ಪ್ರತಿಪಾದಿಸಿ, ಅವನ್ನು ಖಾಸಗೀಕರಣಗೊಳಿಸುವುದು. ಕ್ರಮೇಣ ವಿದ್ಯುತ್ ಉತ್ಪಾದನೆ, ಸಾಗಾಣಿಕೆ ಮತ್ತು ವಿತರಣೆ– ಮೂರು ವಿಭಾಗಗಳನ್ನು ಖಾಸಗಿಗೆ ವಹಿಸುವುದು; ಸಬ್ಸಿಡಿ, ರಿಯಾಯಿತಿ ಪೂರೈಕೆ ಬಂದ್ ಮಾಡಲಾಗುತ್ತದೆ
- ಒಂದು ನಿಗಮದ ವ್ಯಾಪ್ತಿಯಲ್ಲಿ ಒಂದಕ್ಕಿಂತ ಹೆಚ್ಚು ಖಾಸಗಿ ಕಂಪನಿಗಳು ವಿದ್ಯುತ್ ಪೂರೈಸಲು ಅವಕಾಶವಿದ್ದು, ದರ ನಿಗದಿ ಅಧಿಕಾರ ರಾಜ್ಯ ವಿದ್ಯುತ್ ನಿಯಂತ್ರಣ ಆಯೋಗಗಳದ್ದಾಗಿರುತ್ತದೆ (ಕೆಇಆರ್‌ಸಿ). ಆದರೆ, ಕನಿಷ್ಠ ಮತ್ತು ಗರಿಷ್ಠ ದರ ನಿಗದಿಗೆ ಅವಕಾಶವಿದ್ದು, ಇದು ಗ್ರಾಹಕರಲ್ಲಿ ಗೊಂದಲ ಸೃಷ್ಟಿಸಿ, ಅಂತಿಮವಾಗಿ ಹೆಚ್ಚಿನ ದರ ತೆರುವಂತೆ ಮಾಡುತ್ತದೆ
- ಆರಂಭದಲ್ಲಿ ಖಾಸಗೀಕರಣದಿಂದ ಲಾಭ ಎನ್ನುವಂತೆ ಬಿಂಬಿಸಲಾಗುತ್ತದೆ. ಇದೇ ನೆಪದಿಂದ ಹಲವು ಕಂಪನಿಗಳಿಗೆ ವಿತರಣೆ ಹೊಣೆ ವಹಿಸಲಾಗುತ್ತದೆ. ಅವುಗಳ ಮಧ್ಯೆ ದರ ಪೈಪೋಟಿಯೂ ನಡೆಯುತ್ತದೆ. ಹಲವು ರೀತಿಯ ಸಬ್ಸಿಡಿ, ರಾಜಕೀಯ ತೀರ್ಮಾನಗಳ ಕಾರಣಕ್ಕೆ ಸರ್ಕಾರಿ ಸ್ವಾಮ್ಯದ ಆಯೋಗ ಈ ಸ್ಪರ್ಧೆಯಲ್ಲಿ ಹಿಂದುಳಿಯುತ್ತದೆ. ಖಾಸಗಿಯವರ ಪೈಪೋಟಿಯಲ್ಲಿ ಬಲಿಷ್ಠರಾದವರು ಉಳಿದುಕೊಳ್ಳುತ್ತಾರೆ. ಕ್ರಮೇಣ ವಿದ್ಯುತ್ ವಲಯವು ಅವರ ಹಿಡಿತಕ್ಕೆ ಹೋಗುತ್ತದೆ. ಬಿಎಸ್‌ಎನ್‌ಎಲ್, ಏರ್‌ಟೆಲ್, ಜಿಯೋ ಮೊಬೈಲ್ ನೆಟ್‌ವರ್ಕ್‌ಗಳ ನಡುವೆ ನಡೆದ ಪೈಪೋಟಿಯೇ ಇದಕ್ಕೆ ಉದಾಹರಣೆ
- ನವೀಕರಿಸಬಹುದಾದ ಮೂಲಗಳಿಂದ ಇಂಧನ ಖರೀದಿಸಬೇಕು (ಪಿಪಿಎ) ಎನ್ನುವುದು ಕೇಂದ್ರದ ಮಸೂದೆಯ ಮುಖ್ಯ ಅಂಶ. ಮುಂದಿನ ದಿನಗಳಲ್ಲಿ ಇದೂ ಒಂದು ಸವಾಲಾಗಲಿದೆ. ಪ್ರಸ್ತುತ, ದೇಶದಲ್ಲಿ ನವೀಕರಿಸಬಹುದಾದ ಮೂಲಗಳಿಂದ ಇಂಧನ ಉತ್ಪಾದನೆ ಮಾಡುತ್ತಿರುವ ಬಹುತೇಕರು ಖಾಸಗಿಯವರು. ಅವರು ಹೇಳಿದ ದರ ನೀಡಿ ವಿದ್ಯುತ್ ಖರೀದಿಸಬೇಕು. ಆಗ ವಿದ್ಯುತ್ ಸಹಜವಾಗಿಯೇ ದುಬಾರಿಯಾಗುತ್ತದೆ. ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದವರಿಗೆ ಸಬ್ಸಿಡಿ ನೀಡಬೇಕು ಎಂದರೆ ಸರ್ಕಾರಗಳು ಸಾವಿರಾರು ಕೋಟಿ ರೂಪಾಯಿಗಳನ್ನು ವ್ಯಯಿಸಬೇಕಾಗುತ್ತದೆ. ರಾಜ್ಯಗಳ ಆರ್ಥಿಕತೆಗೆ ಭಾರಿ ಹೊರೆಯಾಗುತ್ತದೆ



ಸರ್ಕಾರ, ಸಮರ್ಥಕರ ವಾದ ಏನು?

- ಸರ್ಕಾರಿ ಸ್ವಾಮ್ಯದ ವಿತರಣಾ ಕಂಪನಿಗಳು ನಷ್ಟ ಅನುಭವಿಸುತ್ತಿದ್ದು, ವಿದ್ಯುತ್ ವಿತರಣಾ ವ್ಯವಸ್ಥೆಯ ನಿರ್ವಹಣೆ ಸಮರ್ಪಕವಾಗಿ ನಡೆಯುತ್ತಿಲ್ಲ. ನಷ್ಟದ ಕಾರಣದಿಂದ ರಾಜ್ಯಗಳಿಗೆ ಆರ್ಥಿಕವಾಗಿ ಹೊರೆಯಾಗುತ್ತಿದೆ
- ಖಾಸಗಿ ಕಂಪನಿಗಳಿಗೆ ಜವಾಬ್ದಾರಿ ಹೊರಿಸಿದರೆ ವಿದ್ಯುತ್ ವಿತರಣಾ ವ್ಯವಸ್ಥೆಯ ಪರಿಣಾಮಕಾರಿ ಕಾರ್ಯಾಚರಣೆ ಮತ್ತು ಆರ್ಥಿಕ ಕಾರ್ಯಕ್ಷಮತೆಯ ಸುಧಾರಣೆ ಸಾಧ್ಯ. ಇದರಿಂದ ಗ್ರಾಹಕರಿಗೆ ಉತ್ತಮ ಸೇವೆ ನೀಡಬಹುದು
- ಖಾಸಗಿಯವರು ಜವಾಬ್ದಾರಿ ವಹಿಸಿಕೊಂಡರೆ, ವಿದ್ಯುತ್ ವಿತರಣೆ ಮಾರ್ಗದಲ್ಲಿ ಆಗುವ ವಿದ್ಯುತ್ ಸೋರಿಕೆ ಮತ್ತು ಆ ಮೂಲಕ ಆರ್ಥಿಕ ನಷ್ಟವನ್ನು ತಪ್ಪಿಸಬಹುದು. ವಿದ್ಯುತ್ ವಿತರಣೆಯನ್ನು ಖಾಸಗಿಯವರಿಗೆ ನೀಡಿದ ನಂತರ ಒಡಿಶಾ, ದೆಹಲಿ ಸೇರಿದಂತೆ ಹಲವು ಕಡೆಗಳಲ್ಲಿ ವಿದ್ಯುತ್ ಸೋರಿಕೆ ಕಡಿಮೆಯಾಗಿದೆ. ಬಿಲ್ಲಿಂಗ್ ವ್ಯವಸ್ಥೆ ಪರಿಣಾಮಕಾರಿಯಾಗಿದ್ದು, ಗ್ರಾಹಕರಿಂದ ಶುಲ್ಕ ವಸೂಲಾತಿ ಹೆಚ್ಚಾಗಿದೆ. ಒಟ್ಟಾರೆ ವ್ಯವಸ್ಥೆಯ ನಿರ್ವಹಣೆ ಪರಿಣಾಮಕಾರಿಯಾಗಿದೆ
- ವಿದ್ಯುತ್ ಪೂರೈಕೆಯಲ್ಲಿ ಆರ್ಥಿಕ ಸ್ಥಿರತೆ ಸಾಧಿಸಿದರೆ, ರಾಜ್ಯಗಳ ಅರ್ಥ ವ್ಯವಸ್ಥೆಗೂ ಒಳ್ಳೆಯದು

ಎಸ್‌ಬಿಐಕ್ಯಾಪ್ಸ್ ವರದಿ ಪ್ರಕಾರ...

- 2025ರ ಡಿಸೆಂಬರ್ ಅಂತ್ಯಕ್ಕೆ, ದೇಶದ ವಿದ್ಯುತ್ ವಿತರಣಾ ವಲಯವು ಹೊಂದಿರುವ ಸಾಲದ ಮೊತ್ತ ₹5 ಲಕ್ಷ ಕೋಟಿ ತಲುಪಿದೆ
- 11 ರಾಜ್ಯಗಳು ವಿದ್ಯುತ್ ವಿತರಣಾ ವ್ಯವಸ್ಥೆಯನ್ನು ಖಾಸಗೀಕರಣಗೊಳಿಸಿದರೆ, ಅವುಗಳ ವಿತ್ತೀಯ ಕೊರತೆಯು ಶೇ 3.5ರಿಂದ ಶೇ 3ಕ್ಕೆ ಇಳಿಯಲಿದೆ
- 2015ನೇ ಆರ್ಥಿಕ ವರ್ಷದಲ್ಲಿ ಶೇ 25ರಷ್ಟಿದ್ದ ವಿದ್ಯುತ್ ಸೋರಿಕೆ ಮತ್ತು ಆರ್ಥಿಕ ನಷ್ಟವು (ಎಟಿ ಆ್ಯಂಡ್ ಸಿ ಲಾಸಸ್) 2025ನೇ ಸಾಲಿನಲ್ಲಿ ಶೇ 15ಕ್ಕೆ ಇಳಿದಿದೆ
- ವಿದ್ಯುತ್ ಪೂರೈಕೆಯ ವಾಸ್ತವ ವೆಚ್ಚ ಮತ್ತು ವರಮಾನ ಸಂಗ್ರಹದ ಅಂತರ ಪ್ರತಿ ಯೂನಿಟ್‌ಗೆ 2021ರಲ್ಲಿ 89 ಪೈಸೆ ಇತ್ತು. ಅದೀಗ 6 ಪೈಸೆಗೆ ಇಳಿದಿದೆ.
- 2025ರಲ್ಲಿ ಖಾಸಗಿ ಮತ್ತು ಸರ್ಕಾರಿ ಸ್ವಾಮ್ಯದ ಕಂಪನಿಗಳು ಒಟ್ಟಾಗಿ ₹2,700 ಕೋಟಿ ಲಾಭ ಗಳಿಸಿವೆ

2028ರಲ್ಲೂ ಅಧಿಕಾರ 'ಕೈ' ಸಂಕಲ್ಪ

ಒಂದನೇ ಪುಟದಿಂದ...

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ನಿಕಟ ಪೂರ್ವ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ರಾಷ್ಟ್ರೀಯ ಹಾಗೂ ರಾಜ್ಯ ಮಟ್ಟದ 'ಕೈ' ನಾಯಕರು ವೇದಿಕೆ ಏರುತ್ತಲೇ ಕೈ ಎತ್ತಿ ಒಗ್ಗಟ್ಟು ಪ್ರದರ್ಶಿಸಿದರು. ಪ್ರತಿಯೊಬ್ಬ ನಾಯಕರಿಗೂ ಸಂವಿಧಾನದ ಪ್ರತಿ ನೀಡಿದ ಹರಿಪ್ರಸಾದ್, ತಮ್ಮ ಮುಂದಿನ ನಡೆಯಿದು ಎಂದು ಸಾರಿದರು. ಚರಕದಲ್ಲಿ ನೂಲುವ ಮೂಲಕ ಖರ್ಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ಕಾಂಗ್ರೆಸ್ ಸರ್ಕಾರವು 'ಗ್ಯಾರಂಟಿ' ಯೋಜನೆಗಳು ಹಾಗೂ ಹಲವು ಕಲ್ಯಾಣ ಕಾರ್ಯಕ್ರಮಗಳ ಮೂಲಕ ಜನಮೆಚ್ಚುವ ಆಡಳಿತ ನೀಡಿದೆ ಎಂದು ನಾಯಕರು ಬಣ್ಣಿಸಿದರು. ಮುಂದಿನ ದಿನಗಳಲ್ಲೂ ಈ ಗ್ಯಾರಂಟಿ ಯೋಜನೆಗಳನ್ನು ಮುಂದುವರಿಸಿಕೊಂಡು, ಇನ್ನಷ್ಟು ಜನಕಲ್ಯಾಣ ಕಾರ್ಯಕ್ರಮಗಳನ್ನು ಜಾರಿ ಮಾಡುವ ಮೂಲಕ 2028ರಲ್ಲಿ ಮತ್ತೆ ಅಧಿಕಾರದ ಚುಕ್ಕಾಣಿ ಹಿಡಿಯುವ ಶಪಥ ಮಾಡಿದರು.

'ಕೆಪಿಸಿಸಿ ಅಧ್ಯಕ್ಷರಾಗಿದ್ದ ಶಿವಕುಮಾರ್ ರಾಜ್ಯದ ಮೂಲೆ, ಮೂಲೆಗೂ ತಲುಪಿ ಬಹಳ ಕೆಲಸ ಮಾಡಿದ್ದಾರೆ. ಎಲ್ಲರನ್ನೂ ಒಗ್ಗೂಡಿಸಿ ಪಕ್ಷ ಕಟ್ಟಿದ್ದಾರೆ. ತಮ್ಮ ಅಧಿಕಾರದ ಅವಧಿಯಲ್ಲಿ ನೀಡಿದ ಎಲ್ಲ ಭರವಸೆಗಳನ್ನು ಸಿದ್ದರಾಮಯ್ಯ ಈಡೇರಿಸಿದ್ದಾರೆ. ಇಬ್ಬರೂ ಸೇರಿ ಸರ್ಕಾರವನ್ನು ಅತ್ಯಂತ ಸುಭದ್ರವಾಗಿ ಜನಪರವಾಗಿ ಮುನ್ನಡೆಸಿದ್ದಾರೆ. ಇವರ ರೀತಿಯಲ್ಲಿ ಕೆಲಸ ಮಾಡಿದರೆ ಮತ್ತೊಮ್ಮೆ ನಮ್ಮ ಸರ್ಕಾರ ಅಧಿಕಾರಕ್ಕೆ ಬರಲಿದೆ' ಎಂದು ಖರ್ಗೆ ವಿಶ್ವಾಸ ವ್ಯಕ್ತಪಡಿಸಿದರು.

'ಪಕ್ಷವನ್ನು ತಳಮಟ್ಟದಿಂದ ಕಟ್ಟಿರುವ, ಕಾರ್ಯಕರ್ತರನ್ನು ಗುರುತಿಸುವಂತಹ, ಪಕ್ಷದ ಸಿದ್ಧಾಂತ ಪಾಲಿಸುವ ವ್ಯಕ್ತಿಯ ಕೈಯಲ್ಲಿಯೇ ಪಕ್ಷದ ಜವಾಬ್ದಾರಿ ನೀಡಬೇಕು ಎಂದು ತೀರ್ಮಾನಿಸಿ, ಹರಿಪ್ರಸಾದ್ ಅವರಿಗೆ ಈ ದೊಡ್ಡ ಜವಾಬ್ದಾರಿ ನೀಡಿದ್ದೇವೆ. ಹರಿಪ್ರಸಾದ್ ಒಂದು ವರ್ಗಕ್ಕೆ ಸೀಮಿತವಾದ ನಾಯಕರಲ್ಲ. ಅವರು ಪಕ್ಷಕ್ಕೆ ಹೊಸಬರೂ ಅಲ್ಲ. ಸಾಮಾನ್ಯ ಕಾರ್ಯಕರ್ತನಾಗಿ, ಹಲವಾರು ಹುದ್ದೆಗಳನ್ನು ನಿರ್ವಹಿಸಿ, ಕೆಪಿಸಿಸಿ ಅಧ್ಯಕ್ಷರಾಗಿದ್ದಾರೆ. ಎಲ್ಲರನ್ನೂ ಒಟ್ಟಾಗಿ ಕರೆದುಕೊಂಡು ಹೋಗುವಂತಹ ನಾಯಕನ ಕೈಯಲ್ಲಿ ಜವಾಬ್ದಾರಿ ನೀಡಿದ್ದೇವೆ. ಅವರ ನೇತೃತ್ವದಲ್ಲಿ ಚುನಾವಣೆಗಳನ್ನು ಎದುರಿಸೋಣ. ಅವರು ನಮಗೆ ಶಕ್ತಿ ನೀಡುತ್ತಾರೆ ಎಂದು ಭರವಸೆ ಇಟ್ಟಿದ್ದೇನೆ' ಎಂದರು.

ಸಿದ್ದರಾಮಯ್ಯ ಮಾತನಾಡಿ, 'ಹರಿಪ್ರಸಾದ್ ಅವರು ಸಿದ್ಧಾಂತಕ್ಕೆ ಬದ್ಧರಾಗಿರುವುದರಿಂದ ಕಾಂಗ್ರೆಸ್ ಪಕ್ಷವನ್ನು ಬಲಪಡಿಸುವ ಶಕ್ತಿಯಿದೆ. ಕರ್ನಾಟಕದಲ್ಲಿ ನಡೆದ ಐದೂ ಉಪ ಚುನಾವಣೆಗಳಲ್ಲಿ ನಾವು ಗೆಲುವು ಸಾಧಿಸಿರಬೇಕಾದರೆ, ಜನರ ಪ್ರೀತಿ, ವಿಶ್ವಾಸವನ್ನು ಉಳಿಸಿಕೊಂಡಿದ್ದೇವೆ ಎಂದರ್ಥ. ಹರಿಪ್ರಸಾದ್ ಅವರ ನಾಯಕತ್ವದಲ್ಲಿ ಪಕ್ಷವನ್ನು ಗಟ್ಟಿಗೊಳಿಸುವ ಕೆಲಸ ಮಾಡಿ, 2028ರಲ್ಲಿ ಮತ್ತೊಮ್ಮೆ ನಾವೇ ಅಧಿಕಾರಕ್ಕೆ ಬರುತ್ತೇವೆ. 2029ರಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದು ರಾಹುಲ್ ಗಾಂಧಿ ಅವರನ್ನು ಪ್ರಧಾನ ಮಂತ್ರಿಯನ್ನಾಗಿ ಮಾಡುವ ಸಂಕಲ್ಪವನ್ನು ಮಾಡಬೇಕು' ಎಂದು ಕಾರ್ಯಕರ್ತರಲ್ಲಿ ಮನವಿ ಮಾಡಿದರು.

ಹರಿಪ್ರಸಾದ್ ಅವರಿಗೆ ಅಧಿಕಾರ ಹಸ್ತಾಂತರಿಸಿ ಮಾತನಾಡಿದ ಡಿ.ಕೆ. ಶಿವಕುಮಾರ್, 'ಇಡೀ ರಾಜ್ಯ ಸರ್ಕಾರ ಹಾಗೂ ಕಾಂಗ್ರೆಸ್ ಪಕ್ಷ ಹರಿಪ್ರಸಾದ್ ಅವರ ಬೆನ್ನಿಗೆ ದೃಢವಾಗಿ ನಿಲ್ಲಲಿದೆ' ಎಂದು ಅಭಯ ನೀಡಿದರು.

ಇದೇ ವೇಳೆ, ಭವಿಷ್ಯದ ರಾಜಕೀಯ ಗುರಿಗಳ ಬಗ್ಗೆ ಮಾತನಾಡಿದ ಅವರು, 'ನಾವೆಲ್ಲರೂ ಒಗ್ಗಟ್ಟಿನಿಂದ ಶ್ರಮ ವಹಿಸಿ ದುಡಿದು 2028ರ ವಿಧಾನಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ಮತ್ತೆ ಕಾಂಗ್ರೆಸ್ ಅನ್ನು ಅಧಿಕಾರಕ್ಕೆ ತರಬೇಕು. ಹಾಗೆಯೇ, 2029ರ ಲೋಕಸಭಾ ಚುನಾವಣೆಯಲ್ಲಿ ರಾಹುಲ್ ಗಾಂಧಿ ಅವರನ್ನು ಪ್ರಧಾನಿಯನ್ನಾಗಿ ಮಾಡಲು ಹಗಲಿಗೆ ಹಗಲು ಕೊಟ್ಟು ಕೆಲಸ ಮಾಡಬೇಕು' ಎಂದರು.


ಶಿಸ್ತು ಮರೆತರೆ ಕ್ರಮ: ಖರ್ಗೆ ಕಿಡಿ

ಮಲ್ಲಿಕಾರ್ಜುನ ಖರ್ಗೆ ಮಾತು ಆರಂಭಿಸುತ್ತಿದ್ದಂತೆ ವೇದಿಕೆಯ ಮುಂಭಾಗದಲ್ಲಿ ನೆರೆದಿದ್ದ ಕಾರ್ಯಕರ್ತರು 'ಡಿಕೆ... ಡಿಕೆ' ಎಂದು ಘೋಷಣೆಗೆ ಕೂಗಿದರು. ಸಿಡಿಮಿಡಿಗೊಂಡ ಖರ್ಗೆ, 'ಇಷ್ಟು ಜನ ಮಾತ್ರ ಕೂಗಿದರೆ ಇಡೀ ದೇಶ ನಿಮ್ಮ ಕೈಗೆ ಸಿಗುತ್ತಾ? ಯೂಸ್‌ಲೆಸ್ ಫೆಲೋಸ್' ಎಂದರು.

'ಎಲ್ಲರೂ ಸೇರಿ ಪಕ್ಷ ಒಂದುಗೂಡಿಸುವ ವೇದಿಕೆಯಿದು. ಬಾಕಿಯವರು ಇಲ್ಲಿಗೆ ಯಾಕೆ ಬಂದಿದ್ದಾರೆ? ಕಸ ಗುಡಿಸುವುದಕ್ಕೆ ಬಂದಿದ್ದಾರಾ? ಇಲ್ಲಿ ಯಾರೆಷ್ಟೇ ದೊಡ್ಡವರಿದ್ದರೂ ವ್ಯಕ್ತಿ ಪೂಜೆ ನಡೆಯೋದಿಲ್ಲ. ನನ್ನ 58 ವರ್ಷಗಳ ರಾಜಕೀಯದಲ್ಲಿ ಏರುಪೇರುಗಳನ್ನು ನೋಡಿದ್ದೇನೆ. ವ್ಯಕ್ತಿ ಮುಖ್ಯ ಅಲ್ಲದಿದ್ದರೂ ಬಹಳ ಜನರಿಗೆ ಕಾಂಗ್ರೆಸ್ ಅವಕಾಶ ಕೊಟ್ಟಿದೆ. ಕಾಂಗ್ರೆಸ್ ಪಕ್ಷದಿಂದ ನಾಯಕರು ಬೆಳೆದಿದ್ದಾರೆಯೇ ಹೊರತು ಅವರಿಂದ ಕಾಂಗ್ರೆಸ್ ಪಕ್ಷವಲ್ಲ. ನಾವೆಲ್ಲರೂ ಸೇರಿ ಕಾಂಗ್ರೆಸ್ ಪಕ್ಷವನ್ನು ಕಟ್ಟಬೇಕು. ಯಾವುದೇ ಕಾರಣಕ್ಕೂ ಶಿಸ್ತು ಮರೆಯಬಾರದು. ಇಲ್ಲದಿದ್ದರೆ ನಾನು ಶಿಸ್ತು ಕ್ರಮ ಕೈಗೊಳ್ಳುತ್ತೇನೆ' ಎಂದು ಎಚ್ಚರಿಕೆ ನೀಡಿದರು.

ಅಪ್ಪ ಮಗಳಿಗೆ ಹೇಳಿದ ಮಾತುಗಳು

ನುಡಿ ಬೆಳಗು



ದಾದಾಪೀರ್ ನವಿಲೇಹಾಳ್

ಮಗಳೇ, ನಿನಗೆ ಬುದ್ಧಿವಾದದ ಅವಶ್ಯಕತೆಯಿಲ್ಲ. ನಿನ್ನ ನಡೆನುಡಿ, ಬೇಕು ಬೇಡಗಳು, ಓದು, ಚಿಂತನೆ ಎಲ್ಲವೂ ಯಾರ ಸಲಹೆಯ ಅಗತ್ಯವೂ ಇಲ್ಲದಷ್ಟು ಉತ್ತಮವಾಗಿವೆ. ನಮ್ಮ ಸಮಾಜದ ಬಹುಪಾಲು ಹೆಣ್ಣು ಹೆತ್ತವರ ಹಾಗೆ ಮದುವೆ ಮಾಡಿ ಗಂಡನ ಮನೆಗೆ ಆದಷ್ಟು ಬೇಗ ಕಳಿಸಿ ಜವಾಬ್ದಾರಿ ನಿಭಾಯಿಸಬೇಕು ಎನ್ನುವ ಸಾಂಪ್ರದಾಯಿಕ ಆಲೋಚನೆಯ ನಡುವೆ, ನಿನಗೆ ಯಾವುದನ್ನೂ ಹೇರದೆ ನಿನ್ನಿಷ್ಟದ ಬದುಕನ್ನು ಆರಿಸಿಕೊಳ್ಳಲು ನಿನಗೆ ಇರುವ ಸ್ವಾತಂತ್ರ್ಯದ ದಾರಿಯನ್ನು ಮುಕ್ತವಾಗಿಡುತ್ತಾ ಬಂದಿದ್ದೇವೆ. ನೀನು ಪುಟಾಣಿಯಾಗಿದ್ದಾಗಿನಿಂದ ಪೆನ್ಸಿಲ್‌ನಿಂದ ಹಿಡಿದು, ಪುಸ್ತಕ, ಸಂಗೀತ, ಸಿನಿಮಾ, ಉಡುಪಿನವರೆಗೆ ನಿನ್ನ ಆಯ್ಕೆ ನಮಗೆಂದೂ ಅಸಮಾಧಾನವಾಗದಷ್ಟು ಎತ್ತರದ ಅಭಿರುಚಿಯಿಂದ ಕೂಡಿರುವುದನ್ನು ಕಂಡು ನಾವು ಹೆಮ್ಮೆಪಟ್ಟಿದ್ದೇವೆ.

ಇದೀಗ ಶೈಕ್ಷಣಿಕ ಬದುಕಿನ ಬಲು ಮಹತ್ವದ ಹಂತದಲ್ಲಿರುವ ನಿನಗೆ ಸ್ಪರ್ಧಾತ್ಮಕ ಜಗತ್ತಿನ ತಳಮಳಗಳು ಕಾಡುತ್ತಿರುವಂತೆ ಭಾಸವಾಗಿದೆ. ನೀನು ಎಂಜಿನಿಯರ್, ಡಾಕ್ಟರ್, ಪ್ರೊಫೆಸರ್, ವಿಜ್ಞಾನಿ ಅಥವಾ ಐಎಎಸ್ ಹೀಗೆ ಏನಾದರೂ ಆಗಬೇಕೆಂಬ ಒತ್ತಡವನ್ನು ನಾವು ಹೇರಿಲ್ಲ. ನಮ್ಮ ಜೀವನದಲ್ಲಿ ನಾವು ಏನಾಗಲಿಲ್ಲವೋ ಅದನ್ನು ಮಕ್ಕಳ ಬದುಕಿನಲ್ಲಿ ಕಾಣಬೇಕೆಂಬ ಆಸೆಯೂ ನಮಗಿಲ್ಲ. ಏನಾಗಬೇಕು ಎಂಬುದನ್ನು ನೀನು ನಿರ್ಧರಿಸಬೇಕು. ನಿನ್ನ ಪ್ರತಿಭೆ ಮತ್ತು ಅದರ ಮೂಲಕ ನೀನು ನಿಜಕ್ಕೂ ಸಾಧಿಸುವ ಯಾವುದೇ ಆದರೂ ಅದು ನಮಗಿಷ್ಟ. ಸಮಾಜ ನಿನ್ನನ್ನು ಇಂಥವರ ಮಗಳು ಎಂದು ಗುರುತಿಸುವುದಕ್ಕಿಂತ ನಮ್ಮನ್ನು ನಿನ್ನ ತಂದೆ ತಾಯಿಗಳು ಎಂದು ಗುರುತಿಸಿದರೆ ಹೆತ್ತವರಿಗೆ ಅದಕ್ಕಿಂತ ಬೇರೆ ಭಾಗ್ಯವೇಕೆ ಬೇಕು?

ಸಾಧನೆ ಅದೆಂಥದ್ದೇ ಇರಲಿ, ನಾನೇ ಮೊದಲು ಅಥವಾ ಕೊನೆ ಎಂದು ಬೀಗಿದವರೆಲ್ಲ ಕಾಲ ಗರ್ಭದಲ್ಲಿ ಹೂತುಹೋಗಿದ್ದಾರೆ. ಜೀವನಕಡಲಿನ ಅನಂತತೆಯಲ್ಲಿ ಯಾವುದೂ ಮೊದಲಲ್ಲ, ಕೊನೆಯಲ್ಲ. ಆದರೆ ಬದುಕಿನ ಮಹತ್ವ ತಿಳಿಯದೆ ಸಾಧಿಸುವ ಗುರಿ ಅರ್ಥಹೀನವಾದುದು. ನಾವು ಮುಟ್ಟಬಯಸುವ ಗುರಿಯ ಘನತೆ ನಾವು ಕ್ರಮಿಸುವ ಹಾದಿಯಿಂದ ಬೆಳಗುತ್ತದೆ. ನಮ್ಮ ಪ್ರತಿಯೊಂದು ಹೆಜ್ಜೆ ಎಷ್ಟೆಷ್ಟು ನೈತಿಕ ದೃಢತೆಯಿಂದ ಕೂಡಿರುತ್ತದೆಯೋ ಅಷ್ಟಷ್ಟು ಸಂತೃಪ್ತಿ ನಮ್ಮದಾಗುತ್ತದೆ. ಶ್ರೇಷ್ಠವೂ ಸೃಜನಶೀಲವೂ ಆದ ಜ್ಞಾನದ ಬಲದಿಂದ ದತ್ತವಾಗುವ ಬೌದ್ಧಿಕ ಉದಾತ್ತತೆಯ ಬೆನ್ನು ಹತ್ತಿದವಳು ನೀನು. ಹಾಗಾಗಿ ಗೆಲುವು ಸದಾ ನಿನ್ನನ್ನು ಹಿಂಬಾಲಿಸುತ್ತದೆ. ಮೇಣದ ಬತ್ತಿಯಂತೆ ನಿನ್ನನ್ನು ನೀನು ಸುಟ್ಟುಕೊಂಡು ಬೆಳಗುವುದು, ಅಗರಬತ್ತಿಯ ಹಾಗೆ ಉರಿದು ಸುತ್ತಲಿನ ಪರಿಸರವನ್ನು ಅಪೂರ್ವ ಪರಿಮಳದಿಂದ ತುಂಬುವುದು ಹೆಣ್ಣುಜೀವದ ಕರ್ತವ್ಯ ಎಂದು ಕರಗುವುದು ಆದರ್ಶದ ಮಾತುಗಳಾಗುತ್ತವೆ. ನೆನಪಿರಲಿ ಮಗಳೇ, ಯಾವ ದೇವರೂ ಕಷ್ಟಕಾಲದಲ್ಲಿ ಕೈಹಿಡಿಯುವುದಿಲ್ಲ. ಆದರೆ ಹೊರುವುದಕ್ಕೆಂದೇ ಇರುವ ದೊಡ್ಡ ಹೆಗಲಿನ ಅಪ್ಪ, ಕರಗುವುದಕ್ಕೆಂದೇ ಇರುವ ಜೀವಗರುಳಿನ ಅಮ್ಮ ಕೊನೆಯವರೆಗೂ ನೀನು ಎಂದೆಂದೂ ನಂಬಬಹುದಾದ ಭರವಸೆಗಳು.

ಕಣ್ತುಂಬ ನಿದ್ದೆ ಎಲ್ಲ ಬಗೆ ಬವಣೆಗಳ ಬಿಡುಗಡೆಗೆ ದಾರಿ. ಇಷ್ಟಪಟ್ಟು ಊಟ ಮಾಡು. ಪ್ರತಿದಿನ ಓದನ್ನು ನೀನು ಎಂಜಾಯ್ ಮಾಡಬೇಕು. ಸ್ಪರ್ಧೆಯು ನಮ್ಮ ಚೈತನ್ಯವನ್ನು ಹಸಿರಾಗಿಸಬೇಕು, ಕಸಿದುಕೊಳ್ಳಬಾರದು. ಗಳಿಸಿದ ಜ್ಞಾನ ನಿತ್ಯ ಆರೋಗ್ಯದಾಯಕವಾಗಬೇಕು. ಪ್ರೀತಿ ಸ್ನೇಹ ಸ್ಫೂರ್ತಿಯಾಗದಿದ್ದರೆ ಅವಕ್ಕೇನು ಅರ್ಥ? ಹೆಣ್ಣುಜೀವದಿಂದಲೇ ಬದುಕಿನಲ್ಲಿ ಒಂದಿಷ್ಟು ಕರುಣೆ ಉಳಿದುಕೊಂಡಿದೆ. ಆರಾಧನೆಯ ಮಾತನ್ನಾಡುತ್ತಲೇ ಹೆಣ್ಣನ್ನು ಸುಲಿದು ತಿನ್ನುವ ಧರ್ಮೋದ್ಯಮ ಮತ್ತಷ್ಟು ಬಲಿಷ್ಠವಾಗಿದೆ. ಹೀಗೆ ಇಲ್ಲಿ ಹುಟ್ಟುವ ಆಯ್ಕೆ ನಮಗೆ ಇರಲಿಲ್ಲ. ಆದರೆ ಎಲ್ಲರೊಳಗೊಂದಾಗಿ ಬದುಕುವ ಆಯ್ಕೆ ನಿಶ್ಚಿತವಾಗಿಯೂ ಇಲ್ಲಿದೆ. ಹೆತ್ತವರ ಹಿತ ಮಕ್ಕಳ ಬಾಳುವಿಕೆಯಲ್ಲಿದೆ, ಗೊನೆ ಮಾಗಿದ ಬಾಳೆ ಹಿಂಡು ಹಿಳ್ಳುಗಳಲ್ಲಿ ಪ್ರಾಣವೂರಿ ಹಿಗ್ಗಿದಂತೆ. ❖

ಪದಬಂಧ 6441

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ವಿವೇಕವೇ ಇಲ್ಲದಿರುವುದು (4)
3. ಯಾವಾಗಲೂ ತೋರುವ ಅಪ್ರಾಮಾಣಿಕತೆ (4)
4. ಯೋಗವಿದ್ದಾಗ ಗವಿಯಲ್ಲಿ ಅಗಲುವಿಕೆ (3)
6. ವಾದ ಮಾಡಿದ್ದಕ್ಕೆ ಸಿಕ್ಕಿದ್ದು ಅನ್ಯಾಯವಾದ ಆರೋಪಣೆ (4)
8. ತೀಡಿ ತೀಡಿ ಮಾಡಿರುವ ಸುಧಾರಣೆ (4)
10. ರೂಢಿಗೆ ವಿರೋಧವಾದ ನಡೆಯಿದು (4)
12. ಬುದ್ಧಿಯಿರಿಸಿಕೊಂಡು ನೀಡಿರುವ ಒಪ್ಪಿಗೆ (4)
13. ಪಾವತಿ ಪತ್ರವಿದು (3)
15. ಪತ್ರಬರೆದವನು ಅತ್ಯಂತ ಆತ್ಮೀಯ ಸ್ನೇಹಿತ (4)
16. ಯಜಮಾನನು ಜಲವುಣಿಸಿ ಬೆಳೆಸಿದ ಶ್ರೀಗಂಧ (4)

ಮೇಲಿಂದ ಕೆಳಕ್ಕೆ

1. ಅಲೆಯುತ್ತಿರುವಾಗ ಅಪ್ಪಳಿಸುತ್ತಿರುವ ತರಂಗ (2)
2. ಲಲಿತ ಕಲೆಗಳನ್ನೆಲ್ಲಾ ಬಲ್ಲವನೀತ (4)
3. ಗರತಿ ಪ್ರವೇಶಿಸಿರುವ ಇಯತ್ತೆ (4)
5. ನಾಡಾಡಿಯ ಧಮನಿ (2)
7. ಪತಿಯದ್ದು ಇದೇ ರೂಢಿ! (3)
9. ಇದು ಬಹಳ ಶ್ರೇಷ್ಠ (3)
10. ಕುದುರೆ ಇಲ್ಲಿಗೆ ಬಂದಿದೆ (2)
11. ಕರದಲ್ಲಿ ಇಟ್ಟುಕೊಡಿರುವುದು ಪ್ರಚಾರದ ಚೀಟಿ (4)
12. ಕ್ರಮವನ್ನು ಉಲ್ಲಂಘಿಸುವುದು (4)
14. ಗಂಡು ಕೋಳಿ ಇಲ್ಲಿದೆ (2)

1			2	■	3			
	■	■		■		■	■	■
■	■	■	4			■	■	5
6	7			■	8		9	
■		■	■	■	■	■		■
10			11	■	12			
	■	■	13			■	■	■
■	■	■		■		■	■	14
15				■	16			

6440ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಜಲಪಾತ 3.ವಸಂತ 5.ಪದ 7.ನವದಂಪತಿ 9.ಪಿಕ 10.ತಾಕತ್ತು 11.ಹಲ್ಲು 12.ವ್ಯವಕಲನ 14.ರವ 16.ಅನಿಲ 17.ನಡುಪ್ರಾಯ

ಮೇಲಿಂದ ಕೆಳಕ್ಕೆ:
1.ಜನಪ 2.ತಲ್ಲೀನ 4.ಸಂಪ್ರತಿ 6.ದಶಕ 8.ದಂಡೆತ್ತು 10.ತಾರಕ 11.ಹಗುರ 12.ವ್ಯಸನಿ 13.ನಯನ 15.ವಲಯ

ಸುಡೊಕು 6824

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

		1		5		7		2
	9		6		7			1
		7		3		6		9
	6			1		8		7
7		9	5		3		1	
	8			9		3		5
	7		3		1			
5		6					7	
	3		9		5			8

6823 ಸುಡೊಕು

5	6	1	8	7	4	2	9	3
3	7	2	6	1	9	8	5	4
9	8	4	5	2	3	1	6	7
1	2	5	7	3	6	4	8	9
4	3	8	2	9	5	6	7	1
6	9	7	4	8	1	3	2	5
8	1	9	3	5	2	7	4	6
7	4	3	9	6	8	5	1	2
2	5	6	1	4	7	9	3	8

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

22 ಜೂನ್ 2026 ಸೋಮವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ನಿಜ ಜ್ಯೇಷ್ಠ ಶುಕ್ಲ ಅಷ್ಟಮಿ ಗಂ. 15-41 ನಕ್ಷತ್ರ: ಉತ್ತರ ಫಲ್ಗುಣಿ ಗಂ. 10-23 ಯೋಗ: ವ್ಯತೀಪಾತ ಗಂ. 10-31 ಕರಣ: ಬವ ಗಂ. 15-41, ಮಿಥುನ ಮಾಸದ 07 ನೇ ದಿನ. ಮಳೆ ನಕ್ಷತ್ರ : ಆರ್ದ್ರಾ 1 ನೇ ಪಾದ. ರಾಹುಕಾಲ : ಬೆಳಿಗ್ಗೆ 07-30 - 09-00, ಸೂರ್ಯೋದಯ : 06-09 ಸೂರ್ಯಾಸ್ತ : 06-56, ಮುಸ್ಲಿಂ ದಿನಾಂಕ : 06 ಮೊಹರಂ, ಅದೃಷ್ಟ ಸಂಖ್ಯೆ : 3, 6

ಮೇಷ: ಅನೇಕ ಕ್ಷೇತ್ರಗಳಲ್ಲಿ ವಿಶ್ರಾಂತಿಗಳಿಲ್ಲದೆ ದುಡಿಯುವ ನಿಮಗೆ ದೃಷ್ಟಿದೋಷವು ಸ್ವಲ್ಪ ಮಟ್ಟಿನ ಆರೋಗ್ಯವನ್ನು ಹಾಳುಮಾಡುವುದು. ಏಕಾಗ್ರತೆ ಹೆಚ್ಚಿಸಲು ಧ್ಯಾನ ಮಾಡಿ.

ವೃಷಭ: ಕಳೆದದ್ದು ಸವಾಲಿನ ದಿನಗಳಾಗಿದ್ದು, ಸುಲಭದ ದಿನಗಳನ್ನು ಎದುರು ನೋಡಬಹುದು. ಖಾದ್ಯ ಪದಾರ್ಥಗಳ ಉತ್ಪಾದನಾ ಕೆಲಸಗಳು ಚುರುಕುಗತಿಯಿಂದ ಸಾಗಲಿವೆ. ಭೂ ಖರೀದಿಯ ಯೋಗವಿದೆ.

ಮಿಥುನ: ಸಾಂಸಾರಿಕ ವಿಚಾರ ಮತ್ತು ವ್ಯವಹಾರದ ವಿಚಾರಗಳಲ್ಲಿ ಗೌಪ್ಯತೆ ಕಾಪಾಡಿಕೊಳ್ಳಿರಿ. ಆದಷ್ಟು ಬೇಗ ಸರಿಯಾದ ವ್ಯಕ್ತಿಯನ್ನು ಸಂಪರ್ಕಿಸುವುದರಿಂದ ಅನಾರೋಗ್ಯ ಗುಣವಾಗುವುದು.

ಕರ್ಕಾಟಕ: ಕಲಾ ವಿದ್ಯಾರ್ಥಿಗಳಿಗೆ ಅದರಲ್ಲೂ ವಿಶೇಷವಾಗಿ ಸಂಗೀತ ಶಾಸ್ತ್ರದ ವಿದ್ಯಾರ್ಥಿಗಳಿಗೆ ಅಭ್ಯಾಸಕ್ಕೆ ಅಧಿಕ ಸಮಯ ಸಿಗಲಿದೆ. ಸಮಾಜದಲ್ಲಿ ಉತ್ತಮವಾದ ಸಂಪರ್ಕ ಸಿಗಲಿದೆ. ಉಲ್ಲಾಸಕರ ದಿನವಾಗಲಿದೆ.

ಸಿಂಹ: ವ್ಯವಹಾರಸ್ಥರು ನೂತನ ಕೆಲಸ ಕಾರ್ಯಗಳ ಆರಂಭಕ್ಕೆ ಮತ್ತು ಒಡಂಬಡಿಕೆಗಳಿಗೆ ಒಪ್ಪಿಕೊಳ್ಳಲು ಈ ದಿನ ಸೂಕ್ತವಲ್ಲ. ಆದಾಯ ಹೆಚ್ಚಿಸಲು ಕಾರ್ಯಕ್ರಮಗಳನ್ನು ರೂಪಿಸುವಿರಿ. ಹೊಸ ಗೆಳೆತನ ಬೆಳೆಸಿಕೊಳ್ಳುವಿರಿ.

ಕನ್ಯಾ: ಎಲ್ಲರೊಂದಿಗೆ ಸಹಕಾರ ಮನೋಭಾವನೆಯಲ್ಲಿ ಮುಂದುವರಿಯುವುದರಿಂದ ಯಶಸ್ಸು. ಈ ದಿನದ ಲೇವಾದೇವಿ ವ್ಯವಹಾರದಲ್ಲಿ ಭಾಗಶಃ ಅನುಕೂಲವಿದೆ.

ತುಲಾ: ವಸ್ತುಗಳನ್ನು ಹುಡುಕಲು ಸಮಯ ಉಪಯೋಗಿಸುವುದು ನಿಷ್ಪ್ರಯೋಜಕವಾಗಲಿದೆ. ಸಮಯ ಕೊಟ್ಟಷ್ಟು ನಿರ್ಧಾರಗಳು ಪಕ್ವವಾಗುವುದು. ನಿದ್ರಾಹೀನತೆ ಕಾಡಬಹುದು.

ವೃಶ್ಚಿಕ: ಆರೋಗ್ಯದ ದೃಷ್ಟಿಯಿಂದ ಪಥ್ಯ ಮಾಡಬೇಕಾಗುವುದು. ವ್ಯಾಪಾರ ವ್ಯವಹಾರದಲ್ಲಿ ನಡೆದಂತಹ ಆಂತರಿಕ ಒಪ್ಪಂದಗಳಿಂದ ಲಾಭ ಹೊಂದುವಿರಿ.


ಧನು: ಉತ್ಪಾದಿತ ವಸ್ತುಗಳಿಗೆ ಬೇಡಿಕೆ ದೊರೆತು ಸಂತೋಷಕರ ವಾತಾವರಣ ಸಿಗಲಿದೆ. ಕುಟುಂಬದವರೊಂದಿಗೆ ವಸ್ತ್ರ ಖರೀದಿಗಾಗಿ ಅಂಗಡಿಗಳನ್ನು ಸುತ್ತುವಿರಿ. ಮಕ್ಕಳೊಡನೆ ಕಾಲ ಕಳೆಯುವಿರಿ.

ಮಕರ: ಸಮಸ್ಯೆಗಳಿಗೆ ಪರಿಹಾರವನ್ನು ಕೇಳಬೇಕಾದವರಲ್ಲಿ ಕೇಳದೆ ಇದ್ದರೆ, ಆಗಬೇಕಾದ ಕೆಲಸವು ಆಗದೆ ಹೋಗುವುದು. ಪ್ರಾಮಾಣಿಕತೆಯಿಂದಾಗಿ ಉದ್ಯೋಗದಲ್ಲಿ ಗೌರವವು ಅಯಾಚಿತವಾಗಿ ಸಿಗಲಿದೆ.

ಕುಂಭ: ಮಾತಿನ ಚತುರತೆಯಿಂದ ಎಲ್ಲಾ ಕೆಲಸಗಳು ಸರಾಗವಾಗಿ ನೆರವೇರಲಿವೆ. ಈಗಿನ ಸ್ಥಾನಮಾನಕ್ಕೆ ಕಾರಣವಾದವರ ಬಗ್ಗೆ ಸದಾ ಗೌರವ ಇಟ್ಟುಕೊಳ್ಳಿ.

ಮೀನ: ಕೆಲಸಗಳನ್ನು ಉಳಿಸಿಕೊಂಡ ಕಾರಣದಿಂದಾಗಿ ಇಂದು ಅಧಿಕ ಕಾರ್ಯದೊತ್ತಡ ಅನುಭವಿಸುವಿರಿ. ಸಮಯವನ್ನು ವ್ಯರ್ಥ ಮಾಡುವುದರಿಂದ ಹಿರಿಯರ ಬಳಿ ಟೀಕೆಗಳನ್ನು ಕೇಳುವಿರಿ

ಗುಂಡಣ್ಣ



ಭಾರತಕ್ಕೆ ಕಚ್ಚಾ ತೈಲ ಪೂರೈಕೆ: ರಷ್ಯಾ ಅಗ್ರಸ್ಥಾನ



ನವದೆಹಲಿ (ಪಿಟಿಐ): ಭಾರತಕ್ಕೆ ಕಚ್ಚಾ ತೈಲ ಪೂರೈಕೆ ಮಾಡುವ ರಾಷ್ಟ್ರಗಳ ಪೈಕಿ ರಷ್ಯಾ ಜೂನ್ ತಿಂಗಳಿನಲ್ಲಿ ಅಗ್ರಸ್ಥಾನ ಪಡೆದಿದೆ. ಆದರೆ, ಇದೇ ಅವಧಿಯಲ್ಲಿ ಅಮೆರಿಕದಿಂದ ಕಚ್ಚಾ ತೈಲ ಆಮದು ಭಾರಿ ಪ್ರಮಾಣದಲ್ಲಿ ಇಳಿದಿದೆ ಎಂದು ಕೆಪ್ಲರ್ ವರದಿ ತಿಳಿಸಿದೆ.

ರಷ್ಯಾದಿಂದ ಜೂನ್ ತಿಂಗಳ 19ರವರೆಗೆ ಭಾರತಕ್ಕೆ ಪ್ರತಿ ದಿನ 26.6 ಲಕ್ಷ ಬ್ಯಾರಲ್ ಕಚ್ಚಾ ತೈಲ ಆಮದು ಆಗಿದೆ. ಮೇ ತಿಂಗಳಲ್ಲಿ ಅಲ್ಲಿಂದ 19.1 ಲಕ್ಷ ಬ್ಯಾರಲ್‌ನಷ್ಟು ಕಚ್ಚಾ ತೈಲ ಆಮದಾಗಿತ್ತು.

ಅರಬ್ ಸಂಯುಕ್ತ ಸಂಸ್ಥಾನದಿಂದ (ಯುಇಎ) 6.36 ಲಕ್ಷ ಬ್ಯಾರಲ್ ಕಚ್ಚಾ ತೈಲ ಪ್ರತಿ ದಿನ ಆಮದಾಗಿದೆ. ಆದರೆ, ಮೇ ತಿಂಗಳಿನಲ್ಲಿ 6.44 ಲಕ್ಷ ಬ್ಯಾರಲ್ ಆಮದಾಗಿತ್ತು. ಇದಕ್ಕೆ ಹೋಲಿಸಿದರೆ ಆಮದು ಪ್ರಮಾಣ ಅಲ್ಪ ಇಳಿದಿದೆ. ಸೌದಿ ಅರೇಬಿಯಾದಿಂದ 3.84 ಲಕ್ಷ ಬ್ಯಾರಲ್ ಮತ್ತು ವೆನೆಜುವೆಲಾದಿಂದ 2.09 ಲಕ್ಷ ಬ್ಯಾರಲ್ ತೈಲ ನಿತ್ಯ ಆಮದಾಗಿದೆ.

ಮೇ ತಿಂಗಳಿನಲ್ಲಿ ಭಾರತಕ್ಕೆ ಅಮೆರಿಕಾದಿಂದ ಪ್ರತಿನಿತ್ಯ 2.52 ಲಕ್ಷ ಬ್ಯಾರಲ್ ಆಮದಾಗಿತ್ತು. ಆದರೆ, ಜೂನ್‌ನಲ್ಲಿ 91 ಸಾವಿರಕ್ಕೆ ಕುಸಿದಿದೆ ಎಂದು ತಿಳಿಸಿದೆ.

ಭಾರತವು, ಜಗತ್ತಿನ ಮೂರನೇ ಅತಿದೊಡ್ಡ ಇಂಧನ ಆಮದು ರಾಷ್ಟ್ರ. ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷದಿಂದ ಹೊರ್ಮುಜ್ ಜಲಸಂಧಿಯಲ್ಲಿ ಸಂಚಾರಕ್ಕೆ ತೊಂದರೆ ಉಂಟಾಗಿತ್ತು. ಆದರೆ, ಕಳೆದ ವಾರ ಅಮೆರಿಕ ಮತ್ತು ಇರಾನ್ ಕದನ ವಿರಾಮಕ್ಕೆ ಒಪ್ಪಿಕೊಂಡಿದ್ದು, ಸಂಚಾರ ಆರಂಭವಾಗಿದೆ. ಆದರೆ, ಕದನ ವಿರಾಮದ ಬಗ್ಗೆ ಇನ್ನೂ ಅನಿಶ್ಚಿತತೆ ಇದೆ.

'ಹೊರ್ಮುಜ್ ಜಲಸಂಧಿಯು ಮತ್ತೆ ಸಂಚಾರಕ್ಕೆ ಮುಕ್ತವಾಗುವುದರಿಂದ ತ್ವರಿತವಾಗಿ ಭಾರತಕ್ಕೆ ಎಲ್‌ಪಿಜಿ, ಎಲ್‌ಎನ್‌ಜಿ ಮತ್ತು ಕಚ್ಚಾ ತೈಲ ಆಮದಾಗುವ ನಿರೀಕ್ಷೆ ಇದೆ. ಅಲ್ಲದೆ, ಭಾರತವು ಇಂಧನ ಪೂರೈಕೆ ಮೂಲಗಳನ್ನು ಹೆಚ್ಚಿಸಿಕೊಂಡಿದ್ದು, ಸಹಜ ಸ್ಥಿತಿಗೆ ಬರಲಿದೆ' ಎಂದು ಕೆಪ್ಲರ್‌ನ ಹಿರಿಯ ಅಧಿಕಾರಿ ಸುಮಿತ್ ರಿಟೋಲಿಯಾ ಹೇಳಿದ್ದಾರೆ.

ಸ್ಟಾರ್ಮರ್ ರಾಜೀನಾಮೆ ಸಾಧ್ಯತೆ

ಲಂಡನ್ (ಎಪಿ): ಸೋಮವಾರದ ಹೊತ್ತಿಗೆ ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್ ಅವರು ರಾಜೀನಾಮೆ ನೀಡುವ ಕುರಿತು ಘೋಷಣೆ ಮಾಡಲಿದ್ದಾರೆ ಎನ್ನುವ ಸುದ್ದಿ ಹರಿದಾಡುತ್ತಿದೆ. ಚುನಾವಣೆ ವೇಳೆ ಜನರಿಗೆ ನೀಡಿದ್ದ ಭರವಸೆಯನ್ನು ಈಡೇರಿಸದ ಕಾರಣ ರಾಜೀನಾಮೆ ನೀಡಲು ಅವರದೇ ಲೇಬರ್ ಪಕ್ಷದ ಸಂಸದರ ಒತ್ತಡ ಇದೆ ಎನ್ನಲಾಗುತ್ತಿದೆ.

ಕಳೆದ ವಾರ ಮಾರ್ಕರ್‌ಫೀಲ್ಡ್ ಕ್ಷೇತ್ರಕ್ಕೆ ನಡೆದ ಉಪ ಚುನಾವಣೆಯಲ್ಲಿ ಲೇಬರ್ ಪಕ್ಷದ ಆ್ಯಂಡಿ ಬರ್ನಮ್ ಅವರು ಜಯಗಳಿಸಿದ್ದಾರೆ. ಈವರೆಗೆ ಇವರು ಗ್ರೇಟರ್ ಮ್ಯಾಂಚೆಸ್ಟರ್‌ನ ಮೇಯರ್ ಆಗಿದ್ದರು. ಉಪ ಚುನಾವಣೆ ಗೆದ್ದ ಬಳಿಕ ಪಕ್ಷದೊಳಗೆ ಆ್ಯಂಡಿ ಅವರ ಜನಪ್ರಿಯತೆ ಹೆಚ್ಚಾಗಿದೆ.

'ಪಕ್ಷವನ್ನು ಮತ್ತು ದೇಶವನ್ನು ಮುನ್ನಡೆಸಲು ನಾನು ಸಮರ್ಥನಾಗಿದ್ದೇನೆ' ಎಂದು ಗೆಲುವಿನ ಬಳಿಕ ನೀಡಿದ ಭಾಷಣದಲ್ಲಿ ಆ್ಯಂಡಿ ಅವರು ಹೇಳಿದ್ದಾರೆ.

'ರಾಜಕೀಯವಾದ ವಾಸ್ತವಗಳನ್ನು, ಸವಾಲುಗಳನ್ನು ಮತ್ತು ಅವಕಾಶಗಳನ್ನು ಅರಿಯಲು ಸ್ಟಾರ್ಮರ್ ಅವರು ಈ ವಾರಾಂತ್ಯ ತಮ್ಮ ಬಂಗಲೆಯಲ್ಲಿಯೇ ಕಳೆಯಲಿದ್ದಾರೆ. ಅವರು ರಾಜೀನಾಮೆ ನೀಡುವುದು ವದಂತಿಯಷ್ಟೆ' ಎಂದು ಹಣಕಾಸು ಸಚಿವ ಪೀಟರ್ ಕ್ಲೇ ಹೇಳಿದರು.

ರಾಜೀನಾಮೆಗೆ ಯಾಕೆ ಒತ್ತಡ?

2024ರಲ್ಲಿ ನಡೆದಿದ್ದ ಚುನಾವಣೆಯಲ್ಲಿ ಸ್ಟಾರ್ಮರ್ ಅವರು, ಆರ್ಥಿಕ ಬೆಳವಣಿಗೆಯನ್ನು ಹೆಚ್ಚಿಸುವುದಾಗಿ ಭರವಸೆ ನೀಡಿದ್ದರು. ಕೆಟ್ಟ ಸಾರ್ವಜನಿಕ ಸೇವೆಗಳ ವ್ಯವಸ್ಥೆಯನ್ನು ಸರಿಪಡಿಸುತ್ತೇನೆ, ಜೀವನ ವೆಚ್ಚವನ್ನು ತಗ್ಗಿಸುತ್ತೇನೆ ಎಂಬ ಭರವಸೆಗಳನ್ನು ಜನರಿಗೆ ನೀಡಿದ್ದರು. ಲೈಂಗಿಕ ಅಪರಾಧಿ ಜೆಫ್ರಿ ಎಪ್‌ಸ್ಟೈನ್ ಅವರ ಸ್ನೇಹಿತ ಪೀಟರ್ ಮಂಡೆಲ್‌ಸನ್ ಅವರನ್ನು ಅಮೆರಿಕಕ್ಕೆ ಬ್ರಿಟನ್ ರಾಯಭಾರಿಯನ್ನಾಗಿಸಿದ್ದು ಸೇರಿದಂತೆ ಆಡಳಿತಾತ್ಮಕವಾದ ಹಲವು ತಪ್ಪು ನಿರ್ಧಾರಗಳನ್ನು ತೆಗೆದುಕೊಂಡಿದ್ದಾರೆ. ಈ ಎಲ್ಲ ಕಾರಣದಿಂದ ಲೇಬರ್ ಪಕ್ಷದ ಮತ್ತು ಸರ್ಕಾರದ ಜನಪ್ರಿಯತೆ ಕುಸಿಯುತ್ತಿದೆ ಎನ್ನುವುದು ಲೇಬರ್ ಪಕ್ಷದ ಸಂಸದರ ಅಭಿಪ್ರಾಯ.

ಸ್ಟಾರ್ಮರ್ ರಾಜೀನಾಮೆ ನೀಡಲಿದ್ದಾರೆ. ವಲಸೆ, ಇಂಧನ (ನಾರ್ತ್ ಸೀನಲ್ಲಿರುವ ತೈಲ ನಿಕ್ಷೇಪದಿಂದ ಕಚ್ಚಾ ತೈಲ ತೆಗೆಯಲು ಹೊಸ ಪರವಾನಗಿ ನೀಡುವುದಕ್ಕೆ ನಿರ್ಬಂಧ ಹೇರಿರುವುದನ್ನು ತೆರವು ಮಾಡಿ!)– ಈ ಎರಡೂ ವಿಷಯಗಳಲ್ಲಿ ಸ್ಟಾರ್ಮರ್ ವಿಫಲರಾಗಿದ್ದಾರೆ
ಡೊನಾಲ್ಡ್ ಟ್ರಂಪ್, ಅಮೆರಿಕ ಅಧ್ಯಕ್ಷ

ತುರ್ತು ಪ್ರಮಾಣಪತ್ರಕ್ಕೆ ತೊಡಕಾದ 'ಫಿಫೊ'

ಒಂದನೇ ಪುಟದಿಂದ...

ಯಾವುದೇ 'ತುರ್ತು' ಇದ್ದರೂ, ಅಂತಹ ಅರ್ಜಿಯನ್ನು ಆದ್ಯತೆ ಮೇಲೆ ಅನುಮೋದಿಸಲು ಅವಕಾಶ ಇಲ್ಲದಂತಾಗಿದೆ.

ತಹಶೀಲ್ದಾರ್ ಹಾಗೂ ಉಪ ತಹಶೀಲ್ದಾರ್ ಅವರ ಲಾಗಿನ್‌ನಲ್ಲೂ 'ಫಿಫೊ' ವ್ಯವಸ್ಥೆ ಅಳವಡಿಸಲಾಗಿದ್ದು, ಅವರು ರಾಜಸ್ವ ನಿರೀಕ್ಷಕರು ಅವರ ಲಾಗಿನ್‌ನಿಂದ ಅರ್ಜಿಯನ್ನು ವಿಲೇವಾರಿ ಮಾಡಿದ ದಿನಾಂಕದ ಆಧಾರದ ಮೇಲೆ ವಿಲೇವಾರಿ ಮಾಡಬೇಕಾಗುತ್ತದೆ.

ಅಸಹಾಯಕರಾಗಿದ್ದೇವೆ: 'ಹೊಸ ವ್ಯವಸ್ಥೆಯಿಂದಾಗಿ, ತುರ್ತಾಗಿ ಬೇಕಾದವರಿಗೆ ಜಾತಿ ಪ್ರಮಾಣಪತ್ರ ಅನುಮೋದಿಸಲು ಸಾಧ್ಯವಾಗುತ್ತಿಲ್ಲ' ಎನ್ನುತ್ತಾರೆ ತಹಶೀಲ್ದಾರ್‌ಗಳು.

'ಸಿಇಟಿಗೆ ಬೇಕಾಗಿದೆ, ಆಸ್ಪತ್ರೆಗೆ ಅಗತ್ಯವಿದೆ, ನೌಕರಿಗೆ ಸಲ್ಲಿಸಬೇಕಾಗಿದೆ ಎಂದು ನಿತ್ಯವೂ ಹಲವರು ನಮ್ಮ ಬಳಿಗೆ ಬರುತ್ತಾರೆ. ಆದರೆ, ತಂತ್ರಾಂಶದಲ್ಲಿ ಅದಕ್ಕೆ ಅವಕಾಶ ಇಲ್ಲದಾಗಿದೆ. ತೀರಾ ತುರ್ತಿದ್ದವರು ಜಿಲ್ಲಾಧಿಕಾರಿಗೆ ಅರ್ಜಿ ಸಲ್ಲಿಸಬೇಕು. ಅದು ಅರ್ಹವೆಂದು ಕಂಡುಬಂದಲ್ಲಿ ಅವರು ಸರ್ಕಾರದ ಅನುಮತಿ ಪಡೆದು, ತುರ್ತೆಂದು ಪರಿಗಣಿಸಲು ಅವಕಾಶ ಕೊಡಬೇಕಾಗುತ್ತದೆ. ಅದೆಲ್ಲವೂ ನಡೆದು ನಮ್ಮ ಲಾಗಿನ್‌ನಲ್ಲಿ ಅರ್ಜಿಯು ಆದ್ಯತೆ ಎಂದು ಪರಿಗಣಿಸಲು ಹಲವು ದಿನಗಳೇ ಬೇಕಾಗುತ್ತವೆ' ಎಂದು ಅಸಹಾಯಕತೆ ವ್ಯಕ್ತಪಡಿಸಿದರು.

'ಸರ್ವರ್ ಸಮಸ್ಯೆಯೂ ತೊಡಕಾಗಿ ಪರಿಣಮಿಸುತ್ತಿದೆ. ಸಾವಿರಾರು ಅರ್ಜಿಗಳು ಬಾಕಿ ಇದ್ದರೂ, ದಿನಕ್ಕೆ ಸರಾಸರಿ 250 ಅರ್ಜಿಗಳನ್ನು ಮಾತ್ರವೇ ಅನುಮೋದಿಸಲು ಸಾಧ್ಯವಾಗುತ್ತಿದೆ. ಸರ್ವರ್ ನಿಧಾನವಾದರೆ ಒಂದು ಅರ್ಜಿ ವಿಲೇವಾರಿಗೆ ಹಲವು ನಿಮಿಷಗಳೇ ಬೇಕಾಗುತ್ತದೆ' ಎಂದು ಅವರು ತಿಳಿಸಿದರು.

ಅಮೆರಿಕದ ನಡುವಿನ ಶಾಂತಿ ಒಪ್ಪಂದದ ಬಳಿಕವೂ ಇರಾನ್ ಹೊರ್ಮುಜ್ ಜಲಸಂಧಿಯನ್ನು ಮುಚ್ಚಿರುವುದು ಸರಿಯೇ?
•ತಪ್ಪು •ಸರಿ •ಗೊತ್ತಿಲ್ಲ
ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಮಾರುಕಟ್ಟೆ ಕುಸಿದಾಗಲೂ ಲಾಭ

ಬಂಡವಾಳ ಮಾರುಕಟ್ಟೆ





ಕಾವ್ಯ ಡಿ.
ಚಾರ್ಟರ್ಡ್ ಅಕೌಂಟೆಂಟ್

ನೀವು ಎಂದಾದರೂ ಹೂಡಿಕೆಯ ಜಗತ್ತಿಗೆ ಕಾಲಿಟ್ಟಿದ್ದರೆ, ಒಂದು ದೊಡ್ಡ ಗೊಂದಲ ನಿಮ್ಮನ್ನು ಖಂಡಿತ ಕಾಡಿರುತ್ತದೆ. 'ಹೂಡಿಕೆ ಮಾಡಲು ಇದು ಸರಿಯಾದ ಸಮಯವೇ ಅಥವಾ ಮಾರುಕಟ್ಟೆ ಕುಸಿಯುವವರೆಗೆ ಕಾಯಬೇಕೇ?' ಎಂಬುದು ಆ ಪ್ರಶ್ನೆ. ಷೇರು ಮಾರುಕಟ್ಟೆಯ ಚಲನೆಯನ್ನು ನಿಖರವಾಗಿ ಅಂದಾಜಿಸುವುದು ಅಸಾಧ್ಯ. ಬೆಲೆಗಳು ದಿಢೀರನೆ ಹೆಚ್ಚಾಗಬಹುದು, ತಕ್ಷಣವೇ ಕುಸಿಯಬಹುದು ಅಥವಾ ತಿಂಗಳುಗಟ್ಟಲೆ ಒಂದೇ ಮಟ್ಟದಲ್ಲಿ ಇರಬಹುದು. ಭಾರತದ ಖ್ಯಾತ ನಿಧಿ ನಿರ್ವಾಹಕ (ಫಂಡ್ ಮ್ಯಾನೇಜರ್) ರಾಜೀವ್ ಠಕ್ಕರ್ ಮತ್ತು ಶಂಕರನ್ ನರೇನ್ ಅವರಂತಹ ಅನುಭವಿಗಳೂ ಮಾರುಕಟ್ಟೆಯಲ್ಲಿ ಸರಿಯಾದ ಸಮಯವನ್ನು (ಮಾರ್ಕೆಟ್ ಟೈಮಿಂಗ್) ಯಾವಾಗಲೂ ನಿಖರವಾಗಿ ಊಹಿಸಲು ಸಾಧ್ಯವಿಲ್ಲ ಎನ್ನುತ್ತಾರೆ. ಇಂತಹ ಸಂದರ್ಭದಲ್ಲಿ, 'ನಾನು ಯಾವಾಗ ಹೂಡಿಕೆ ಮಾಡಬೇಕು' ಎಂಬ ಚಿಂತೆ ಬಿಟ್ಟು, ಮಾರುಕಟ್ಟೆಯ ಏರಿಳಿತಗಳನ್ನೇ ನಮಗೆ ಲಾಭದಾಯಕ ಆಗುವಂತೆ ಬದಲಾಯಿಸುವ ಒಂದು ಅದ್ಭುತ ಅಸ್ತ್ರ 'ರೂಪಾಯಿ ವೆಚ್ಚದ ಸರಾಸರಿ' ಅರ್ಥಾತ್ ರುಪಿ ಕಾಸ್ಟ್ ಆವರೇಜಿಂಗ್.

'ರೂಪಾಯಿ ವೆಚ್ಚದ ಸರಾಸರಿ' ಎಂಬುದು ಒಂದು ಸರಳ ಮತ್ತು ಶಿಸ್ತುಬದ್ಧ ಹೂಡಿಕೆಯ ವಿಧಾನ. ಇಲ್ಲಿ ನೀವು ಮಾರುಕಟ್ಟೆಯ ಏರಿಳಿತಗಳ ಬಗ್ಗೆ ತಲೆಕೆಡಿಸಿಕೊಳ್ಳದೆ, ಒಂದು ನಿರ್ದಿಷ್ಟ ಮೊತ್ತವನ್ನು ನಿಗದಿತ ಸಮಯದ ಅಂತರದಲ್ಲಿ (ಉದಾಹರಣೆಗೆ ಪ್ರತಿ ತಿಂಗಳು ಮ್ಯೂಚುವಲ್ ಫಂಡ್‌ಗಳಲ್ಲಿ ಎಸ್‌ಐಪಿ ಮೂಲಕ) ಹೂಡಿಕೆ ಮಾಡುತ್ತಾ ಹೋಗುತ್ತೀರಿ. ನಿಮ್ಮ ಹೂಡಿಕೆಯ ಮೊತ್ತವು ಯಾವಾಗಲೂ ಒಂದೇ ಆಗಿರುವುದರಿಂದ, ಮಾರುಕಟ್ಟೆಯ ಬೆಲೆಗೆ (ಎನ್‌ಎವಿ) ಅನುಗುಣವಾಗಿ ನಿಮಗೆ ಸಿಗುವ ಮ್ಯೂಚುವಲ್ ಫಂಡ್ ಯೂನಿಟ್‌ಗಳ ಸಂಖ್ಯೆ ಬದಲಾಗುತ್ತದೆ. ಮಾರುಕಟ್ಟೆ ಕುಸಿದಾಗ ಮ್ಯೂಚುವಲ್ ಫಂಡ್‌ನ ಎನ್‌ಎವಿ ಕಡಿಮೆ ಇರುತ್ತದೆ. ಆಗ ಅದೇ ಹಣಕ್ಕೆ ನಿಮಗೆ ಹೆಚ್ಚು ಯೂನಿಟ್‌ಗಳು ಸಿಗುತ್ತವೆ. ಮಾರುಕಟ್ಟೆ ಗರಿಷ್ಠ ಮಟ್ಟದಲ್ಲಿದ್ದಾಗ ಎನ್‌ಎವಿ ಹೆಚ್ಚಿರುತ್ತದೆ, ಆಗ ಕಡಿಮೆ ಯೂನಿಟ್‌ಗಳು ಸಿಗುತ್ತವೆ. ದೀರ್ಘಾವಧಿಯಲ್ಲಿ ಈ ಪ್ರಕ್ರಿಯೆಯು ನಿಮ್ಮ ಒಟ್ಟಾರೆ ಖರೀದಿ ವೆಚ್ಚವನ್ನು ಸರಿದೂಗಿಸಿ, ಸರಾಸರಿ ಬೆಲೆಯನ್ನು ಕಡಿಮೆ ಮಾಡುತ್ತದೆ.

ಇದು ಹೇಗೆ ಕೆಲಸ ಮಾಡುತ್ತದೆ?: ನೀವು ಪ್ರತಿ ತಿಂಗಳು ಒಂದು ಮ್ಯೂಚುವಲ್ ಫಂಡ್‌ನಲ್ಲಿ ₹5 ಸಾವಿರವನ್ನು ನಿಯಮಿತವಾಗಿ ಹೂಡಿಕೆ ಮಾಡುತ್ತಿದ್ದೀರಿ ಎಂದುಕೊಳ್ಳಿ. ಮಾರುಕಟ್ಟೆಯು ಏರುತ್ತಾ-ಇಳಿಯುತ್ತಾ ಸಾಗುವಾಗ ನಿಮ್ಮ ಹೂಡಿಕೆಗೆ ಹೇಗೆ ಲಾಭ ಸಿಗುತ್ತದೆ ಎಂಬುದನ್ನು ಗಮನಿಸಬಹುದು. ಮೊದಲ ತಿಂಗಳು ಅಂದರೆ ಜನವರಿಯಲ್ಲಿ ಫಂಡ್‌ನ ಒಂದು ಯೂನಿಟ್ ಬೆಲೆ (ನೆಟ್ ಅಸೆಟ್ ವ್ಯಾಲ್ಯೂ) ₹50 ಇರುತ್ತದೆ. ಆಗ ನಿಮ್ಮ ₹5 ಸಾವಿರಕ್ಕೆ ಸರಿಯಾಗಿ 100 ಯೂನಿಟ್‌ಗಳು ಸಿಗುತ್ತವೆ. ಫೆಬ್ರುವರಿಯಲ್ಲಿ ಮಾರುಕಟ್ಟೆ ಕೊಂಚ ಇಳಿಕೆಯಾಗಿ ಯೂನಿಟ್ ಬೆಲೆ ₹40ಕ್ಕೆ ಇಳಿಯುತ್ತದೆ. ಇಲ್ಲಿ ಮಾರುಕಟ್ಟೆ ಬಿದ್ದರೂ ನಿಮಗೆ ಲಾಭವಾಗುತ್ತದೆ, ಏಕೆಂದರೆ ಅಷ್ಟೇ ಹಣಕ್ಕೆ ಈ ಬಾರಿ ನಿಮಗೆ 125 ಯೂನಿಟ್‌ಗಳು ಸಿಗುತ್ತವೆ. ಇನ್ನು ಮಾರ್ಚ್ ತಿಂಗಳಿನಲ್ಲಿ ಮಾರುಕಟ್ಟೆ ತೀವ್ರವಾಗಿ ಕುಸಿದು ಯೂನಿಟ್‌ನ ಬೆಲೆ ಕೇವಲ ₹25ಕ್ಕೆ ಬಂದು ನಿಲ್ಲುತ್ತದೆ. ಸಾಮಾನ್ಯ ಜನ ಹೆದರುವ ಈ ಸಮಯದಲ್ಲಿ ನೀವು ಹೂಡಿಕೆ ಮುಂದುವರಿಸುವುದರಿಂದ, ಅದೇ ₹5 ಸಾವಿರ ಮೊತ್ತಕ್ಕೆ ನಿಮಗೆ ಭರ್ಜರಿ 200 ಯೂನಿಟ್‌ಗಳು ಲಭಿಸುತ್ತವೆ. ಮುಂದಿನ ಮೂರು ತಿಂಗಳು ಮಾರುಕಟ್ಟೆ ಮತ್ತೆ ಬದಲಾಗುತ್ತಾ ಸಾಗುತ್ತದೆ. ಏಪ್ರಿಲ್‌ನಲ್ಲಿ ಯೂನಿಟ್ ಬೆಲೆ ಮತ್ತೆ ₹50 ಆದಾಗ ನಿಮಗೆ 100 ಯೂನಿಟ್‌ಗಳು ಸಿಗುತ್ತವೆ. ಮೇ ತಿಂಗಳಲ್ಲಿ ಬೆಲೆ ಕೊಂಚ ಇಳಿದು ₹40 ಆದಾಗ 125 ಯೂನಿಟ್‌ಗಳು ಮತ್ತು ಜೂನ್ ತಿಂಗಳಲ್ಲಿ ಯೂನಿಟ್ ಬೆಲೆ ₹50 ತಲುಪಿದಾಗ ನಿಮಗೆ ಮತ್ತೆ 100 ಯೂನಿಟ್‌ಗಳು ಸಿಗುತ್ತವೆ.

ಹೀಗೆ 6 ತಿಂಗಳ ಕೊನೆಯಲ್ಲಿ ನೀವು ಹೂಡಿಕೆ ಮಾಡಿದ ಒಟ್ಟು ಹಣ ₹30,000 ಆಗಿರುತ್ತದೆ (ತಿಂಗಳಿಗೆ ₹5,000ರಂತೆ). ನೀವು ಒಟ್ಟುಗೂಡಿಸಿದ ಎಲ್ಲಾ ಯೂನಿಟ್‌ಗಳನ್ನು ಕೂಡಿಸಿದರೆ (100 + 125 + 200 + 100 + 125 + 100) ನಿಮ್ಮ ಖಾತೆಯಲ್ಲಿ ಒಟ್ಟು 750 ಯೂನಿಟ್‌ಗಳು ಜಮೆಯಾಗಿರುತ್ತವೆ. ಈಗ ನೀವು ಹೂಡಿಕೆ ಮಾಡಿದ ಒಟ್ಟು ಹಣವನ್ನು (₹30,000), ನಿಮಗೆ ಸಿಕ್ಕ ಒಟ್ಟು ಯೂನಿಟ್‌ಗಳಿಂದ (750) ಭಾಗಿಸಿ ಸರಾಸರಿ ಲೆಕ್ಕ ಹಾಕಿದರೆ, ನಿಮ್ಮ ಒಂದು ಯೂನಿಟ್ ಖರೀದಿ ವೆಚ್ಚ ಕೇವಲ ₹40 ಮಾತ್ರ ಎಂದಾಗುತ್ತದೆ. ಜೂನ್ ತಿಂಗಳಿನಲ್ಲಿ ಮಾರುಕಟ್ಟೆಯ ಇಂದಿನ ಬೆಲೆ ₹50 ಇದ್ದರೂ, ಈ ಸರಾಸರಿ ಸೂತ್ರದಿಂದಾಗಿ ನಿಮ್ಮ ಖರೀದಿ ಬೆಲೆ ಕೇವಲ ₹40ಕ್ಕೆ ಬಂದು ನಿಂತಿದೆ. ಅಂದರೆ ಮಾರುಕಟ್ಟೆ ಕುಸಿದಾಗ (ವಿಶೇಷವಾಗಿ ಮಾರ್ಚ್‌ನಲ್ಲಿ ₹25 ಇದ್ದಾಗ) ನೀವು ಹೆಚ್ಚು ಯೂನಿಟ್‌ಗಳನ್ನು ಖರೀದಿಸಿದ್ದರಿಂದ ನಿಮ್ಮ ಒಟ್ಟಾರೆ ಖರೀದಿ ವೆಚ್ಚ ತಾನಾಗಿಯೇ ಕಡಿಮೆಯಾಯಿತು. ಮಾರುಕಟ್ಟೆಯ ಕುಸಿತದ ದಿನಗಳನ್ನು ಆರ್ಥಿಕವಾಗಿ ಲಾಭದಾಯಕವಾಗಿ ಬದಲಾಯಿಸಿಕೊಳ್ಳುವ ಜಾಣ್ಮೆ ಈ ಸೂತ್ರದಲ್ಲಿದೆ.

ಒಂದೇ ಬಾರಿಗೆ ದೊಡ್ಡ ಮೊತ್ತವನ್ನು ಹೂಡಿಕೆ ಮಾಡುವುದು ಮತ್ತು ಎಸ್‌ಐಪಿ ಮೂಲಕ ಹಂತಹಂತವಾಗಿ ಹೂಡಿಕೆ ಮಾಡುವುದು ಸಂಪೂರ್ಣವಾಗಿ ಭಿನ್ನವಾದ ಹಾದಿಗಳು. ಒಂದೇ ಬಾರಿ ದೊಡ್ಡ ಮೊತ್ತವನ್ನು ಮಾರುಕಟ್ಟೆಗೆ ತೊಡಗಿಸುವಾಗ ಆತಂಕ ಮತ್ತು ಅಪಾಯ (ರಿಸ್ಕ್) ಎರಡೂ ಹೆಚ್ಚಿರುತ್ತವೆ. ಒಂದು ವೇಳೆ ಹಣ ಹಾಕಿದ ತಕ್ಷಣವೇ ಮಾರುಕಟ್ಟೆ ಕುಸಿದರೆ, ಹೂಡಿಕೆಯ ಮೌಲ್ಯ ಕರಗುತ್ತದೆ ಮತ್ತು ಅದು ಮೊದಲಿನ ಸ್ಥಿತಿಗೆ ಬರಲು ವರ್ಷಗಳೇ ಬೇಕಾಗಬಹುದು. ಆದರೆ ರೂಪಾಯಿ ವೆಚ್ಚದ ಸರಾಸರಿ ವಿಧಾನದಲ್ಲಿ ಪ್ರತಿ ತಿಂಗಳು ಸ್ವಲ್ಪ ಸ್ವಲ್ಪವಾಗಿ ಹೂಡಿಕೆ ಮಾಡುವುದರಿಂದ, ಮಾರುಕಟ್ಟೆ ಕುಸಿತದ ಭಯವನ್ನು ಅದು ಬುಡಸಮೇತ ಕಿತ್ತೊಗೆಯುತ್ತದೆ. ಮಾರುಕಟ್ಟೆ ಯಾವಾಗ ತಳ ಮುಟ್ಟುತ್ತದೆ ಎಂದು ಊಹಿಸಲು ಸಾಧ್ಯವಿರುವ, ಹೆಚ್ಚು ರಿಸ್ಕ್ ತೆಗೆದುಕೊಳ್ಳುವ ಧನಿಕರಿಗೆ ಒಂದೇ ಬಾರಿಯ ಹೂಡಿಕೆ ಒಪ್ಪಬಹುದು. ಆದರೆ, ಯಾವುದೇ ಗೊಂದಲವಿಲ್ಲದೆ, ನೆಮ್ಮದಿಯಿಂದ ಮತ್ತು ಸುರಕ್ಷಿತವಾಗಿ ದೀರ್ಘಾವಧಿಯಲ್ಲಿ ದೊಡ್ಡ ಸಂಪತ್ತು ಬೆಳೆಸಬೇಕೆನ್ನುವ ಸಾಮಾನ್ಯ ಜನರಿಗೆ ಎಸ್‌ಐಪಿ ಮೂಲಕ ರೂಪಾಯಿ ವೆಚ್ಚದ ಸರಾಸರಿ ಮಾಡುವುದೇ ಅತ್ಯುತ್ತಮ ಮಾರ್ಗ.

ಈ ತಂತ್ರವನ್ನು ಯಾವಾಗ ಬಳಸಬೇಕು?: ಈ ಹೂಡಿಕೆಯ ಸೂತ್ರವು 5ರಿಂದ 10 ವರ್ಷದ ದೀರ್ಘಾವಧಿಯ ಗುರಿಗಳನ್ನು ಹೊಂದಿರುವಾಗ ಮತ್ತು ಮಾರುಕಟ್ಟೆಯಲ್ಲಿ ಅನಿಶ್ಚಿತತೆ ಹೆಚ್ಚಿರುವಾಗ ಗರಿಷ್ಠ ಲಾಭ ನೀಡುತ್ತದೆ. ಮಾರುಕಟ್ಟೆ ಕುಸಿಯುತ್ತಿರುವಾಗ ಸಾಮಾನ್ಯ ಹೂಡಿಕೆದಾರರು ಭಯಪಟ್ಟು ಹಿಂದೆ ಸರಿಯುತ್ತಾರೆ, ಆದರೆ ಈ ಸೂತ್ರವನ್ನು ಬಳಸುವವರು ಕಡಿಮೆ ಬೆಲೆಗೆ ಹೆಚ್ಚಿನ ಯೂನಿಟ್‌ಗಳನ್ನು ಖರೀದಿಸುತ್ತಾ ಶ್ರೀಮಂತರಾಗುತ್ತಾರೆ. ಇದರೊಂದಿಗೆ ಚಕ್ರಬಡ್ಡಿಯ ಶಕ್ತಿಯು ಸೇರಿದಾಗ, ನಿಮ್ಮ ಹೂಡಿಕೆಯು ದೀರ್ಘಾವಧಿಯಲ್ಲಿ ವೇಗವಾಗಿ ಬೆಳೆದು ದೊಡ್ಡ ನಿಧಿಯಾಗಿ ಮಾರ್ಪಡುತ್ತದೆ.

ಈ ವಿಧಾನದ ಮಿತಿಗಳೇನು?

ರೂಪಾಯಿ ವೆಚ್ಚದ ಸರಾಸರಿಯು ಅನೇಕ ಪ್ರಯೋಜನಗಳನ್ನು ಹೊಂದಿದ್ದರೂ, ಇದು ಯಾವುದೇ ನಷ್ಟವನ್ನು ಸಂಪೂರ್ಣವಾಗಿ ತಡೆಯುವ ಮಂತ್ರದಂಡವಲ್ಲ. ಉದಾಹರಣೆಗೆ, ಮಾರುಕಟ್ಟೆಯು ಯಾವುದೇ ಕುಸಿತವಿಲ್ಲದೆ ಸತತವಾಗಿ ಮೇಲೇರುತ್ತಲೇ ಹೋದರೆ (ಬುಲ್ ಮಾರ್ಕೆಟ್), ಈ ವಿಧಾನದಲ್ಲಿ ನೀವು ಪ್ರತಿ ತಿಂಗಳೂ ಹೆಚ್ಚಿನ ಬೆಲೆಗೆ ಯೂನಿಟ್‌ಗಳನ್ನು ಖರೀದಿಸಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ಒಂದೇ ಬಾರಿಯ ಹೂಡಿಕೆ ಹೆಚ್ಚು ಲಾಭ ನೀಡುತ್ತದೆ. ಅಲ್ಲದೆ, ಇದು ಅಲ್ಪಾವಧಿಯ ಹೂಡಿಕೆಗೆ ಸೂಕ್ತವಲ್ಲ. ಇದರ ನಿಜವಾದ ಶಕ್ತಿ ತಿಳಿಯಲು ತಾಳ್ಮೆ ಮತ್ತು ದೀರ್ಘಾವಧಿಯ ಸಮಯದ ಅಗತ್ಯವಿದೆ.

ಷೇರು ಮಾರುಕಟ್ಟೆಯ ಸಂಕೀರ್ಣತೆ ತಿಳಿಯದ ಹೊಸ ಹೂಡಿಕೆದಾರರಿಗೆ ಹಂತಹಂತವಾಗಿ ಹೂಡಿಕೆ ಅತ್ಯಂತ ಸುರಕ್ಷಿತವಾದ ದಾರಿ. ಇದರೊಂದಿಗೆ, ಭವಿಷ್ಯದ ನಿವೃತ್ತಿ ಜೀವನಕ್ಕಾಗಿ ಹಣ ಉಳಿಸುವವರಿಗೆ ಮತ್ತು ತಿಂಗಳ ಸಂಬಳ ಪಡೆಯುವ ಉದ್ಯೋಗಿಗಳಿಗೆ ತಮ್ಮ ಆದಾಯಕ್ಕೆ ತಕ್ಕಂತೆ ಹೂಡಿಕೆ ಮಾಡಲು ಇದು ಸೂಕ್ತ. ಮಾರುಕಟ್ಟೆಯ ಭಯ ಮತ್ತು ಆಸೆಗೆ ಬಲಿಯಾಗದೆ, ಶಿಸ್ತಿನಿಂದ ಹಣ ಗಳಿಸಲು ಈ ಸೂತ್ರ ನೆರವಾಗುತ್ತದೆ.

ಕೇಂದ್ರ ವಾಣಿಜ್ಯ ಸಚಿವ ಪೀಯೂಷ್ ಗೋಯಲ್ ಹೇಳಿಕೆ

ಡಿಸೆಂಬರ್‌ನಲ್ಲಿ ಭಾರತ–ಇ.ಯು ಒಪ್ಪಂದ


ಪೀಯೂಷ್ ಗೋಯಲ್

ನವದೆಹಲಿ (ಪಿಟಿಐ): ಭಾರತ ಮತ್ತ ಐರೋಪ್ಯ ಒಕ್ಕೂಟದ (ಇ.ಯು) ನಡುವೆ ಮುಕ್ತ ವ್ಯಾಪಾರ ಒಪ್ಪಂದಕ್ಕೆ (ಎಫ್‌ಟಿಎ) ಡಿಸೆಂಬರ್‌ನಲ್ಲಿ ಸಹಿ ಹಾಕಲಾಗುತ್ತದೆ, ಒಪ್ಪಂದವು 2027ರ ಫೆಬ್ರುವರಿ–ಮಾರ್ಚ್‌ನಲ್ಲಿ ಅನುಷ್ಠಾನಕ್ಕೆ ಬರುವ ಸಾಧ್ಯತೆ ಇದೆ ಎಂದು ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಭಾನುವಾರ ತಿಳಿಸಿದ್ದಾರೆ.

'ಅತಿದೊಡ್ಡ ವ್ಯಾಪಾರ ಒಪ್ಪಂದ' ಎಂದು ಹೇಳಲಾಗಿರುವ ಈ ಎಫ್‌ಟಿಎ ಕುರಿತ ಮಾತುಕತೆಗಳು ಪೂರ್ಣಗೊಂಡಿವೆ ಎಂದು ಭಾರತ ಮತ್ತು ಐರೋಪ್ಯ ಒಕ್ಕೂಟವು ಜನವರಿ 27ರಂದು ಘೋಷಿಸಿವೆ. ಒಕ್ಕೂಟವು 27 ದೇಶಗಳ ಸದಸ್ಯತ್ವ ಹೊಂದಿದೆ.

'ಯುರೋಪಿನ ಬಹುತೇಕ ಮಾರುಕಟ್ಟೆಯು ನಮಗೆ ಶೂನ್ಯ ಸುಂಕದೊಂದಿಗೆ ಮುಕ್ತವಾಗಲಿದೆ' ಎಂದು ಗೋಯಲ್ ಅವರು ಮುಂಬೈನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ತಿಳಿಸಿದ್ದಾರೆ.

ಭಾರತ ಮತ್ತು ಐರೋಪ್ಯ ಒಕ್ಕೂಟದ ನಡುವಿನ ಎಫ್‌ಟಿಎ ಅನ್ವಯ, ಭಾರತದ ಶೇ 93ರಷ್ಟು ಉತ್ಪನ್ನಗಳು ಒಕ್ಕೂಟದ 27 ದೇಶಗಳ ಮಾರುಕಟ್ಟೆಗಳಿಗೆ ಸುಂಕರಹಿತ ಪ್ರವೇಶ ಪಡೆಯಲಿವೆ. ಭಾರತವು ಒಕ್ಕೂಟದ ದೇಶಗಳಿಂದ ಆಮದು ಮಾಡಿಕೊಳ್ಳುವ ಐಷಾರಾಮಿ ಕಾರುಗಳು ಹಾಗೂ ವೈನ್ ಬೆಲೆ ಭಾರತದಲ್ಲಿ ಕಡಿಮೆ ಆಗಲಿದೆ.

ಭಾರತ ಮತ್ತು ಐರೋಪ್ಯ ಒಕ್ಕೂಟದ ಮಾರುಕಟ್ಟೆಯನ್ನು ಒಟ್ಟಾಗಿ ಪರಿಗಣಿಸಿದರೆ ಅದು ಜಾಗತಿಕ ಜಿಡಿಪಿಯಲ್ಲಿ ಶೇ 25ರಷ್ಟು ಪಾಲು ಹೊಂದಿದೆ, ಅಂತರರಾಷ್ಟ್ರೀಯ ವ್ಯಾಪಾರದಲ್ಲಿ ಮೂರನೆಯ ಒಂದರಷ್ಟು ಪಾಲು ಹೊಂದಿದೆ.

ಭಾರತದ ಜೊತೆಗಿನ ಎಫ್‌ಟಿಎ ಕುರಿತ ಮಾತುಕತೆಯನ್ನು ಈ ವರ್ಷದಲ್ಲಿ ಪೂರ್ಣಗೊಳಿಸಬೇಕು ಎಂಬ ಬಯಕೆ ಹೊಂದಿರುವುದಾಗಿ ಕೆನಡಾ ಪ್ರಧಾನಿ ಹೇಳಿದ್ದಾರೆ ಎಂದೂ ಗೋಯಲ್ ತಿಳಿಸಿದ್ದಾರೆ.

ಅಮೆರಿಕದ ಜೊತೆ ಮಾತುಕತೆ: ಸಚಿವ ಗೋಯಲ್ ಅವರು ಅಮೆರಿಕದ ವ್ಯಾಪಾರ ಪ್ರತಿನಿಧಿ ಜೆಮಿಸನ್ ಗ್ರೀರ್ ಅವರ ಜೊತೆ ಭಾರತ–ಅಮೆರಿಕ ನಡುವಿನ ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ ಮೊದಲ ಹಂತದ ಕುರಿತಾಗಿ ಈ ವಾರ ಮಾತುಕತೆ ನಡೆಸಲಿದ್ದಾರೆ.

ಗ್ರೀರ್ ಅವರು ವ್ಯಾಪಾರ ಒಪ್ಪಂದದ ಕುರಿತ ಮಾತುಕತೆಗಾಗಿ ದೆಹಲಿಗೆ ಸೋಮವಾರ ಬರಲಿದ್ದಾರೆ ಎಂದು ಗೋಯಲ್ ಹೇಳಿದ್ದಾರೆ.

ಗೋಯಲ್ ಮತ್ತು ಗ್ರೀರ್ ಅವರ ನಡುವಿನ ಮಾತುಕತೆಯು ಒಪ್ಪಂದದ ಚೌಕಟ್ಟಿಗೆ ಅಂತಿಮ ರೂಪ ನೀಡುವ ಕುರಿತಾಗಿ ಇರುವ ಸಾಧ್ಯತೆ ಇದೆ ಎಂದು ಕೇಂದ್ರ ವಾಣಿಜ್ಯ ಕಾರ್ಯದರ್ಶಿ ರಾಜೇಶ್ ಅಗರ್ವಾಲ್ ಈಚೆಗೆ ಹೇಳಿದ್ದಾರೆ.

₹10ಕ್ಕೆ ಎಸ್‌ಐಪಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಆಸ್ತಿ ನಿರ್ವಹಣಾ ಕಂಪನಿ ಎಕ್ಸಿಸ್ ಮ್ಯೂಚುವಲ್ ಫಂಡ್, ದೈನಂದಿನ ಎಸ್‌ಐಪಿ ಸೌಲಭ್ಯ 'ರೋಜಾನಾ ಎಸ್‌ಐಪಿ' ಬಿಡುಗಡೆ ಮಾಡಿದೆ.

ಈ ಯೋಜನೆಯ ಅಡಿ ಹೂಡಿಕೆದಾರರು ಫಂಡ್‌ನ ವಿವಿಧ ಯೋಜನೆಗಳಲ್ಲಿ ದಿನಕ್ಕೆ ಪ್ರತಿ ಯೋಜನೆಗೆ ಕೇವಲ ₹10 ಮೊತ್ತದೊಂದಿಗೆ ಹೂಡಿಕೆ ಆರಂಭಿಸಬಹುದಾಗಿದೆ. ಗ್ರಾಹಕರು ಕನಿಷ್ಠ ಎರಡು ಯೋಜನೆಗಳನ್ನು ಆಯ್ಕೆ ಮಾಡಿಕೊಂಡು ದಿನಕ್ಕೆ ತಲಾ ₹10 ಹೂಡಿಕೆ ಮೂಲಕ ಪ್ರಕ್ರಿಯೆಗೆ ಚಾಲನೆ ನೀಡಬಹುದು. ನಂತರ ಇದನ್ನು ಗರಿಷ್ಠ 10 ಯೋಜನೆಗಳವರೆಗೆ ವಿಸ್ತರಿಸಿಕೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ.

ಎಕ್ಸಿಸ್ ಮಲ್ಟಿಕ್ಯಾಪ್ ಫಂಡ್, ಎಕ್ಸಿಸ್ ಸ್ಮಾಲ್ ಕ್ಯಾಪ್ ಫಂಡ್, ಎಕ್ಸಿಸ್ ವ್ಯಾಲ್ಯೂ ಫಂಡ್, ಎಕ್ಸಿಸ್ ಗೋಲ್ಡ್ ಫಂಡ್, ಎಕ್ಸಿಸ್ ಬ್ಯಾಲೆನ್ಸ್ಡ್ ಅಡ್ವಾಂಟೇಜ್ ಫಂಡ್, ಎಕ್ಸಿಸ್ ಮಿಡ್ ಕ್ಯಾಪ್ ಫಂಡ್, ಎಕ್ಸಿಸ್ ಫ್ಲೆಕ್ಸಿ ಕ್ಯಾಪ್ ಫಂಡ್, ಎಕ್ಸಿಸ್ ಲಾರ್ಜ್ ಕ್ಯಾಪ್ ಫಂಡ್ ಸೇರಿದಂತೆ ಪ್ರಮುಖ ಫಂಡ್‌ಗಳಲ್ಲಿ ಹೂಡಿಕೆ ಮಾಡಲು ಅವಕಾಶವಿದೆ.

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	100 ಕ್ಕೆ ₹705	12 ಕ್ಕೆ ₹94	
ಮೈಸೂರು:	100 ಕ್ಕೆ ₹720		

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹335-688
ದ್ವಿತಳಿ (ಬಿ.ವಿ)	₹505-835

ದೇಶ-ವಿದೇಶಗಳಲ್ಲಿ ಯೋಗ ಸಂಭ್ರಮ

ಒಂದನೇ ಪುಟದಿಂದ...

ಜಬಲ್ಪುರದ ಗ್ಯಾರಿಸನ್ ಮೈದಾನದಲ್ಲಿ ನಡೆದ ರಾಜ್ಯ ಮಟ್ಟದ ಯೋಗ ಕಾರ್ಯಕ್ರಮದಲ್ಲಿ ಮಾತನಾಡಿದ ರಾಷ್ಟ್ರಪತಿ ಮುರ್ಮು ಅವರು, 'ಯೋಗವು ಜಗತ್ತಿಗೆ ಭಾರತ ನೀಡಿದ ತನ್ನ ಸಾಂಸ್ಕೃತಿಕ ಪರಂಪರೆಯ ಅತ್ಯಮೂಲ್ಯ ಕೊಡುಗೆಯಾಗಿದೆ. ಜಾಗತಿಕ ಸವಾಲುಗಳ ನಡುವೆಯೂ ಜಾಗತಿಕ ಸಮುದಾಯವನ್ನು ಶಾಂತಿ ಮತ್ತು ಸಾಮರಸ್ಯದತ್ತ ಕೊಂಡೊಯ್ಯುವಲ್ಲಿ ಯೋಗವು ಪ್ರಮುಖ ಪಾತ್ರ ವಹಿಸುತ್ತದೆ' ಎಂದು ಹೇಳಿದರು.

ಉಪ ರಾಷ್ಟ್ರಪತಿ ಸಿ.ಪಿ ರಾಧಾಕೃಷ್ಣನ್ ಅವರು ನೂರಾರು ಜನರೊಂದಿಗೆ ಲಡಾಖ್‌ನಲ್ಲಿ ಹಿಮಾಲಯ ಶ್ರೇಣಿಗಳ ಮುಂಭಾಗದಲ್ಲಿ ಯೋಗಾಸನ ಮಾಡಿದರು.

ಸಂಸತ್ ಭವನದ ಸಂಕೀರ್ಣದಲ್ಲಿ ನಡೆದ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಲೋಕಸಭೆ ಸಭಾಪತಿ ಓಂ ಬಿರ್ಲಾ ಹಾಗೂ ಸಂಸತ್ತಿನ ಸದಸ್ಯರು ಭಾಗಿಯಾಗಿ ಯೋಗ ಮಾಡಿದರು.

ಗುಜರಾತ್‌ನ ವಡೋದರದಲ್ಲಿ ಹಲವರು ನೀರಿನಲ್ಲಿ ಯೋಗ ಮಾಡಿದರು.


ಕೋಲ್ಕತ್ತದ ಐತಿಹಾಸಿಕ ಕೆಂಪು ರಸ್ತೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಯೋಗ ಮಾಡಿದರು – ಪಿಟಿಐ ಚಿತ್ರ

ಅಪಹಾಸ್ಯಕ್ಕೀಡಾದ ಬಿಹಾರದ ಆರೋಗ್ಯ ಸಚಿವ

ಪಟ್ನಾ: ಬಿಹಾರ ಮಾಜಿ ಮುಖ್ಯಮಂತ್ರಿ ನಿತೀಶ್ ಕುಮಾರ್ ಪುತ್ರ ಆರೋಗ್ಯ ಸಚಿವ ನಿಶಾಂತ್ ಕುಮಾರ್ ಅವರು ಯೋಗ ಮಾಡಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೆಯಾಗಿದ್ದು, ಭಾರಿ ಟೀಕೆಗೆ ಗುರಿಯಾಗಿದೆ.

ಪಟ್ನಾದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಜೊತೆ ಅವರು ಯೋಗಾಸನ ಮಾಡಿದ್ದರು. ಆದರೆ ಅವರು ವಿಚಿತ್ರ ಯೋಗ ಭಂಗಿ ಮಾಡುತ್ತಿರುವುದು ಹಾಗೂ ಕೈ ಎತ್ತಲು ಮತ್ತು ಕಾಲುಗಳನ್ನು ಮಡಚಲು ಹಲವಾರು ಬಾರಿ ಪರದಾಡುತ್ತಿದ್ದುದು ಅಪಹಾಸ್ಯಕ್ಕೆ ಈಡಾಗಿದೆ.

'ಗುಪ್ತಚರ ವೈಫಲ್ಯದಿಂದ ಡ್ರೋನ್‌ಗಳ ಪ್ರವೇಶ'

ಶ್ರೀನಗರ (ಪಿಟಿಐ): ಗುಪ್ತಚರ ಮಾಹಿತಿ ಸಂಗ್ರಹದ ವೈಫಲ್ಯದಿಂದಾಗಿ ಕಾಶ್ಮೀರದ ಬಾರಾಮುಲ್ಲಾ ಜಿಲ್ಲೆಯ ಒಳಗೆ ಡ್ರೋನ್‌ಗಳ ಮೂಲಕ ಶಸ್ತ್ರಾಸ್ತ್ರ ಹಾಗೂ ಸ್ಫೋಟಕಗಳು ಪೂರೈಕೆಯಾಗಿರುವ ಸಂಗತಿಯನ್ನು ಪಹಲ್ಗಾಮ್ ಭಯೋತ್ಪಾದಕ ದಾಳಿ ಪ್ರಕರಣ ಸಂಬಂಧ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಸಲ್ಲಿಸಿರುವ ದೋಷಾರೋಪ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

2024ರ ಆರಂಭದಲ್ಲಿ ಗೋಗಲ್ ದಾರಾ ಅರಣ್ಯದೊಳಗೆ ಭಯೋತ್ಪಾದಕ ಗುಂಪು ಡ್ರೋನ್ ಅನ್ನು ಕಳುಹಿಸಿತ್ತು. ಅದರಲ್ಲಿ 20 ಪಿಸ್ತೂಲ್‌ಗಳು, ₹15 ಲಕ್ಷ ಮತ್ತು ತ್ರಿಕೋನಾಕಾರದ ಬಾಂಬ್‌ಗಳು (ಚೀನಾದ ಗ್ರೆನೇಡ್‌ಗಳು) ಇದ್ದವು ಎಂದು ಎನ್‌ಐಎ ತಿಳಿಸಿದೆ.

'2022 ಮತ್ತು 2024ರ ನಡುವೆ ಗುಪ್ತಚರ ಮಾಹಿತಿ ಸಂಗ್ರಹದಲ್ಲಿ ಉಂಟಾದ ವೈಫಲ್ಯವೇ ಭಯೋತ್ಪಾದಕರು ಕಣಿವೆಯಲ್ಲಿ ಯಾರ ಕಣ್ಣಿಗೂ ಬೀಳದೆ ಮುಕ್ತವಾಗಿ ಓಡಾಡಲು ಮುಖ್ಯ ಕಾರಣ' ಎಂದು ದೋಷಾರೋಪ ಪಟ್ಟಿಯನ್ನು ವಿಶ್ಲೇಷಿಸುತ್ತಿರುವ ಭದ್ರತಾ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಧರ್ಮಸ್ಥಳದಲ್ಲಿ ಶಾಸಕಾಂಗ ಪಕ್ಷದ ಸಭೆ

ಒಂದನೇ ಪುಟದಿಂದ...

ಅಲ್ಲದೇ 'ಸಾಮಾಜಿಕ ಜಾಲತಾಣದಲ್ಲಿ ಬರುತ್ತಿರುವ ಟೀಕೆಗಳನ್ನು ನಾನೂ ಗಮನಿಸಿದ್ದೇನೆ. ಇದನ್ನೇ ನೆಪ ಮಾಡಿಕೊಂಡು ಪರೋಕ್ಷ ದಾಳಿ ಮಾಡುವ ಕೆಲಸ ಮತ್ತು ಕುತಂತ್ರ ನಡೆಯುತ್ತಿದೆ. ಸತ್ಯಾಸತ್ಯತೆಯನ್ನು ನಾವು ಜನರ ಮುಂದೆ ಇಡಬೇಕಾಗಿದೆ. ಪಕ್ಷದ ಗೌರವ ಉಳಿಯಬೇಕಾಗಿದೆ. ಕಾರ್ಯಕರ್ತರಿಗೆ ನೆಮ್ಮದಿ ನೀಡಬೇಕಿದೆ' ಎಂದು ಹೇಳಿದರು.

'ಪರಿಷತ್ ಚುನಾವಣೆಯಲ್ಲಿ ಬಿಜೆಪಿಯ ನಾಲ್ವರು ಶಾಸಕರಿಂದಲೂ ಅಡ್ಡ ಮತದಾನ ಆಗಿರುವ ಬಗ್ಗೆ ಚರ್ಚೆ ಮಾಧ್ಯಮಗಳಲ್ಲಿ ನಡೆಯುತ್ತಿದೆ. ಸಾಮಾಜಿಕ ಜಾಲತಾಣದಲ್ಲೂ ಅತಿ ಹೆಚ್ಚು ಚರ್ಚೆ ಆಗುತ್ತಿದೆ. ರಾಜ್ಯದಲ್ಲಿ ನಮ್ಮ ಕಾರ್ಯಕರ್ತರು ನಮ್ಮ ಶಾಸಕರ ನಡವಳಿಕೆ ಬಗ್ಗೆ ಬಹಳ ಬೇಸರ ವ್ಯಕ್ತಪಡಿಸುತ್ತಿದ್ದಾರೆ. ಬಿಜೆಪಿಯ 63 ಶಾಸಕರ ಬಗ್ಗೆಯೂ ಅನುಮಾನ ಹುಟ್ಟುವಂತಾಗಿದೆ' ಎಂದರು.

'ಪಂಚಾಯಿತಿ ಚುನಾವಣೆ ಗೆದ್ದು ತೋರಿಸಲಿ'

'ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಚುನಾವಣೆಯಲ್ಲಿ ಗೆದ್ದು ತೋರಿಸಲಿ' ಎಂದು ಮಾಜಿ ಸಚಿವ ಕುಮಾರ್ ಬಂಗಾರಪ್ಪ ಅವರನ್ನು ಉದ್ದೇಶಿಸಿ ವಿಜಯೇಂದ್ರ ಸವಾಲು ಎಸೆದಿದ್ದಾರೆ.

'ಬಿಜೆಪಿಯಲ್ಲಿ ಆಮೂಲಾಗ್ರ ಬದಲಾವಣೆ ಆಗಬೇಕು; ವಿಪಕ್ಷ ನಾಯಕನ ಸ್ಥಾನವನ್ನು ಯತ್ನಾಳರಿಗೆ ಕೊಡಬೇಕು' ಎಂಬ ಕುಮಾರ್ ಬಂಗಾರಪ್ಪ ಅವರ ಹೇಳಿಕೆಗೆ ವಿಜಯೇಂದ್ರ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದರು.

ನಿಜಕ್ಕೂ ನನಗೆ ನಮ್ಮ ಪಕ್ಷದ ರಾಜ್ಯಾಧ್ಯಕ್ಷರ ಈ ಘೋಷಣೆ ದಿಗ್ಭ್ರಮೆ ಉಂಟು ಮಾಡಿದೆ. ಕೀಳು ಮಟ್ಟದ ಅಡ್ಡಮತದಾನದ ಅಪಚಾರಕ್ಕೆ ಧರ್ಮಸ್ಥಳವನ್ನು ಎಳೆಯುವುದು ದಯವಿಟ್ಟು ಬೇಡ
ಎಸ್.ಸುರೇಶ್ ಕುಮಾರ್, ಬಿಜೆಪಿ ಶಾಸಕ

ಅತ್ತ ಮಾತುಕತೆ ಇತ್ತ ಬೆದರಿಕೆ

ಒಂದನೇ ಪುಟದಿಂದ...

ಆದರೆ, ಇರಾನ್ ನಿಯೋಗವು ಮಾತುಕತೆಯಲ್ಲಿ ತೊಡಗಿದ್ದು, ಸಭೆ ನಡೆಯುವ ಸ್ಥಳದಿಂದ ಹೊರನಡೆದಿಲ್ಲ ಎಂದು ರಾಜತಾಂತ್ರಿಕರೊಬ್ಬರು ತಿಳಿಸಿದ್ದಾರೆ.

'ಲೆಬನಾನ್‌ನಲ್ಲಿ ಕದನ ವಿರಾಮ ಜಾರಿಗೊಂಡರೂ, ಇಸ್ರೇಲ್ ಮತ್ತು ಇರಾನ್ ಬೆಂಬಲಿತ ಹಿಜ್ಬುಲ್ಲಾ ಬಂಡುಕೋರರ ನಡುವೆ ಸಂಘರ್ಷ ಮುಂದುವರಿದಿರುವುದು ಅಮೆರಿಕ-ಇರಾನ್ ನಡುವಿನ ಪ್ರಾಥಮಿಕ ಶಾಂತಿ ಒಪ್ಪಂದಕ್ಕೆ ಬೆದರಿಕೆಯಾಗಿದೆ' ಎಂದು ಟ್ರಂಪ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಅಮೆರಿಕ–ಇರಾನ್ ನಡುವೆ ಅಂತಿಮ ಒಪ್ಪಂದಕ್ಕೆ ಸಂಬಂಧಿಸಿದ ತಾಂತ್ರಿಕ ಮಟ್ಟದ ಮಾತುಕತೆ ಭಾನುವಾರ ಆರಂಭಗೊಂಡಿದೆ ಎಂದು ಮಧ್ಯಸ್ಥಿಕೆ ವಹಿಸಿರುವ ಪಾಕಿಸ್ತಾನ ಹೇಳಿದೆ. ಉಭಯ ದೇಶಗಳ ನಡುವಿನ ಪ್ರಾಥಮಿಕ ಒಪ್ಪಂದದ ತಾಂತ್ರಿಕ ವಿವರಗಳನ್ನು ಸರಿಪಡಿಸುವ ಗುರಿಯನ್ನು ಆರಂಭಿಕ ಸುತ್ತಿನ ಮಾತುಕತೆ ಒಳಗೊಂಡಿದೆ.

'ತಾತ್ಕಾಲಿಕ ಒಪ್ಪಂದದಲ್ಲಿನ ಪ್ರಮುಖ ಪ್ರಸ್ತಾವಗಳನ್ನು ಎತ್ತಿಹಿಡಿದ ನಂತರ ಅಂತಿಮ ಒಪ್ಪಂದದ ಮಾತುಕತೆ ಆರಂಭವಾಗುತ್ತದೆ. ತಾಂತ್ರಿಕ ಹಂತವು ಸರಿಯಾಗಿ ನಡೆಯದಿದ್ದರೆ, ಒಟ್ಟು ಒಪ್ಪಂದವೇ ಅಪಾಯಕ್ಕೆ ಸಿಲುಕುತ್ತದೆ' ಎಂದು ಇರಾನ್ ವಿದೇಶಾಂಗ ಸಚಿವಾಲಯದ ವಕ್ತಾರ ಇಸ್ಮಾಯಿಲ್ ಬಘೈ ಹೇಳಿದ್ದಾರೆ.

ಸ್ವಿಟ್ಜರ್ಲೆಂಡ್‌ಗೆ ನಿಯೋಗ: ಜ್ಯೂರಿಚ್ (ಪಿಟಿಐ): ಅಮೆರಿಕ–ಇರಾನ್ ನಡುವಿನ ಅಂತಿಮ ಒಪ್ಪಂದದ ಮಾತುಕತೆಗಾಗಿ ಅಮೆರಿಕದ ಉಪಾಧ್ಯಕ್ಷ ಜೆ.ಡಿ ವ್ಯಾನ್ಸ್, ಇರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಾಖಿರ್ ಖಾಲೀಬಾಫ್, ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಷರೀಫ್, ಸೇನಾ ಮುಖ್ಯಸ್ಥ ಅಸೀಂ ಮುನೀರ್ ಸೇರಿದಂತೆ ಹಲವು ಮುಖಂಡರು ಭಾನುವಾರ ಸ್ವಿಟ್ಜರ್ಲೆಂಡ್‌ಗೆ ಬಂದಿಳಿದಿದ್ದಾರೆ.

ಅಮೆರಿಕದ ನಿಯೋಗದ ನೇತೃತ್ವವನ್ನು ಜೆ.ಡಿ ವ್ಯಾನ್ಸ್ ಮತ್ತು ಇರಾನ್ ಪತ್ರಿನಿಧಿಗಳ ತಂಡದ ನೇತೃತ್ವವನ್ನು ಖಾಲೀಬಾಫ್ ವಹಿಸಿದ್ದಾರೆ. ಪಾಕಿಸ್ತಾನವು ಮಧ್ಯಸ್ಥಿಕೆ ವಹಿಸಿದೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ವಿಶೇಷ ರಾಯಭಾರಿ ಸ್ಟೀವ್ ವಿಟ್ಕಾಫ್, ಶ್ವೇತಭವನದ ಸಲಹೆಗಾರ ಜಾರೆಡ್ ಕಶ್ನರ್, ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ, ಇರಾನ್ ರಾಷ್ಟ್ರೀಯ ಭದ್ರತಾ ಮಂಡಳಿಯ ಅಲಿ ಬಘೇರಿ ಕಣಿ, ಗವರ್ನರ್ ಅಬ್ದುಲ್ ನಸೀರ್ ಹೆಮ್ಮತಿ ಸ್ವಿಟ್ಜರ್ಲೆಂಡ್‌ನಲ್ಲಿದ್ದಾರೆ.

ಆಗಸ್ಟ್ 26ಕ್ಕೆ 'ಟಾಕ್ಸಿಕ್' ತೆರೆಗೆ

ಯಶ್ ನಟನೆಯ 'ಟಾಕ್ಸಿಕ್' ಚಿತ್ರ ಬಿಡುಗಡೆಗೆ ಕೊನೆಗೂ ಮುಹೂರ್ತ ಕೂಡಿಬಂದಿದೆ. ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಸಿದ್ಧಗೊಂಡಿರುವ ಚಿತ್ರ ಆಗಸ್ಟ್ 26ರಂದು ತೆರೆಗೆ ಬರಲಿದೆ. ದೊಡ್ಡ ಸಿನಿಮಾಗಳು ಶುಕ್ರವಾರಕ್ಕೆ ಬದಲು ಗುರುವಾರವೇ ತೆರೆಗೆ ಬರುವ ಪರಿಪಾಠ ಶುರುವಾಗಿತ್ತು. 'ಟಾಕ್ಸಿಕ್' ಅದನ್ನೂ ಮುರಿದು, ಬುಧವಾರವೇ ತೆರೆ ಕಾಣಲಿದೆ.

ಚಿತ್ರಕ್ಕೆ ಗೀತು ಮೋಹನದಾಸ್ ನಿರ್ದೇಶನವಿದೆ. ಈ ಚಿತ್ರದ ಬಿಡುಗಡೆ ಎರಡು ಸಲ ಮುಂದಕ್ಕೆ ಹೋಗಿತ್ತು. ಮೊದಲಿಗೆ ತಂಡ ಮಾರ್ಚ್ 19ಕ್ಕೆ ಚಿತ್ರ ಬಿಡುಗಡೆ ಘೋಷಿಸಿತ್ತು. ಬಳಿಕ ಜೂನ್ 4ಕ್ಕೆ ತೆರೆಗೆ ಬರುವುದಾಗಿ ತಿಳಿಸಿತ್ತು. ಮೊದಲ ಬಾರಿ ಮಧ್ಯ ಏಷಿಯಾದಲ್ಲಿನ ಯುದ್ಧದಿಂದ 'ಟಾಕ್ಸಿಕ್' ಬಿಡುಗಡೆ ದಿನಾಂಕ ಮುಂದೂಡಿಕೆಯಾಗಿತ್ತು. 2ನೇ ಸಲ ಚಿತ್ರತಂಡ ಸಿನಿಮಾದ ಮಾರುಕಟ್ಟೆ ವಿಸ್ತರಣೆ ಕಾರಣ ನೀಡಿತ್ತು.

'ರಾಕಿಂಗ್ ಸ್ಟಾರ್ ಯಶ್ ದ್ವಿಪಾತ್ರದಲ್ಲಿದ್ದಾರೆ. 'ರಾಯ' ಮತ್ತು 'ಟಿಕೆಟ್' ಎಂಬ ಎರಡು ಅವತಾರಗಳಲ್ಲಿ ಕಾಣಿಸಿಕೊಂಡಿದ್ದಾರೆ. ಪಾತ್ರ ಪರಿಚಯಿಸುವ ಪೋಸ್ಟರ್‌ಗಳನ್ನು ಈಗಾಗಲೇ ಪರಿಚಯಿಸಿದ್ದೇವೆ. ಓಣಂ, ಈದ್, ವರ ಮಹಾಲಕ್ಷ್ಮಿ ಮತ್ತು ರಕ್ಷಾಬಂಧನ ಹಬ್ಬಗಳ ಸಾಲು ಸಾಲು ರಜೆಗಳ ಲಾಭ ಪಡೆಯಲು ಬುಧವಾರವೇ ಚಿತ್ರವನ್ನು ಬಿಡುಗಡೆ ಮಾಡುತ್ತಿದ್ದೇವೆ' ಎಂದಿದೆ ಚಿತ್ರತಂಡ.

ಜತೆಗೆ ದಿನಾಂಕ ಘೋಷಣೆಯ ಪೋಸ್ಟರ್ ಅನ್ನು ಕೂಡ ಚಿತ್ರತಂಡ ಪರಿಚಯಿಸಿದೆ. ಯಶ್ ಹಿಂದಿನ ಚಿತ್ರಗಳಂತೆ, ಇಲ್ಲಿಯೂ ಕತ್ತಲೆ ಹೆಚ್ಚಿರುವಂತೆ ಕಾಣುತ್ತಿದೆ! ಪೋಸ್ಟರ್‌ನಲ್ಲಿ ಯಶ್ ಎರಡು ಅವತಾರಗಳನ್ನು ತೋರಿಸಲಾಗಿದೆ.

ಕೆವಿಎನ್ ಪ್ರೊಡಕ್ಷನ್ ಹಾಗೂ ಯಶ್ ಅವರ ಮಾನ್‌ಸ್ಟರ್ ಮೈಂಡ್ ಕ್ರಿಯೇಷನ್ಸ್ ನಿರ್ಮಾಣದ ಸಿನಿಮಾ ಈ ಚಿತ್ರಕ್ಕೆ ಯಶ್ ಮತ್ತು ಗೀತು ಮೋಹನದಾಸ್ ಕಥೆ ಬರೆದಿದ್ದಾರೆ. 'ಟಾಕ್ಸಿಕ್: ಎ ಫೇರಿ ಟೇಲ್ ಫಾರ್ ಗ್ರೋನ್-ಅಪ್ಸ್' ಚಿತ್ರದಲ್ಲಿ ಯಶ್ ಅವರೊಂದಿಗೆ ನಯನತಾರಾ, ಕಿಯಾರಾ ಅಡ್ವಾಣಿ, ಹುಮಾ ಖುರೇಷಿ, ರುಕ್ಮಿಣಿ ವಸಂತ್ ಮತ್ತು ತಾರಾ ಸುತಾರಿಯಾ ನಟಿಸಿದ್ದಾರೆ. ಈ ಚಿತ್ರವು ಹಿಂದಿ, ತಮಿಳು, ತೆಲುಗು ಮತ್ತು ಮಲಯಾಳ ಭಾಷೆಗಳಿಗೂ ಡಬ್ ಆಗಿ ಬಿಡುಗಡೆಯಾಗಲಿದೆ.


ಯಶ್

ಜಿಗ್ರಿ ದೋಸ್ತ್ ಎಂದ 'ಹುಲಿ ಬೀರ'

ಬಹುತೇಕ ಉತ್ತರ ಕರ್ನಾಟಕದ ಪ್ರತಿಭೆಗಳೇ ಸೇರಿ ನಿರ್ಮಿಸಿರುವ ಚಿತ್ರ 'ಹುಲಿ ಬೀರ'. ಮದರಂಗಿ ಮಲ್ಲಿಕಾರ್ಜುನ್ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿರುವ ಚಿತ್ರದ 'ಜಿಗ್ರಿ ದೋಸ್ತ್' ಹಾಡು ಇತ್ತೀಚೆಗೆ ಬಿಡುಗಡೆಗೊಂಡಿದೆ.

ಮಾಳು, ಶಿವಾನಿ ಹಾಡಿಗೆ ದನಿಯಾಗಿದ್ದಾರೆ. ವೀರಸಮರ್ಥ ಸಂಗೀತ, ಸನಾತನ ಛಾಯಾಚಿತ್ರಗ್ರಹಣವಿದೆ. ಧರ್ಮ ವಿಶ್ ಚಿತ್ರಕ್ಕೆ ಹಿನ್ನೆಲೆ ಸಂಗೀತ ಒದಗಿಸಿದ್ದಾರೆ.

ನಟ ಅಂಜನ್ ಚಿತ್ರದ ನಾಯಕನಾಗಿದ್ದು, ಚೈತ್ರ ತೋಟದ ಜೋಡಿಯಾಗಿದ್ದಾರೆ. ರಂಗಾಯಣ ರಘು ಪ್ರಮುಖ ಪಾತ್ರದಲ್ಲಿದ್ದಾರೆ.

ಚಿತ್ರದ ಆಡಿಯೊ ಹಕ್ಕು ಹೊಂದಿರುವ ಲಹರಿ ವೇಲು, 'ಚಿತ್ರದ 5 ಹಾಡುಗಳು ಉತ್ತಮವಾಗಿ ಮೂಡಿಬಂದಿವೆ' ಎಂದರು.

ಸಂಗೀತ ನಿರ್ದೇಶಕ ವೀರ ಸಮರ್ಥ್, 'ಜಾನಪದ ಶೈಲಿ, ಮಣ್ಣಿನ ಸೊಗಡಿನ ನಾಲ್ಕು ಹಾಡು ಹಾಗೂ 2 ಬಿಟ್ ಸಾಂಗ್‌ಗಳು ಚಿತ್ರದಲ್ಲಿವೆ' ಎಂದು ವಿವರಿಸಿದರು.

'ಜುಲೈ 24ಕ್ಕೆ ಚಿತ್ರ ಬಿಡುಗಡೆ ಮಾಡುವ ಉದ್ದೇಶವಿದೆ. ಇದು, ಹಳ್ಳಿಯ ಮುಗ್ಧ ಹುಡುಗನ ಕಥೆ. ಊರು ಉದ್ಧಾರ ಮಾಡುವವರ ಸುತ್ತ ಕಥೆ ಸಾಗುತ್ತದೆ. ಹಾಸ್ಯಮಯ ಚಿತ್ರ' ಎಂದರು ನಿರ್ದೇಶಕ ಮಲ್ಲಿಕಾರ್ಜುನ.

ನಿರ್ಮಾಪಕ ದಾವಲ್ ಸಾಹೇಬ ಹುಣಶೀಮರದ ಮಾತನಾಡಿ, 'ಲಹರಿ ವೇಲು ತುಂಬಾ ಬೆಂಬಲ ನೀಡಿದ್ದಾರೆ. ನಮ್ಮ ಚಿತ್ರ ಗೆದ್ದಷ್ಟೇ ಖುಷಿಯಾಗಿದೆ. ಪ್ರೇಕ್ಷಕರು ಚಿತ್ರವನ್ನು ನೋಡಿ ಗೆಲ್ಲಿಸಬೇಕು' ಎಂದರು.


'ಹುಲಿ ಬೀರ' ಚಿತ್ರ ತಂಡ


ರಂಗಾಯಣ ರಘು

'ದೇವಿ ಮಹಾತ್ಮೆ'ಯಲ್ಲಿ ಕರಾವಳಿ ದರ್ಶನ

ನಟ ರಂಗಾಯಣ ರಘು ವಿಭಿನ್ನ ಪಾತ್ರದಲ್ಲಿ ಕಾಣಿಸಿಕೊಂಡಿರುವ 'ದೇವಿ ಮಹಾತ್ಮೆ' ಚಿತ್ರದ ಟೀಸರ್ ಇತ್ತೀಚೆಗೆ ಬಿಡುಗಡೆಯಾಗಿದೆ. ನಾಗರಾಜ್ ಸೋಮಯಾಜಿ ಚಿತ್ರಕಥೆ ಬರೆದು, ನಿರ್ದೇಶಿಸಿದ್ದಾರೆ.

ರಂಗಾಯಣ ರಘು ಅವರ ಅಭಿನಯ, ಸಮುದ್ರ ತೀರ, ಹುಲಿ ವೇಷ ಟೀಸರ್‌ನ ಹೈಲೆಟ್. ಲಿಕಿತ್ ಪ್ರಸಾದ್ ಶೆಟ್ಟಿ ಅವರ ಸಂಗೀತವು 1 ನಿಮಿಷ 5 ಸೆಕೆಂಡ್ ಇರುವ ಟೀಸರ್‌ನಲ್ಲಿ ಗಮನಸೆಳೆಯಲಿದೆ ಎಂದಿದೆ ಚಿತ್ರದ ತಂಡ.

ಪ್ರತಿಮಾ ನಾಯಕ್, ಸುಂದರ್ ವೀಣಾ, ಅರವಿಂದ್ ಕುಪ್ಪಿಕರ್, ಬಾಸುಮ ಕೊಡಗು, ನಾಗೇಂದ್ರ ಶಾ, ಪಿ.ಡಿ. ಸತೀಶ್, ಪ್ರಶಾಂತ್ ಹಿರೇಮಠ, ಆದಿತ್ಯ ರಾಜ್ ರಘು ಪಾಂಡೇಶ್ವರ, ಪಲ್ಲವಿ ಮಂಜುನಾಥ್, ಶೈಲಶ್ರೀ ಮೂಲ್ಕಿ, ಶ್ವೇತಾ ಶ್ರೀನಿವಾಸ, ಮಹಾದೇವ ಹಡಪದ್, ಆಸಿಫ್ ಕ್ಷತ್ರಿಯ ಚಿತ್ರದ ತಾರಾಬಳಗದಲ್ಲಿದ್ದಾರೆ. ಅರವಿಂದ್ ಕುಪ್ಳೀಕರ್, ಭಾಸ್ಕರ್ ಬಂಗೇರ ಹಾಗೂ ಗುರು ಆರ್ಯ ಹಾಗೂ ವಾದಿರಾಜ ಶೆಟ್ಟಿ ಸಾಹಿತ್ಯಕ್ಕೆ ಕೈಜೋಡಿಸಿದ್ದಾರೆ.

ಯುವಿಜಿ ಸ್ಟುಡಿಯೊ ಬ್ಯಾನರ್‌ನಡಿ ವಿದ್ಯಾ ಗಾಂಧಿರಾಜನ್ ಅವರು ನಿರ್ಮಿಸುತ್ತಿದ್ದಾರೆ. ಎಸ್.ಕೆ ರಾವ್ ಛಾಯಾಚಿತ್ರಗ್ರಹಣವಿದ್ದರೆ, ಉಜ್ವಲ್ ಚಂದ್ರ ಅವರು ಸಂಕಲನ ನಿರ್ವಹಿಸಿದ್ದಾರೆ.

'ಪತ್ತೇದಾರಿ' ಪೋಸ್ಟರ್ ಬಿಡುಗಡೆ

ಶ್ರೀನಿವಾಸ್ ಜಯರಾಮ್ ನಿರ್ದೇಶನದಲ್ಲಿ, ಕಿರ್ಘೂರ್ ನಾಯಕನಾಗಿ ಪದಾರ್ಪಣೆ ಮಾಡಲಿರುವ 'ಪತ್ತೇದಾರಿ' ಚಿತ್ರದ ಪೋಸ್ಟರ್ ಈಚೆಗೆ ಬಿಡುಗಡೆಗೊಂಡಿತು.ಎ.ಕೆ ಪ್ರೊಡಕ್ಷನ್ಸ್ ಲಾಂಛನದಲ್ಲಿ ಮೊಹಮ್ಮದ್ ಅತೀಕ್ ಚಿತ್ರ ನಿರ್ಮಿಸುತ್ತಿದ್ದಾರೆ.

ಕಲಾವಿದರಾದ ಮಯೂರ್ ಪಟೇಲ್, 'ಶಿಷ್ಯ' ದೀಪಕ್, ಕಾಕ್ರೋಚ್ ಸುಧೀ, ಚೆಲುವರಾಜ್, ಅರವಿಂದ್, ಗಿರೀಶ್ ಜತ್ತಿ, ನಟಿ ಪ್ರಿಯ, 'ಕೆ.ಜಿ.ಎಫ್' ರೆಡ್ಡಿ, ವಿಕ್ಟರಿ ವಾಸು, ನಿರ್ದೇಶಕ ಸಹನಮೂರ್ತಿ ಮೊದಲಾದವರು ಚಿತ್ರದ ಪೋಸ್ಟರ್ ಬಿಡುಗಡೆ ಮಾಡಿ, ತಂಡಕ್ಕೆ ಶುಭಕೋರಿದರು.

'ಪತ್ತೇದಾರಿ' ಕ್ರೈಮ್ ಥ್ರಿಲ್ಲರ್ ಜಾನರ್ ಸಿನಿಮಾ. ಕಥೆ, ಚಿತ್ರಕಥೆ ಬರೆದಿದ್ದೇನೆ. ಹಲವು ಸಿನಿಮಾಗಳಿಂದ ಸ್ಫೂರ್ತಿ ಪಡೆದ ಕಥೆ. ನಾಲ್ಕು ಪಾತ್ರಗಳ ಸುತ್ತ ನಡೆಯುತ್ತದೆ. ಕಿರ್ಘೂರ್ ಜೊತೆಗೆ ಗಿರಿ, ರೂಪಾ, ಸಿದ್ದೇಶ್ ನಟಿಸುತ್ತಿದ್ದಾರೆ. ಮುಂದಿನ ತಿಂಗಳು ಚಿತ್ರೀಕರಣ ಆರಂಭವಾಗಲಿದೆ' ಎಂದು ನಿರ್ದೇಶಕ ಶ್ರೀನಿವಾಸ್ ಜಯರಾಮ್ ತಿಳಿಸಿದರು.

ನಾಯಕ ಕಿರ್ಘೂರ್, ಚಿತ್ರದ ಪ್ರಮುಖ ಪಾತ್ರದಲ್ಲಿರುವ ಸಿದ್ದೇಶ್, ರೂಪಾ, ಕಾಕ್ರೋಚ್ ಸುಧೀ ಅವರೂ ತಮ್ಮ ಪಾತ್ರ ಕುರಿತು ಮಾಹಿತಿ ನೀಡಿದರು.


ರೂಪಾ, ಕಿರ್ಘೂರ್

ಮಧ್ಯಂತರ ವರದಿ ಇಂದು ಸಲ್ಲಿಕೆ ಸಾಧ್ಯತೆ

ರಾಮ ಮಂದಿರದ ಕಾಣಿಕೆ ಹಣ ದುರುಪಯೋಗ ಪ್ರಕರಣ: ಎಸ್‌ಐಟಿ ತನಿಖೆ

ಪ್ರಜಾವಾಣಿ ವಾರ್ತೆ/ ಪಿಟಿಐ

ಲಖನೌ/ ಅಯೋಧ್ಯೆ: ಅಯೋಧ್ಯೆಯ ರಾಮ ಮಂದಿರದಲ್ಲಿ 'ಹಣ ದುರುಪಯೋಗ' ಆರೋಪದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡವು (ಎಸ್‌ಐಟಿ) ಸೋಮವಾರ ಮಧ್ಯಂತರ ವರದಿ ಸಲ್ಲಿಸುವ ಸಾಧ್ಯತೆ ಇದೆ.

'150 ಪುಟಗಳ ಮಧ್ಯಂತರ ವರದಿ ಸಿದ್ಧವಾಗಿದ್ದು, ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ ಕಚೇರಿಗೆ ಸಲ್ಲಿಸಲಾಗುವುದು. ಪ್ರಕರಣದ ತನಿಖೆಯ ಜೊತೆಗೆ, ಕಾಣಿಕೆ ಎಣಿಕೆ ವ್ಯವಸ್ಥೆಯಲ್ಲಿ ಸುಧಾರಣೆ ಹಾಗೂ ಪಾರದರ್ಶಕತೆ ಕಾಯ್ದುಕೊಳ್ಳುವ ನಿಟ್ಟಿನಲ್ಲಿಯೂ ವರದಿಯಲ್ಲಿ ಸಲಹೆಗಳನ್ನು ನೀಡಲಾಗಿದೆ' ಎಂದು ಮೂಲಗಳು ತಿಳಿಸಿವೆ.

'ಟ್ರಸ್ಟ್‌ನ ಕೆಲವು ಹಾಲಿ ಪದಾಧಿಕಾರಿಗಳನ್ನು ತೆಗೆದುಹಾಕುವುದು ಮತ್ತು ವಾರಾಣಸಿಯ ಕಾಶಿ ವಿಶ್ವನಾಥ ದೇವಸ್ಥಾನದ ಮಾದರಿಯಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯನ್ನು ನೇಮಿಸುವುದು ಸೇರಿ ಕೆಲವು ಸಲಹೆಗಳನ್ನು ವರದಿಯಲ್ಲಿ ಸೇರಿಸಲಾಗಿದೆ' ಎನ್ನಲಾಗಿದೆ.

'ಕಾಣಿಕೆ ಎಣಿಕೆಯಲ್ಲಿ ಭಾಗಿಯಾದ ಟ್ರಸ್ಟ್‌ನ ಪದಾಧಿಕಾರಿಗಳನ್ನು ಹಾಗೂ ಹಣವನ್ನು ವಶಪಡಿಸಿಕೊಳ್ಳಲಾದ ಬ್ಯಾಂಕ್ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ಎಸ್‌ಐಟಿ ವಿಚಾರಣೆಗೆ ಒಳಪಡಿಸಿದೆ. ಕೆಲವು ಪ್ರಮುಖ ಸಾಕ್ಷ್ಯಗಳು ಹಾಗೂ ಕೆಲವು ಸಿಬ್ಬಂದಿ ಕಾಣಿಕೆ ಎಣಿಸುವಾಗ ಹಣವನ್ನು ಜೇಬಿನಲ್ಲಿ ಹಾಕಿಕೊಳ್ಳುತ್ತಿರುವ ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿಗಳು ಎಸ್‌ಐಟಿಗೆ ಸಿಕ್ಕಿವೆ' ಎಂದು ತಿಳಿಸಲಾಗಿದೆ.

ಎಫ್‌ಐಆರ್ ದಾಖಲಿಸಲು ಸಿದ್ಧತೆ: 'ಎಫ್‌ಐಆರ್ ದಾಖಲಿಸಲು ಎಸ್‌ಐಟಿ ಸಿದ್ಧತೆ ನಡೆಸಿದೆ. ಶ್ರೀರಾಮ ಮಂದಿರ ತೀರ್ಥಕ್ಷೇತ್ರ ಟ್ರಸ್ಟ್‌ನ ಹಲವು ಕಾರ್ಯಕರ್ತರ ಮೇಲೆ ಸಂಶಯ ವ್ಯಕ್ತವಾಗಿದ್ದು, ಅವರ ಹೆಸರನ್ನೂ ಎಫ್‌ಐಆರ್‌ನಲ್ಲಿ ಸೇರಿಸುವ ಸಾಧ್ಯತೆ ಇದೆ' ಎಂದು ಹೇಳಲಾಗಿದೆ.

ಅಯೋಧ್ಯೆ ತೊರೆಯದಂತೆ ಸೂಚನೆ: ರಾಮಮಂದಿರದ ಕೆಲವು ಸಿಬ್ಬಂದಿ ಮತ್ತು ಟ್ರಸ್ಟ್‌ನ ಪದಾಧಿಕಾರಿಗಳಿಗೆ, ಅಯೋಧ್ಯೆಯನ್ನು ಬಿಟ್ಟು ತೆರಳದಂತೆ ಎಸ್‌ಐಟಿ ಸೂಚಿಸಿದೆ ಎಂದು ದೇವಸ್ಥಾನದ ಮೂಲಗಳು ಹೇಳಿವೆ.

ದೇವಸ್ಥಾನಕ್ಕಾಗಿ ವಿವಿಧ ಹಂತಗಳಲ್ಲಿ ಭೂಮಿ ಖರೀದಿಸಿದ ಮತ್ತು ಕಟ್ಟಡ ಸಾಮಗ್ರಿ ಖರೀದಿಸಿದ ವಿಚಾರವಾಗಿಯೂ ಎಸ್‌ಐಟಿ ತನಿಖೆ ನಡೆಸಿದೆ. ಮಾರುಕಟ್ಟೆ ದರಕ್ಕಿಂತಲೂ ಹೆಚ್ಚಿನ ಬೆಲೆಗೆ ಭೂಮಿ ಖರೀದಿಸಲಾಗಿದೆ ಎಂಬ ಆರೋಪವೂ ಟ್ರಸ್ಟ್ ಮೇಲೆ ಇದೆ.

ಮುಖ್ಯಾಂಶಗಳು
- ನಿತ್ಯವೂ ಮುಖ್ಯಮಂತ್ರಿ ಕಚೇರಿಗೆ ಮಾಹಿತಿ ರವಾನಿಸುತ್ತಿದ್ದ ಎಸ್‌ಐಟಿ
- ಡಿಜಿಟಲ್ ಮಾದರಿಯಲ್ಲಿ ವರದಿ ಸಿದ್ಧ
- ವರದಿಗೆ ಅಂತಿಮ ಸ್ವರೂಪ ನೀಡುತ್ತಿರುವ ತನಿಖಾ ತಂಡ

ಸೀಮಿತ ದೃಶ್ಯಗಳು ಲಭ್ಯ: ತನಿಖೆಗೆ ತೊಡಕು

ಪ್ರಕರಣಕ್ಕೆ ಸಂಬಂಧಿಸಿ ತನಿಖೆ ನಡೆಸುತ್ತಿರುವ ಎಸ್‌ಐಟಿಗೆ ಸಿಸಿಟಿವಿ ಕ್ಯಾಮೆರಾಗಳಲ್ಲಿ ಸೀಮಿತ ದೃಶ್ಯಗಳು ಲಭ್ಯವಾಗಿದ್ದು, ತನಿಖೆಗೆ ತೊಡಕಾಗಿದೆ.

'ಮಂದಿರದಲ್ಲಿ ಅಳವಡಿಸಿದ ಸಿಸಿಟಿವಿ ಕ್ಯಾಮೆರಾಗಳಿಂದ ಕೇವಲ 45 ದಿನಗಳ ದೃಶ್ಯಗಳು ಲಭ್ಯವಿದ್ದು, ಅದಕ್ಕಿಂತ ಹಳೆಯವು ಅಳಿಸಿ ಹೋಗುತ್ತವೆ. ವಿಧಿವಿಜ್ಞಾನ ವಿಶ್ಲೇಷಣೆಯ ಮೂಲಕ ಸಾಧ್ಯವಾದಷ್ಟೂ ಹಳೆಯ ದೃಶ್ಯಗಳನ್ನು ಪಡೆದುಕೊಳ್ಳಲು ಎಸ್‌ಐಟಿ ಪ್ರಯತ್ನಿಸುತ್ತಿದೆ' ಎಂದು ಮೂಲಗಳು ತಿಳಿಸಿವೆ.

'ದೃಶ್ಯಗಳನ್ನು ತಿರುಚಿದ ಕುರುಹುಗಳೂ ಪತ್ತೆಯಾಗಿದ್ದು, ಅಳಿಸಿದ ಅಥವಾ ತಿರುಚಿದ ದೃಶ್ಯಗಳನ್ನು ಮತ್ತೆ ಪಡೆದುಕೊಳ್ಳುವ ಪ್ರಯತ್ನಗಳೂ ನಡೆಯುತ್ತಿವೆ. ದೇವಸ್ಥಾನದ ನೌಕರರ ಹೇಳಿಕೆಗಳಲ್ಲೂ ಭಾರಿ ವೈರುಧ್ಯಗಳು ಕಂಡುಬಂದಿವೆ' ಎಂದೂ ಹೇಳಿದೆ.

ರೈತರ ಬೆಂಬಲ ಕೋರಿದ ದೀಪ್ಕೆ

ನವದೆಹಲಿ (ಪಿಟಿಐ): ಪರೀಕ್ಷಾ ಅಕ್ರಮ, ಪ್ರಶ್ನೆಪತ್ರಿಕೆ ಸೋರಿಕೆ ಖಂಡಿಸಿ ಮತ್ತು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರ ರಾಜೀನಾಮೆಗೆ ಒತ್ತಾಯಿಸಿ ಕಾಕ್ರೋಚ್ ಜನತಾ ಪಾರ್ಟಿ (ಸಿಜೆಪಿ) ವತಿಯಿಂದ ಜಂತರ್ ಮಂತರ್‌ನಲ್ಲಿ ನಡೆಯುತ್ತಿರುವ ಪ್ರತಿಭಟನೆಯ ಎರಡನೇ ದಿನವೂ ನೂರಾರು ಮಂದಿ ಪಾಲ್ಗೊಂಡರು.

ಯುವಜನರು ಹಾಗೂ ವಿದ್ಯಾರ್ಥಿಗಳು ನಡೆಸುತ್ತಿರುವ ಪ್ರತಿಭಟನೆಗೆ ಬೆಂಬಲ ನೀಡುವಂತೆ ಸಿಜೆಪಿ ಸಂಸ್ಥಾಪಕ ಅಭಿಜೀತ್ ದೀಪ್ಕೆ ಅವರು ರೈತರನ್ನು ಭಾನುವಾರ ಕೋರಿದರು.

'ದೇಶದಾದ್ಯಂತವಿರುವ ರೈತರು ಜಂತರ್ ಮಂತರ್‌ನಲ್ಲಿ ವಿದ್ಯಾರ್ಥಿಗಳೊಂದಿಗೆ ನಿಲ್ಲುವಂತೆ ನಾನು ಮನವಿ ಮಾಡುತ್ತೇನೆ. ರೈತರು ತಮ್ಮ ಹಕ್ಕುಗಳಿಗಾಗಿ ಹೋರಾಡುತ್ತಿದ್ದಾಗ, ವಿದ್ಯಾರ್ಥಿಗಳು ಅವರ ಹೆಗಲಿಗೆ ಹೆಗಲು ಕೊಟ್ಟು ನಿಂತರು. ಇದೀಗ, ವಿದ್ಯಾರ್ಥಿಗಳಿಗೆ ಅದೇ ರೀತಿಯ ಬೆಂಬಲದ ಅಗತ್ಯವಿದೆ' ಎಂದರು.

ಪ್ರತಿಭಟನೆಯ ಮೊದಲ ದಿನ ಶನಿವಾರವೂ ಜಂತರ್ ಮಂತರ್‌ನಲ್ಲಿ ನೂರಾರು ಯುವಜನರು ಸೇರಿದ್ದರು. 'ಸಂಜೆ 5ರವರೆಗೆ ಮಾತ್ರ ಪ್ರತಿಭಟನೆಗೆ ಅನುಮತಿ ನೀಡಲಾಗಿದ್ದು, ಎಲ್ಲರೂ ಸ್ಥಳ ತೆರವುಗೊಳಿಸಿ' ಎಂದು ಪೊಲೀಸರು ಶನಿವಾರ ಪದೇ ಪದೇ ಮನವಿ ಮಾಡಿದ್ದರು. ಪ್ರತಿಭಟನಾ ಸ್ಥಳದಲ್ಲಿ ವಿದ್ಯುತ್ ಮತ್ತು ನೀರಿನ ಪೂರೈಕೆಯನ್ನು ಕೆಲ ಕಾಲ ಸ್ಥಗಿತಗೊಳಿಸಲಾಗಿತ್ತು.

ಆದರೆ ದೀಪ್ಕೆ ಮತ್ತು ಇತರ ಹಲವು ಪ್ರತಿಭಟನಕಾರರು ಶನಿವಾರ ರಾತ್ರಿಯಿಡೀ ಜಂತರ್ ಮಂತರ್‌ನಲ್ಲಿ ಕುಳಿತು, ಭಾನುವಾರವೂ ಧರಣಿ ಮುಂದುವರಿಸಿದರು. ನೀಟ್ ಪರೀಕ್ಷೆ ಕೊನೆಗೊಂಡ ಬೆನ್ನಲ್ಲೇ ಪರೀಕ್ಷೆ ಬರೆದ ಅಭ್ಯರ್ಥಿಗಳೂ ಧರಣಿಯಲ್ಲಿ ಪಾಲ್ಗೊಳ್ಳುವಂತೆ ದೀಪ್ಕೆ ಅವರು ಕೋರಿದರು.



> **ಶಾಂತಿಯುತ ಪ್ರತಿಭಟನೆ ಮುಂದುವರಿಯುತ್ತಿದೆ. ಶಿಕ್ಷಣ ಸಚಿವರು ರಾಜೀನಾಮೆ ನೀಡಿದರೆ ನಾವು ಕೇಂದ್ರ ಸರ್ಕಾರದ ಜತೆ ಮಾತುಕತೆಗೆ ಮುಂದಾಗುತ್ತೇವೆ**
> **ಅಭಿಜೀತ್ ದೀಪ್ಕೆ,** ಸಿಜೆಪಿ ಸಂಸ್ಥಾಪಕ

ಚಿಟಿಕೆ ಸುದ್ದಿ

ಅಭಿಷೇಕ್ ಆಪ್ತನ ವಿರುದ್ಧ ಮತ್ತೊಂದು ಪ್ರಕರಣ ದಾಖಲು

ಕೋಲ್ಕತ್ತ (ಪಿಟಿಐ): ಟಿಎಂಸಿ ನಾಯಕ ಅಭಿಷೇಕ್ ಬ್ಯಾನರ್ಜಿ ಅವರ ಆಪ್ತ ಸುಮಿತ್ ರಾಯ್ ಅವರ ವಿರುದ್ಧ ವಂಚನೆ ಮತ್ತು ನಕಲಿ ದಾಖಲೆ ಸೃಷ್ಟಿಸಿದ ಆರೋಪದಡಿ ಪ್ರಕರಣ ದಾಖಲಾಗಿದೆ. ಇತ್ತೀಚೆಗೆ ಇವರ ಮೇಲೆ ಭೂ ಕಬಳಿಕೆ ಆರೋಪದಡಿ ಪ್ರಕರಣ ದಾಖಲಾಗಿತ್ತು.

ರಾಯ್ ಅವರ ವಿರುದ್ಧ ಲುಕ್‌ಔಟ್ ನೋಟಿಸ್ ಜಾರಿ ಮಾಡಲಾಗಿದೆ. ಅವರು ಹಲವು ದಿನಗಳಿಂದ ತಲೆಮರೆಸಿಕೊಂಡಿದ್ದು, ಅಭಿಷೇಕ್ ಬ್ಯಾನರ್ಜಿ ಅವರ ಮನೆಯಲ್ಲಿ ರಾಯ್ ಅವರಿಗಾಗಿ ಪೊಲೀಸರು ಶೋಧ ಕಾರ್ಯ ನಡೆಸಿದ್ದಾರೆ.

'ಇದೇ ಪ್ರಕರಣಕ್ಕೆ ಸಂಬಂಧಿಸಿ ಮೇಧಿನಿಪುರದ ಶಾಸಕ ಸುಜಾಯ್ ಹಜ್ರಾ ಅವರ ವಿರುದ್ಧವೂ ಪ್ರಕರಣ ದಾಖಲಾಗಿದೆ' ಎಂದು ಪೊಲೀಸರು ಭಾನುವಾರ ಮಾಹಿತಿ ನೀಡಿದರು. ಬೇರೊಂದು ಪ್ರಕರಣಕ್ಕೆ ಸಂಬಂಧಿಸಿ ಸುಜಾಯ್ ಅವರನ್ನು ಈಗಾಗಲೇ ಪೊಲೀಸರು ಬಂಧಿಸಿದ್ದಾರೆ.

ಕೇರಳಂ ಮಾಜಿ ಸಿಎಂ ಪುತ್ರಿಗೆ ಮತ್ತೆ ಇ.ಡಿ ಸಮನ್ಸ್

ಕೊಚ್ಚಿ(ಪಿಟಿಐ): ಕೊಚ್ಚಿನ್ ಮಿನರಲ್ಸ್ ಆ್ಯಂಡ್ ರೂಟೈಲ್ ಲಿಮಿಟೆಡ್‌ನ (ಸಿಎಂಆರ್‌ಎಲ್) ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ, ಜೂನ್ 29ರಂದು ವಿಚಾರಣೆಗೆ ಹಾಜರಾಗುವಂತೆ ಕೇರಳಂ ಮಾಜಿ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರ ಪುತ್ರಿ ಟಿ. ವೀಣಾ ಅವರಿಗೆ ಜಾರಿ ನಿರ್ದೇಶನಾಲಯ (ಇ.ಡಿ) ಮತ್ತೊಮ್ಮೆ ಸಮನ್ಸ್ ಜಾರಿಗೊಳಿಸಿದೆ.

ಸಿಎಂಆರ್‌ಎಲ್ ಕಂಪನಿಯು ವೀಣಾ ವಿಜಯನ್ ಮಾಲೀಕತ್ವದ ಬೆಂಗಳೂರು ಮೂಲದ ಐ.ಟಿ ಕಂಪನಿಗೆ, ಯಾವುದೇ ಸೇವೆ ಪಡೆಯದೆ ₹2.78 ಕೋಟಿ ವರ್ಗಾಯಿಸಿರುವ ಆರೋಪವನ್ನು ಎದುರಿಸುತ್ತಿದೆ.

ಸಿಎಂಆರ್‌ಎಲ್ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಈಗಾಗಲೇ ಇತರೆ ನಾಲ್ವರು ಆರೋಪಿಗಳ ವಿರುದ್ಧ ಪ್ರಕರಣ ದಾಖಲಾಗಿದೆ.

ಸಿಬಿಎಸ್‌ಇ: ಮರುಮೌಲ್ಯಮಾಪನ ಫಲಿತಾಂಶ ಪ್ರಕಟ

ನವದೆಹಲಿ (ಪಿಟಿಐ): ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ(ಸಿಬಿಎಸ್‌ಇ)ಯ 12ನೇ ತರಗತಿ ಪರೀಕ್ಷೆಯ ಮರುಮೌಲ್ಯಮಾಪನದ ಫಲಿತಾಂಶವು ಭಾನುವಾರ ಪ್ರಕಟವಾಗಿದೆ.

'ಪರಿಶೀಲನೆ ಮತ್ತು ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದವರ ಫಲಿತಾಂಶವನ್ನು ಹಂತ ಹಂತವಾಗಿ ಪ್ರಕಟಿಸಲಾಗುತ್ತದೆ. ಶೇಕಡ 87ರಷ್ಟು ಅರ್ಜಿದಾರರ ಫಲಿತಾಂಶ ಪ್ರಕಟವಾಗಿದೆ. ಇನ್ನುಳಿದ ಅರ್ಜಿದಾರರ ಫಲಿತಾಂಶವೂ ಶೀಘ್ರದಲ್ಲಿಯೇ ಪ್ರಕಟವಾಗಲಿದೆ' ಎಂದು ಸಿಬಿಎಸ್‌ಇ 'ಎಕ್ಸ್'ನಲ್ಲಿ ತಿಳಿಸಿದೆ.

'ಸಿಬಿಎಸ್‌ಇಯ ಅಧಿಕೃತ ವೆಬ್‌ಸೈಟ್‌ನಲ್ಲಿ ಅಂಕಗಳನ್ನು ಪರಿಶೀಲಿಸಬಹುದು. results.digilocker.gov.in ಮೂಲಕ ಅರ್ಜಿಯ ಸ್ಥಿತಿಯನ್ನು ತಿಳಿಯಬಹುದು' ಎಂದು ಸಿಬಿಎಸ್‌ಇ ತಿಳಿಸಿದೆ.

ಬಿಗಿ ಭದ್ರತೆಯಲ್ಲಿ ಮರಳಿ ನೀಟ್

ಒಂದನೇ ಪುಟದಿಂದ...

ಭೋಪಾಲ್‌ನಲ್ಲಿ, ತಡವಾಗಿ ಬಂದ ಕಾರಣ ಇಬ್ಬರು ವಿದ್ಯಾರ್ಥಿಗಳಿಗೆ ಪರೀಕ್ಷಾ ಕೇಂದ್ರಕ್ಕೆ ಪ್ರವೇಶ ನಿರಾಕರಿಸಲಾಯಿತು. 'ಪರೀಕ್ಷಾ ಕೇಂದ್ರಕ್ಕೆ ಬರುವ ದಾರಿಯಲ್ಲಿ ಅಪಘಾತ ಸಂಭವಿಸಿದೆ. ಒಬ್ಬ ಅಭ್ಯರ್ಥಿಗೆ ಪ್ರಥಮ ಚಿಕಿತ್ಸೆ ನೀಡಿದ್ದರಿಂದ ಬರುವಾಗ ಸ್ವಲ್ಪ ತಡವಾಯಿತು. ನಮಗೆ ಪ್ರವೇಶ ನಿರಾಕರಿಸಲಾಗಿದೆ' ಎಂದು ಅಭ್ಯರ್ಥಿಯ ಜತೆ ಬಂದಿದ್ದ ಅಮೀರ್ ಖಾದ್ರಿ ಅಳಲು ತೋಡಿಕೊಂಡರು.

ರಾಜಸ್ಥಾನದ ಅಜ್ಮೀರ್‌ನ ಕೇಂದ್ರವೊಂದರಲ್ಲಿ ಬುರ್ಖಾ ಧರಿಸಿದ್ದ ಕಾರಣಕ್ಕೆ ವಿದ್ಯಾರ್ಥಿನಿಗೆ ಪರೀಕ್ಷಾ ಕೇಂದ್ರಕ್ಕೆ ತೆರಳಲು ಅವಕಾಶ ನಿರಾಕರಿಸಲಾಗಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ. 'ವಿದ್ಯಾರ್ಥಿನಿಗೆ ಕೇಂದ್ರಕ್ಕೆ ತೆರಳಲು ಅವಕಾಶ ನೀಡಲಾಯಿತು' ಎಂದು ಎನ್‌ಟಿಎ ಆ ಬಳಿಕ ಸ್ಪಷ್ಟನೆ ನೀಡಿದೆ.

ಅಹಮದಾಬಾದ್‌ನ ಕೇಂದ್ರವೊಂದರಲ್ಲಿ ಕೆಲವು ಅಭ್ಯರ್ಥಿಗಳಲ್ಲಿ ಪವಿತ್ರ ದಾರ 'ಕಂಠಿ'ಯನ್ನು ತೆಗೆಯಲು ಸೂಚಿಸಿದ್ದಕ್ಕೆ ಪೋಷಕರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಇದರಿಂದ ಪರೀಕ್ಷಾ ಕೇಂದ್ರದ ಹೊರಗೆ ಕೆಲಕಾಲ ಗದ್ದಲ ಉಂಟಾಯಿತು ಎಂದು ಪೊಲೀಸರು ತಿಳಿಸಿದ್ದಾರೆ. ವಸ್ತ್ರ ಸಂಹಿತೆ ಮತ್ತು ಎನ್‌ಟಿಎಯ ಮಾರ್ಗಸೂಚಿಗಳನ್ನು ಪೋಷಕರಿಗೆ ಮನವರಿಕೆ ಮಾಡಿದ ಬಳಿಕ ವಿವಾದ ಬಗೆಹರಿದಿದೆ.

ಹಿಂದಿನ ಪರೀಕ್ಷೆಗಿಂತಲೂ ಈ ಬಾರಿ ಭದ್ರತಾ ವ್ಯವಸ್ಥೆ ಮತ್ತು ತಪಾಸಣೆಯು ಬಿಗಿಯಾಗಿದ್ದವು ಎಂದು ಪರೀಕ್ಷೆ ಬರೆದ ಬಹುತೇಕ ಅಭ್ಯರ್ಥಿಗಳು ಅಭಿಪ್ರಾಯಪಟ್ಟರು.

'ಪರೀಕ್ಷಾ ಕೇಂದ್ರದಲ್ಲಿ ಕಳೆದ ಬಾರಿಗಿಂತ ಈ ಬಾರಿ ಭದ್ರತೆ ಬಿಗಿಯಾಗಿತ್ತು. ಕಳೆದ ಒಂದು ತಿಂಗಳಲ್ಲಿ ಹಲವು ಬೆಳವಣಿಗೆಗಳು ನಡೆದಿವೆ. ಸಾಧ್ಯವಾದಷ್ಟು ತಯಾರಿ ನಡೆಸಿದ್ದೇನೆ. ಪರೀಕ್ಷೆಯು ಪಾರದರ್ಶಕವಾಗಿ ನಡೆಯುವ ವಿಶ್ವಾಸ ಇದೆ' ಎಂದು ದೆಹಲಿಯ ಕೇಂದ್ರವೊಂದರಲ್ಲಿ ಪರೀಕ್ಷೆ ಬರೆಯಲು ಬಂದಿದ್ದ ಕಿಶನ್ ಎಂಬ ಅಭ್ಯರ್ಥಿ ಪ್ರತಿಕ್ರಿಯಿಸಿದರು.

> **ಪ್ರಶ್ನೆ ಪತ್ರಿಕೆ ಸಿದ್ಧಪಡಿಸುವುದು ಸೇರಿದಂತೆ ಕೇವಲ 37 ದಿನಗಳಲ್ಲಿ ಮರುಪರೀಕ್ಷೆ ನಡೆಸಲು ಸಹಕರಿಸಿದ ಎಲ್ಲರಿಗೂ ಕೃತಜ್ಞತೆ ಸಲ್ಲಿಸುತ್ತೇವೆ**
> **ಅಭಿಷೇಕ್ ಸಿಂಗ್,** ಎನ್‌ಟಿಎ ಮಹಾನಿರ್ದೇಶಕ

ರಾಜ್ಯದಲ್ಲಿ ಪರೀಕ್ಷೆ ಸುಗಮ

ಒಂದನೇ ಪುಟದಿಂದ...

ಗೇಟ್ ಹತ್ತಿ ಒಳಗೆ ಹೋಗಲು ವಿದ್ಯಾರ್ಥಿಗಳು ಪ್ರಯತ್ನಿಸಿದರು. ತಕ್ಷಣ ಎಚ್ಚೆತ್ತ ಭದ್ರತಾ ಸಿಬ್ಬಂದಿ ಅವರನ್ನು ತಡೆದರು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ಕಣ್ಣೀರು ಹಾಕಿದರು. ಎಷ್ಟೇ ಮನವಿ ಮಾಡಿದರೂ, ಒಳಗೆ ಬಿಡದ ಕಾರಣ ಬೇಸರದಿಂದ ಮನೆಗೆ ತೆರಳಿದರು.

'ಈ ಸಲ ತುಂಬಾ ಕಠಿಣವಾಗಿತ್ತು'

ಮರುಪರೀಕ್ಷೆಯಲ್ಲಿ ಪ್ರಶ್ನೆಗಳು ಕಠಿಣವಾಗಿದ್ದವು. ಭೌತವಿಜ್ಞಾನ ಮತ್ತು ರಸಾಯನ ವಿಜ್ಞಾನದಲ್ಲಿ ಪ್ರಶ್ನೆಗಳಿಗೆ ಉತ್ತರಿಸುವುದು ಕಷ್ಟವಾಯಿತು. ಜೀವವಿಜ್ಞಾನದಲ್ಲಿ ಪರವಾಗಿಲ್ಲ ಎಂದು ವಿದ್ಯಾರ್ಥಿಗಳು ತಿಳಿಸಿದರು.

'ಕಳೆದ ಒಂದೂವರೆ ತಿಂಗಳಿಂದ ತುಂಬಾ ಚೆನ್ನಾಗಿ ಓದಿದ್ದೆ. ಆದರೆ, ಮೇ ತಿಂಗಳಲ್ಲಿ ನಡೆದ ನೀಟ್‌ಗೆ ಹೋಲಿಸಿದರೆ, ಮರುಪರೀಕ್ಷೆ ಕಠಿಣವಾಗಿತ್ತು. ಕೀ ಉತ್ತರದ ಪ್ರಕಾರ ಮೊದಲ ಪರೀಕ್ಷೆಯಲ್ಲಿ 615 ಅಂಕಗಳು ಬರುವ ನಿರೀಕ್ಷೆ ಇತ್ತು. ಆದರೆ, ಈಗ 600 ಅಂಕಗಳು ಬರುವುದೂ ಕಷ್ಟ' ಎಂದು ಬೆಂಗಳೂರಿನ ವಿದ್ಯಾರ್ಥಿನಿ ವಿ.ಪಿ. ಮೇಘನಾ ತಿಳಿಸಿದರು.

'ರಸಾಯನ ವಿಜ್ಞಾನ, ಭೌತವಿಜ್ಞಾನ, ಜೀವವಿಜ್ಞಾನದಲ್ಲಿ ಪ್ರಶ್ನೆಗಳು ತುಂಬಾ ಕಠಿಣವಾಗಿದ್ದವು. 15 ನಿಮಿಷ ಹೆಚ್ಚುವರಿ ಸಮಯ ನೀಡಿದ್ದರೂ, ಎಲ್ಲ ಪ್ರಶ್ನೆಗಳಿಗೆ ಉತ್ತರಿಸಲು ಆಗಲಿಲ್ಲ. ವೈದ್ಯಕೀಯ ಸೀಟು ಸಿಗುವುದು ಕಷ್ಟ' ಎಂದು ಮತ್ತೊಬ್ಬ ವಿದ್ಯಾರ್ಥಿನಿ ಕೀರ್ತನಾ ರವಿ ಹೇಳಿದರು.

ನೀಟ್ ಮರುಪರೀಕ್ಷೆ ವಿದ್ಯಾರ್ಥಿಗಳಿಗೆ ಕಠಿಣವಾಗಿತ್ತು. ಈ ಬಾರಿ ಯಾವ ವಿದ್ಯಾರ್ಥಿಯೂ 720ಕ್ಕೆ 720 ಅಂಕಗಳನ್ನು ಗಳಿಸಲು ಸಾಧ್ಯವಿಲ್ಲ. 690ರಿಂದ 700 ಅಂಕಗಳನ್ನು ಗಳಿಸಬಹುದು ಎಂದು ನಗರದ ಕೋಚಿಂಗ್ ಕೇಂದ್ರವೊಂದರ ಸಿಬ್ಬಂದಿ 'ಪ್ರಜಾವಾಣಿ'ಗೆ ತಿಳಿಸಿದರು.

ಪ್ರಯಾಣ ತಡಮಾಡಿದ ಪ್ರಧಾನಿ

ಕೋಲ್ಕತ್ತದಿಂದ ಭಾನುವಾರ ಮಧ್ಯಾಹ್ನ ನವದೆಹಲಿಗೆ ಬಂದಿಳಿದ ಪ್ರಧಾನಿ ನರೇಂದ್ರ ಮೋದಿ ಅವರು ವಿಮಾನ ನಿಲ್ದಾಣದಿಂದ ತಮ್ಮ ನಿವಾಸದೆಡೆಗಿನ ಪ್ರಯಾಣವನ್ನು ಅಲ್ಪ ವಿಳಂಬಗೊಳಿಸಿದರು. ನೀಟ್ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳಿಗೆ ಸಂಚಾರ ನಿರ್ಬಂಧದಿಂದಾಗಿ ತೊಂದರೆ ಉಂಟಾಗದಂತೆ ನೋಡಿಕೊಳ್ಳಲು ಅವರು ಈ ನಿರ್ಧಾರ ತೆಗೆದುಕೊಂಡರು.

'ಪ್ರಧಾನಿ ಅವರು ಮಧ್ಯಾಹ್ನ 1.15ರ ಸುಮಾರಿಗೆ ಐಜಿಐ ವಿಮಾನ ನಿಲ್ದಾಣ ತಲುಪಿದರು. ಲೋಕ ಕಲ್ಯಾಣ ಮಾರ್ಗದಲ್ಲಿರುವ ತಮ್ಮ ನಿವಾಸಕ್ಕೆ ತಕ್ಷಣವೇ ತೆರಳುವ ಬದಲು ನಿಲ್ದಾಣದಲ್ಲೇ ಕೆಲಹೊತ್ತು ಕಾಯಲು ಬಯಸಿದರು' ಎಂದು ಮೂಲಗಳು ಹೇಳಿವೆ. ಪರೀಕ್ಷೆ ಆರಂಭವಾದ (ಮಧ್ಯಾಹ್ನ 2) ಬಳಿಕವೇ ಅವರು ನಿವಾಸದತ್ತ ಪ್ರಯಾಣ ಬೆಳೆಸಿದರು.

ಅಭ್ಯರ್ಥಿ ಆತ್ಮಹತ್ಯೆ

ಹೈದರಾಬಾದ್: 'ನೀಟ್-ಯುಜಿ' ಪರೀಕ್ಷಾ ಆಕಾಂಕ್ಷಿ ಯುವತಿಯೊಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. 19 ವರ್ಷದ ಯುವತಿ ಇಲ್ಲಿನ ಮಿಯಾಪುರದಲ್ಲಿ ತನ್ನ ಸಹೋದರಿ ಜತೆ ಅಪಾರ್ಟ್‌ಮೆಂಟ್‌ನಲ್ಲಿ ವಾಸವಿದ್ದರು. ಶನಿವಾರ ರಾತ್ರಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಮೃತ ಯುವತಿ ಬರೆದಿದ್ದಾರೆ ಎನ್ನಲಾದ 'ಮರಣ ಪತ್ರ'ವನ್ನು ಪೊಲೀಸರು ವಶಪಡಿಸಿಕೊಂಡಿದ್ದು, ಅದರಲ್ಲಿ 'ನನ್ನ ಸಾವಿಗೆ ಯಾರೂ ಕಾರಣರಲ್ಲ' ಎಂದು ಬರೆಯಲಾಗಿದೆ. 'ನೀಟ್-ಯುಜಿ ಮರುಪರೀಕ್ಷೆಯ ಒತ್ತಡ ತಾಳಲಾರದೆ ಆತ್ಮಹತ್ಯೆ ಮಾಡಿಕೊಂಡಿರುವ ಸಾಧ್ಯತೆಯಿದೆ' ಎಂದು ಪೊಲೀಸರು ಹೇಳಿದ್ದಾರೆ.

ತಡವಾಗಿದ್ದಕ್ಕೆ ಪರೀಕ್ಷೆ ತಪ್ಪಿಸಿಕೊಂಡ ವಿದ್ಯಾರ್ಥಿನಿ

ಕೊಪ್ಪಳ: ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪರೀಕ್ಷಾ ಕೇಂದ್ರಕ್ಕೆ ನೀಟ್ ಮರು ಪರೀಕ್ಷೆಗೆ ತಡವಾಗಿ ಬಂದ ಗಂಗಾವತಿಯ ಬೀಬಿ ಫಾತಿಮಾ ಎಂಬ ವಿದ್ಯಾರ್ಥಿನಿ ಪರೀಕ್ಷೆ ಬರೆಯುವುದರಿಂದ ವಂಚಿತಳಾದಳು.

ಇದರಿಂದ ಅಸಮಾಧಾನಗೊಂಡ ಪೋಷಕರು ಪೊಲೀಸರು ಹಾಗೂ ಪರೀಕ್ಷಾ ಸಿಬ್ಬಂದಿ ಜೊತೆ ವಾಗ್ವಾದ ನಡೆಸಿದರು. 'ವಾಹನ ಕೈಕೊಟ್ಟಿದ್ದರಿಂದ ತಡವಾಯಿತು. ಅಷ್ಟಕ್ಕೂ 1.45ಕ್ಕೆ ವಿದ್ಯಾರ್ಥಿನಿ ಪರೀಕ್ಷಾ ಕೇಂದ್ರದಲ್ಲಿದ್ದಾಳೆ. ನಾವು ಪರಿಪರಿಯಾಗಿ ಬೇಡಿಕೊಂಡರೂ ಕರುಣೆ ತೋರಿಸಲಿಲ್ಲ ಎಂದು ಪೋಷಕರು ಬೇಸರ ವ್ಯಕ್ತಪಡಿಸಿದರು.

ನಗರದ ಗವಿಸಿದ್ದೇಶ್ವರ ಪದವಿಪೂರ್ವ ಕಾಲೇಜಿನ ಪರೀಕ್ಷಾ ಕೇಂದ್ರದಲ್ಲಿ ವಿದ್ಯಾರ್ಥಿನಿಯರಿಗೆ ಮೂಗುತಿ ತೆಗೆಯುವಂತೆ ಸೂಚಿಸಿದ ಸಿಬ್ಬಂದಿಯೊಂದಿಗೆ ಪೋಷಕರು ವಾಗ್ವಾದ ನಡೆಸಿದರು.

ಮೈಮೇಲಿನ ದಾರಗಳಿಗೆ ಕತ್ತರಿ

ದಾವಣಗೆರೆ: ಇಲ್ಲಿನ ಹೈಸ್ಕೂಲ್ ಮೈದಾನದಲ್ಲಿನ ಬಾಲಕರ ಪಿಯು ಕಾಲೇಜು ಪರೀಕ್ಷಾ ಕೇಂದ್ರಕ್ಕೆ ಹಾಜರಾದ ಪರೀಕ್ಷಾರ್ಥಿಗಳನ್ನು ಸಿಬ್ಬಂದಿ ಮೂರು ಹಂತಗಳಲ್ಲಿ ತಪಾಸಣೆಗೆ ಒಳಪಡಿಸಿದರು. ಉಡುದಾರವನ್ನು ತೆಗೆದು ಬುಟ್ಟಿಯೊಂದಕ್ಕೆ ಹಾಕಿದರು. ಜನಿವಾರ ಮತ್ತು ಶಿವದಾರವನ್ನು ಕತ್ತರಿಸಿ ಕೈಗೆ ಇಟ್ಟರು. ರುದ್ರಾಕ್ಷಿ, ಬೆಲ್ಟ್, ಉಂಗುರ, ಸರಗಳನ್ನು ತೆಗೆಸಲಾಯಿತು. ತುಂಬು ತೋಳಿನ ಅಂಗಿ ಧರಿಸಿದವರಿಗೆ ಪ್ರವೇಶ ನೀಡಲಿಲ್ಲ. ಬುರ್ಖಾ ತೆಗೆಸಿ ಪರೀಕ್ಷೆಗೆ ಅವಕಾಶ ಕಲ್ಪಿಸಿದರು.

ನೌಕಾಪಡೆಯ ಮೂರು ಹಡಗುಗಳ ಲೋಕಾರ್ಪಣೆಯಲ್ಲಿ ಪ್ರಧಾನಿ ಮೋದಿ ಮಾತು

'ಕಡಲು ಕಣ್ಗಾವಲು ಸಾಮರ್ಥ್ಯ ಹೆಚ್ಚಳಕ್ಕೆ ಸಿದ್ಧತೆ'

ಕೋಲ್ಕತ್ತ (ಪಿಟಿಐ): 'ದೇಶವೊಂದರ ಕಡಲ ಕಣ್ಗಾವಲು ಮತ್ತು ಭದ್ರತಾ ಬಲವು ಆ ದೇಶದ ಆರ್ಥಿಕತೆ ಮತ್ತು ಕಾರ್ಯತಂತ್ರವನ್ನು ನಿರ್ಧರಿಸುತ್ತವೆ. ಇದನ್ನು ಭಾರತ ಅರ್ಥ ಮಾಡಿಕೊಂಡಿದ್ದು, ಈ ಎಲವನ್ನೂ ಸಾಧ್ಯವಾಗಿಸಿಕೊಳ್ಳುವಲ್ಲಿ ಸಿದ್ಧತೆಗಳು ನಡೆಯುತ್ತಿವೆ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದರು.

ಭಾರತದಲ್ಲಿಯೇ ನಿರ್ಮಾಣಗೊಂಡ ನೌಕಾಪಡೆಯ ಮೂರು ಹಡುಗುಗಳನ್ನು ಕೋಲ್ಕತ್ತದಲ್ಲಿರುವ ಶ್ಯಾಮಾ ಪ್ರಸಾದ್ ಮುಖರ್ಜಿ ಬಂದರಿನಲ್ಲಿ ಭಾನುವಾರ ಲೋಕಾರ್ಪಣೆ ಮಾಡಿ ಅವರು ಮಾತನಾಡಿದರು.

'ರಕ್ಷಣಾ ವಲಯದಲ್ಲಿ ಭಾರತವು ಖರೀದಿ ಮಾಡುವ ದೇಶವಾಗಿಯೇ ಉಳಿಯಬಾರದು' ಎಂದರು.

'2022ರಲ್ಲಿ ಐಎನ್‌ಎಸ್ ವಿಕ್ರಾಂತ್ ಅನ್ನು ಲೋಕಾರ್ಪಣೆಗೊಳಿಸಿ ದೇಶವು ತನ್ನ ಸಾಮರ್ಥ್ಯವನ್ನು ಪ್ರದರ್ಶಿಸಿತ್ತು. ಅಲ್ಲಿಂದ ಇಲ್ಲಿಯವರೆಗೆ ನಮ್ಮ ನಡೆಯು ಸ್ವಾವಲಂಬನೆಯ ಕಡೆಗೇ ಇದೆ. ಕಡಲು ಕಣ್ಗಾವಲು ಮತ್ತು ಭದ್ರತಾ ಕ್ಷೇತ್ರವು ಭಾರತದಲ್ಲಿ ಅಭಿವೃದ್ಧಿ ಹೊಂದಿದ ಕ್ಷೇತ್ರವಾಗಿದೆ. ಈ ಮೂಲಕ ಲಕ್ಷಾಂತರ ಉದ್ಯೋಗ ಸೃಷ್ಟಿಯಾಗಿವೆ' ಎಂದರು.

'ಈಗ ದೇಶವು ಮತ್ತೊಂದು ಹೆಜ್ಜೆ ಮುಂದೆ ಹೋಗಿದ್ದು, ಹಡಗು ನಿರ್ಮಾಣ ಕ್ಷೇತ್ರದೆಡೆಗೆ ಸಾಗುತ್ತಿದೆ. ಹಡಗು ನಿರ್ಮಾಣ, ದುರಸ್ತಿ, ಮರುಬಳಕೆ ಮತ್ತು ಎಂಆರ್‌ಒ (ನಿರ್ವಹಣೆ), ದುರಸ್ತಿ ಮತ್ತು ಆಪರೇಷನ್ ಅನ್ನು ಮಿಷನ್ ರೀತಿಯಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ' ಎಂದರು.


ನೌಕಾಪಡೆಯ ಮೂರು ಹಡುಗುಗಳನ್ನು ಪ್ರಧಾನಿ ಮೋದಿ ಅವರು ಭಾನುವಾರ ಲೋಕಾರ್ಪಣೆ ಮಾಡಿದರು. ಪಶ್ಚಿಮ ಬಂಗಾಳದ ರಾಜ್ಯಪಾಲ ಆರ್.ಎನ್. ರವಿ, ಮುಖ್ಯಮಂತ್ರಿ ಸುವೇಂದು ಅಧಿಕಾರಿ, ನೌಕಾಪಡೆಯ ಮುಖ್ಯಸ್ಥ ಅಡ್ಮಿರಲ್ ಕೃಷ್ಣ ಸ್ವಾಮಿನಾಥನ್ ಇದ್ದರು — ಪಿಟಿಐ ಚಿತ್ರ

'ದೇಶದ ಪ್ರತಿಭೆಯ ಪ್ರತೀಕ'

ರೇಡಾರ್ ಕಣ್ತಪ್ಪಿಸಬಲ್ಲ ಸೇನಾನೌಕೆ ದುನಗಿರಿ, ಕಡಲ ಕಣ್ಗಾವಲು ನೌಕೆ ಸಂಶೋಧಕ್ ಮತ್ತು ಜಲಾಂತರ್ಗಾಮಿ ತಡೆ ಹಡಗು ಅಗ್ರಯವನ್ನು ಪ್ರಧಾನಿ ಮೋದಿ ಲೋಕಾರ್ಪಣೆ ಮಾಡಿದರು.

'ಐಎನ್‌ಎಸ್ ಅಗ್ರಯ, ಐಎನ್‌ಎಸ್ ದುನಗಿರಿ ಮತ್ತು ಐಎನ್‌ಎಸ್ ಸಂಶೋಧಕ್ ಹಡಗುಗಳು ಕಡಲ ಕಣ್ಗಾವಲು ಮತ್ತು ಭದ್ರತೆಯ ಪ್ರಯಾಣಕ್ಕೆ ಮತ್ತಷ್ಟು ಶಕ್ತಿ ತುಂಬುತ್ತವೆ. ಈ ಮೂರು ಹಡಗುಗಳು ಭಾರತದಲ್ಲಿಯೇ ವಿನ್ಯಾಸಗೊಂಡು ನಿರ್ಮಾಣವಾಗಿದ್ದು ದೇಶದ ಪ್ರತಿಭೆಯ ಪ್ರತೀಕವಾಗಿವೆ' ಎಂದು ಪ್ರಧಾನಿ ಮೋದಿ ಹೇಳಿದರು.

'ಶೇ 75 ದೇಶೀಯವಾಗಿ ನಿರ್ಮಾಣ'

'ಭಾರತೀಯ ನೌಕಾ ಪಡೆಯ ವಾರ್‌ಶಿಪ್ ಡಿಸೈನ್ ಬ್ಯೂರೊ, ಈ ಮೂರು ಹಡಗುಗಳನ್ನು ವಿನ್ಯಾಸಗೊಳಿಸಿದೆ. ಕೋಲ್ಕತ್ತದ ರಕ್ಷಣಾ ಕ್ಷೇತ್ರದ ಸರ್ಕಾರಿ ಸ್ವಾಮ್ಯದ 'ಗಾರ್ಡನ್ ರೀಚ್ ಶಿಪ್‌ಬಿಲ್ಡರ್ಸ್ ಮತ್ತು ಎಂಜಿನಿಯರ್ಸ್ ಲಿಮಿಟೆಡ್' ಹಡಗುಗಳನ್ನು ನಿರ್ಮಿಸಿದೆ. ಈ ಹಡುಗುಗಳ ನಿರ್ಮಾಣದಲ್ಲಿ ಬಳಸಲಾದ ಶೇ 75ಕ್ಕೂ ಹೆಚ್ಚು ಪ್ರಮಾಣದ ತಂತ್ರಜ್ಞಾನ ಮತ್ತು ಉಪಕರಣಗಳು ದೇಶದಲ್ಲಿಯೇ ಅಭಿವೃದ್ಧಿಪಡಿಸಿದಂತವು. ಜೊತೆಗೆ, ನಿರ್ಮಾಣದಲ್ಲಿ 200ಕ್ಕೂ ಹೆಚ್ಚು ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳು ಶ್ರಮವಹಿಸಿವೆ' ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ನಾಕೌಟ್‌ಗೆ ಲಗ್ಗೆಯಿಟ್ಟ ಜರ್ಮನಿ

ಉಂಡಾವ್ ಅವಳಿ ಗೋಲುಗಳಿಗೆ ಒಲಿದ ಗೆಲುವು • ಐವರಿ ಕೋಸ್ಟ್ ತಂಡಕ್ಕೆ ನಿರಾಸೆ



ಗೋಲು ದಾಖಲಿಸಿದ ಬಳಿಕ ಭಾವುಕರಾದ ಡೆನಿಜ್ ಉಂಡಾವ್ (ಎಡ) ಅವರನ್ನು ಜರ್ಮನಿ ತಂಡದ ಸಹ ಆಟಗಾರರು ಅಭಿನಂದಿಸಿದರು ಎಎಫ್‌ಪಿ ಚಿತ್ರ

ಲಾಸ್ ಏಂಜಲಿಸ್ (ಎಪಿ): ದ್ವಿತೀಯಾರ್ಧದಲ್ಲಿ ಬದಲಿ ಆಟಗಾರ ಡೆನಿಜ್ ಉಂಡಾವ್ ಗಳಿಸಿದ ಅವಳಿ ಗೋಲುಗಳ ನೆರವಿನಿಂದ ನಾಲ್ಕು ಬಾರಿಯ ಚಾಂಪಿಯನ್ ಜರ್ಮನಿ ತಂಡವು ಫಿಫಾ ವಿಶ್ವಕಪ್ ಟೂರ್ನಿಯ ಪಂದ್ಯದಲ್ಲಿ ಸತತ ಎರಡು ಗೆಲುವಿನೊಂದಿಗೆ ನಾಕೌಟ್‌ಗೆ ಲಗ್ಗೆಯಿಟ್ಟಿದೆ.

ಶನಿವಾರ ತಡರಾತ್ರಿ ನಡೆದ ಪಂದ್ಯದಲ್ಲಿ ಜರ್ಮನಿ ತಂಡವು 2-1 ಗೋಲುಗಳಿಂದ ಐವರಿ ಕೋಸ್ಟ್ ತಂಡವನ್ನು ಮಣಿಸಿ 'ಇ' ಗುಂಪಿನಲ್ಲಿ ಅಗ್ರಸ್ಥಾನದೊಂದಿಗೆ 32ರ ಘಟ್ಟಕ್ಕೆ ಮುನ್ನಡೆಯಿತು. ಜರ್ಮನಿ ತಂಡವು ತನ್ನ ಮೊದಲ ಪಂದ್ಯದಲ್ಲಿ 7-1ರಿಂದ ಕ್ಯುರಸಾವೊ ತಂಡವನ್ನು ಸುಲಭವಾಗಿ ಮಣಿಸಿತ್ತು.

ಮೊದಲ ಬಾರಿ ನಾಕೌಟ್ ಪ್ರವೇಶದ ಕನಸು ಕಾಣುತ್ತಿರುವ ಐವರಿ ಕೋಸ್ಟ್ ತಂಡದ ಭವಿಷ್ಯ ಇದೇ 26ರಂದು ನಡೆಯುವ ಕ್ಯುರಸಾವೊ ವಿರುದ್ಧದ ಪಂದ್ಯವನ್ನು ಅವಲಂಬಿಸಿದೆ. ಐವರಿ ಕೋಸ್ಟ್ ತಂಡವು ಈಕ್ವೆಡಾರ್ ತಂಡವನ್ನು 1-0ಯಿಂದ ಮಣಿಸಿ ಅಭಿಯಾನ ಆರಂಭಿಸಿತ್ತು.

ಬಲಿಷ್ಠ ಜರ್ಮನಿ ವಿರುದ್ಧದ ಪಂದ್ಯದಲ್ಲಿ ಅರ್ಧಗಂಟೆಗೂ ಹೆಚ್ಚು ಕಾಲ ಮುನ್ನಡೆ ಕಾಯ್ದುಕೊಂಡಿದ್ದ ಐವರಿ ಕೋಸ್ಟ್ ತಂಡವು ಕೊನೆಯ ಹಂತದಲ್ಲಿ ಎಡವಿತು. 30ನೇ ನಿಮಿಷದಲ್ಲಿ ನಾಯಕ ಫ್ರಾಂಕ್ ಕೆಸ್ಸಿ ಅವರು ಗೋಲು ದಾಖಲಿಸಿ ಐವರಿ ಕೋಸ್ಟ್ ತಂಡಕ್ಕೆ ಆರಂಭಿಕ ಮುನ್ನಡೆ ಒದಗಿಸಿದ್ದರು. ವಿಶ್ವ ರ‍್ಯಾಂಕಿಂಗ್‌ನಲ್ಲಿ ಎಂಟನೇ ಸ್ಥಾನದಲ್ಲಿರುವ ಜರ್ಮನಿ ಈ ಹಂತದಲ್ಲಿ ಒತ್ತಡಕ್ಕೆ ಒಳಗಾಗಿತ್ತು.

ಎದುರಾಳಿ ತಂಡದ ರಕ್ಷಣಾ ಕೋಟೆಯನ್ನು ಭೇದಿಸಿದ ಉಂಡಾವ್ ಅವರು 68ನೇ ನಿಮಿಷದಲ್ಲಿ ಕಾಲ್ಚಳಕ ಪ್ರದರ್ಶಿಸಿ ಜರ್ಮನಿಯ ಗೋಲಿನ ಖಾತೆಯನ್ನು ತೆರೆದರು. ಇದರಿಂದ ಉಭಯ ತಂಡಗಳ ಸ್ಕೋರ್ ಸಮಬಲಗೊಂಡಿತು. ನಂತರ ಮುನ್ನಡೆ ಸಾಧಿಸಲು ಉಭಯ ತಂಡಗಳ ಆಟಗಾರರು ಸಾಕಷ್ಟು ಜಿದ್ದಾಜಿದ್ದಿನ ಹೋರಾಟ ನಡೆಸಿದರು.

ಡ್ರಾನತ್ತ ಸಾಗುತ್ತಿದ್ದ ಪಂದ್ಯಕ್ಕೆ ಉಂಡಾವ್ ಕೊನೆಯಲ್ಲಿ ರೋಚಕ ತಿರುವು ನೀಡಿದರು. ಹೆಚ್ಚುವರಿ ಅವಧಿಯಲ್ಲಿ (90+4ನೇ) ಫೆಲಿಕ್ಸ್ ನ್ಮೆಚಾ ಅವರಿಂದ ಪಾಸ್ ಪಡೆದು, ಐವರಿಕೋಸ್ಟ್‌ನ ಗೋಲ್‌ಕೀಪರ್ ಯಾಹಿಯಾ ಫೋಫಾನಾ ಅವರ ಕಣ್ತಪ್ಪಿಸಿ ಚೆಂಡನ್ನು ಗುರಿ ಸೇರಿಸಿ ಗೆಲುವಿನ ರೂವಾರಿಯಾದರು.

ಈ ಗೆಲುವಿನೊಂದಿಗೆ ಜರ್ಮನಿ ತಂಡವು 2014ರ ನಂತರ ಮೊದಲ ಬಾರಿಗೆ ನಾಕೌಟ್ ಸುತ್ತು ತಲುಪಿದೆ. 2018 ಮತ್ತು 2022ರ ಟೂರ್ನಿಗಳಲ್ಲಿ ಗುಂಪು ಹಂತದಲ್ಲೇ ಹೊರಬಿದ್ದಿತ್ತು.

'ನಾವು ಇದನ್ನೇ ನಿರೀಕ್ಷಿಸಿದ್ದೆವು. ತಂಡದ ಸಾಧನೆಯಿಂದ ಸಂತೋಷವಾಗಿದೆ' ಎಂದು ಜರ್ಮನಿಯ ಕೋಚ್ ಜೂಲಿಯನ್ ನಾಗೆಲ್ಸ್‌ಮನ್ ಪ್ರತಿಕ್ರಿಯಿಸಿದರು.

ಪಂದ್ಯಗಳು

ಅರ್ಜೆಂಟೀನಾ	V/s	ಆಸ್ಟ್ರಿಯಾ
ಸೋಮವಾರ ರಾತ್ರಿ 10.30		
ಫ್ರಾನ್ಸ್	V/s	ಇರಾಕ್
ಮಂಗಳವಾರ ನಸುಕಿನ ಜಾವ 2.30		
ನಾರ್ವೆ	V/s	ಸೆನೆಗಲ್
ಮಂಗಳವಾರ ಬೆಳಿಗ್ಗೆ 5.30		

(ಸಮಯ: ಭಾರತೀಯ ಕಾಲಮಾನ)

ಲೈವ್: ಯುನೈಟ್ 8 ಸ್ಪೋರ್ಟ್ಸ್ ನೆಟ್‌ವರ್ಕ್, ಜೀ5 ಆ್ಯಪ್

ಜರ್ಮನಿ	ಐವರಿ ಕೋಸ್ಟ್
2	1

ಫಿಫಾ ವಿಶ್ವಕಪ್ ಟೂರ್ನಿಯಲ್ಲಿ 1,000ನೇ ಪಂದ್ಯ

ಜಪಾನ್‌ಗೆ ತುತ್ತಾದ ಟ್ಯುನೀಶಿಯಾ

ಮೆಕ್ಸಿಕೊ (ಎಪಿ): ಸ್ಟ್ರೈಕರ್ ಅಯಾಸೆ ಉಯೇಡಾ ಗಳಿಸಿದ 'ಡಬಲ್' ಗೋಲುಗಳ ನೆರವಿನಿಂದ ಜಪಾನ್ ತಂಡವು ಫಿಫಾ ವಿಶ್ವಕಪ್‌ನ 'ಎಫ್' ಗುಂಪಿನ ಪಂದ್ಯದಲ್ಲಿ 4-0ಯಿಂದ ಟ್ಯುನೀಶಿಯಾ ತಂಡವನ್ನು ಮಣಿಸಿ ನಾಕೌಟ್ ಕನಸನ್ನು ಜೀವಂತವಾಗಿ ಉಳಿಸಿಕೊಂಡಿತು.

ಫಿಫಾ ವಿಶ್ವಕಪ್ ಇತಿಹಾಸದಲ್ಲಿ ಇದು ಪುರುಷರ 1,000ನೇ ಪಂದ್ಯವಾಗಿತ್ತು. ಈ ಸ್ಮರಣೀಯ ಪಂದ್ಯವನ್ನು ನಿರಾಯಾಸವಾಗಿ ಗೆದ್ದ ಜಪಾನ್ ತಂಡವು ಸತತ ನಾಲ್ಕನೇ ಬಾರಿ ವಿಶ್ವಕಪ್‌ನ ನಾಕೌಟ್ ಹಂತ ಪ್ರವೇಶಿಸುವ ಪ್ರಯತ್ನದಲ್ಲಿದೆ. ಈ ತಂಡಕ್ಕೆ ಶುಕ್ರವಾರ ನಡೆಯುವ ಸ್ವೀಡನ್ ವಿರುದ್ಧದ ಪಂದ್ಯ ನಿರ್ಣಾಯಕವಾಗಿದೆ.

ಪಂದ್ಯದಲ್ಲಿ ಜಪಾನ್ ಪರ ದೈಚಿ ಕಮಡ (4ನೇ), ಉಯೇಡಾ (31ನೇ ಮತ್ತು 83ನೇ) ಮತ್ತು ಜುನ್ಯಾ (69ನೇ) ಅವರು ಗೋಲು ದಾಖಲಿಸಿದರು. ಇದು ಜಪಾನ್ ತಂಡವು ವಿಶ್ವಕಪ್ ಪಂದ್ಯವೊಂದರಲ್ಲಿ ಗಳಿಸಿದ ಅತಿ ಹೆಚ್ಚು ಗೋಲು ದಾಖಲೆಯಾಗಿದೆ. ಈ ತಂಡವು ತನ್ನ ಮೊದಲ ಪಂದ್ಯದಲ್ಲಿ ಬಲಿಷ್ಠ ನೆದರ್ಲೆಂಡ್ಸ್ ವಿರುದ್ಧ 2-2ರಿಂದ ಡ್ರಾ ಸಾಧಿಸಿತ್ತು.

ಟ್ಯುನೀಶಿಯಾ ತನ್ನ ಮೊದಲ ಪಂದ್ಯದಲ್ಲಿ 1-5ರಿಂದ ಸ್ವೀಡನ್ ವಿರುದ್ಧ ಸೋಲು ಅನುಭವಿಸಿತ್ತು. ಈ ಸೋಲಿನ ಬೆನ್ನಲ್ಲೇ ತಂಡದ ಮುಖ್ಯ ಕೋಚ್ ಸಬ್ರಿ ಲಮಾಚಿ ಅವರನ್ನು ವಜಾಗೊಳಿಸಿತ್ತು. ಎರಡನೇ ಪಂದ್ಯದಲ್ಲೂ ಸೋತ ತಂಡವು ನಾಕೌಟ್ ರೇಸ್‌ನಿಂದ ಹೊರಬಿದ್ದಿದೆ. ತನ್ನ ಕೊನೆಯ ಪಂದ್ಯದಲ್ಲಿ ನೆದರ್ಲೆಂಡ್ಸ್ ವಿರುದ್ಧ ಶುಕ್ರವಾರ ಕಣಕ್ಕಿಳಿಯಲಿದೆ.

ಇದಕ್ಕೂ ಮೊದಲು ನಡೆದ ಇದೇ ಗುಂಪಿನ ಪಂದ್ಯದಲ್ಲಿ ನೆದರ್ಲೆಂಡ್ಸ್ 5-1 ಗೋಲುಗಳಿಂದ ಸ್ವೀಡನ್ ತಂಡವನ್ನು ಸುಲಭವಾಗಿ ಮಣಿಸಿ, ಅಗ್ರಸ್ಥಾನಕ್ಕೇರಿತು.

ಜಪಾನ್	ಟ್ಯುನೀಶಿಯಾ
4	0

ಸ್ಪೇನ್‌ಗೆ ಸುಲಭ ಗೆಲುವು: ಸ್ಪೇನ್ ತಂಡವು 'ಎಚ್' ಗುಂಪಿನ ಪಂದ್ಯದಲ್ಲಿ 4-0 ಗೋಲುಗಳಿಂದ ಸೌದಿ ಅರೇಬಿಯಾ ತಂಡವನ್ನು ನಿರಾಯಾಸವಾಗಿ ಮಣಿಸಿ, ನಾಕೌಟ್ ಕನಸಿಗೆ ಜೀವ ತುಂಬಿತು.

ಸ್ಪೇನ್ ಪರ ಲ್ಯಾಮಿನೆ ಯಮಲ್ (10ನೇ), ಮೈಕೆಲ್ ಒಯರ್ಜಾಬಲ್ (21ನೇ ಮತ್ತು 24ನೇ) ಗೋಲು ಗಳಿಸಿದರೆ, ಎದುರಾಳಿ ತಂಡದ ಹಸನ್ ಅಲ್-ತಂಬಕ್ತಿ (49ನೇ) 'ಉಡುಗೊರೆ' ಗೋಲು ನೀಡಿದರು.

ಕ್ಯುರಸಾವೊ ತಂಡಕ್ಕೆ ಮೊದಲ ಅಂಕ



ಎಲಾಯ್ ರೂಮ್

ಕಾನ್ಸಾಸ್ ಸಿಟಿ (ಎಪಿ): ಕ್ಯುರಸಾವೊ ತಂಡದ ಗೋಲ್‌ಕೀಪರ್ ಎಲಾಯ್ ರೂಮ್ ಅವರು ಈಕ್ವೆಡಾರ್‌ನ ನಿರಂತರ ದಾಳಿಯ ವಿರುದ್ಧ ಬಂಡೆಯಂತೆ ಗಟ್ಟಿಯಾಗಿ ನಿಂತರು. ಇದರಿಂದಾಗಿ ಪುಟ್ಟ ದ್ವೀಪ ರಾಷ್ಟ್ರವು ಈಕ್ವೆಡಾರ್ ವಿರುದ್ಧ ಗೋಲುರಹಿತವಾಗಿ ಡ್ರಾ ಸಾಧಿಸಿ ಫಿಫಾ ವಿಶ್ವಕಪ್‌ನಲ್ಲಿ ಮೊದಲ ಅಂಕವನ್ನು ಪಡೆದುಕೊಂಡಿತು.

ಕೇವಲ 160,000 ಜನಸಂಖ್ಯೆಯನ್ನು ಹೊಂದಿರುವ ಕ್ಯುರಸಾವೊ ತಂಡವು ಇದೇ ಮೊದಲ ಬಾರಿಗೆ ವಿಶ್ವಕಪ್‌ಗೆ ಅರ್ಹತೆ ಪಡೆದಿದೆ. ತನ್ನ ಮೊದಲ ಪಂದ್ಯದಲ್ಲಿ ಬಲಿಷ್ಠ ಜರ್ಮನಿ ವಿರುದ್ಧ 7-1ರಿಂದ ಸೋತಿದ್ದ ದ್ವೀಪರಾಷ್ಟ್ರ ತಂಡ, ಶನಿವಾರ ರಾತ್ರಿ ನಡೆದ 'ಇ' ಗುಂಪಿನ ಪಂದ್ಯದಲ್ಲಿ ಅಂಕದ ಖಾತೆಯನ್ನು ತೆರೆಯಿತು.

37 ವರ್ಷದ ರೂಮ್ ಅವರು ಎದುರಾಳಿ ತಂಡದ 15 ಗೋಲು ಪ್ರಯತ್ನಗಳನ್ನು ಯಶಸ್ವಿಯಾಗಿ ತಡೆದರು. ಇದು ವಿಶ್ವಕಪ್ ಇತಿಹಾಸದಲ್ಲಿ ಎರಡನೇ ಅತ್ಯಧಿಕ 'ಸೇವ್' ಎನಿಸಿತು. 2014ರಲ್ಲಿ ಬೆಲ್ಜಿಯಂ ವಿರುದ್ಧ ಅಮೆರಿಕದ ಟಿಮ್ ಹೊವಾರ್ಡ್ 16 'ಸೇವ್' ಮಾಡಿದ್ದು ದಾಖಲೆಯಾಗಿ ಉಳಿದಿದೆ.

ಎರಡೂ ತಂಡಗಳ ನಾಕೌಟ್ ಕನಸು ಬಹುತೇಕ ಕಮರಿದೆ. ಆದರೆ, ತಮ್ಮ ಕೊನೆಯ ಪಂದ್ಯದಲ್ಲಿ ಗೆಲುವಿನೊಂದಿಗೆ ಅಭಿಯಾನ ಮುಗಿಸುವತ್ತ ಗಮನ ಹರಿಸಿವೆ. ಇದೇ 26ರಂದು ಕ್ಯುರಸಾವೊ ತಂಡವು ಐವರಿ ಕೋಸ್ಟ್ ವಿರುದ್ಧ; ಈಕ್ವೆಡಾರ್ ತಂಡವು ಜರ್ಮನಿ ವಿರುದ್ಧ ಆಡಲಿವೆ.

ಸೂರ್ಯವಂಶಿ ಪ್ರಖರ ಆಟಕ್ಕೆ ಒಲಿದ ಜಯ

ಭಾರತ ಎ ತಂಡದ ಮಡಿಲಿಗೆ ತ್ರಿಕೋನ ಸರಣಿ: ಆತಿಥೇಯ ತಂಡಕ್ಕೆ ನಿರಾಸೆ



ಸರಣಿ ಗೆದ್ದ ಭಾರತ ಎ ತಂಡದ ಆಟಗಾರರು ಟ್ರೋಫಿಯೊಂದಿಗೆ ಸಂಭ್ರಮಿಸಿದರು ಚಿತ್ರ: ಬಿಸಿಸಿಐ

ದಂಬುಲ್ಲಾ (ಪಿಟಿಐ): ಹದಿನೈದು ವರ್ಷದ ಪ್ರತಿಭೆ ವೈಭವ್ ಸೂರ್ಯವಂಶಿ ಅಂತರರಾಷ್ಟ್ರೀಯ ಕ್ರಿಕೆಟ್ ಅಂಗಳದಲ್ಲಿಯೂ ತಮ್ಮ ತೋಳ್ಬಲ ಮೆರೆದರು.

ಭಾನುವಾರ ಇಲ್ಲಿ ನಡೆದ ತ್ರಿಕೋನ ಏಕದಿನ ಕ್ರಿಕೆಟ್ ಸರಣಿಯ ಫೈನಲ್ ಪಂದ್ಯದಲ್ಲಿ ವೈಭವ್ ಅವರು 29 ಎಸೆತಗಳಲ್ಲಿ 94 ರನ್ ಗಳಿಸಿದರು. ಅವರ ಅಬ್ಬರದ ಆಟದ ಬಲದಿಂದ ಭಾರತ ಎ ತಂಡವು 66 ರನ್‌ಗಳಿಂದ ಗೆದ್ದಿತು.

ವೈಭವ್ ಅವರು 11 ಎಸೆತಗಳಲ್ಲಿ 50 ರನ್ ಗಳಿಸಿದರು. ಅದರೊಂದಿಗೆ ಲಿಸ್ಟ್ ಎ ಕ್ರಿಕೆಟ್‌ನಲ್ಲಿ ಅತಿ ವೇಗದ ಅರ್ಧಶತಕ ಗಳಿಸಿದ ದಾಖಲೆಯನ್ನು ತಮ್ಮದಾಗಿಸಿಕೊಂಡರು. ಅವರ ಅಬ್ಬರದ ಆಟದ ಬಲದಿಂದ ತಂಡವು 50 ಓವರ್‌ಗಳಲ್ಲಿ 9ಕ್ಕೆ377 ರನ್ ಗಳಿಸಿತು. ಅದಕ್ಕುತ್ತರವಾಗಿ ಆತಿಥೇಯ ತಂಡವು 47.1 ಓವರ್‌ಗಳಲ್ಲಿ 311 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು. ಸದೀರಾ ಸಮರವಿಕ್ರಮ (52; 44ಎ, 4X9) ಮತ್ತು ವನುಜಾ ಸಹನ್ (62; 69ಎ) ಅವರು ಹೋರಾಟ ನಡೆಸಿದರು. ಭಾರತ ಎ ತಂಡದ ಬೌಲರ್ ಯಶ್ ಠಾಕೂರ್ (45ಕ್ಕೆ3) ಮತ್ತು ವಿಪ್ರಜ್ ನಿಗಮ್ (60ಕ್ಕೆ3) ಅವರು ಮಿಂಚಿದರು.

ವೈಭವ್ ಅಬ್ಬರ: ಟಾಸ್ ಗೆದ್ದ ಶ್ರೀಲಂಕಾ ಎ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿ ಕೊಂಡಿತು. ಪ್ರಿಯಾಂಶ್ ಆರ್ಯ (39; 29ಎ) ಮತ್ತು ವೈಭವ್ ಅವರು ಆರಂಭ ದಿಂದಲೇ ಅಬ್ಬರಿಸಲು ಆರಂಭಿಸಿದರು. ಅದರಲ್ಲೂ ವೈಭವ್ ಅವರು ಬೌಲರ್‌ಗಳ ಮೇಲೆ ಸಿಡಿಲಿನಂತೆ ಎರಗಿದರು. ಮೊದಲ ವಿಕೆಟ್ ಜೊತೆಯಾಟದಲ್ಲಿ 132 ರನ್ ಸೇರಿದವು. ಅದಕ್ಕಾಗಿ ಅವರಿಬ್ಬರೂ ಆಡಿದ್ದು 53 ಎಸೆತಗಳನ್ನು ಮಾತ್ರ. ಇದರಲ್ಲಿ ವೈಭವ್ ಅವರದ್ದು ಸಿಂಹಪಾಲು. 10 ಬೌಂಡರಿ, 8 ಸಿಕ್ಸರ್ ಸಿಡಿಸಿದರು. 324.14ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಸೂರೆ ಮಾಡಿದರು.

9ನೇ ಓವರ್‌ನಲ್ಲಿ ತಮ್ಮ ಶತಕದ ಗಡಿ ಮುಟ್ಟಲು ಆರು ರನ್ ಅಗತ್ಯವಿದ್ದಾಗ ಸಹನ್ ಅರ್ಚಾಚಿಗೆ ಎಸೆತದಲ್ಲಿ ಫೀಲ್ಡರ್ ವಿಜಯಕಾಂತ್ ಅವರಿಗೆ ಕ್ಯಾಚ್ ಆದರು. ನಂತರದ ಓವರ್‌ನಲ್ಲಿ ಆರ್ಯ ಕೂಡ ನಿರ್ಗಮಿಸಿದರು. ಈ ಹಂತದಲ್ಲಿ ಜೊತೆಗೂಡಿದ ಋತುರಾಜ್ ಗಾಯವಾಡ (40; 51ಎ, 4X2, 6X1) ಮತ್ತು ನಾಯಕ ತಿಲಕ್ ವರ್ಮಾ (67; 90ಎ, 4X4, 6X1) ಅವರೂ ಬೀಸಾಟವಾಡಿ ತಂಡದ ಮೊತ್ತವನ್ನು ಹೆಚ್ಚಿಸಿದರು.

ಸಂಕ್ಷಿಪ್ತ ಸ್ಕೋರು: ಭಾರತ ಎ: 50 ಓವರ್‌ಗಳಲ್ಲಿ 9ಕ್ಕೆ377 (ಪ್ರಿಯಾಂಶ್ ಆರ್ಯ 39, ವೈಭವ್ ಸೂರ್ಯವಂಶಿ 94, ಋತುರಾಜ್ ಗಾಯಕವಾಡ 40, ತಿಲಕ್ ವರ್ಮಾ 67, ಕುಮಾರ ಕುಶಾಗ್ರ 36, ವಿಪ್ರಜ್ ನಿಗಮ್ 27, ಅನುಕೂಲ್ ರಾಯ್ 39, ಕುಗಾಥ್ಸಾ ಮಾತುಲನ್ 82ಕ್ಕೆ2, ರವಿಂದು ಫರ್ನಾಂಡೊ 72ಕ್ಕೆ2, ವನುಜಾ ಸಹನಾ 39ಕ್ಕೆ2) ಶ್ರೀಲಂಕಾ ಎ: 47.1 ಓವರ್‌ಗಳಲ್ಲಿ 311 (ನಿರೋಷನ್ ಡಿಕ್ವೆಲ್ಲಾ 25, ನುವಾನಿದು ಫರ್ನಾಂಡೊ 21, ಸದೀರಾ ಸಮರವಿಕ್ರಮ 52, ಸಹನ್ ಅರ್ಚಚಿಗೆ 38, ವನುಜಾ ಸಹನ್ 62, ವಿಜಯಕಾಂತ್ ವಿಯಾಸ್‌ಕಾಂತ್ 39, ಮೊಹಮ್ಮದ್ ಶಿರಾಜ್ 21, ಯಶ್ ಠಾಕೂರ್ 45ಕ್ಕೆ3, ವಿಪ್ರಜ್ ನಿಗಂ 60ಕ್ಕೆ3, ಅನುಕೂಲ್ ರಾಯ್ 42ಕ್ಕೆ2) ಫಲಿತಾಂಶ: ಭಾರತ ಎ ತಂಡಕ್ಕೆ 66 ರನ್ ಜಯ. ಪಂದ್ಯ ಶ್ರೇಷ್ಠ: ವೈಭವ್ ಸೂರ್ಯವಂಶಿ.

ವೈಭವ್ ದಿಟ್ಟ ಉತ್ತರ

ಇದೇ ಟೂರ್ನಿಯ ಲೀಗ್ ಪಂದ್ಯದಲ್ಲಿ ಭಾರತ ಎ ಮತ್ತು ಶ್ರೀಲಂಕಾ ಎ ತಂಡಗಳು ಮುಖಾ-ಮುಖಿಯಾಗಿದ್ದವು. ಆ ಪಂದ್ಯದಲ್ಲಿ ಭಾರತ ಎ ತಂಡವು ಸೂಪರ್ ಓವರ್‌ನಲ್ಲಿ ಸೋತಿತ್ತು. ಆಗ ಆತಿಥೇಯ ತಂಡದ ಆಟಗಾರರು 'ಇದು ಐಪಿಎಲ್ ಅಲ್ಲ..' ಎಂದು ವೈಭವ್ ಸೂರ್ಯವಂಶಿ ಅವರನ್ನು ಛೇಡಿಸಿದ್ದರು. ಅಲ್ಲದೇ ಲಂಕಾ ಆಟಗಾರರು ಮತ್ತು ವೈಭವ್ ನಡುವೆ ಮಾತಿನ ಚಕಮಕಿ ನಡೆದಿತ್ತು. ವೈಭವ್ ಅವರು ತಮ್ಮತ್ತ ಧಾವಿಸಿ ಬರುತ್ತಿದ್ದ ಲಂಕಾ ಆಟಗಾರನನ್ನು ತಳ್ಳಿದ್ದ ವಿಡಿಯೊ ತುಣುಕುಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ್ದವು.

ಶ್ರೀರಾಮ್, ತನಿಷ್ಕಾ ಮುಡಿಗೆ ಕಿರೀಟ

ಮೈಸೂರು: ತನಿಷ್ಕಾ ಕಾಲಭೈರವ ಹಾಗೂ ಶ್ರೀರಾಮ್ ಕಿರಣ್ ಅವರು ಭಾನುವಾರ ಇಲ್ಲಿನ ಮೈಸೂರು ವಿ.ವಿ. ಜಿಮ್ನಾಷಿಯಂ ಹಾಲ್‌ನಲ್ಲಿ ಮಕ್ತಾಯಗೊಂಡ 'ಎಲ್‌ಐಸಿ ಕಪ್' ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯ 15 ವರ್ಷ ಒಳಗಿನವರ ವಿಭಾಗದಲ್ಲಿ ಕ್ರಮವಾಗಿ ಬಾಲಕಿಯರು ಹಾಗೂ ಬಾಲಕರ ವಿಭಾಗದಲ್ಲಿ ಚಾಂಪಿಯನ್ ಆದರು.

ಬಾಲಕರ ಫೈನಲ್‌ನಲ್ಲಿ ಶ್ರೀರಾಮ್ 11-9, 10-12, 12-10, 11-9ರಿಂದ ಎಂ. ಸಾತ್ವಿಕ್ ಅವರನ್ನು ಮಣಿಸಿದರು. ಬಾಲಕಿಯರ ಫೈನಲ್‌ನಲ್ಲಿ ತನಿಷ್ಕಾ 12-10, 11-8, 11-3 ರಿಂದ ಮಿಹಿಕಾ ಉಡುಪ ಅವರಿಗೆ ಆಘಾತ ನೀಡಿದರು.

13 ವರ್ಷದೊಳಗಿನವರ ವಿಭಾಗ: ಬಾಲಕರ ಫೈನಲ್‌ನಲ್ಲಿ ಸುಚೇತ್ ಧರೆಣ್ಣವರ್ 11-8, 11-7, 11-3 ರಿಂದ ಶಾರ್ವಿಲ್ ಕರಂಬೇಲ್ಕರ್ ಅವರನ್ನು ಮಣಿಸಿ ಅಗ್ರಸ್ಥಾನ ಪಡೆದರು. ಬಾಲಕಿಯರ ಫೈನಲ್‌ನಲ್ಲಿ ಸಾಕ್ಷ್ಯಾ ಸಂತೋಷ್ 11-8, 11-7, 6-11, 6-11, 11-6ರಿಂದ ವಿಭಾ ತಾವಕರಿ ವಿರುದ್ಧ ಜಯ ಸಾಧಿಸಿದರು.

11 ವರ್ಷದೊಳಗಿನವರ ವಿಭಾಗ: ಬಾಲಕರ ಫೈನಲ್‌ನಲ್ಲಿ ಕೃಷ್ಣ ಮೌದ್ಗಲ್ಯ ಆರಂಭಿಕ ಹಿನ್ನಡೆಯ ನಡುವೆಯೂ ಆರ್ಯನ್ ಮೆನನ್ ವಿರುದ್ಧ 5-11, 11-5, 11-7, 11-5 ಸೆಟ್‌ಗಳಿಂದ ಗೆದ್ದು ಬೀಗಿದರು. ಬಾಲಕಿಯರ ಫೈನಲ್‌ನಲ್ಲಿ ಇಳಾ ಹೆಗಡೆ 11-5, 11-8, 9-11, 11-7ರಲ್ಲಿ ಈಶಾನ್ವಿ ಅರವಿಂದ ಅವರಿಗೆ ಸೋಲುಣಿಸಿದರು.



ನೇಷನ್ಸ್ ಕಪ್ ಹಾಕಿ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದ ಭಾರತ ವನಿತೆಯರ ತಂಡ ಚಿತ್ರ: ಹಾಕಿ ಇಂಡಿಯಾ

ಪ್ರೊ ಲೀಗ್ ಹಾಕಿ ಟೂರ್ನಿಗೆ ಸಲೀಮಾ ಪಡೆ ಅರ್ಹತೆ

ಭಾರತದ ಮುಡಿಗೆ ನೇಷನ್ಸ್ ಕಪ್

ಆಕ್ಲೆಂಡ್ (ಪಿಟಿಐ): ಭಾರತದ ಮಹಿಳಾ ಹಾಕಿ ತಂಡವು ಎಫ್‌ಐಎಚ್ ನೇಷನ್ಸ್ ಕಪ್ ಗೆದ್ದುಕೊಂಡಿತು. ಅದರೊಂದಿಗೆ ಮಹಿಳೆಯರ ಪ್ರೊ ಲೀಗ್ ಟೂರ್ನಿಗೆ ಅರ್ಹತೆ ಗಿಟ್ಟಿಸಿತು.

ಭಾನುವಾರ ಇಲ್ಲಿ ನಡೆದ ಫೈನಲ್‌ನಲ್ಲಿ ಭಾರತದ ವನಿತೆಯರು 2-0ಯಿಂದ ಆತಿಥೇಯ ನ್ಯೂಜಿಲೆಂಡ್ ಮಹಿಳೆಯರ ತಂಡವನ್ನು ಮಣಿಸಿತು.

ನವನೀತ್ ಕೌರ್ (4ನೇ ನಿಮಿಷ) ಅವರು ಪಂದ್ಯದ ಆರಂಭದಲ್ಲಿಯೇ ಮಹತ್ವದ ಮುನ್ನಡೆಯನ್ನು ತಂಡಕ್ಕೆ ಗಳಿಸಿಕೊಟ್ಟರು. ಪಂದ್ಯದಲ್ಲಿ ಸಿಕ್ಕ ಮೊದಲ ಪೆನಾಲ್ಟಿ ಕಾರ್ನರ್ ಗೋಲು ಪೆಟ್ಟಿಗೆ ಸೇರಿದ್ದು ತಂಡದಲ್ಲಿ ಆತ್ಮವಿಶ್ವಾಸದ ಸೆಲೆ ಉಕ್ಕಿಸಿತು. ನವನೀತ್ ಅವರ ಚುರುಕಾದ ಆಟವು ರಂಗೇರಿತು.

15ನೇ ನಿಮಿಷದಲ್ಲಿ ಸುನಿಲಿತಾ ಟೊಪ್ಪೊ ಅವರು ಮತ್ತೊಂದು ಗೋಲು ಗಳಿಸಿ ಗೆಲುವಿನ ಹಾದಿಯನ್ನು ಮತ್ತಷ್ಟು ಸುಲಭಗೊಳಿಸಿದರು. ಮೊದಲ ಕ್ವಾರ್ಟರ್‌ನಲ್ಲಿಯೇ ಪಂದ್ಯದ ಮೇಲೆ ಹಿಡಿತ ಸಾಧಿಸಿದ ಭಾರತ ತಂಡವು ನಂತರ ಶಿಸ್ತಿನ ಆಟವಾಡಿತು. ಪಂದ್ಯದ ಕೊನೆಯವರೆಗೂ ತಂಡದ ರಕ್ಷಣಾ ವಿಭಾಗವು ತೋರಿದ ಅಮೋಘ ಆಟವೂ ಗೆಲುವಿಗೆ ಪ್ರಮುಖ ಕಾರಣವಾಯಿತು. ಇದರಿಂದಾಗಿ ಮುಂಬರುವ ಪ್ರೊ ಲೀಗ್ ಋತುವಿಗೆ ಮಹಿಳಾ ತಂಡವು ಮರುಪ್ರವೇಶ ಗಿಟ್ಟಿಸಿತು.

ಲಾಲ್‌ರೆಮ್ಸಿಯಾಮಿ 'ಪಂದ್ಯದ ಆಟಗಾರ್ತಿ' ಗೌರವ ಗಳಿಸಿದರು. ದೀಪಿಕಾ (6 ಗೋಲು) ಹಾಗೂ ಅಮೆರಿಕದ ಆ್ಯಷ್ಲೆ ಸೆಸಾ (6) ಜಂಟಿಯಾಗಿ 'ಟಾಪ್ ಸ್ಕೋರರ್' ಪ್ರಶಸ್ತಿ ಗಳಿಸಿದರು.

ಭಾರತ ತಂಡಕ್ಕೆ ಇದು ಎರಡನೇ ನೇಷನ್ಸ್ ಕಪ್. 2022ರಲ್ಲಿ ನಡೆದಿದ್ದ ಚೊಚ್ಚಲ ಟೂರ್ನಿಯಲ್ಲಿ ಚಾಂಪಿಯನ್ ಆಗಿತ್ತು.

ಈ ಟೂರ್ನಿಯುದ್ದಕ್ಕೂ ಭಾರತ ತಂಡವು ಅಜೇಯವಾಗಿ ಉಳಿಯಿತು. ಭಾರತ ತಂಡದ ಸಾಧನೆಗಾಗಿ ಹಾಕಿ ಇಂಡಿಯಾ ₹3 ಲಕ್ಷ ಬಹುಮಾನ ಘೋಷಿಸಿದೆ. ಅಲ್ಲದೇ ತಂಡದ ಪ್ರತಿಯೊಬ್ಬ ಸದಸ್ಯರಿಗೂ ತಲಾ ₹ 1.5 ಲಕ್ಷ ನೀಡಲಿದೆ.

ಕಾಪ್ ಮಿಂಚು: ಭಾರತಕ್ಕೆ ಆಘಾತ



ಹರ್ಮನ್‌ಪ್ರೀತ್ ಕೌರ್

ಮ್ಯಾಂಚೆಸ್ಟರ್ (ಪಿಟಿಐ): ಮರಿಝಾನ್ ಕಾಪ್ ಅವರ ಆಲ್‌ರೌಂಡ್ ಆಟದ ನೆರವಿನಿಂದ ದಕ್ಷಿಣ ಆಫ್ರಿಕಾ ತಂಡವು ಟಿ20 ಮಹಿಳಾ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಭಾರತ ತಂಡವನ್ನು ಆರು ವಿಕೆಟ್‌ಗಳಿಂದ ಮಣಿಸಿತು.

ಭಾನುವಾರ ಇಲ್ಲಿ ನಡೆದ ಎ ಗುಂಪಿನ ಪಂದ್ಯದಲ್ಲಿ ದೀಪ್ತಿ ಶರ್ಮಾ ಮತ್ತು ನಾಯಕಿ ಹರ್ಮನ್‌ಪ್ರೀತ್ ಕೌರ್ ಅವರ ಬ್ಯಾಟಿಂಗ್ ಬಲದಿಂದ ಭಾರತ ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 158 ರನ್ ಗಳಿಸಿತು.

ಗುರಿ ಬೆನ್ನಟ್ಟಿದ ದಕ್ಷಿಣ ಆಫ್ರಿಕಾ ತಂಡವು 19.1 ಓವರ್‌ಗಳಲ್ಲಿ 4 ವಿಕೆಟ್‌ಗೆ 161 ರನ್ ಗಳಿಸಿ ಸಂಭ್ರಮಿಸಿತು. ಬೌಲಿಂಗ್‌ನಲ್ಲಿ ಎರಡು ವಿಕೆಟ್ ಪಡೆದಿದ್ದ ಮರಿಝಾನ್ ಅವರು ಅಜೇಯ 81 ರನ್ ಬಾರಿಸಿ ಗೆಲುವಿನ ರೂವಾರಿಯಾದರು.

ಇದಕ್ಕೂ ಮೊದಲು ಭಾರತಕ್ಕೆ ಉತ್ತಮ ಆರಂಭ ನೀಡಿದ ಸ್ಮೃತಿ ಮಂದಾನ (17; 12ಎ) ಮತ್ತು ಶಫಾಲಿ ವರ್ಮಾ (31; 15ಎ) ಜೊತೆಯಾಟವನ್ನು ಮೂರನೇ ಓವರ್‌ನಲ್ಲಿಯೇ ಕಾಪ್ ಮುರಿದರು. ಅವರು ಸ್ಮೃತಿ ಅವರನ್ನು ಕ್ಲೀನ್‌ಬೌಲ್ಡ್ ಮಾಡಿದರು. ಶಬ್ನೀಮ್ ಇಸ್ಮಾಯಿಲ್ ಅವರು ಶಫಾಲಿಗೆ ಪೆವಿಲಿಯನ್ ಹಾದಿ ತೋರಿದರು.

ಯಷ್ಟಿಕಾ ಭಾಟಿಯಾ (15 ರನ್) ಅವರು ಲಯಕ್ಕೆ ಮರಳುವ ಪ್ರಯತ್ನದಲ್ಲಿದ್ದರು. ಅವರನ್ನು ಅಯಾಬೋಂಗಾ ಕಾಕಾ ಅವರು ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದರು. ಈ ಹಂತದಲ್ಲಿ ಕೌರ್ (24; 22ಎ, 4X2) ಮತ್ತು ದೀಪ್ತಿ (29; 21ಎ, 4X3) ಐದನೇ ವಿಕೆಟ್ ಜೊತೆಯಾಟದಲ್ಲಿ 33 ರನ್ ಸೇರಿಸಿ ತುಸು ಚೇತರಿಕೆ ನೀಡಿದರು.

ಹರ್ಮನ್ 'ದ್ವಿಶತಕ': ಹರ್ಮನ್‌ಪ್ರೀತ್ ಅವರು ಅಂತರರಾಷ್ಟ್ರೀಯ ಟಿ20 ಕ್ರಿಕೆಟ್ ನಲ್ಲಿ 200 ಪಂದ್ಯಗಳನ್ನು ಆಡಿದ ಮೊದಲ ಆಟಗಾರ್ತಿಯಾದರು. ಪುರುಷ ಮತ್ತು ಮಹಿಳಾ ಕ್ರಿಕೆಟ್‌ನಲ್ಲಿ ಈ ಸಾಧನೆಗೆ ಪಾತ್ರರಾದ ಮೊದಲಿಗರೆನಿಸಿದ್ದಾರೆ. 2009ರಲ್ಲಿ ಅವರು ಇಂಗ್ಲೆಂಡ್ ವಿರುದ್ಧದ ಪಂದ್ಯದಲ್ಲಿ ಪದಾರ್ಪಣೆ ಮಾಡಿದ್ದರು.

ಸಂಕ್ಷಿಪ್ತ ಸ್ಕೋರು: ಭಾರತ: 20 ಓವರ್‌ಗಳಲ್ಲಿ 7ಕ್ಕೆ158 (ಶಫಾಲಿ ವರ್ಮಾ 31, ಹರ್ಮನ್‌ಪ್ರೀತ್ ಕೌರ್ 24, ದೀಪ್ತಿ ಶರ್ಮಾ 29, ಮರಿಝಾನ್ ಕಾಪ್27ಕ್ಕೆ2, ಶಬ್ನಿಮ್ ಇಸ್ಮಾಯಿಲ್ 28ಕ್ಕೆ2). ದಕ್ಷಿಣ ಆಫ್ರಿಕಾ: 19.1 ಓವರ್‌ಗಳಲ್ಲಿ 4 ವಿಕೆಟ್‌ಗೆ 161 (ಟಾಜ್ಮಿನ್ ಬ್ರಿಟ್ಸ್ 40, ಮರಿಝಾನ್ ಕಾಪ್ ಔಟಾಗದೆ 81; ಶ್ರೀಚರಣಿ 24ಕ್ಕೆ 3). ಪಂದ್ಯದ ಆಟಗಾರ್ತಿ: ಮರಿಝಾನ್ ಕಾಪ್

ಐಸಿಸಿ ಮಹಿಳೆಯರ ಟಿ20 ವಿಶ್ವಕಪ್ 2026

ಹ್ಯಾಟ್ರಿಕ್ ಗೆಲುವು

ಇದಕ್ಕೂ ಮೊದಲ ನಡೆದ ಬಿ ಗುಂಪಿನ ಪಂದ್ಯದಲ್ಲಿ ವೆಸ್ಟ್ ಇಂಡೀಸ್ ಐದು ವಿಕೆಟ್‌ಗಳಿಂದ ಶ್ರೀಲಂಕಾ ತಂಡವನ್ನು ಮಣಿಸಿ ವಿಶ್ವಕಪ್ ಟೂರ್ನಿಯಲ್ಲಿ ಹ್ಯಾಟ್ರಿಕ್ ಗೆಲುವು ದಾಖಲಿಸಿತು.

ಮೊದಲು ಬ್ಯಾಟ್ ಮಾಡಿದ ಲಂಕಾ ತಂಡವು 19.4 ಓವರ್‌ಗಳಲ್ಲಿ 98 ರನ್‌ಗಳಿಗೆ ಆಲೌಟ್ ಆಗಿತ್ತು. ಗುರಿ ಬೆನ್ನಟ್ಟಿದ ವಿಂಡೀಸ್ ತಂಡವು 16.1 ಓವರ್‌ಗಳಲ್ಲಿ 5 ವಿಕೆಟ್‌ಗೆ 99 ರನ್ ಗಳಿಸಿ ಜಯ ಸಾಧಿಸಿತು.

ಗಿಲ್ ಬಳಗದಲ್ಲಿ ಕೊಹ್ಲಿ; ಶ್ರೇಯಸ್ ಪಡೆಗೆ ವೈಭವ್

ನವದೆಹಲಿ (ಪಿಟಿಐ): ಮುಂದಿನ ತಿಂಗಳು ಇಂಗ್ಲೆಂಡ್‌ನಲ್ಲಿ ನಡೆಯಲಿರುವ ಏಕದಿನ ಕ್ರಿಕೆಟ್ ಸರಣಿಯಲ್ಲಿ ಆಡುವ ಭಾರತ ತಂಡಕ್ಕೆ ವಿರಾಟ್ ಕೊಹ್ಲಿ ಅವರನ್ನು ಸೇರ್ಪಡೆ ಮಾಡಲಾಗಿದೆ. ಆದರೆ ಸೋಮವಾರ ನಡೆಯಲಿರುವ ಫಿಟ್‌ನೆಸ್ ಪರೀಕ್ಷೆಯಲ್ಲಿ ಅವರು ಉತ್ತೀರ್ಣರಾದರೆ ಮಾತ್ರ ಇಂಗ್ಲೆಂಡ್ ವಿಮಾನವೇರಲಿದ್ದಾರೆ.

ಬೆಂಗಳೂರಿನ ಬಿಸಿಸಿಐ ಶ್ರೇಷ್ಠತಾ ಕೇಂದ್ರದಲ್ಲಿ ಈ ಪರೀಕ್ಷೆ ನಡೆಯುವುದು. ಭಾನುವಾರ ಅಜಿತ್ ಅಗರ್ಕರ್ ನೇತೃತ್ವದ ರಾಷ್ಟ್ರೀಯ ಆಯ್ಕೆ ಸಮಿತಿಯು ಇಂಗ್ಲೆಂಡ್ ಮತ್ತು ಐರ್ಲೆಂಡ್ ಪ್ರವಾಸಕ್ಕೆ ತೆರಳುವ ತಂಡಗಳನ್ನು ಪ್ರಕಟಿಸಿದೆ. ಶುಭಮನ್ ಗಿಲ್ ನಾಯಕತ್ವದ ಏಕದಿನ ತಂಡದಲ್ಲಿ ಕೊಹ್ಲಿ ಅವರ ಹೆಸರೂ ಇದೆ. ಈಚೆಗೆ ನಡೆದ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದಲ್ಲಿ ಆಡಿದ್ದ ವಿರಾಟ್ ಅವರು ಫೈನಲ್ ಪಂದ್ಯದಲ್ಲಿ ಮಂಡಿರಜ್ಜು ಗಾಯದಿಂದ ಬಳಲಿದ್ದರು.

ಇಂಗ್ಲೆಂಡ್ ವಿರುದ್ಧ ಎಜ್‌ಬಾಸ್ಟನ್ (ಜುಲೈ 14), ಸೋಫಿಯಾ ಗಾರ್ಡನ್ಸ್ (ಜುಲೈ 16) ಮತ್ತು ಲಾರ್ಡ್ಸ್ (ಜುಲೈ 19) ನಲ್ಲಿ ಭಾರತವು ಪಂದ್ಯಗಳನ್ನು ಆಡಲಿದೆ.

ಚಕ್ರವರ್ತಿ ವಿಶ್ರಾಂತಿ: ಐರ್ಲೆಂಡ್‌ನಲ್ಲಿ ನಡೆಯುವ ಟಿ20 ಕ್ರಿಕೆಟ್ ಸರಣಿಯಲ್ಲಿ ಭಾರತ ತಂಡವನ್ನು ಶ್ರೇಯಸ್ ಅಯ್ಯರ್ ಮುನ್ನಡೆಸುವರು. ವೈಭವ್ ಸೂರ್ಯವಂಶಿ ಅವರಿಗೂ ಸ್ಥಾನ ನೀಡಲಾಗಿದೆ. ಸ್ಪಿನ್ನರ್ ವರುಣ್ ಚಕ್ರವರ್ತಿ ಪಾದದ ಗಾಯದಿಂದ ಚೇತರಿಸಿಕೊಳ್ಳದ ಕಾರಣ ಸ್ಥಾನ ಸಿಕ್ಕಿಲ್ಲ.

ಇಂಗ್ಲೆಂಡ್ ಸರಣಿಗೆ ತಂಡ: ಶುಭಮನ್ ಗಿಲ್ (ನಾಯಕ), ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ, ಶ್ರೇಯಸ್ ಅಯ್ಯರ್ (ಉಪನಾಯಕ), ಕೆ.ಎಲ್. ರಾಹುಲ್ ಇಶಾನ್ ಕಿಶನ್ (ಇಬ್ಬರೂ ವಿಕೆಟ್‌ಕೀಪರ್), ವಾಷಿಂಗ್ಟನ್ ಸುಂದರ್, ಅಕ್ಷರ್ ಪಟೇಲ್, ನಿತೀಶ್ ಕುಮಾರ್ ರೆಡ್ಡಿ, ಕುಲದೀಪ್ ಯಾದವ್, ಜಸ್‌ಪ್ರೀತ್ ಬೂಮ್ರಾ, ಪ್ರಸಿದ್ಧಕೃಷ್ಣ, ಹರ್ಷಿತ್ ರಾಣಾ, ಅರ್ಷದೀಪ್ ಸಿಂಗ್, ಗುರ್ನೂರ್ ಬ್ರಾರ್.

ಐರ್ಲೆಂಡ್ ಟಿ20 ಸರಣಿ: ಶ್ರೇಯಸ್ ಅಯ್ಯರ್ (ನಾಯಕ), ಅಭಿಷೇಕ್ ಶರ್ಮಾ, ಸಂಜು ಸ್ಯಾಮ್ಸನ್, ಇಶಾನ್ ಕಿಶನ್ (ಇಬ್ಬರೂ ವಿಕೆಟ್‌ಕೀಪರ್), ಶಿವಂ ದುಬೆ, ತಿಲಕ್ ವರ್ಮಾ (ಉಪನಾಯಕ), ನಿತೀಶ್ ಕುಮಾರ್ ರೆಡ್ಡಿ, ಅಕ್ಷರ್ ಪಟೇಲ್, ವಾಷಿಂಗ್ಟನ್, ರವಿ ಬಿಷ್ಣೋಯಿ, ಹರ್ಷಿತ್ ರಾಣಾ, ಅರ್ಷದೀಪ್ ಸಿಂಗ್, ಪ್ರಿನ್ಸ್ ಯಾದವ್, ವೈಭವ್ ಸೂರ್ಯವಂಶಿ, ಪ್ರಸಿದ್ಧ ಕೃಷ್ಣ.

ಏಷ್ಯನ್ ರಿಲೇ: ಭಾರತಕ್ಕೆ ಚಿನ್ನದ ಪದಕ



ಕರ್ನಾಟಕದ ಸ್ನೇಹಾ ಎಸ್. ಎಸ್.

ಬೆಂಗಳೂರು: ಭಾರತ ಮಹಿಳೆಯರ 4x100 ರಿಲೇ ತಂಡವು ಚೀನಾದ ಶಾಂಗ್ಯುನಲ್ಲಿ ಭಾನುವಾರ ಮುಕ್ತಾಯಗೊಂಡ 2026ರ ಏಷ್ಯನ್ ರಿಲೇ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಸಾಧನೆ ಮೆರೆಯಿತು.

ಕರ್ನಾಟಕ ಅಥ್ಲೀಟ್ ಸ್ನೇಹಾ ಎಸ್. ಎಸ್, ಒಡಿಶಾದ ಶ್ರಬಾನಿ ನಂದಾ, ಮಹಾರಾಷ್ಟ್ರದ ಸುಧೇಶ್ನಾ ಶಿವಂಕರ್ ಮತ್ತು ಹರಿಯಾಣದ ತಮನ್ನಾ ಅವರನ್ನು ಒಳಗೊಂಡ ತಂಡವು 43.85 ಸೆಕೆಂಡ್‌ಗಳಲ್ಲಿ ಗುರಿ ತಲುಪಿ ಪ್ರಶಸ್ತಿ ಗೆದ್ದಿತು.

ಚೀನಾ ತಂಡವು 44.09 ಸೆಕೆಂಡ್‌ಗಳಲ್ಲಿ ಗುರಿ ತಲುಪಿ ಬೆಳ್ಳಿ ಪದಕ ಗೆದ್ದರೆ, ಥಾಯ್ಲೆಂಡ್ (44.11 ಸೆ) ಕಂಚಿನ ಪದಕ ಜಯಿಸಿತು.

ಶಿವಮೊಗ್ಗ ಎದುರು ಸಿಡಿದ ಬೆಂಗಳೂರು ಬ್ಲಾಸ್ಟರ್ಸ್

ಪ್ರಜಾವಾಣಿ ವಾರ್ತೆ

ಮೈಸೂರು: ಸ್ಫೋಟಕ ಬ್ಯಾಟಿಂಗ್ ಪ್ರದರ್ಶನ ನೀಡಿದ ಬೆಂಗಳೂರು ಬ್ಲಾಸ್ಟರ್ಸ್ ತಂಡವು ಶಿವಮೊಗ್ಗ ಯೋಧಾಸ್ ಎದುರು 16 ರನ್‌ಗಳ ಗೆಲುವು ದಾಖಲಿಸಿತು.

ಇಲ್ಲಿನ ಎಸ್‌ಡಿಎನ್‌ಆರ್‌ಡಬ್ಲ್ಯು ಕ್ರೀಡಾಂಗಣದಲ್ಲಿ ನಡೆಯುತ್ತಿರುವ 'ಮಹಾರಾಜ ಟ್ರೋಫಿ' ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಭಾನುವಾರ ಮಳೆ ಹಾಗೂ ಫ್ಲಡ್‌ಲೈಟ್ ತಾಂತ್ರಿಕ ದೋಷದಿಂದಾಗಿ 10 ಓವರ್‌ಗೆ ಸೀಮಿತಗೊಂಡ ಪಂದ್ಯದಲ್ಲಿ ಬೆಂಗಳೂರು ನೀಡಿದ 136 ರನ್‌ಗಳ (ವಿಜೆಡಿ ನಿಯಮ) ಪರಿಷ್ಕೃತ ಗುರಿ ಬೆನ್ನತ್ತಿದ ಶಿವಮೊಗ್ಗ 119 ರನ್ ಗಳಿಸಲಷ್ಟೇ ಶಕ್ತವಾಯಿತು..

ಮೊದಲು ಬ್ಯಾಟಿಂಗ್ ನಡೆಸಿದ ಬೆಂಗಳೂರು ತಂಡಕ್ಕೆ ರೋಹನ್ ಪಾಟೀಲ (ಔಟಾಗದೆ 56) ಹಾಗೂ ಕೆ.ಎಲ್. ಶ್ರೀಜಿತ್ (ಔಟಾಗದೆ 46) ಕೇವಲ 45 ಎಸೆತಗಳಲ್ಲಿ 97 ರನ್‌ಗಳ ಅಜೇಯ ಜೊತೆಯಾಟ ನೀಡಿದರು.

ಮಳೆಯಿಂದ ಪಂದ್ಯ ರದ್ದು: ಇದಕ್ಕೆ ಮೊದಲು ನಡೆಯಬೇಕಿದ್ದ ಕೋಸ್ಟಲ್ ಕಿಂಗ್ಸ್ ಮಂಗಳೂರು– ಹುಬ್ಬಳ್ಳಿ ಟೈಗರ್ಸ್ ನಡುವಿನ ಪಂದ್ಯವು ಮಳೆಯಿಂದಾಗಿ ರದ್ದಾಯಿತು. ಉಭಯ ತಂಡಗಳು ತಲಾ 1 ಅಂಕ ಹಂಚಿಕೊಂಡವು.

ಸಂಕ್ಷಿಪ್ತ ಸ್ಕೋರು: ಬೆಂಗಳೂರು ಬ್ಲಾಸ್ಟರ್ಸ್: 10 ಓವರ್‌ಗಳಲ್ಲಿ 1 ವಿಕೆಟ್‌ಗೆ 124 (ರೋಹನ್ ಪಾಟೀಲ ಔಟಾಗದೆ 51, ಕೆ.ಎಲ್. ಶ್ರೀಜಿತ್ ಔಟಾಗದೆ 47). ಶಿವಮೊಗ್ಗ ಯೋಧಾಸ್: 10 ಓವರ್‌ಗಳಲ್ಲಿ 7 ವಿಕೆಟ್‌ಗೆ 119 (ಯಶೋವರ್ಧನ್ ಪರಂತಾಪ್ ಔಟಾಗದೆ 38; ಶುಭಾಂಗ್ ಹೆಗ್ಡೆ 9ಕ್ಕೆ 2, ಪ್ರವೀಣ್ ದುಬೆ 15ಕ್ಕೆ 2, ಶ್ರೀವತ್ಸ ಆಚಾರ್ಯ 34ಕ್ಕೆ 2). ಪಂದ್ಯದ ಆಟಗಾರ: ರೋಹನ್ ಪಾಟೀಲ